₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಶನಿವಾರ 16.08.2025 ಸಂಪುಟ: 10 ಸಂಚಿಕೆ: 214 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಶ್ರೀಕೃಷ್ಣ ಜನ್ಮಾಷ್ಟಮಿ

ನಮ್ಮೆಲ್ಲ ಓದುಗರಿಗೆ ಶ್ರೀಕೃಷ್ಣ ಜನ್ಮಾಷ್ಟಮಿಯ ಶುಭಾಶಯಗಳು

ಕೈದಿ ನಂಬರ್ 7314

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನಿನ ಮೇಲಿದ್ದ ದರ್ಶನ್ ಮತ್ತೆ ಜೈಲು ಸೇರಿದ್ದು, ಈ ಬಾರಿ ದರ್ಶನ್‌ಗೆ 7314 ಕೈದಿ ನಂಬರ್ ನೀಡಲಾಗಿದೆ. ಪವಿತ್ರಾ ಗೌಡಗೆ 7313, ದರ್ಶನ್ ಕೈದಿ ಸಂಖ್ಯೆ 7314, ಪ್ರದೋಷ್ 7317, ನಾಗರಾಜ್ 7315, ಲಕ್ಷ್ಮಣಗೆ 7316 ಸಂಖ್ಯೆ ನೀಡಲಾಗಿದೆ.

ದೇಶದೆಲ್ಲೆಡೆ ಸಂಭ್ರಮದ 79ನೇ ಸ್ವಾತಂತ್ರ್ಯ ದಿನಾಚರಣೆ | ಕೆಂಪು ಕೋಟೆಯಲ್ಲಿ ಧ್ವಜಾರೋಹಣ ನೆರವೇರಿಸಿದ ಪ್ರಧಾನಿ

ಸ್ವಾವಲಂಬಿ ಭಾರತಕ್ಕೆ ಸಂಕಲ್ಪ

ದೆಹಲಿ: 79ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ರಾಷ್ಟ್ರ ರಾಜಧಾನಿ ದೆಹಲಿಯ ಕೆಂಪು ಕೋಟೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಧ್ವಜಾರೋಹಣ ನೆರವೇರಿಸಿದರು.

ಕೇಸರಿ ಬಣ್ಣದ ಕೋಟು ಮತ್ತು ಪೇಟ ಧರಿಸಿದ್ದ ಪ್ರಧಾನಿ ಧ್ವಜಾರೋಹಣಕ್ಕೂ ಮೊದಲು ರಾಜ್‌ಘಾಟ್‌ನಲ್ಲಿರುವ ಮಹಾತ್ಮಾ ಗಾಂಧಿ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿದರು. ಇದೇ ವೇಳೆ, ಭಾರತೀಯ ವಾಯುಪಡೆಯ ಎರಡು ಖಜಿ-17 ಹೆಲಿಕಾಪ್ಟರ್‌ಗಳು ಕೆಂಪು ಕೋಟೆಯ ಮೇಲೆ ಪುಷ್ಪಮಳೆ ಸುರಿಸಿದವು. ಒಂದು ಹೆಲಿಕಾಪ್ಟರ್ ಧ್ವಜದೊಂದಿಗೆ ಹಾರಿದರೆ, ಇನ್ನೊಂದು ಹೆಲಿಕಾಪ್ಟರ್‌ನಲ್ಲಿ ಆಪರೇಷನ್ ಸಿಂದೂರ ಬ್ಯಾನರ್ ಪ್ರದರ್ಶಿಸಲಾಯಿತು.

ಬಳಿಕ ದೇಶವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಆಪರೇಷನ್ ಸಿಂದೂರ ಮೂಲಕ ದೇಶದ ಪ್ರಬಲ ರಕ್ಷಣಾ ವ್ಯವಸ್ಥೆಗೆ ಇನ್ನಷ್ಟು ಬಲ, ಜಾಗತಿಕ ಮಟ್ಟದಲ್ಲಿ ಸ್ವದೇಶಿ ಯುಪಿಐ ಜನಪ್ರಿಯತೆ, ಮೇಡ್ ಇನ್ ಇಂಡಿಯಾ ಸೆಮಿಕಂಡಕ್ಟರ್, ಭಾರತದ್ದೇ ಸ್ವಂತದ ಬಾಹ್ಯಾಕಾಶ ನಿಲ್ದಾಣ, ಗಗನಯಾನ ಹಾಗೂ ಸಮುದ್ರಮಂಥನ ಯೋಜನೆಗಳ ಪ್ರಸ್ತಾಪ ಸೇರಿದಂತೆ ಹಲವು ಪ್ರಮುಖ ಅಂಶಗಳನ್ನು ಪ್ರಸ್ತಾಪಿಸಿದ ಅವರು ಸ್ವಾವಲಂಬಿ ಭಾರತಕ್ಕೆ ಸಂಕಲ್ಪ ಮಾಡಿದರು. ಇತ್ತೀಚೆಗೆ ನಡೆದ ಆಪರೇಷನ್ ಸಿಂದೂರವು ರಾಷ್ಟ್ರದ ರಕ್ಷಣಾ ವ್ಯವಸ್ಥೆಯ ಸಾಮರ್ಥ್ಯ ಪ್ರದರ್ಶನಕ್ಕೆ ಉತ್ತಮ ವೇದಿಕೆ ಕಲ್ಪಿಸಿತು. →10

1 ಗಂಟೆ 43 ನಿಮಿಷ ಭಾಷಣ

ಪ್ರಧಾನಿ ಮೋದಿ ಅವರು ಧ್ವಜಾರೋಹಣ ನೆರವೇರಿಸಿದ ಬಳಿಕ ದೇಶವನ್ನುದ್ದೇಶಿಸಿ 1 ಗಂಟೆ 43 ನಿಮಿಷಗಳ ಕಾಲ (103 ನಿಮಿಷ) ಭಾಷಣ ಮಾಡಿದ್ದಾರೆ. ಈ ಮೂಲಕ ದೀರ್ಘ ಭಾಷಣ ಮಾಡಿದ ಪ್ರಧಾನಿ ಎನಿಸಿಕೊಂಡಿದ್ದಾರೆ. ಕಳೆದ ವರ್ಷ 98 ನಿಮಿಷಗಳ ಭಾಷಣ ಮಾಡಿ ದಾಖಲೆ ಬರೆದಿದ್ದ ಮೋದಿ, ಈ ಬಾರಿ 103 ನಿಮಿಷಗಳ ಕಾಲ ಮಾತನಾಡುವ ಮೂಲಕ ತಮ್ಮದೇ ದಾಖಲೆಯನ್ನು ಮುರಿದಿದ್ದಾರೆ. ಮೋದಿಗಿಂತ ಮೊದಲು 1947ರಲ್ಲಿ ಜವಾಹರಲಾಲ್ ನೆಹರು 72 ನಿಮಿಷ ಮತ್ತು 1997 ರಲ್ಲಿ ಐ.ಕೆ.ಗುಜ್ರಾಲ್ 71 ನಿಮಿಷ ದೀರ್ಘ ಭಾಷಣ ಮಾಡಿದ್ದರು.

ಪ್ರತಿಪಕ್ಷಗಳ ಕುರ್ಚಿ ಖಾಲಿ ಖಾಲಿ →10

ದೆಹಲಿಯ ಕೆಂಪು ಕೋಟೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಧ್ವಜಾರೋಹಣ ನೆರವೇರಿಸಿದರು.

ಪ್ರಧಾನಿ ಭಾಷಣ

- ಮೇಡ್ ಇನ್ ಇಂಡಿಯಾ ಚಿಪ್ ಮೂಲಕ ಅತ್ಯಾಧುನಿಕ ತಂತ್ರಜ್ಞಾನ ಕ್ಷೇತ್ರದಲ್ಲೂ ಭಾರತ ಸ್ವಾವಲಂಬಿಯಾಗಲಿದೆ.
- ಶುದ್ಧ ಇಂಧನ ಉತ್ಪಾದನೆಯಲ್ಲಿ ನವೀಕರಿಸಬಹುದಾದ ಇಂಧನದ ಗುರಿಯನ್ನು 2025ರಲ್ಲೇ ಶೇ.50ರಷ್ಟನ್ನು ಭಾರತ ಸಾಧಿಸಿದೆ.
- ಸಾಗರಾಳದಲ್ಲಿ ತೈಲ, ಅನಿಲ ಹಾಗೂ ಇನ್ನಿತರ ಖನಿಜಗಳ ನಿಕ್ಷೇಪ ಪತ್ತೆಗೆ ಸಮುದ್ರಮಂಥನ ಯೋಜನೆ ಭಾರತದ ಗುರಿಯಾಗಿದೆ.
- ಮಂಗಳಯಾನ ಹಾಗೂ 300ಕ್ಕೂ ಅಧಿಕ ಸ್ಟಾರ್ಟ್‌ಅಪ್‌ಗಳ ಮೂಲಕ ಭಾರತದ ಬಾಹ್ಯಾಕಾಶ ಕ್ಷೇತ್ರ ವಿಸ್ತರಿಸುತ್ತಿದೆ. ಇದರಿಂದ ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದಲ್ಲಿ ದೇಶವು ಪ್ರಕಾಶಮಾನವಾಗಿ ಹೊಳೆಯುತ್ತಾ ಬೆಳೆಯುತ್ತಿದೆ.
- ಯುವಜನತೆ ನೇತೃತ್ವದ ತಯಾರಿಕಾ ವಲಯದತ್ತ ಸರಕಾರ ತನ್ನ ಗಮನ ಕೇಂದ್ರೀಕರಿಸಿದೆ.
- ಕಚ್ಚಾ ಪದಾರ್ಥಗಳ ಉತ್ಪಾದನೆ ಮೂಲಕ ಉದ್ಯೋಗ ಸೃಜನೆ, ಸ್ವಾವಲಂಬನೆ ಹಾಗೂ ಕೈಗಾರಿಕಾ ಸಾಮರ್ಥ್ಯವನ್ನು ಬಲಪಡಿಸುವತ್ತ ಹೆಚ್ಚು ಒತ್ತು ನೀಡಲಾಗುತ್ತಿದೆ.

ಸಂಪತ್ತು ಹಂಚಿಕೆಯಲ್ಲೂ ತಾರತಮ್ಯ: ಸಿಎಂ ಬೇಸರ

ಬೆಂಗಳೂರು: ದೇಶದಲ್ಲಿ ಸಂಪತ್ತು ಅಸಮಾನತೆಯಲ್ಲಿ ಹಂಚಿಕೆಯಾಗಿದ್ದು, ಇದರ ವಿರುದ್ಧ ಹೋರಾಡಬೇಕು, ಸರ್ವರನ್ನೂ ಆರ್ಥಿಕವಾಗಿ ಸದೃಢಗೊಳಿಸಬೇಕು ಎನ್ನುವ ನಿಟ್ಟಿನಲ್ಲಿಯೇ ನಮ್ಮ ಸರಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿತು. ಆದರೆ ಕೇಂದ್ರ ಸರಕಾರ ನಮಗೆ ಬರಬೇಕಿರುವ ಅನುದಾನವನ್ನು ನೀಡುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಕೇಂದ್ರ ಸರಕಾರದ ವಿರುದ್ಧ ಅಸಮಾಧಾನ ಹೊರಹಾಕಿದರು.

ಅನುದಾನ ತಾರತಮ್ಯದ ಮೂಲಕ ಕೇಂದ್ರ ಸರಕಾರ ದ್ವೇಷ ರಾಜಕೀಯ ಮಾಡುತ್ತಿದೆ ಎಂದು ಟೀಕಿಸಿದರು.

ಇನ್ನು ತಮ್ಮ ಭಾಷಣದಲ್ಲಿ ರಾಜ್ಯ ಸರಕಾರದ ಬಹುನಿರೀಕ್ಷಿತ 'ಒಳಮೀಸಲಿ'ಗೆ ಸಂಬಂಧಿಸಿದಂತೆ ಮಾತನಾಡಿದ ಅವರು, ಜನರ ಬದುಕಿನ ಸ್ಥಿತಿಗತಿಗಳನ್ನು ಅರಿತುಕೊಳ್ಳಲು ಹಿಂದುಳಿದ ವರ್ಗಗಳ ಆಯೋಗದ ಮೂಲಕ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಮಾಡಲು ತೀರ್ಮಾನಿಸಿದ್ದೇವೆ. ಸಮರ್ಪಕವಾದ ಅಂಕಿ-ಅಂಶಗಳು ಮಾತ್ರ ಜನರ ಬದುಕಿನ ಗತಿಯನ್ನು ಬದಲಾಯಿಸಲು ಕಾರಣವಾಗಬಲ್ಲವು. ನಮ್ಮ ಮೊದಲ ಆದ್ಯತೆ ಅಂಕಿ-ಅಂಶಗಳ ಸಂಗ್ರಹ. ಆ ನಂತರ ರೂಪಿಸುವ ಯೋಜನೆಗಳಲ್ಲಿ ವಿಶೇಷ ಪ್ರಾತಿನಿಧ್ಯ ಕೊಡಬೇಕಾಗುತ್ತದೆ. ಹಾಗೆ ಮಾಡದಿದ್ದರೆ, ನಮ್ಮ ಸಂವಿಧಾನಕ್ಕೆ ಹಾಗೂ ಸ್ವಾತಂತ್ರ್ಯ ಹೋರಾಟಕ್ಕೆ ಅನ್ಯಾಯ ಮಾಡುತ್ತಿದ್ದೇವೆ ಎಂದು ಭಾವಿಸಬೇಕಾಗುತ್ತದೆ. →10

ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಸಿಎಂ ಸಿದ್ದರಾಮಯ್ಯ ಧ್ವಜಾರೋಹಣ ನೆರವೇರಿಸಿದರು.

ಸಿಎಂ ಭಾಷಣ

- ಶಿಕ್ಷಣ ಕ್ಷೇತ್ರದ ಬಲವರ್ಧನೆಗೆ 65 ಸಾವಿರ ಕೋಟಿ ಅನುದಾನ
- ವಸತಿ ಶಾಲೆಗಳ ವಿದ್ಯಾರ್ಥಿಗಳ ಉತ್ತೀರ್ಣ ಪ್ರಮಾಣ ಶೇ.98-99ರಷ್ಟಾಗಿದೆ
- ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಲು ಶೀಘ್ರ ಕ್ರಮ
- ಕಲ್ಯಾಣ ಕರ್ನಾಟಕ ಸಮಗ್ರ ಅಭಿವೃದ್ಧಿಗೆ ಐದು ಸಾವಿರ ಕೋಟಿ ರುಪಾಯಿ ಅನುದಾನ

ಸೊಂಪಾದ ಪುಟಗಳು

ನಗರ ನಕ್ಸಲರ ಟಾರ್ಗೆಟ್: ಧರ್ಮಸ್ಥಳ

ವೀಕೆಂಡ್ ವಿತ್ ಮೋಹನ್ ಮೋಹನ್ ವಿಶ್ವ 6

ಆಹಾರ ಸೇವಿಸುವ ಮುನ್ನ ಗಮನಿಸಿ ಈ ಆರನ್ನು...

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ ಡಾ.ಸಾಧನಶ್ರೀ 7

ದಾರಿದೀಪೋಕ್ತಿ

ಜೀವನದಲ್ಲಿ ನಿಮ್ಮ ನಡಿಗೆ ಎರಡು ರೀತಿ ಇರಬೇಕಂತೆ. ಮೊದಲನೆಯದು, ಯಾವತ್ತೂ ರಾಜನ ಥರ ಗಾಂಭೀರ್ಯದಿಂದ ನಡೆಯಬೇಕಂತೆ. ಎರಡನೆಯದು, ರಾಜ ಯಾರಿದ್ದರೇನು, ನನಗೆ ಸಂಬಂಧವೇ ಇಲ್ಲ ಎಂಬ ಭಾವದಿಂದ ನಡೆಯಬೇಕಂತೆ. ಇವೆರಡರ ಹೊರತಾಗಿ ಹೇಗೆ ನಡೆದರೂ ಯಾರೂ ನಿಮ್ಮನ್ನು ನೋಡುವುದಿಲ್ಲ.

ವಕ್ರತುಂಡೋಕ್ತಿ

ಪ್ರತಿದಿನ ಬಂದರೂ ಗಂಡಸರು ತಪ್ಪದೇ ಆಚರಿಸುವ ದಿನಕ್ಕೆ ಸ್ವಾತಂತ್ರ್ಯ ದಿನಾಚರಣೆ ಎನ್ನಬಹುದು.

ಶೀಘ್ರ ಜಿಎಸ್‌ಟಿ ದರ ಪರಿಷ್ಕರಣೆ?

ದೆಹಲಿ: ಈ ವರ್ಷದ ದೀಪಾವಳಿ ಹಬ್ಬದೊಳಗಾಗಿ ಜಿಎಸ್‌ಟಿ ತೆರಿಗೆ ವ್ಯವಸ್ಥೆಯನ್ನು ಪರಿಷ್ಕರಿಸಲು ಕೇಂದ್ರ ಸರಕಾರ ಮುಂದಾಗಿದ್ದು, ಶೇ.5 ಹಾಗೂ ಶೇ.18 ಸ್ಲ್ಯಾಬ್‌ಗಳನ್ನು ಮಾತ್ರ ಉಳಿಸಿಕೊಳ್ಳಲಿದೆ ಎಂಬ ಮಾಹಿತಿ ಲಭ್ಯವಾಗಿದೆ. ಸದ್ಯ ಅಗತ್ಯ ಆಹಾರ ವಸ್ತುಗಳ ಮೇಲೆ ಶೂನ್ಯ, ದಿನನಿತ್ಯದ ವಸ್ತುಗಳ ಮೇಲೆ ಶೇ.5, ಸಾಮಾನ್ಯ ದರ್ಜೆಯ ವಸ್ತುಗಳ ಮೇಲೆ ಶೇ.12, ಎಲೆಕ್ಟ್ರಾನಿಕ್ಸ್ ಹಾಗೂ ಸೇವಾ ಉತ್ಪನ್ನಗಳ ಮೇಲೆ ಶೇ.18 ಮತ್ತು ವಿಲಾಸಿ ಹಾಗೂ ಮದ್ಯ, ತಂಬಾಕು ಉತ್ಪನ್ನಗಳಿಗೆ ಶೇ.28ರಷ್ಟು ತೆರಿಗೆ ಹೇರಲಾಗುತ್ತಿದೆ. ಪರಿಷ್ಕೃತ ವ್ಯವಸ್ಥೆಯಲ್ಲಿ ಶೇ.5 ಹಾಗೂ ಶೇ.18ರ ಸ್ಲ್ಯಾಬ್ ಜತೆಗೆ ವಿಲಾಸಿ ಹಾಗೂ ಮದ್ಯ, ತಂಬಾಕು ಉತ್ಪನ್ನಗಳಿಗೆ ಶೇ.40ರ ವಿಶೇಷ ದರ ಇರಲಿದೆ ಎಂದು ತಿಳಿದು ಬಂದಿದೆ. ಪರಿಷ್ಕೃತ ಸ್ವರೂಪಕ್ಕೆ ಜಿಎಸ್‌ಟಿ ಕೌನ್ಸಿಲ್‌ನ ಒಪ್ಪಿಗೆ ಸಿಕ್ಕರೆ, ಸದ್ಯ ಶೇ.12ರ ಪರಧಿಯಲ್ಲಿರುವ ಶೇ.99 ಉತ್ಪನ್ನಗಳು ಶೇ.5ರ ಸ್ಲ್ಯಾಬ್‌ಗೂ ಶೇ.28ರ ಅಡಿಯಲ್ಲಿ ಬರುವ ಶೇ.90ರಷ್ಟು ವಸ್ತುಗಳು ಶೇ. 18ರ ಸ್ಲ್ಯಾಬ್‌ನೊಳಗೆ ಬರಲಿದೆ ಎನ್ನಲಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ನಾಗಾಲ್ಯಾಂಡ್ ರಾಜ್ಯಪಾಲ ಗಣೇಶನ್ ನಿಧನ

ಚೆನ್ನೈ: ನಾಗಾಲ್ಯಾಂಡ್ ರಾಜ್ಯಪಾಲ ಗಣೇಶನ್ (80) ಶುಕ್ರವಾರ ಸಂಜೆ ನಿಧನರಾಗಿದ್ದಾರೆ. ಆಗಸ್ಟ್ 8ರಂದು ಚೆನ್ನೈನಲ್ಲಿರುವ ತಮ್ಮ ನಿವಾಸದಲ್ಲಿ ಬಿದ್ದು ತಲೆಗೆ ಗಂಭೀರ ಗಾಯವಾಗಿದ್ದರಿಂದ ಅವರು ಜೀವನ್ಮರಣ ಹೋರಾಟ ನಡೆಸುತ್ತಿದ್ದರು. ಚೆನ್ನೈನ ಅಪೋಲೋ ಆಸ್ಪತ್ರೆಗೆ ದಾಖಲಿಸಿ, ತೀವ್ರ ವೈದ್ಯಕೀಯ ನಿಗಾದಲ್ಲಿ (ಐಸಿಯು) ಇರಿಸಲಾಗಿತ್ತು, ಆದರೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಗಣೇಶನ್ ನಿಧನಕ್ಕೆ ಪ್ರಧಾನಿ ಮೋದಿ ಸೇರಿ ಹಲವು ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ಮೇಘಸ್ಫೋಟ: ಸಾವಿನ ಸಂಖ್ಯೆ 60ಕ್ಕೆ ಏರಿಕೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಕಿಶ್ತವಾಡ ಜಿಲ್ಲೆಯ ಚಸೌತಿ ಗ್ರಾಮದಲ್ಲಿ ಗುರುವಾರ ಸಂಭವಿಸಿದ ಮೇಘಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ 60ಕ್ಕೆ ಏರಿಕೆಯಾಗಿದ್ದು, 100ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಇದುವರೆಗೂ 160 ಮಂದಿ ರಕ್ಷಿಸಲಾಗಿದ್ದು, ಈ ಪೈಕಿ 38 ಮಂದಿ ಸ್ಥಿತಿ ಚಿಂತಾಜನಕವಾಗಿದೆ. ಚಸೌತಿಯಿಂದ 15 ಕಿ.ಮೀ ದೂರದ ಪದ್ದಾರ್‌ನಲ್ಲಿ ನಿಯಂತ್ರಣ ಕೊಠಡಿ, ಸಹಾಯವಾಣಿ ಸ್ಥಾಪಿಸಲಾಗಿದೆ. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಸೇನಾ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿವೆ.

ಎಸ್‌ಐಟಿ ತನಿಖೆಯಲ್ಲಿ ಯಾವುದೇ ಮಾಹಿತಿ ಸಿಗದಿದ್ದರೆ ಕ್ರಮ

ಅನಾಮಿಕನ ವಿರುದ್ಧ ಕ್ರಮ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಷ್ಟ್ರಮಟ್ಟದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿದ್ದ ಅನಾಮಧೇಯ ವ್ಯಕ್ತಿಯ 'ಬುರುಡೆ' ಪ್ರಕರಣದಲ್ಲಿ ಹುರುಳಿಲ್ಲ ಎನ್ನುವ ಅನುಮಾನಗಳಿಗೆ ಪುಷ್ಟಿ ಸಿಗುತ್ತಿದ್ದಂತೆ, ಇದೀಗ ಅನಾಮಧೇಯ ವ್ಯಕ್ತಿಯ ವಿರುದ್ಧ ದೂರು ದಾಖಲಿಸಬೇಕೆ ಎನ್ನುವ ನಿಟ್ಟಿನಲ್ಲಿ ಚರ್ಚೆಗಳು ಆರಂಭಗೊಂಡಿವೆ.

ಗುರುವಾರ ವಿಧಾನಸಭೆಯಲ್ಲಿ ನಡೆದ ಚರ್ಚೆಯಲ್ಲಿ ಬಿಜೆಪಿ ನಾಯಕರು, ಅನಾಮಿಕ ವ್ಯಕ್ತಿಯ ಬಗ್ಗೆ ಮೊದಲು ತನಿಖೆ ನಡೆಸಬೇಕು ಹಾಗೂ ಪೊಲೀಸರಿಗೆ ಸುಳ್ಳು ಮಾಹಿತಿ ನೀಡಿದ್ದ ಆರೋಪದಲ್ಲಿ ದೂರು ದಾಖಲಿಸಬೇಕು ಎಂದು ಆಗ್ರಹಿಸಿದ್ದರು. →10

ಮಟ್ಟೆಣ್ಣವರ ವಿರುದ್ಧ ದೂರು

ಧಾರವಾಡ: ಧರ್ಮಸ್ಥಳದ ವಿರುದ್ಧ ಸುಖಾ ಸುಮ್ಮನೆ ಸೋಶಿಯಲ್ ಮೀಡಿಯಾಗಳಲ್ಲಿ ಅವಹೇಳನ ಮಾಡುತ್ತಿರುವ ಗಿರೀಶ ಮಟ್ಟೆಣ್ಣವರ ಹಾಗೂ ಕೂಡ್ಲಾ ರಾಮ್‌ಪೇಜ್ ಮಾಲೀಕನ ಮೇಲೆ ಧಾರವಾಡ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಮಂಜುನಾಥ ಜಕ್ಕಣವರ್ ಎಂಬುವವರು ದೂರು ದಾಖಲಿಸಿದ್ದಾರೆ. ಜೈನ ಧರ್ಮದ ಮುಖಂಡರಾಗಿರುವ ಮಂಜುನಾಥ ಅವರು, ಕೂಡಲೇ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

6.75 ಕೆಜಿ ಬಂಗಾರ ಬಿಸ್ಕತ್ತ, 1.75 ಕೋಟಿ ಜಪ್ತಿ

ಸೈಲ್ ಮನೆ ಚಿನ್ನದ ಖಜಾನೆ

ಬೆಂಗಳೂರು: ಬೇಲೆಕೇರಿ ಅದಿರು ನಾಪತ್ತೆ ಪ್ರಕರಣದಲ್ಲಿ ಜಾಮೀನಿನ ಮೇರೆಗೆ ಹೊರಗಿರುವ ಕಾಂಗ್ರೆಸ್ ಶಾಸಕ ಸತೀಶ್ ಸೈಲ್‌ಗೆ ಸಂಬಂಧಿಸಿದಂತೆ ವಿವಿಧ ಕಡೆಗಳಲ್ಲಿ ಜಾರಿ ನಿರ್ದೇಶನಾಲಯ ದಾಳಿ ನಡೆಸಿ, ಕೋಟ್ಯಂತರ ರುಪಾಯಿ ನಗದು ಹಾಗೂ ಕೆ.ಜಿಗಟ್ಟಲೇ ಚಿನ್ನ ವಶಕ್ಕೆ ಪಡೆದು ಕೊಂಡಿದೆ.

ಅಕ್ರಮ ಹಣ ವರ್ಗಾವಣೆ ಕಾಯಿದೆ ಪ್ರಕರಣ ದಾಖಲಿಸಿಕೊಂಡಿದ್ದ ಇ.ಡಿ ಅಧಿಕಾರಿಗಳು ಕಳೆದ ಬುಧವಾರ ಹಾಗೂ ಗುರುವಾರ ಕಾರವಾರದಲ್ಲಿ ಶಾಸಕರ ನಿವಾಸ, ಗೋವಾ, ಮುಂಬೈ ಹಾಗೂ ದೆಹಲಿ ವಿವಿಧ ಕಡೆಗಳಲ್ಲಿ ಏಕಕಾಲದಲ್ಲಿ ದಾಳಿ ನಡೆಸಿದ್ದರು. ಪರಿಶೀಲನೆ ವೇಳೆ ಅಕ್ರಮಕ್ಕೆ ಸಂಬಂಧಿಸಿದಂತೆ ದಾಖಲಾತಿಗಳು ದೊರೆತಿವೆ. ಇದಕ್ಕೆ ಪೂರಕವಾಗಿ ಇಮೇಲ್ ಮಾಡಿರುವುದು ಗೊತ್ತಾಗಿದೆ. ತಪಾಸಣೆ ವೇಳೆ 1.68 ಕೋಟಿ ನಗದು, 6.75 ಕೆ.ಜಿ ಮೌಲ್ಯದ ಚಿನ್ನದ ಬಿಸ್ಕತ್‌ಗಳು ಹಾಗೂ ಬ್ಯಾಂಕ್ ಖಾತೆಯಲ್ಲಿದ್ದ ಸುಮಾರು 14.13 ಕೋಟಿ ರು. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

22 ಗಂಟೆ ಶೋಧ: ಕಾರವಾರ ತಾಲೂಕಿನ ಚಿತ್ತಾಕುಲ ಗ್ರಾಮದ ನಿವಾಸಿಯಾಗಿರುವ ಸತೀಶ್ ಮನೆಯಲ್ಲಿ ಅಧಿಕಾರಿಗಳು ಸತತ 22 ಗಂಟೆಗಳ ಕಾಲ ಶೋಧ ಕಾರ್ಯ ಕೈಗೊಂಡಿದ್ದರು.

ಡಾ.ಶರಣಬಸವಪ್ಪ ಅಪ್ಪ ಪಂಚಭೂತಗಳಲ್ಲಿ ಲೀನ

ಕಲಬುರಗಿ: ಗುರುವಾರ ಇಹಲೋಕ ತ್ಯಜಿಸಿದ್ದ ಶ್ರೀ ಶರಣಬಸವೇಶ್ವರ ಸಂಸ್ಥಾನದ ಎಂಟನೇ ಪೀಠಾಧಿಪತಿ, ಅಕ್ಷರ ದಾಸೋಹಿ, ವಿದ್ಯಾಭಂಡಾರಿ ಪೂಜ್ಯ ಡಾ.ಶರಣಬಸವಪ್ಪ ಅಪ್ಪ ಅವರ ಅಂತ್ಯಕ್ರಿಯೆ ವೀರಶೈವ ಸಂಪ್ರದಾಯದಂತೆ ಶುಕ್ರವಾರ ನೆರವೇರಿತು. ಸರಕಾರದ ಪರವಾಗಿ ಡಿಸಿಎಂ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಆಗಮಿಸಿ ಸಕಲ ಸರಕಾರಿ ಗೌರವ ಸಲ್ಲಿಸಿದರು.

ವಿರೋಧಿಗಳ ವಿರುದ್ಧ ಕೆ.ಎನ್.ರಾಜಣ್ಣ ಗುಡುಗು

ದಿಲ್ಲಿಯಲ್ಲಿ ಸಂಚು

ಮಧುಗಿರಿ: ಪಿತೂರಿ ಮಾಡುವುದು ನನಗೂ ಬರುತ್ತದೆ. ಪಿತೂರಿ ವಿದ್ಯೆ ಬರುವುದಿಲ್ಲ ಅಂದುಕೊಳ್ಳಬೇಕಿಲ್ಲ ಎಂದು ಸಚಿವ ಸ್ಥಾನದಿಂದ ವಜಾಗೊಂಡಿರುವ ಕೆ.ಎನ್.ರಾಜಣ್ಣ ಪರೋಕ್ಷವಾಗಿ ತಮ್ಮ ವಿರೋಧಿಗಳಿಗೆ ಎಚ್ಚರಿಕೆ ನೀಡಿದರು.

ಪಟ್ಟಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನನ್ನನ್ನು ಸಚಿವ ಸ್ಥಾನದಿಂದ ಇಳಿಸಲು ಮೂವರು ದೆಹಲಿಯಲ್ಲಿ ವ್ಯವಸ್ಥಿತವಾಗಿ ಪಿತೂರಿ ಮಾಡಿದ್ದಾರೆ. ಪಿತೂರಿ ವಿದ್ಯೆ ನನಗೂ ಗೊತ್ತಿದೆ. ಈ ಸಂದರ್ಭದಲ್ಲಿ ಅದನ್ನು ಬಳಸುವುದಿಲ್ಲ. ಮುಂದೆ ಕಾಲ ಬರುತ್ತದೆ ಎಂದರು.

ವಿಧಾನಸಭೆ ಅಧಿವೇಶನ ಮುಗಿದ ನಂತರ ದೆಹಲಿಗೆ ಹೋಗಿ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಎಲ್ಲ ವಿಚಾರ ತಿಳಿಸುತ್ತೇನೆ. ಸಮಯ ಬಂದಾಗ ಸಚಿವ ಸ್ಥಾನ ತೆಗೆದುಕೊಳ್ಳುತ್ತೇನೆ. ಇದೇ ಅವಧಿಯಲ್ಲಿ ಸಚಿವನಾಗುತ್ತೇನೆ. ಹೈಕಮಾಂಡ್ ಒಪ್ಪಿಸುತ್ತೇನೆ. ದೆಹಲಿಗೆ ಹೋಗಿ ಬಂದ ಮೇಲೆ ಸಿಹಿ ಸುದ್ದಿ ಕೊಡುತ್ತೇನೆ ಎಂದು ಹೇಳಿದರು. →10

ಮಂತ್ರಿಗಿರಿ ಮತ್ತೆ ಪಡೆವೆ

ಅಧಿಕಾರ ಇಲ್ಲದಿದ್ದರೂ ಪರವಾಗಿಲ್ಲ. ಜನರ ಪ್ರೀತಿ ಉಳಿಸಿಕೊಂಡಿರುವ ಶಕ್ತಿ ದೇವರು ಕೊಡಲಿ. ಸಮಯ ಬಂದಾಗ ಸಚಿವ ಸ್ಥಾನವನ್ನು ಮತ್ತೆ ಪಡೆದುಕೊಳ್ಳುತ್ತೇನೆ ಎಂದು ಕೆ.ಎನ್. ರಾಜಣ್ಣ ತಿಳಿಸಿದರು.

ನನ್ನನ್ನು ಸಚಿವ ಸ್ಥಾನದಿಂದ ತೆಗೆಯುವುದು ಮುಖ್ಯಮಂತ್ರಿಗೆ ಗೊತ್ತಿರಲಿಲ್ಲ. ಸಿಎಂ ಸಿದ್ದರಾಮಯ್ಯ ಹೈಕಮಾಂಡ್ ಮನವೊಲಿಸಲು ಯತ್ನಿಸಿದ್ದಾರೆ. ಆದರೆ ಅದು ಆಗಿಲ್ಲ.

-ಕೆ.ಎನ್.ರಾಜಣ್ಣ ಶಾಸಕ

ಸಮಾಚಾರ ಸಣ್ಣದಲ್ಲ

ಆ.18ರಂದು ನಾಗರಿಕ ಸೌಹಾರ್ದ ಸಭೆ

ದಾವಣಗೆರೆ: ಆ.27 ರಂದು ಗಣೇಶ ಹಬ್ಬ ಆಚರಣೆ ಹಾಗೂ ಸೆ.5 ರಂದು ನಡೆಯುವ ಈದ್ ಮಿಲಾದ್ ಹಬ್ಬದ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಆ.18 ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ತುಂಗಭದ್ರ ಸಭಾಂಗಣದಲ್ಲಿ ನಾಗರಿಕರ ಸೌಹಾರ್ದ ಸಭೆಯನ್ನು ಆಯೋಜಿಸಲಾಗಿದೆ ಎಂದು ಪೊಲೀಸ್ ಅಧೀಕ್ಷಕಿ ಉಮಾ ಪ್ರಶಾಂತ್ ತಿಳಿಸಿದ್ದಾರೆ.

ಪ್ರವಾಸಿ ತಾಣಗಳಿಗೆ ವಿಶೇಷ ಸಾರಿಗೆ ಸೌಲಭ್ಯ

ದಾವಣಗೆರೆ: ಆ.17ರಿಂದ ಪ್ರತಿ ಭಾನುವಾರ, ರಜಾದಿನಗಳಂದು ದಾವಣಗೆರೆಯಿಂದ ಜೋಗ-ಸಿಗಂದೂರು ಮತ್ತು ಅಂಜನಾದ್ರಿ ಬೆಟ್ಟ-ಹಂಪಿ-ತುಂಗಾಭದ್ರಾ ಡ್ಯಾಂ ಹಾಗೂ ಇಂಡಗುಂಜಿ-ಅಪ್ಸರಕೊಂಡ ವಾಟರ್ ಫಾಲ್-ಇಕೋಬೀಚ್‌ಗೆ ದಾವಣಗೆರೆ ಕೆಎಸ್‌ಆರ್‌ಟಿಸಿಯಿಂದ ವಿಶೇಷ ಪ್ಯಾಕೇಜ್ ಸಾರಿಗೆ ವ್ಯವಸ್ಥೆ ಪ್ರಾರಂಭಿಸಲಾಗಿದೆ. ದಾವಣಗೆರೆ, ಸಿಂಗದೂರು, ಇಕ್ಕೇರಿಕೋಟೆ, ವರದಮೂಲ, ಜೋಗಫಾಲ್ಸ್‌ಗೆ 2 ಬದಿ ಸೇರಿ 600 ರು. ಮಕ್ಕಳಿಗೆ 460 ರು.ಇರುತ್ತದೆ. ದಾವಣಗೆರೆ, ಅಂಜನಾದ್ರಿಬೆಟ್ಟ, ಹಂಪಿ, ತುಂಗಾಭದ್ರಾ ಡ್ಯಾಂಗೆ 2 ಬದಿ ಸೇರಿ 500 ರು., ಮಕ್ಕಳಿಗೆ 475 ರು.ಇರುತ್ತದೆ. ದಾವಣಗೆರೆಯಿಂದ ಹೊರಟು ಇಡಗುಂಜಿ, ಅಪ್ಸರಕೊಂಡ ವಾಟರ್ ಫಾಲ್ಸ್, ಇಕೋಬೀಚ್, ಬ್ಯಾಕ್ ವಾಟರ್ ಬೋಟಿಂಗೆ 2 ಬದಿ ಸೇರಿ 685 ರು., ಮಕ್ಕಳಿಗೆ 515 ರು. ಇರುತ್ತದೆ. ಮುಂಗಡ ಬುಕ್ಕಿಂಗ್ ಕೌಂಟರ್‌ಗಳಲ್ಲಿ ಬುಕ್ಕಿಂಗ್ ಮಾಡಲ್ಲು ksrtc.karnataka.gov.inಸೌಲಭ್ಯ ಪಡೆಯಬೇಕು ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಕಿರಣಕುಮಾರ್.ಎಫ್ ಬಸಾಪುರ ತಿಳಿಸಿದ್ದಾರೆ.

ಶ್ರೀ ಕೃಷ್ಣ ಜಯಂತಿ ಆಚರಣೆ ಇಂದು

ದಾವಣಗೆರೆ: ಜಿಲ್ಲಾಡಳಿತದಿಂದ ಆ.16 ರಂದು ಮಧ್ಯಾಹ್ನ 12 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಶ್ರೀಕೃಷ್ಣ ಜಯಂತಿಯನ್ನು ಆಚರಿಸಲಾಗುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

79ನೇ ಸ್ವಾತಂತ್ರ್ಯೋತ್ಸವ ಆಚರಣೆ

ಹೊಸನಗರ: ಪಟ್ಟಣ ಪಂಚಾಯತಿ ಆವರಣದಲ್ಲಿ ಪಟ್ಟಣ ಪಂಚಾಯತಿ ಅಧ್ಯಕ್ಷ ನಾಗಪ್ಪನವರ ನೇತೃತ್ವದಲ್ಲಿ 79ನೇ ವರ್ಷದ ಸ್ವಾತಂತ್ರ್ಯೋತ್ಸವ ಪ್ರಯುಕ್ತ ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಲಾಗಿತು. ಈ ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಹರೀಶ್ ಹಾಗೂ ಎಲ್ಲ ಪಟ್ಟಣ ಪಂಚಾಯತಿ ಸಿಬ್ಬಂದಿ ಪಟ್ಟಣ ಪಂಚಾಯತಿಯ ಸದಸ್ಯರು ಪೌರ ನೌಕರ ವರ್ಗದವರು ಉಪಸ್ಥಿತರಿದ್ದರು.

ಸಿದ್ಧಗಂಗಾ ವಿದ್ಯಾಸಂಸ್ಥೆ ಸ್ವಾತಂತ್ರ್ಯೋತ್ಸವ

ದಾವಣಗೆರೆ: ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ವಿದ್ಯಾರ್ಥಿನಿ ಚೇತನಾ ಧ್ವಜಾರೋಹಣ ಮಾಡಿದಳು. ಸ್ವಾತಂತ್ರ್ಯ ಹೋರಾಟಗಾರರ ವೇಷ ಭೂಷಣ ಧರಿಸಿದ ಮಕ್ಕಳು ಗಮನ ಸೆಳೆದರು. ನುಸ್ರಖಾಜ್ , ಜಾಹ್ನವ್ ಹಾಗೂ ಗಗನ್, ಯುಕೆಜಿ ಯ ಅಹಾನ, ಸಾತ್ವಿಕ್ ಮತ್ತು ಕಾರುಣ್ಯ ಇವರು ಸ್ವಾತಂತ್ರ್ಯ ದಿನಾಚರಣೆಯ ಕುರಿತು ಭಾಷಣ ಮಾಡಿದರು. 2 ನೇ ತರಗತಿಯ ಅಥರ್ವ, ಸಂಗೊಳ್ಳಿ ರಾಯಣ್ಣನ ಏಕಪಾತ್ರಾಭಿನಯ ಪ್ರದರ್ಶಿಸಿದನು. 6ನೇ ತರಗತಿ ಮಕ್ಕಳು ದೇಶಭಕ್ತಿ ಗೀತೆಗಳನ್ನು ಪ್ರಸ್ತುತಪಡಿಸಿದರು. ವಿವಿಧ ತರಗತಿಯ ಒಟ್ಟು 80 ಮಕ್ಕಳಿಂದ 'ಮಾತೆ ಪೂಜಕ' ಎಂಬ ಹಾಡಿಗೆ ಸಾಮೂಹಿಕವಾಗಿ ಹಾಡಿದ್ದು ವಿಶೇಷವಾಗಿತು. ಹೈಸ್ಕೂಲ್ ವಿದ್ಯಾರ್ಥಿಗಳಿಂದ ಕಾರ್ಗಿಲ್ ವಿಜಯೋತ್ಸವ ನಾಟಕ ಪ್ರದರ್ಶಿಸಲಾಯಿತು. ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಂದ ಬೋಧಕ ಹಾಗೂ ಬೋಧಕೇತರ ವರ್ಗದವರಿಂದ ಪಾಲಕರಿಂದ ಮೈದಾನ ತುಂಬಿತ್ತು. ಸಂಸ್ಥೆಯ ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳು ಜಿಲ್ಲಾಕ್ರೀಡಾಂಗಣಕ್ಕೆ ತೆರಳಿ ಕಾರ್ಯಕ್ರಮ ವೀಕ್ಷಿಸಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಸಿದ್ದರಾಮಯ್ಯ} ಮುಖ್ಯಮಂತ್ರಿ

ಮಧ್ಯವರ್ತಿಗಳ ಹಾವಳಿಯಿಲ್ಲದೆ ನೇರವಾಗಿ ಜನರಿಗೆ ತಲುಪುವ ಈ ಯೋಜನೆಗಳು ರಾಜ್ಯದ ಜನರ ತಲಾದಾಯವನ್ನು ಹೆಚ್ಚಿಸುತ್ತಿರುವುದಲ್ಲದೆ ಕಾರ್ಮಿಕ ಶಕ್ತಿಯಲ್ಲಿಮಹಿಳೆಯರ ಭಾಗವಹಿಸುವಿಕೆಯನ್ನು ಶೇ.23ರಷ್ಟು ಹೆಚ್ಚಿಸಿವೆ ಎಂದು ಹಲವು ಅಧ್ಯಯನಗಳು ಹೇಳುತ್ತಿವೆ.



ಜಿಲ್ಲೆಯ ಬಗರ್‌ಹುಕುಂ ಸಾಗುವಳಿದಾರರು, ವನವಾಸಿಗಳ ಹಿತ ಕಾಯಲು ಸರಕಾರ ಬದ್ಧ : ಸಚಿವ ಮಧು ಬಂಗಾರಪ್ಪ

ಶರಾವತಿ ಮುಳುಗಡೆ ಸಂತ್ರಸ್ತರನ್ನು ಒಕ್ಕಲೆಬ್ಬಿಸದಂತೆ ಕ್ರಮ

ಶಿವಮೊಗ್ಗ: ಶರಾವತಿ ಮುಳುಗಡೆ ಸಂತ್ರಸ್ಥರು, ಜಿಲ್ಲೆಯಲ್ಲಿನ ಬಗರ್‌ಹುಕುಂ ಸಾಗುವಳಿದಾರರು ಹಾಗೂ ವನವಾಸಿಗಳ ಹಿತಕಾಯಲು ಸರಕಾರ ಬದ್ದವಾಗಿದ್ದು, ಅವರನ್ನು ಒಕ್ಕಲೆಬ್ಬಿಸದಂತೆ ಸರಕಾರ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ ಎಂದು ರಾಜ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಎಸ್.ಮಧು ಬಂಗಾರಪ್ಪ ಹೇಳಿದರು.

ಅವರು ಜಿಲ್ಲಾಡಳಿತವು ನಗರದ ನೆಹರೂ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 79ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಿದ್ದರು. ಕಾನೂನಾತ್ಮಕ ವಿಷಯಗಳನ್ನು ಹೊರತುಪಡಿಸಿದ ಉಳಿದ ವಿಷಯಗಳಲ್ಲಿ ವಿನಾಯಿತಿ ನೀಡಲಾಗುವುದು ಎಂದ ಅವರು, ಈ ವಿಷಯದ ತಾರ್ಕಿಕ ಅಂತ್ಯ ತಲುಪಿಸುವ ಉದ್ದೇಶದಿಂದ ಕೇಂದ್ರ ಸರಕಾರವನ್ನು ವಿಶ್ವಾಸಕ್ಕೆ ಪಡೆದು ಕಾರ್ಯ ಯೋಜನೆ ರೂಪಿಸಲಾಗುತ್ತಿದೆ. ಅಲ್ಲದೇ ದೇಶದ ಹೈಕೋರ್ಟ್‌ದಲ್ಲಿ ಈ ಪ್ರಕರಣದ ವಿಚಾರಣೆಗೆ ಸಂಬಂಧಿಸಿದಂತೆ ಸಮರ್ಥವಾಗಿ ವಾದ ಮಂಡಿಸಲು ಹಿರಿಯ ವಕೀಲರೊಬ್ಬರನ್ನು ನೇಮಿಸಲಾಗಿದೆ ಎಂದರು.

ಜಿಲ್ಲೆಯಲ್ಲಿರುವ ಮೆಗ್ಗಾನ್‌ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೊರಜಿಲ್ಲೆಗಳ 26 ತಾಲೂಕುಗಳಿಂದ ಬರುತ್ತಿದ್ದು, ನಿರೀಕ್ಷೆಗೆ ಮೀರಿದ ಜನಸಂಖ್ಯೆ ಬರುತ್ತಿದೆ. ಸಹಜವಾಗಿ

79ನೇ ಸ್ವಾತಂತ್ರ ದಿನಾಚರಣೆ ಅಂಗವಾಗಿ ನಗರದ ನೆಹರು ಕ್ರೀಡಾಂಗಣದಲ್ಲಿ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ವಿವಿಧ ಸಾಧಕರನ್ನು ಗೌರವಿಸಿದರು.

ಇದರ ಮೇಲಿನ ಒತ್ತಡವೂ ಹೆಚ್ಚಾಗಿದೆ. ಆದ್ದರಿಂದ ಇರುವ ಆಸ್ಪತ್ರೆಯನ್ನು ಇನ್ನಷ್ಟು ಸುಸಜ್ಜಿತವಾಗಿ ರೂಪಿಸಲು 75-80ಕೋಟಿ ರು.ಗಳ ಅನುದಾನದ ಅಗತ್ಯವಿದ್ದು, ಬಿಡುಗಡೆಗೊಳಿಸುವಂತೆ ಉನ್ನತ ಶಿಕ್ಷಣ ಸಚಿವರಲ್ಲಿ ಈಗಾಗಲೆ ಮನವಿ ಮಾಡಿಕೊಳ್ಳಲಾಗಿದೆ.

ಇಲ್ಲಿನ ಆಸ್ಪತ್ರೆಯಲ್ಲಿನ ಎಂ.ಆರ್.ಐ ಯಂತ್ರ ಬಳಕೆಗೆ ಹೆಚ್ಚಿನ ಒತ್ತಡವಿದೆ. ಎಂ.ಸಿ.ಎಚ್.ಯೋಜನೆಯ ಮೂಲಕ ಟ್ರಾಮಾ, ಎಂ.ಆರ್.ಐ ಘಟಕಗಳನ್ನು ಪ್ರತ್ಯೇಕವಾಗಿ ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದರು. ಜಿಲ್ಲಾಸ್ಪತ್ರೆಯ ಅಭಿವೃದ್ಧಿ ಮತ್ತಿತರ ವಿಷಯಗಳ ಕುರಿತು ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಆರೋಗ್ಯ ಸಚಿವರೊಂದಿಗೆ ಸಮಾಲೋಚನೆ ನಡೆಸಲಾಗಿದ್ದು, ಹೊಸ ಜಿಲ್ಲಾಸ್ಪತ್ರೆ ನಿರ್ಮಾಣಕ್ಕೆ ಅಂದಾಜು 75ಕೋಟಿ ರು.ಗಳ ಅಗತ್ಯವಿದೆ. ಅಥವಾ ಈಗಿರುವ ಆಸ್ಪತ್ರೆಯ ಅಭಿವೃದ್ಧಿಗೆ 80 ಕೋಟಿ ರು.ಗಳ ಅಂದಾಜು ಪ್ರಸ್ತಾವನೆಯನ್ನು ಸರಕಾರದ ಮುಂದಿಡಲಾಗಿದೆ ಎಂದರು.

> **ಸಾಗುವಳಿದಾರರಿಗೆ ಹಕ್ಕುಪತ್ರ ಕೊಡಿಸುವ ಬಗ್ಗೆಯೂ ಕೂಡ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಲಾಗಿದೆ. ರಾಜ್ಯ ಸರಕಾರವು ಅನುಷ್ಠಾನಗೊಳಿಸಿರುವ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳೊಂದಿಗೆ ಎಲ್ಲ ಅಭಿವೃದ್ಧಿ ಕಾರ್ಯಗಳಿಗೆ ಅಗತ್ಯವಿರುವ ಅನುದಾನವನ್ನು ಕಾಯ್ದಿರಿಸಲಾಗಿದೆ. ಗ್ಯಾರಂಟಿ ಯೋಜನೆಗಳ ಲಾಭ ಪಡೆದ ರಾಜ್ಯದ ನಿವಾಸಿಗಳಲ್ಲಿ ಸರಕಾರದ ಪರವಾಗಿ ಸಕಾರಾತ್ಮಕ ಭಾವನೆ ಇದೆ.**
> **- ಎಸ್.ಮಧು ಬಂಗಾರಪ್ಪ**, ಸಚಿವ

ನಗರದ ವಿಶಾಲವಾದ 12ಎಕರೆ ಭೂಪ್ರದೇಶದಲ್ಲಿ ಸುಸಜ್ಜಿತವಾಗಿ ಜಿಲ್ಲಾಧಿಕಾರಿಗಳ ಕಚೇರಿ, ಜಿಲ್ಲಾ ಪಂಚಾಯತ್ ಕಚೇರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಅಗತ್ಯವಿರುವ ಅನುದಾನವನ್ನು ಬಿಡುಗಡೆಗೊಳಿಸುವಂತೆ ಮಾನ್ಯ ಮುಖ್ಯಮಂತ್ರಿಗಳನ್ನು ಕೋರಲಾಗಿದೆ. ಅಂತೆಯೇ ಜಿಲ್ಲೆಯ ಪ್ರವಾಸೋದ್ಯಮದ ವಿಕಾಸಕ್ಕೆ ಅಗತ್ಯವಿರುವ ಅನುದಾನವನ್ನು ಕೋರಲಾಗಿದೆ

ಸೊರಬ ತಾಲೂಕಿನ ನೀರಾವರಿ ಯೋಜನೆಗಳಿಗೆ 300ಕೋಟಿ ರು. ಕುಡಿಯುವ ನೀರಿನ ಯೋಜನೆಗಳಿಗೆ 2000ಕೋ.ರು.ಗಳನ್ನು ಬಿಡುಗಡೆಗೊಳಿಸಲಾಗಿದ್ದು, ಈ ಕಾರ್ಯಕ್ರಮ ಗಳೊಂದಿಗೆ ಇನ್ನಷ್ಟು ಕಾರ್ಯಕ್ರಮ ಗಳನ್ನು ಉದ್ಘಾಟಿಸಲು ಅಕ್ಟೋಬರ್‌ಗೆ ಬರುವಂತೆ ಆಹ್ವಾನಿಸಲಾಗಿದೆ. ಪಂಚಾಯತ್ ರಾಜ್‌ಇಲಾಖೆಯ ಪ್ರಗತಿಪಥ ಯೋಜನೆಯಡಿ ಜಿಲ್ಲೆಯಲ್ಲಿನ 162ಕಿ.ಮೀ. ಗ್ರಾಮೀಣ ರಸ್ತೆಗಳ ದುರಸ್ತಿ ಮತ್ತು ನೂತನ ರಸ್ತೆಗಳ ಗುಣಮಟ್ಟದ ನಿರ್ಮಾಣಕ್ಕೆ ಕ್ರಮವಹಿಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಜಿಪಂ ಸಿಇಒ ಎನ್.ಹೇಮಂತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನಕುಮಾರ್, ವಿಧಾನ ಪರಿಷತ್‌ಸದಸ್ಯೆ ಬಲ್ಕೀಶ್ ಬಾನು, ಬೋವಿ ನಿಗಮದ ರಾಜ್ಯ ಅಧ್ಯಕ್ಷ ರವಿಕುಮಾರ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಚಂದ್ರಭೂಪಾಲ ಉಪಸ್ಥಿತರಿದ್ದರು.

ಹೋರಾಟಗಾರರು ಜಾತಿಗೆ ಸೀಮಿತ ಬೇಡ

ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಆಯೋಜನೆ ಮಾಡಲಾಗಿದ 79ನೇ ಸ್ವಾತಂತ್ರ್ಯದ ಸಂಭ್ರಚಾರಣೆ ಹಮ್ಮಿಕೊಳ್ಳಲಾಯಿತು.

ಜಗಳೂರು: ಸ್ವಾತಂತ್ರ್ಯ ಹೋರಾಟಗಾರರನ್ನು ಜಾತಿ, ಧರ್ಮ ಹಾಗೂ ಪಕ್ಷಗಳಿಗೆ ಸೀಮಿತಗೊಳಿಸಿ ಯುವ ಜನರ ದಾರಿ ತಪ್ಪಿಸುವ ಕೆಲಸವನ್ನು ರಾಜಕೀಯ ಪಕ್ಷಗಳು ಮಾಡುವುದು ದುರಾದೃಷ್ಟಕರ ಎಂದು ಶಾಸಕ ಬಿ.ದೇವೇಂದ್ರಪ್ಪ ಕಳವಳ ವ್ಯಕ್ತಪಡಿಸಿದರು.

ಪಟ್ಟಣದ ಬಯಲು ರಂಗಮಂದಿರದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಆಯೋಜನೆ ಮಾಡಲಾಗಿದ 79ನೇ ಸ್ವಾತಂತ್ರ್ಯದ ಸಂಭ್ರಚಾರಣೆಯಲ್ಲಿ ಧ್ವಜ ವಂದನೆ ಸ್ವೀಕರಿಸಿ ಮಾತನಾಡಿ, ಟಿಪ್ಪು ಸುಲ್ತಾನ್ ಒಂದು ರಾಜಕೀಯ ಪಕ್ಷಕ್ಕೆ. ವೀರಸಾವರ್ಕರ್ ಒಂದು ರಾಜಕೀಯ ಪಕ್ಷಕ್ಕೆ ಸೀಮಿತ ಮಾಡಿ ಸ್ವಾತಂತ್ರ್ಯ ಹೋರಾಟಗಾರರ ಬಲಿದಾನ, ಕೊಡುಗೆಗಳು ಮರೆತು ಧರ್ಮ, ಜಾತಿಗಳ ಎಳೆದು ತಂದು ರಾಜಕೀಯ ಪಕ್ಷಗಳು ತಮ್ಮ ತಮ್ಮ ಬೆಳೆಗಳನ್ನು ಬೆಯಿಸಿಕೊಳ್ಳುವ ಭರದಲ್ಲಿ ಮುಗ್ಧ ಮಕ್ಕಳ, ಯುವ ವಿದ್ಯಾರ್ಥಿಗಳ ದಾರಿ ತಪ್ಪುಸುವ ಕೆಲಸ ಮಾಡುತ್ತೀವೆ ಎಂದು ಕಳವಳ ವ್ಯಕ್ತಪಡಿಸಿದರು.

ಇಸ್ರೋ ವಿಜ್ಞಾನಿ ಸುರೇಶ್ ನಾಯ್ಕ್ ಮಾತನಾಡಿ, ವಿದ್ಯಾರ್ಥಿಗಳು ಮಲಗಿದ್ದಾಗ ಕಾಣುವ ಕನಸ್ಸು ಸೋಗಸಾಗಿದೆ. ನಿದ್ದೆ ಹಾಳು ಮಾಡುವ ಕನಸ್ಸನ್ನು ಕಾಣಬೇಕು. ಸಾಧನೆಯ ಹಾದಿಯ ಹಿಂದಿನ ಪರಿಶ್ರಮ ಮಾತ್ರ ಕಠಿಣವಾಗಿರುತ್ತದೆ. ಆ ಪ್ರಯತ್ನಗಳು ಕಾಣುವುದಿಲ್ಲ ಯಶಸ್ಸು ಮಾತ್ರ ಕಾಣುತ್ತದೆ. ಆದ್ದರಿಂದ ಪ್ರತಿಯೊಂದು ಕೆಲಸಕ್ಕೆ ಪ್ರಯತ್ನ, ಪರಿಶ್ರಮ ಬಹುಮುಖ್ಯ ಎಂದರು.

ತಹಸೀಲ್ದಾರ್ ಸೈಯದ್ ಕಲೀಂ ಉಲ್ಲಾ ಮಾತನಾಡಿದರು.

ಈ ಸಂದರ್ಭದಲ್ಲಿ ಪಪಂ ಅಧ್ಯಕ್ಷ ನವೀನ್ ಕುಮಾರ್ ಸದಸ್ಯರಾದ ಸರೋಜಮ್ಮ, ಲಲಿತಮ್ಮ, ರಮೇಶ್ ರೆಡ್ಡಿ, ಶಕೀಲ್ ಅಹಮದ್, ಮಾರಣ್ಣ.ಪತ್ರಕರ್ತರ ಸಂಘದ ಅಧ್ಯಕ್ಷ ಚಿಂದಾನಂದ, ಬಸವರಾಜ್, ಪಪಂ ಮುಖ್ಯಾಧಿಕಾರಿ ಲೋಕ್ಯನಾಯ್ಕ್ ಇದ್ದರು.

ಗಮನ ಸೆಳೆದ ಹೆಣ್ಣಿನ ರಕ್ಷಣೆ ರೂಪಕ

ಎಸ್ ಇ ಎಸ್ ಶಾಲೆ ಮಕ್ಕಳು ಸೌಜನ್ಯ ಪ್ರಕರಣವನ್ನು ಆಧಾರಿಸಿದ ಕಿರು ನಾಟಕವು ಗಣ್ಯರ ಗಮನ ಸೆಳೆಯುತಲ್ಲದೆ ವೇದಿಕೆ ಮೇಲಿರುವ ಗಣ್ಯರಲ್ಲದೆ ಸಾರ್ವಜನಿಕರ ಕಣ್ಣಂಚಲಿ ನೀರು ತರಿಸಿತು. ಹೆಣ್ಣಿಗೆ ಸಾಮಾಜಿಕ ನ್ಯಾಯ್ಯ ಕಲ್ಪಿಸಿ ಹೆಣ್ಣನ್ನು ಭೋಗದ ವಸ್ತುವಾಗಿ ನೋಡಬೇಡಿ ಎನ್ನುವ ತಿರುಳು ಹೊಂದಿದ ರೂಪಕ ಶಾಸಕರಿಂದ 5 ಸಾವಿರ ನಗದು ಬಹುಮಾನ ಪಡೆಯಿತು.

ದೇಶದ ಅಭಿವೃದ್ಧಿಗೆ ಒಂದಾಗಿ ದುಡಿಯೋಣ

ಹರಿಹರ: ಶೌರ್ಯ, ಸಾಹಸ, ಪ್ರಾಣ ತ್ಯಾಗ ಮಾಡಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹನೀಯರನ್ನು ಮತ್ತು ಸಂಗೊಳ್ಳಿ ರಾಯಣ್ಣನ ದೇಶಭಕ್ತಿಯನ್ನು ಸ್ಮರಿಸಿಕೊಳ್ಳುತ್ತಾ ನಮ್ಮ ದೇಶದ ಅಭಿವೃದ್ಧಿಗೆ ಎಲ್ಲರೂ ಒಂದಾಗಿ ದುಡಿಯುವುದು ನಮ್ಮ ಕರ್ತವ್ಯವಾಗಿದೆ ಎಂದು ಕಾಗಿನೆಲೆ ಕನಕ ಗುರು ಪೀಠದ ಜಗದ್ಗುರುಗಳಾದ ನಿರಂಜನಾನಂದಪುರಿ ಮಹಾ ಸ್ವಾಮೀಜಿ ಹೇಳಿದರು.

ಬೆಳ್ಳೂಡಿ ಗ್ರಾಮದ ಹೊರ ವಲಯದಲ್ಲಿರುವ ಕಾಗಿನೆಲೆ ಮಹಾ ಸಂಸ್ಥಾನ, ಕನಕ ಗುರು ಪೀಠ ಶಾಖಾ ಮಠದ ಆಶ್ರಯದಲ್ಲಿ ನಡೆದ ಚಂದ್ರಗುಪ್ತ ಮೌರ್ಯ ವಿದ್ಯಾ ಸಂಸ್ಥೆಯಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣ ನೆರವೇರಿಸಿ ಭಾರತಾಂಬೆಗೆ ಮತ್ತು ಸಂಗೊಳ್ಳಿ ರಾಯಣ್ಣನವರ ಭಾವಚಿತ್ರಕ್ಕೆ ಗೌರವ ಸೂಚಿಸಿ ಸ್ವಾತಂತ್ರದ ಸಂದೇಶ ನೀಡಿದರು.

> **ಭಾರತ ದೇಶದ ಪ್ರತಿ ನಾಗರಿಕರೆಲ್ಲರೂ ಸ್ವಾತಂತ್ರ್ಯವನ್ನು ಗೌರವಿಸಬೇಕು. ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಬೇಕು, ಸಾಮಾಜಿಕ ನ್ಯಾಯವನ್ನು ಉತ್ತೇಜಿಸಬೇಕು ಹಾಗೂ ಎಲ್ಲರಿಗೂ ಸಮಾನ ಅವಕಾಶ ಒದಗಿಸಬೇಕು. ಸ್ವಾತಂತ್ರ್ಯ ಅನೇಕ ಮಹನೀಯರ ಹೋರಾಟ, ಬಲಿದಾನ, ತ್ಯಾಗವನ್ನು ಎಂದಿಗೂ ಮರೆಯಬಾರದು.**
> **-ಶ್ರೀನಿವಾಸ**, ನಂದಿಗಾವಿ

ಬೆಳ್ಳೂಡಿ ಗ್ರಾಪಂ ಅಧ್ಯಕ್ಷರು ಉಮೇಶ್ ಮಾತನಾಡಿ, ಈ ದಿನವು ಸ್ವಾತಂತ್ರ್ಯ ಹೋರಾಟಗಾರರ ತ್ಯಾಗಗಳನ್ನು ಸ್ಮರಿಸುತ್ತದೆ ರಾಷ್ಟ್ರದ ಪ್ರಗತಿ, ಮುಂದಿನ ಸವಾಲುಗಳನ್ನು ತಿಳಿದುಕೊಂಡು ನಮ್ಮ ದೇಶವನ್ನು ಅಭಿವೃದ್ಧಿಗೊಳಿಸಬೇಕು ಎಂದು ಹೇಳಿದರು.

ಚಂದ್ರಗುಪ್ತ ಮೌರ್ಯ ಶಾಲೆಯ ಕಾರ್ಯದರ್ಶಿ ಎಸ್.ನಿಂಗಪ್ಪ ಸರ್ ಮಾತನಾಡಿ, ಭಾರತವನ್ನು ಬಲಿಷ್ಟ ರಾಷ್ಟ್ರವನ್ನಾಗಿ ಮತ್ತು ಸಮಾನತೆಯ ನೆಲದಲ್ಲಿ ಶೋಷಣೆ ಮುಕ್ತ ನವ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರು ಬದ್ಧರಾಗಿ ದುಡಿಯಬೇಕಿದೆ ವಿದ್ಯಾರ್ಥಿಗಳು ಸಂಗೊಳ್ಳಿ ರಾಯಣ್ಣನಂತಹ ಅಪ್ಪಟ ದೇಶ ಭಕ್ತಿಯನ್ನು ನೀವೂ ಕೂಡ ಅಳವಡಿಸಿಕೊಂಡು ತಮ್ಮ ಕರ್ತವ್ಯವನ್ನು ಸರಿಯಾಗಿ ನಿಭಾಯಿಸಬೇಕು ಎಂದು ತಿಳಿಸಿದರು.

ಶೈಕ್ಷಣಿಕ ನಿರ್ದೇಶಕಿ ಡಾ.ಶೃತಿ ಇನಾಮ್ದಾರ್ ಮಾತನಾಡಿ, 79ನೇ ಸ್ವತಂತ್ರೋತ್ಸವವನ್ನು ಸಡಗರ ಸಂಭ್ರಮ ದಿಂದ ಆಚರಿಸುತ್ತಿದ್ದೇವೆ ಈ ಸ್ವತಂತ್ರವನ್ನು ತಂದುಕೊಟ್ಟ ಕಾರಣರಾದ ಮಹಾನ್ ವ್ಯಕ್ತಿಗಳನ್ನು ಇಂದು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ. ಮತ್ತು ಸ್ವಾತಂತ್ರ್ಯ ದಿನದಂದು ವಿದ್ಯಾರ್ಥಿಗಳು ಭಾಷಣಗಳನ್ನು, ದೇಶಭಕ್ತಿ ಗೀತೆಗಳು ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದಾಗಿದೆ ಮಕ್ಕಳಲ್ಲಿ ಬಾಲ್ಯದಿಂದಲೇ ಆತ್ಮವಿಶ್ವಾಸ ಮೂಡಿಸುವುದಾಗಿದೆ ಎಂದು ಮಾಹಿತಿ ನೀಡಿದರು.

ಭಾರತಾಂಬೆಗೆ ಮತ್ತು ಸಂಗೊಳ್ಳಿ ರಾಯಣ್ಣನವರ ಭಾವಚಿತ್ರಕ್ಕೆ ಗೌರವ ಸೂಚಿಸಿ ಸ್ವಾತಂತ್ರದ ಸಂದೇಶ ನೀಡಿದರು.
–ನಿರಂಜನಾನಂದಪುರಿ ಶ್ರೀ, ಕಾಗಿನೆಲೆ ಕನಕ ಗುರು ಪೀಠ

79 ನೇ ಸ್ವಾತಂತ್ರ್ಯ ದಿನಾಚರಣೆಯ ಆಚರಣೆಯನ್ನು ಸಂಭ್ರಮ ಮತ್ತು ಸಡಗರದಿಂದ ಆಚರಿಸಲಾಯಿತು. ನಾಲ್ಕು ತಂಡಗಳ ಮಕ್ಕಳ ಆಕರ್ಷಕ ಪಥಸಂಚಲನ ಮತ್ತು ಸ್ಕೌಟ್ಸ್ ಅಂಡ್ ಗೈಡ್ ನ ನಡಿಗೆ, ಸಾಂಸ್ಕೃತಿಕ ನೃತ್ಯ ಕಾರ್ಯಕ್ರಮಗಳು, ಭಾರತಾಂಬೆಯ ಪರ ಮಾರ್ದನಿಸಿತು.

ಈ ಮಹೇಂದ್ರ, ನಿಂಗಪ್ಪ ಗಜನೂರು, ಚಂದ್ರಗುಪ್ತ ಮೌರ್ಯ ವಿದ್ಯಾಸಂಸ್ಥೆಯ ಶಿಕ್ಷಕ ವೃಂದ, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಉಚಿತ ಬ್ಯಾಗ್ ವಿತರಣಾ ಕಾರ್ಯಕ್ರಮ

ಶಿಕಾರಿಪುರ: ದಾನಂ ಧ್ರುವಂತಿ ಫಲಂ ಎಂಬ ಮಾತಿನಂತೆ ಶಿವಮೊಗ್ಗದ ನಲಿ ಕಲಿ ಕ್ರಿಯಾಶೀಲ ತಾರೆಯರ ತಂಡ ಹಾಗೂ ಬೆಂಗಳೂರಿನ ನೋವೆಲ್ ಹೋಪ್ ಫೌಂಡೇಶನ್ ಸಹಕಾರದೊಂದಿಗೆ ಪಟ್ಟಣದ ಹಳಿಯೂರು ಸರಕಾರಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಬ್ಯಾಗ್ ವಿತರಣೆ ಅತ್ಯಂತ ಹರ್ಷದಾಯಕವಾಗಿದ್ದು, ನಲಿ ಕಲಿ ಕ್ರಿಯಾಶೀಲ ತಾರೆಯರ ತಂಡದ ನಾಯಕಿ ಪೌಜಿಯಾ ಶರವತ್ ಹಾಗೂ ಸದಸ್ಯರ ಸಮಾಜಮುಖಿ ಕಾರ್ಯಗಳು ಅತ್ಯಂತ ಶ್ಲಾಘ ನೀಯವಾಗಿದೆ ಎಂದು ಇಲ್ಲಿನ ಹಳಿಯೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕಿ ಗೀತಾ ಪಾಟೀಲ್ ಹರ್ಷ ವ್ಯಕ್ತಪಡಿಸಿದರು. ಪಟ್ಟಣದ ಹಳಿ ಯೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಶಿವಮೊಗ್ಗದ ನಲಿ ಕಲಿ ಕ್ರಿಯಾಶೀಲ ತಾರೆಯರ ತಂಡ ಹಾಗೂ ಬೆಂಗಳೂರಿನ ನೋವೆಲ್ ಹೋಪ್ ಫೌಂಡೇಶನ್ ವತಿಯಿಂದ ನಡೆದ ಉಚಿತ ಬ್ಯಾಗ್ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಈ ದಿಸೆಯಲ್ಲಿ ನಲಿಕಲಿ ಕ್ರಿಯಾಶೀಲ ತಾರೆಯರ ತಂಡ ಹಾಗೂ ಬೆಂಗಳೂರಿನ ನೋವೆಲ್ ಹೋಪ್ ಫೌಂಡೇಶನ್ ಜಿಲ್ಲೆಯ ಆಯ್ದ ಶಾಲೆಗಳಿಗೆ ಕಂಪ್ಯೂಟರ್, ನೋಟ್ ಪುಸ್ತಕಗಳು, ನಲಿ ಕಲಿ ಟೇಬಲ್‌ಗಳು ಹಾಗೂ ಬ್ಯಾಗ್‌ಗಳನ್ನು ನೀಡುವ ಮೂಲಕ ಸರಕಾರಿ ಶಾಲೆಗಳ ಸಬಲೀಕರಣಕ್ಕೆ ಕಾರಣ ಕರ್ತರಾಗಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು. ಎಸ್‌ಡಿಎಂಸಿ ಅಧ್ಯಕ್ಷೆ ಪ್ರೀತಿ ಮಾತ ನಾಡಿದರು. ಕಾರ್ಯಕ್ರಮದಲ್ಲಿ ನಲಿ-ಕಲಿ ಕ್ರಿಯಾ ಶೀಲ ತಾರೆಯರ ಶಿಕಾರಿಪುರ ತಂಡದ ಪ್ರತಿನಿಧಿ ,ಸಹಶಿಕ್ಷಕಿ ಲತಾ ಗೊಗ್ಗ ಹಾಗೂ ರೇಷ್ಮಾ ವಿಠಲ ನಗರ ಭಾಗವಹಿಸಿ ಎಲ್ಲ ಮಕ್ಕಳಿಗೆ ಬ್ಯಾಗ್ ವಿತರಿಸಿ ತಂಡದ ಕಾರ್ಯವೈಖರಿ ಬಗ್ಗೆ ತಿಳಿಸಿದರು. ಎಸ್‌ಡಿಎಂಸಿ ಅಧ್ಯಕ್ಷೆ ಪ್ರೀತಿ ಮತ್ತು ಪ್ರದೀಪ್ ದಂಪತಿ ನಲಿ ಕಲಿ ಮಕ್ಕಳಿಗೆ ಕುರ್ಚಿಗಳನ್ನು ವಿತರಣೆ ಮಾಡಿರ್ದರು. ಸಿರಿ ಶಾ ಪ್ರಾರ್ಥಿಸಿ, ಶಿಕ್ಷಕಿ ಲಕ್ಷ್ಮವ್ವ ಸುಣಗಾರ ನಿರೂಪಿಸಿ, ಗಾಯತ್ರಿ ದೇವಿ ವಂದಿಸಿದರು. ಕಾರ್ಯಕ್ರಮದಲ್ಲಿ ಅಡುಗೆ ಸಿಬ್ಬಂದಿ, ಪೋಷಕರು ಹಾಜರಿದ್ದು ಕಾರ್ಯಕ್ರಮಕ್ಕೆ ಮೆರಗು ತಂದರು.

ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ನಲಿಕಲಿ ಕ್ರಿಯಾಶೀಲ ತಾರೆಯರ ತಂಡ ಹಾಗೂ ನೋವೆಲ್ ಹೋ ಪ್ ಫೌಂಡೇಶನ್ ಬ್ಯಾಗ್‌ಗಳನ್ನು ವಿತರಿಸಲಾಯಿತು.

> **ಶಿವಮೊಗ್ಗ ಜಿಲ್ಲೆಯ ಬಹುತೇಕ ಸರಕಾರಿ ಶಾಲೆಗಳ ಮಕ್ಕಳು ನಲಿಕಲಿ ಕ್ರಿಯಾಶೀಲ ತಾರೆಯರ ತಂಡ ಹಾಗೂ ನೋವೆಲ್ ಹೋಪ್ ಫೌಂಡೇಶನ್ ನ ಫಲಾನುಭವಿಗಳಾಗಿದ್ದಾರೆ ಮಕ್ಕಳ ಅವಶ್ಯಕತೆ ಅರಿತು ಅಗತ್ಯ ಸಾಮಗ್ರಿಗಳನ್ನು ದಾನಿಗಳ ಸಹಾಯದಿಂದ ಜಿಲ್ಲೆಯ ಎಲ್ಲ ಶಾಲೆಗಳಿಗೆ ತಲುಪಿಸುವುದು ಕ್ಲಿಷ್ಟಕರ.**
> **-ಗೀತಾ ಪಾಟೀಲ್**, ಶಾಲಾ ಮುಖ್ಯ ಶಿಕ್ಷಕಿ

ವಿಶ್ವದಲ್ಲಿ 4ನೇ ಆರ್ಥಿಕ ಶಕ್ತಿಶಾಲಿ ದೇಶ

79ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮವನ್ನು ತಹಸೀಲ್ದಾರ್ ರಶ್ಮೀ ಹಾಲೇಶ್ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವುದು.

ಹೊಸನಗರ: ಬೃಹತ್ ಪ್ರಮಾಣದ ಕೃಷಿ ಆಧಾರಿತ ಆರ್ಥಿಕತೆ ಇದ್ದು, ಕೈಗಾರಿಕೆಗಳನ್ನು ಯೂರೋಪಿನ ಶಕ್ತಿಗಳು ನಿಯಂತ್ರಣ ಮಾಡುತ್ತಿದ್ದರು ಇವುಗಳ ಪರಿಣಾಮವಾಗಿ ದೇಶದ ಆರ್ಥಿಕತೆ ಹೆಚ್ಚು ಸೀಮಿತವಾಗಿದ್ದರೂ, ಸ್ವಾತಂತ್ರ್ಯ ಪೂರ್ವದಲ್ಲಿ ಆರ್ಥಿಕ ಶಕ್ತಿಯಲ್ಲಿ ಬಲ ಹೊಂದಿದ್ದರೂ ಭಾರತದ ಜನತೆಗೆ ಮೂಲ ಸೌಕರ್ಯಗಳಿಲ್ಲದೇ ಆರ್ಥಿಕ ಸ್ಥಿತಿ ಶೋಚನೀಯ ಸ್ಥಿತಿಯಲ್ಲಿತ್ತು ಎಂದು ತಹಸೀಲ್ದಾರ್ ರಶ್ಮೀ ಹಾಲೇಶ್ ಹೇಳಿದರು. ಹೊಸನಗರದ ನೆಹರು ಮೈದಾನದ ಆವರಣದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಗಿದ್ದು ಧ್ವಜಾರೋಹಣ ನೆರವೇರಿಸಿದರು. ಆಹಾರದಕೊರತೆಸ್ವಾತಂತ್ರ್ಯ ನಂತರ ಭಾರತವು ಸ್ವಾಯತ್ತವಾದದೇಶವಾಗಿರೂಪುಗೊಂಡುಆರ್ಥಿಕ ವಿಸ್ತರಣೆ, ತಂತ್ರಜ್ಞಾನ, ಸಾಮಾಜಿಕ ನ್ಯಾಯದ ದಿಕ್ಕಿನಲ್ಲಿ ಹೆಚ್ಚು ಬೆಳವಣಿಗೆಯನ್ನು ಕಂಡಿದ್ದುಆರ್ಥಿಕ ಸ್ವಾಯತ್ತಿ ಸಾರ್ವಜನಿಕಸೌಕರ್ಯಗಳು, ಮಹಿಳೆಯರಸಬಲೀಕರಣಅಂತರಾಷ್ಟ್ರೀಯ ಸಂಬಂಧಗಳು ಒಪ್ಪಂದಗಳಿದ್ದ ಬಾರತದೇಶ ವಿಶ್ವದಲ್ಲಿಯೇ 4ನೇ ಆರ್ಥಿಕ ಶಕ್ತಿಯಾಗಿರೂ ಉಗೊಂಡಿದೆಎಂದರು.

79ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಕಾರ್ಯನಿರ್ವಹಣಾಧಿಕಾರಿ ನರೇಂದ್ರಕುಮಾರ್, ಸರ್ಕಲ್ ಇನ್ಸ್‌ಪೆಕ್ಟರ್ ಗುರಣ್ಣಎಸ್ ಹೆಬ್ಬಾಳ್, ಅಬಕಾರಿ ಇನ್ಸ್‌ಪೆಕ್ಟರ್ ನಾಗರಾಜ್, ಪಪಂ ಮುಖ್ಯಾಧಿಕಾರಿ ಎಂ.ಎನ್, ಹರೀಶ್, ಕ್ಷೇತ್ರ ಶಿಕ್ಷಣಾಧಿಕಾರಿ ಚೇತನಾ ಆರ್.ಪಿ, ಸಬ್‌ಇನ್ಸ್‌ಪೆಕ್ಟರ್ ಶಂಕರಗೌಡ ಪಾಟೀಲ್, ದೈಹಿಕ ಪರೀವಿಕ್ಷಕರಾದ ವಿನಯ್ ಹೆಗಡೆ, ಪಟ್ಟಣ ಪಂಚಾಯತಿ ಅಧ್ಯಕ್ಷ ನಾಗಪ್ಪ, ಉಪಾಧ್ಯಕ್ಷಿಣಿ ಚಂದ್ರಕಲಾ, ನಾಡ ಹಬ್ಬಗಳ ಸಮಿತಿಯ ಸದಸ್ಯರಾದ ಎನ್.ಶ್ರೀಧರ ಉಡುಪ, ಶ್ರೀನಿವಾಸ್‌ಕಾಮತ್, ರಾಜಮೂರ್ತಿ, ಶಿಕ್ಷಕರಾದ ಧನಂಜಯ, ಸುಹಾಸ್, ವರ್ತಕರ ಸಂಘದ ಅಧ್ಯಕ್ಷ ವಿಜೇಂದ್ರ ಶೇಟ್, ಪಟ್ಟಣ ಪಂಚಾಯತಿ ಸದಸ್ಯರುಗಳು ತಾಲ್ಲೂಕುಕಛೇರಿಯ ಸಿಬ್ಬಂದಿಗಳಾದ ಮಂಜುನಾಥ್ ಕಟ್ಟೆಚಿರಾಗ್, ರೇಣುಕಯ್ಯ, ಲೋಹಿತ್, ಬಾಲಚಂದ್ರ, ನಾಗಪ್ಪ, ಅಶೋಕ, ನಾಗರಾಜ್, ನವೀನ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ತಾಲ್ಲೂಕಿನಲ್ಲಿ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳು ವಿದ್ಯಾರ್ಥಿಗಳನ್ನು ಸನ್ಮಾನಿ ಸಲಾಯಿತ್ತು ವಿದ್ಯಾರ್ಥಿ ವಿದ್ಯಾರ್ಥಿಗಳಿಂದ ದೇಶ ಭಕ್ತಿ ಗೀತೆಗಳನ್ನು ಹಾಡುವುದರ ಮೂಲಕ ಮನರಂಜನೆಕಾರ್ಯಕ್ರಮಏರ್ಪಡಿಸಲಾಗುತ್ತು. ತುಂತುರು ಮಳೆಯಲ್ಲಯೇ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಗಿದ್ದು ಈ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

ಅಸಮಾನತೆ ನಿವಾರಣೆ, ಪರಿಸರ ಸಂರಕ್ಷಣೆಗೆ ಶ್ರಮಿಸೋಣ: ಸಚಿವ ಮಲ್ಲಿಕಾರ್ಜುನ್

ದಾವಣಗೆರೆ: ಸ್ವಾತಂತ್ರ್ಯವು ನಮ್ಮ ಹೊಣೆಗಾರಿಕೆ, ದೇಶದ ಏಕತೆ, ಶಾಂತಿ, ಪ್ರಗತಿ ಜತೆಗೆ ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ಮತ್ತು ಕ್ರೀಡೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ವಿಶ್ವದ ಗಮನ ಸೆಳೆಯುತ್ತಿದ್ದೇವೆ. ಆದರೆ, ಭ್ರಷ್ಟಾಚಾರ, ಅಸಮಾನತೆ, ಪರಿಸರ ಮಾಲಿನ್ಯ, ನಿರುದ್ಯೋಗ ಮುಂತಾದ ಸವಾಲು ನಿವಾರಿಸಲು ಎಲ್ಲರೂ ಒಟ್ಟಾಗಿ ಶ್ರಮಿಸುವುದು ಇಂದಿನ ಅಗತ್ಯ ಎಂದು ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ತಿಳಿಸಿದರು.

> **ಈ ವರ್ಷ ಮುಂಗಾರು ಮಳೆ ಬಹಳ ಆಶಾದಾಯಕವಾಗಿದೆ. ರೈತರಿಗೆ ಬೇಕಾದ ಬಿತ್ತನೆ ಬೀಜ, ರಸಗೊಬ್ಬರ ವಿತರಣೆ ಮಾಡಲಾಗಿದೆ. ಈ ವರ್ಷ ತೋಟಗಾರಿಕೆ ಇಲಾಖೆಯಿಂದ ವಿವಿಧ ಯೋಜನೆಗಳ ಮೂಲಕ ಜಿಲ್ಲೆಯ ತೋಟಗಾರಿಕೆ ಅಭಿವೃದ್ಧಿಗೆ 49.98 ಕೋಟಿ ರು. ಅನುದಾನ ನೀಡಲಾಗಿದೆ.**
> **-ಎಸ್.ಎಸ್.ಮಲ್ಲಿಕಾರ್ಜುನ್**, ಸಚಿವೆ

ಅವರು ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾದ 79ನೇ ಸ್ವಾತಂತ್ರ್ಯೋತ್ಸವದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಪಥ ಸಂಚಲನದಲ್ಲಿ ಗೌರವ ವಂದನೆ ಸ್ವೀಕರಿಸಿ ತಮ್ಮ ಸ್ವಾತಂತ್ರ್ಯೋತ್ಸವ ಸಂದೇಶದಲ್ಲಿ ಮಾತನಾಡಿದರು. ಅನೇಕ ಹೋರಾಟಗಾರರ ತ್ಯಾಗ, ಶೌರ್ಯ ಮತ್ತು ದೃಢಸಂಕಲ್ಪದ ಫಲವಾಗಿ, ನಮ್ಮ ದೇಶವು ಬ್ರಿಟಿಷರ ಆಳ್ವಿಕೆಯಿಂದ ಮುಕ್ತಿಯಾಯಿತು. ಮಹಾತ್ಮ ಗಾಂಧೀಜಿ, ನೇತಾಜಿ ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್, ಸರೋಜಿನಿ ನಾಯ್ಡು, ಲಾಲಾ ಲಜಪತ್ ರಾಯ್, ಟಿಪ್ಪು ಸುಲ್ತಾನ್, ಕಿತ್ತೂರು ರಾಣಿ ಚೆನ್ನಮ್ಮ ಸೇರಿದಂತೆ ಅನೇಕ ಹೋರಾಟಗಾರರ ಅಮರ ತ್ಯಾಗ ನೆನಪಿಸಿಕೊಳ್ಳಬೇಕು ಎಂದರು. ಪಥ ಸಂಚಲನದಲ್ಲಿ ಭಾಗವಹಿಸಿದ ಎಸ್.ಎಸ್.ಎನ್‌ಪಿಎಸ್ ಶಾಲೆ ಉತ್ತಮ ಸಮವಸ್ತ್ರ ವಿಜೇತ ಶಾಲೆಯಾಗಿ ಗುರುತಿಸಿಲಾಯಿತು. ಈ ಬಾರಿಯ ಪಥ ಸಂಚಲನದಲ್ಲಿ ಮಹಾನಗರ ಪಾಲಿಕೆ, ಕಂದಾಯ ಇಲಾಖೆ ಮತ್ತು ಪಿ.ಎಸ್.ಇ.ಎಂ.ಆರ್ ತೋಳಹುಣಸೆ ಪೈಪ್ ಬ್ಯಾಂಡ್ ಜೂನಿಯರ್ ತಂಡಗಳು ವಿಶೇಷ ತಂಡಗಳಾಗಿ ಭಾಗವಹಿಸಿದ್ದವು. ವಿದ್ಯಾರ್ಥಿಗಳಿಂದ ಆಕರ್ಷಕ ದೇಶಭಕ್ತಿ ಗೀತೆಗಳ ನೃತ್ಯ ರೂಪಕ: ವಿಶ್ವಚೇತನ ಶಾಲೆಯಿಂದ ಹಿಂದೂಸ್ತಾನ್ ನೃತ್ಯವನ್ನು, ಲಲಿತಾ ಇಂಟರ್ ನ್ಯಾಷನಲ್ ಶಾಲೆಯಿಂದ ಇವರಿಂದ ಗಾಂಧಿ ಗೋಖಲೆ ಶಾಂತಿ ಇಂಡಿಯಾ, ಗೋಲ್ಡನ್ ಪಬ್ಲಿಕ್ ಶಾಲೆಯಿಂದ ಸಂಕೋಲೆಯಿಂದ ಸ್ವಾತಂತ್ರ್ಯದೆಡೆಗೆ ರೂಪಕ ಪ್ರದರ್ಶನ ಸಾವಿರಾರು ವಿದ್ಯಾರ್ಥಿಗಳಿಂದ ಪ್ರದರ್ಶನ ಮಾಡಲ್ಪಟ್ಟಿತು. ಹಾಗೂ ಪಿಎಸ್‌ಎಸ್‌ಎಂಆರ್ ಶಾಲೆಯ ಮಕ್ಕಳು ವಿಶೇಷ ಬ್ಯಾಂಡ್ ವಾದ್ಯವನ್ನು ಪ್ರಸ್ತುತಪಡಿಸಿದರು. ಬಹುಮಾನ ಪಡೆದಂತಹ ಶಾಲೆಗಳ ವಿವರ: ಗೋಲ್ಡನ್ ಪಬ್ಲಿಕ್ ಶಾಲೆ ಪ್ರಥಮ ಬಹುಮಾನ, ವಿಶ್ವಚೇತನ ಶಾಲೆ ದ್ವಿತೀಯ ಬಹುಮಾನ, ಲಲಿತಾ ಇಂಟರ್ ನ್ಯಾಷನಲ್ ಶಾಲೆ ತೃತೀಯ ಬಹುಮಾನ ಪಡೆಯಲಾಯಿತು. ಹಾಗೂ ಪಿಎಸ್‌ಎಸ್‌ಎಂಆರ್ ಶಾಲೆಯ ಮಕ್ಕಳು ವಿಶೇಷ ಬ್ಯಾಂಡ್ ವಾದ್ಯ ನುಡಿಸಿದ ಪುಟಾಣಿಗಳಿಗೆ ವಿಶೇಷ ಬಹುಮಾನ ನೀಡಲಾಯಿತು. ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಪೊಲೀಸ್ ಮಹಾನಿರೀಕ್ಷಕ ಡಾ. ರವಿಕಾಂತೇಗೌಡ, ಜಿಲ್ಲಾಧಿಕಾರಿ ಗಂಗಾಧರಸ್ವಾಮಿ.ಜಿ.ಎಂ, ಜಿ.ಪಂ ಸಿಇಒ ಗಿತ್ತೆ ಮಾಧವ್ ವಿಠ್ಠಲ್ ರಾವ್, ಎಸ್ಪಿ ಉಮಾ ಪ್ರಶಾಂತ್, ದೂಡಾ ಅಧ್ಯಕ್ಷ ದಿನೇಶ್ ಕೆ ಶೆಟ್ಟಿ, ಗ್ಯಾರಂಟಿ ಯೋಜನೆಗಳ ಜಿಲ್ಲಾ ಅನುಷ್ಟಾನ ಸಮಿತಿ ಅಧ್ಯಕ್ಷ ಶಾಮನೂರು ಟಿ.ಬಸವರಾಜ್ ಇದ್ದರು.

79ನೇ ಸ್ವಾತಂತ್ರ್ಯೋತ್ಸವದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಪಥ ಸಂಚಲನದಲ್ಲಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಗೌರವ ವಂದನೆ ಸ್ವೀಕರಿಸಿದರು.

ಆಕರ್ಷಕ ಪಥ ಸಂಚಲನ

ಸ್ವಾತಂತ್ರ್ಯ ದಿನಾಚರಣೆಯ ಪಥ ಸಂಚಲನದಲ್ಲಿ ಪ್ರಶಾಂತ್ ಅವರು ಕವಾಯತು ಪಥ ಸಂಚಾಲಕರಾಗಿ ಕಾರ್ಯನಿರ್ವಹಿಸಿದರು. 30 ವಿವಿಧ ಘಟಕಗಳು ಭಾಗವಹಿಸಿದ್ದವು ಅದರಲ್ಲಿ ಸಶಸ್ತ್ರ ಮೀಸಲು ಪಡೆ, ನಗರ ಉಪವಿಭಾಗ ಪೊಲೀಸ್ ತಂಡ, ಸಿವಿಲ್ ಪೊಲೀಸ್, ಗೃಹ ರಕ್ಷಕದಳ, ಅರಣ್ಯ ಇಲಾಖೆ ತಂಡ, ಅಗ್ನಿ ಶಾಮಕ ದಳ, ಗೃಹರಕ್ಷಕ ಮಹಿಳಾ ದಳ, ಕಂದಾಯ ಇಲಾಖೆ, ಮಹಾನಗರ ಪಾಲಿಕೆ, ಕಂದಾಯ, ಡಿಆರ್‌ಎಮ್, ಜಿಎಫ್‌ಜಿ ಕಾಲೇಜ್, ಎವಿಕೆ, ಸಿದ್ದಗಂಗಾ ಶಾಲೆ ಸೇರಿದಂತೆ ವಿವಿಧ ಶಾಲಾ-ಕಾಲೇಜು ವಿದ್ಯಾರ್ಥಿಗಳ ತಂಡ, ಪೊಲೀಸ್ ಬ್ಯಾಂಡ್ ತಂಡದಿಂದ ಆಕರ್ಷಕ ಪಥ ಸಂಚಲನ ನಡೆಸಲಾಯಿತು.

ಸಮಾಚಾರ ಸಣ್ಣದಲ್ಲ

ಸುನಿಲ್ ವಿರುದ್ಧದ ಕೇಸ್ ವಜಾ

ಬೆಂಗಳೂರು : ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಅವರು ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್ ವಿರುದ್ಧ ದಾಖಲಿಸಿದ್ದ ಕ್ರಿಮಿನಲ್ ಮಾನನಷ್ಟ ಮೊಕದ್ದಮೆಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಬುಧವಾರ ವಜಾಗೊಳಿಸಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಾರ್ಕಳ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯಗಳಿಸಿದ್ದ ಸುನೀಲ್ ಕುಮಾರ್, ಪರಾಜಿತ ಅಭ್ಯರ್ಥಿಯಾದ ತಮ್ಮ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಪ್ರಮೋದ್ ಮುತಾಲಿಕ್ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. 2023ರ ಮೇ 14ರಂದು ಕಾರ್ಕಳ ಬಂಡಿಮಠ ಬಸ್ ನಿಲ್ದಾಣ ಬಳಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ್ದ ಸುನಿಲ್ ಕುಮಾರ್, ಪ್ರಮೋದ್ ಮುತಾಲಿಕರೇ ನೀವು ಹಣಕ್ಕೋಸ್ಕರ ಉತ್ತರ ಕರ್ನಾಟಕದಲ್ಲಿ ಹಿಂದೂಗಳ ಹತ್ಯೆಯನ್ನು ಟೈಗರ್ ಗ್ಯಾಂಗಿನ ನೆಪದಲ್ಲಿ ಎಷ್ಟು ಬಾರಿ ಮಾಡಿಸಿದ್ದೀರಾ ? ಆ ಹತ್ಯೆಯನ್ನು ಮಾಡಿದಂತಹವರು ಇವತ್ತಿಗೂ ಕಲಬುರಗಿ ಜೈಲಿನಲ್ಲಿದ್ದಾರೆ ಎಂದು ಹೇಳಿಕೆ ನೀಡಿದ್ದಾರೆಂದು 2023ರ ಸೆ. 7ರಂದು ಬೆಂಗಳೂರಿನ ಕೋರ್ಟ್‌ನಲ್ಲಿ ಖಾಸಗಿ ದೂರು ಸಲ್ಲಿಸಿದ್ದರು. ಅದನ್ನು ರದ್ದುಗೊಳಿಸುವಂತೆ ಕೋರಿ ಸುನಿಲ್ ಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಇದೀಗ ಜನಪ್ರತಿನಿಧಿಗಳ ಕೋರ್ಟ್ ಪ್ರಮೋದ್ ಮುತಾಲಿಕ್ ದಾಖಲಿಸಿದ್ದ ಪ್ರಕರಣವನ್ನು ಖುಲಾಸೆಗೊಳಿಸಿದೆ. ಇದರಲ್ಲಿ ಮಾನನಷ್ಟವಾಗುವಂಥ ಯಾವುದೇ ವಿಚಾರಗಳಿಲ್ಲ ಎಂದು ಹೇಳಿದೆ.

ಬ್ಯಾಂಕ್‌ನಲ್ಲಿ ಸ್ವಾತಂತ್ರ್ಯ ದಿನಾಚರಣೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಎಸ್‌ಸಿಡಿಸಿಸಿ ಬ್ಯಾಂಕ್) ನಲ್ಲಿ ಸ್ವಾತಂತ್ರ್ಯೋತ್ಸವ ಆಚರಣೆ ನಡೆಯಿತು. ಕೊಡಿಯಾಲ್ ಬೈಲ್ ನಲ್ಲಿರುವ ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ ದಕ್ಷಿಣ ಕನ್ನಡ ಸಹಕಾರ ಸಂಘಗಳ ಉಪನಿಬಂಧಕರಾದ ರಮೇಶ್ ಎಚ್. ಎನ್. ಅವರು ಧ್ವಜಾರೋಹಣ ನೆರವೇರಿಸಿದರು. ಎಸ್‌ಸಿಡಿಸಿಸಿ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಕೆ. ಗೋಪಾಲಕೃಷ್ಣ ಭಟ್ ಅವರು ಮಾತನಾಡಿ , ಸ್ವಾತಂತ್ರ್ಯೋತ್ಸವದ ದಿನ ಶಾಂತಿ , ಏಕತೆ ಮತ್ತು ಧೈರ್ಯವನ್ನು ಪ್ರತಿಬಿಂಬಿಸುವ ತ್ರಿವರ್ಣ ಧ್ವಜವು ಹೆಮ್ಮೆಯಿಂದ ಆಕಾಶದೆತ್ತರದಲ್ಲಿ ಹಾರುತ್ತದೆ. ಇಂತಹ ಸ್ಮರಣೀಯ ಪರ್ವ ಕಾಲದಲ್ಲಿ ಹೋರಾಟಗಾರರನ್ನು ಸ್ಮರಿಸಬೇಕು. ಬ್ಯಾಂಕನ್ನು ಅಭಿವೃದ್ಧಿಯ ಪಥದತ್ತ ಮುನ್ನಡೆಸ ಬೇಕೆಂದರು. ಬ್ಯಾಂಕಿನ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.

ಆಟೋ ಚಾಲಕರ ಸಂಘ:ಧ್ವಜಾರೋಹಣ

ಮಂಗಳೂರು : ಯೂತ್ ಇಲೆಕ್ಟ್ರಿಕಲ್ ಆಟೋ ಚಾಲಕರ -ಮಾಲೀಕರ ಸಂಘ ಮತ್ತು ಯುನೈಟೆಡ್ ಸ್ಪೋರ್ಟ್ಸ್ ಕ್ಲಬ್ ಬೋಳೂರು ವತಿಯಿಂದ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ವಕೀಲ ರಾಘವೇಂದ್ರ ರಾವ್ ಧ್ವಜಾರೋಹಣ ನೆರವೇರಿಸಿದರು.ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ , ವಕೀಲ ಯಶೋಧರ.ಪಿ ಕರ್ಕೇರ, ಮಾಜಿ ಕಾರ್ಪೋರೇಟರ್ ಜಗದೀಶ್ ಶೆಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಪ್ರಮೋದ್ ಪೂಜಾರಿ, ಅನಿಲ್ ಕುಮಾರ್, ಪ್ರಮೋದ್ ಕುಮಾರ್, ರವಿರಾಜ್ ಶೆಟ್ಟಿ , ಯೂತ್ ಇಲೆಕ್ಟ್ರಿಕಲ್ ಆಟೋ ಚಾಲಕರ -ಮಾಲೀಕರ ಸಂಘದ ಅಧ್ಯಕ್ಷ ರಾಕೇಶ್ ರಾವ್ , ಯುನೈಟೆಡ್ ಸ್ಪೋರ್ಟ್ಸ್ ಕ್ಲಬ್ನ ಅಧ್ಯಕ್ಷ ಕೃಷ್ಣಕುಮಾರ್, ಮೊಗವೀರ ಮಹಿಳಾ ಮಂಡಳಿಯ ಅಧ್ಯಕ್ಷೆ ಯೋಗಿನಿ, ಶರುಣ್ ಮಥಾಯಸ್, ರಿಯಾಜ್ ಮಲ್ಲೂರು, ಲೋಹಿತ್, ರವಿಚಂದ್ರ, ಮೇಘ ಪುತ್ರನ್, ಸುಮಿತ್ರ ವಿಶ್ವನಾಥ್, ಜಾನ್.ಎಂ.ಟಿ., ರಿತೇಶ್ ಫೆರ್ನಾಂಡಿಸ್, ನಿತೇಶ್ ಪೂಜಾರಿ, ಮೆಹಬೂಬ್ ಉಪಸ್ಥಿತರಿದ್ದರು.

ಇಂದು ಆಳ್ವಾಸ್‌ನಲ್ಲಿ ಟೆಡೆಕ್ಸ್ ಟಾಕ್

ಮೂಡುಬಿದಿರೆ: ಚೊಚ್ಚಲ ಬಾರಿಗೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಜ್ಞಾನ, ಅನುಭವ ಮತ್ತು ನವೀನ ಆಲೋಚನೆಗಳನ್ನು ಹಂಚಿಕೊಳ್ಳುವ ಅಂತರರಾಷ್ಟ್ರೀಯ ಖ್ಯಾತಿಯ ವೇದಿಕೆ ಟೆಡ್‌ಎಸ್‌ಐಇಟಿ ಕಾರ್ಯಕ್ರಮವನ್ನು ವಿ.ಎಸ್. ಆಚಾರ್ಯ ಸಭಾಂಗಣದಲ್ಲಿ ಆಯೋಜಿಸಿದೆ. ಈ ವರ್ಷ 'ರೂಪಾಂತರ' ಎಂಬ ಪ್ರಮುಖ ವಿಷಯದಡಿ ವಿವಿಧ ಕ್ಷೇತ್ರಗಳ ಗಣ್ಯ ವ್ಯಕ್ತಿಗಳು ತಮ್ಮ ವೈಯಕ್ತಿಕ ಮತ್ತು ವೃತ್ತಿ ಬದುಕಿನಲ್ಲಿ ಅನುಭವಿಸಿದ ಪರಿವರ್ತನೆಗಳ ಕಥನ ಹಾಗೂ ಅವುಗಳಿಂದ ಪಡೆದ ಪಾಠಗಳನ್ನು ಹಂಚಿಕೊಳ್ಳಲಿದ್ದಾರೆ.ಮಾಜಿ ವಿಧಾನ ಪರಿಷತ್ ಸದಸ್ಯ ಗಣೇಶ ಕಾರ್ಣಿಕ್ ಉದ್ಘಾಟಿಸಲಿದ್ದಾರೆ. ವಿವಿಧ ಕ್ಷೇತ್ರದ ಏಳು ಗಣ್ಯ ವ್ಯಕ್ತಿಗಳು ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ. 10 ವರ್ಷದ ಬಾಲಕಿ, ರಾಷ್ಟ್ರೀಯ ಮಟ್ಟದ ಸ್ಕೇಟ್‌ಬೋರ್ಡ್ ಚಾಂಪಿಯನ್ ಜಾನಕಿ ಆನಂದ, ಲೈಫ್‌ಸ್ಟೈಲ್ ವೈದ್ಯ ಡಾ. ಅಚ್ಯುತನ್ ಈಶ್ವರ್, ನಿವ್ವಿಯಸ್ ಸೊಲ್ಯೂಷನ್‌ನ ಸಿಇಒ ಮತ್ತು ಸಹ-ಸ್ಥಾಪಕ ಸುಯೋಗ್ ಶೆಟ್ಟಿ, ನಿವೃತ್ತ ಸೇನಾ ಅಧಿಕಾರಿ ಲೆ. ಜನರಲ್ ಎ. ಅರುಣ್, ಸೈ-ಫೈ ಕ್ಷೇತ್ರದ ಸುಫಿಯಾನ್ ಆಲಂ, ಕಲಾವಿದ ಹಾಗೂ ಕಂಟೆಂಟ್ ಕ್ರಿಯೇಟರ್ ಅಭಿಷೇಕ್ ಮಿಶ್ರಾ, ಯಕ್ಷಗಾನ ಕಲಾವಿದ ಪಟ್ಲ ಸತೀಶ ಶೆಟ್ಟಿ ತಮ್ಮ ಕಥನಗಳನ್ನು ಪ್ರೇಕ್ಷಕರೊಂದಿಗೆ ಹಂಚಿಕೊಳ್ಳಲಿದ್ದಾರೆ.

{ದಿನೇಶ್ ಗುಂಡೂರಾವ್} ಆರೋಗ್ಯ ಸಚಿವ

ಬಿಜೆಪಿಯವರಿಗೆ ರಾಜಕೀಯ ಲಾಭ ನೋಡುವವರು. ಅವರಿಗೆ ಇಂತಹದ್ದೇ ವಿಷಯಗಳು ಬೇಕು. ಮೊದಲು 10 ದಿನ ಏನೂ ಮಾತನಾಡಿಲ್ಲ. ಈಗ ವಿಷಯ ಹೊರ ಬರುತ್ತಿರುವಾಗ ಅದನ್ನು ತಮ್ಮ ರಾಜಕೀಯ ಲಾಭಕ್ಕೆ ಹೇಗೆ ಉಪಯೋಗಿಸಿಕೊಳ್ಳಬಹುದು ಎಂಬುದು ಅವರ ಲೆಕ್ಕಾಚಾರ. ನಮಗೆ ಸತ್ಯಾಂಶ ಹೊರಬರಬೇಕು. ಬಿಜೆಪಿಯವರದ್ದು ಧಾರ್ಮಿಕ ವಿಚಾರವನ್ನು ರಾಜಕೀಯಗೊಳಿಸುವುದು ಹಳೆಯ ಚಾಳಿ.

79ನೇ ಸ್ವಾತಂತ್ರ್ಯೋತ್ಸವ। ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್‌ರಿಂದ ಧ್ವಜಾರೋಹಣ

ಧಾರ್ಮಿಕ ಕೇಂದ್ರಗಳು ತಿಳುವಳಿಕೆ ನೀಡಲಿ

ಮಂಗಳೂರು: ಜಿಲ್ಲೆಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು, ದೇವಸ್ಥಾನ, ಮಸೀದಿ, ಚರ್ಚ್ ಗಳ ಧಾರ್ಮಿಕ ಮುಖಂಡರು ತಮ್ಮ ತಮ್ಮ ಧಾರ್ಮಿಕ ಕೇಂದ್ರಗಳಲ್ಲಿ ಜನರಿಗೆ ತಿಳುವಳಿಕೆ ನೀಡಬೇಕು. ಸಾಮರಸ್ಯದಿಂದ ಅಭಿವೃದ್ಧಿ ಸಾಧ್ಯ ಎಂಬುದನ್ನು ಸಮಾಜದ ಜನರಿಗೆ ಮನದಟ್ಟು ಮಾಡಬೇಕು ಎಂದು ಜಿಲ್ಲಾ ಉಸ್ತುವಾರಿ ದಿನೇಶ್ ಗುಂಡೂರಾವ್ ಕರೆ ನೀಡಿದ್ದಾರೆ.

ನೆಹರೂ ಮೈದಾನದಲ್ಲಿ ಆಕರ್ಷಕ ಪಥಸಂಚಲನದೊಂದಿಗೆ 79ನೇ ಸ್ವಾತಂತ್ರ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿದ ಬಳಿಕ ಅವರು ಸಂದೇಶ ಭಾಷಣ ಮಾಡಿದರು.

ಕಲೆ, ನಾಟಕ, ಯಕ್ಷಗಾನ ಕ್ಷೇತ್ರಗಳಲ್ಲೂ ಸಹ ಸಾಮರಸ್ಯ ಸಂದೇಶ ಸಾರುವತ್ತ ಕಲಾವಿದರು ಹೆಚ್ಚಿನ ಗಮನ ಹರಿಸಬೇಕು. ಹಿಂಸೆಗೆ ಅವಕಾಶ ನೀಡದೇ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಎಲ್ಲರೂ ಕೈ ಜೋಡಿಸಬೇಕು ಎಂದು ಹೇಳಿದ ಅವರು, ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನ ಮಾಡಿದ ಎಲ್ಲಾ ಮಹಾನ್ ಚೇತನಗಳಿಗೂ ನಮನ ಸಲ್ಲಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ ಎಂದರು.

ದೇಶಕ್ಕಾಗಿ ಹೋರಾಡಿದ ಎಲ್ಲ ಮಹಾನ್ ವ್ಯಕ್ತಿಗಳ ಆದರ್ಶ ನಮ್ಮ ಯುವಪೀಳಿಗೆಯಲ್ಲಿ ಮೇಳೈಸಬೇಕಿದೆ. ನಮ್ಮ ದೇಶ ಚೈತನ್ಯಯುತ ಅಭಿವೃದ್ಧಿ ಶೀಲ ರಾಷ್ಟ್ರವಾಗಬೇಕಾದರೆ ನಮ್ಮಲ್ಲಿ ಭಾರತೀಯತೆ, ದೇಶದ ಭವ್ಯತೆ-ದಿವ್ಯತೆ ಮತ್ತು ಪಾವಿತ್ರ್ಯತೆಗಳ ಅರಿವು, ದೇಶಪ್ರೇಮ, ದೇಶಭಕ್ತಿ ಉಕ್ಕಿ ಹರಿಯಬೇಕು ಎಂದು ಅವರು ಹೇಳಿದರು.

ಪೊಲೀಸ್ ತಂಡಗಳು, ಸಶಸ್ತ್ರ ಮೀಸಲು ಪಡೆ, ಕೆಎಸ್ ಆರ್ ಪಿ, ಎನ್ ಸಿಸಿ, ಸ್ಕೌಟ್ಸ್ ಮತ್ತು ಗೈಡ್ಸ್, ಭಾರತ ಸೇವಾ ದಳದ ವಿದ್ಯಾರ್ಥಿಗಳ ಶಿಸ್ತಿನ ಪಥ ಸಂಚಲನ ನಡೆಯಿತು.ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕ ವೇದವ್ಯಾಸ ಕಾಮತ್, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಮಾಜಿ ಸದಸ್ಯ ಹರೀಶ್ ಕುಮಾರ್, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ, ನಗರ ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ, ಐಜಿಪಿ ಅಮಿತ್ ಸಿಂಗ್, ಎಸ್ಪಿ ಡಾ. ಅರುಣ್ ಕುಮಾರ್ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿನಾಯಕ್ ನರ್ವಾಡೆ ಉಪಸ್ಥಿತರಿದ್ದರು.

ಪೊಲೀಸ್ ಇಲಾಖೆಗೆ ಪೂರ್ಣ ಜವಾಬ್ದಾರಿ

ಜಿಲ್ಲೆಯಲ್ಲಿ ಯಾವುದೇ ಬಾಹ್ಯ ಒತ್ತಡಕ್ಕೆ ಅವಕಾಶವಿಲ್ಲದೇ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆಗೆ ಸಂಪೂರ್ಣ ಜವಾಬ್ದಾರಿ ನೀಡಲಾಗಿದೆ. ಕೋಮು ಪ್ರಕರಣಗಳ ಮೂಲವನ್ನು ಅರಿಯಲು ಜಿಲ್ಲೆಯ ಜನಪ್ರತಿನಿಧಿಗಳು, ವಿವಿಧ ಕ್ಷೇತ್ರಗಳ ಮುಖಂಡರೊಂದಿಗೆ ಶಾಂತಿ ಸೌಹಾರ್ದ ಸಭೆ ನಡೆಸಲಾಗಿದ್ದು ಸಭೆಯ ಒಮ್ಮತದ ಅಭಿಪ್ರಾಯದಂತೆ ಅನೇಕ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಪೇರಡ್ಕ ಮಸೀದಿಯಲ್ಲಿ ಸ್ವಾತಂತ್ರ್ಯ ಸಂಭ್ರಮ

ಗೂನಡ್ಕ: ಪೇರಡ್ಕ ಮುಹಿಯುದ್ದೀನ್ ಜುಮಾ ಮಸೀದಿ ವಠಾರದಲ್ಲಿ ಭಾರತದ 79ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ ನಡೆಯಿತು.

ಪೇರಡ್ಕ ಜಮಾಅತ್ ಅಧ್ಯಕ್ಷರಾದ ಜನಾಬ್ ಟಿ.ಎಂ ಶಹೀದ್ ತೆಕ್ಕಿಲ್ ಧ್ವಜಾರೋಹಣ ನೆರವೇರಿಸಿದರು. ಸ್ಥಳೀಯ ಖತೀಬ್ ಅಹ್ಮದ್ ನಈಂ ಮಲಅಬರಿ ಫೈಝಿ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಈ ದಿನ ಸಮಸ್ತ ಭಾರತೀಯರ ಹೆಮ್ಮೆಯ ದಿನವಾಗಿದೆ. ಪೂರ್ವಿಕರಾದ ನಮ್ಮ ರಾಷ್ಟ್ರ ನಾಯಕರು ಜಾತಿ ಧರ್ಮಗಳ ಭೇದವಿಲ್ಲದೆ ಎಲ್ಲರೂ ಒಗ್ಗೂಡಿ ಪಡೆದ ಈ ಸ್ವಾತಂತ್ರ್ಯವನ್ನು ನಾವೆಲ್ಲರೂ ಸಮಾನವಾಗಿ ಅನುಭವಿಸಲು ಸಾಧ್ಯವಾಗಬೇಕು. ಧರ್ಮದ ಆಧಾರದಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಇತಿಹಾಸದ ಪುಟಗಳಿಂದ ಅಳಿಸಿ ಹಾಕುವ ದುಷ್ಕೃತ್ಯ ನಿಲ್ಲಬೇಕು ಎಂದು ಹೇಳಿದರು.

ಟಿ.ಎಂ ಶಹೀದ್ ತೆಕ್ಕಿಲ್ ಮಾತನಾಡಿ, ಬ್ರಿಟಿಷರು ಭಾರತೀಯರನ್ನು ಗುಲಾಮರಾಗಿ ಇಟ್ಟುಕೊಂಡು ಇಲ್ಲಿನ ನೈಸರ್ಗಿಕ ಸಂಪತ್ತನ್ನು ಕೊಳ್ಳೆ ಹೊಡೆದು ಭಾರತವನ್ನು ಬರಿದಾಗಿಸಿದ್ದರು. ಅವರಿಂದ ಸ್ವತಂತ್ರಗೊಂಡ ಈ ದಿನವು ನಮಗೆಲ್ಲರಿಗೂ ಸಂಭ್ರಮದ ದಿನವಾಗಿದೆ. ನಾವೆಲ್ಲರೂ ದೇಶವನ್ನು ಕಟ್ಟುತ್ತಾ ಸ್ವಾತಂತ್ರ್ಯವನ್ನು ಅರ್ಥವತ್ತಾಗಿಸೋಣ ಎಂದರು.

ಮದ್ರಸಾ ಸಹ ಅಧ್ಯಾಪಕರಾದ ಹಾರಿಸ್ ಕಾಮಿಲ್ ಅಝ್ಹರಿ, ಗಲ್ಫ್ ಪ್ರತಿನಿಧಿ ರಿಫಾಯಿ ಪಟೇಲ್ ಗೂನಡ್ಕ ಮಾತನಾಡಿದರು. ಎಂ. ಆರ್.ಡಿ.ಎ ಅಧ್ಯಕ್ಷ ಜನಾಬ್ ಜಿ.ಕೆ ಹಮೀದ್ ಗೂನಡ್ಕ, ಜಮಾಅತ್ ಉಪಾಧ್ಯಕ್ಷರಾದ ಹನೀಫ್ ಟಿ.ಬಿ, ಕಾರ್ಯದರ್ಶಿ ಉಸ್ಮಾನ್ ಕೆ.ಎಂ, ಕೋಶಾಧಿಕಾರಿ ಮುಹಮ್ಮದ್ ತೆಕ್ಕಿಲ್, ಗಲ್ಫ್ ಪ್ರತಿನಿಧಿ ಅರಫಾತ್ ಗೂನಡ್ಕ ಗಣ್ಯಾತಿಥಿಗಳಾಗಿ ಉಪಸ್ಥಿತರಿದ್ದರು.

ಯಕ್ಷಗಾನದ ಹಿರಿಯರ ನೆನಪು, ಪ್ರಶಸ್ತಿ ಪ್ರದಾನ

ಪುತ್ತೂರು: ಕರ್ನಾಟಕ ಯಕ್ಷಗಾನ ನಾಟಕ ಅಕಾಡೆಮಿ ಬೆಂಗಳೂರು ಇದರ ಸಹಯೋಗದಲ್ಲಿ ಕೀರ್ತಿಶೇಷ ಡಾ.ಶ್ರೀಧರ ಭಂಡಾರಿ ಸಂಸ್ಮರಣಾ ವೇದಿಕೆ ವತಿಯಿಂದ ರಾಜ್ಯ ಪ್ರಶಸ್ತಿ ಪುರಸ್ಕೃತ ಯಕ್ಷಗಾನ ಕಲಾವಿದ ಸೂರಿಕುಮೇರು ಕೆ. ಗೋವಿಂದ ಭಟ್ಟರವರಿಗೆ ಸಂಸ್ಮರಣಾ ಪ್ರಶಸ್ತಿ, ಹಿರಿಯರ ನೆನಪು ಹಾಗೂ ಪುತ್ತೂರು ಶ್ರೀಮಹಾಲಿಂಗೇಶ್ವರ ಪ್ರವಾಸಿ ಯಕ್ಷಗಾನ ಮಂಡಳಿಯವರಿಂದ ಕಾರ್ತಿಕೇಯ ಕಲ್ಯಾಣ ಯಕ್ಷಗಾನ ಕಾರ್ಯಕ್ರಮ ಪುತ್ತೂರು ಶ್ರೀಮಹಾಲಿಂಗೇಶ್ವರ ದೇವಾಲಯದ ನಟರಾಜ ವೇದಿಕೆಯಲ್ಲಿ ನಡೆಯಿತು.

ಶ್ರೀಧರ ಭಂಡಾರಿಯವರ ಸಂಸ್ಮರಣಾ ಭಾಷಣ ಮಾಡಿದ ಬೆಂಗಳೂರಿನ ಉದ್ಯಮಿ ಆರ್.ಕೆ.ಭಟ್‌ರವರು, ಸುಮಾರು 35 ವರ್ಷಗಳಿಂದ ಭಂಡಾರಿಯವರು ಪ್ರವಾಸಿ ಯಕ್ಷಗಾನ ಮಂಡಳಿ ನಡೆಸುತ್ತಿದ್ದವರು. ಅಲ್ಲದೆ ಹಲವು ವಿದ್ಯಾರ್ಥಿಗಳಿಗೆ ಯಕ್ಷಗಾನ ನಾಟ್ಯಾಭ್ಯಾಸ ಕೂಡ ನೀಡಿದ್ದಾರೆ. ಬೆಂಗಳೂರಿನಲ್ಲಿ ಹಲವು ದಿನಗಳ ಕಾಲ ಕಾರ್ಯಕ್ರಮ ಮಾಡುತ್ತಿದ್ದರು. ಪ್ರತೀ ವರ್ಷವೂ ಸಂಸ್ಮರಣಾ ಕಾರ್ಯಕ್ರಮ ಮಾಡಲು ಅವರ ಕುಟುಂಬಕ್ಕೆ ದೇವರು ಶಕ್ತಿ ನೀಡಲಿ ಎಂದರು.

ಹಿರಿಯ ಯಕ್ಷಗಾನ ಅರ್ಥಧಾರಿ ಉಜಿರೆ ಅಶೋಕ್ ಭಟ್ ಮಾತನಾಡಿ, ಶ್ರೀಧರ ಭಂಡಾರಿ ಮತ್ತು ಸೂರಿಕುಮೇರು ಗೋವಿಂದ ಭಟ್‌ರವರು ಯಕ್ಷಗಾನದ ಎರಡು ಐಕಾನ್. ಕಲಾಲೋಕದ ಎರಡು ಪರಂಪರೆಗಳು. ಗೋವಿಂದ ಭಟ್ ಯಕ್ಷಗಾನದಲ್ಲಿ ನಿರಂತರ 70 ವರ್ಷದ ತಿರುಗಾಟ ಮಾಡಿದವರು. ಇದು ಯಕ್ಷಗಾನದ ದಾಖಲೆಯಾಗಿದೆ. ಒಂದೇ ಮೇಳದ ಯಜಮಾನಿಕೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ಕಲಾವಿದ ಎಂದರು.

ಯಕ್ಷಗಾನ ಕಲಾವಿದ ಗೋವಿಂದ ಭಟ್ಟರವರಿಗೆ ಸಂಸ್ಮರಣಾ ಪ್ರಶಸ್ತಿ ಪ್ರದಾನ.

ಧರ್ಮಸ್ಥಳ ಮೇಳದ ಪ್ರಬಂಧಕ ಗಿರೀಶ್ ಹೆಗ್ಡೆ ಮಾತನಾಡಿ, ನಾವು ನಮ್ಮ ತಂದೆಯವರ ಕಾಲದಿಂದಲೂ ತುಂಬಾ ಆತ್ಮೀಯರಾಗಿದ್ದೇವೆ. ಗೋವಿಂದ ಭಟ್‌ರವರಿಗೆ ಸಿಗುವ ಗೌರವವನ್ನು ನನ್ನ ಕೈಯಲ್ಲಿ ಕೊಟ್ಟಿದ್ದಾರೆ. ಇದಕ್ಕಿಂತ ದೊಡ್ಡ ಗೌರವ ನನಗೆ ಬೇರೆ ಇಲ್ಲ ಎಂದರು.

ಶ್ರೀಮಹಾಲಿಂಗೇಶ್ವರ ದೇವಳ ಸಮಿತಿಯ ಅಧ್ಯಕ್ಷ ಪಂಜಿಗುಡ್ಡೆ ಈಶ್ವರಭಟ್ ಮಾತನಾಡಿ, ಯಕ್ಷಗಾನವನ್ನು ಉಳಿಸಿ ಬೆಳೆಸುವ ಕೆಲಸ ಮಾಡಿದವರು. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಯಕ್ಷರಂಗದಲ್ಲಿ ಮಾಡಿದ ಸೇವೆಯಿಂದ ಸಮಾಜ ಅವರನ್ನು ಗುರುತಿಸುವಂತಾಗಿದೆ. ಒಂದು ಸಾವಿರಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳನ್ನು ಸೃಷ್ಟಿ ಮಾಡಿದ ಭಂಡಾರಿಯವರು ಯಕ್ಷಗಾನದ ಮೇರು ಕಲಾವಿದರಾಗಿದ್ದಾರೆ ಎಂದರು.

ಸೂರಿಕುಮೇರು ಗೋವಿಂದಭಟ್‌ರಿಗೆ ಸಂಸ್ಮರಣಾ ಪ್ರಶಸ್ತಿ

ಕೀರ್ತಿಶೇಷ ಡಾ.ಶ್ರೀಧರ ಭಂಡಾರಿ ಸಂಸ್ಮರಣಾ ವೇದಿಕೆ ವತಿಯಿಂದ ರಾಜ್ಯ ಪ್ರಶಸ್ತಿ ಪುರಸ್ಕೃತ, ಹಿರಿಯ ಯಕ್ಷಗಾನ ಕಲಾವಿದ ಸೂರಿಕುಮೇರು ಕೆ. ಗೋವಿಂದ ಭಟ್ಟರವರಿಗೆ ಶ್ರೀಧರ ಭಂಡಾರಿ ಸಂಸ್ಮರಣಾ ಪ್ರಶಸ್ತಿ ನೀಡಲಾಯಿತು. ಗೋವಿಂದ ಭಟ್‌ರು ಅನಾರೋಗ್ಯದಿಂದ ಸಮಾರಂಭಕ್ಕೆ ಗೈರಾಗಿದ್ದರು. ಅವರ ಪರ ಧರ್ಮಸ್ಥಳ ಮೇಳದ ಪ್ರಬಂಧಕ ಗಿರೀಶ್ ಹೆಗ್ಡೆಯವರು ಪ್ರಶಸ್ತಿ ಸ್ವೀಕರಿಸಿದ್ದರು.

ದೇವಸ್ಥಾನ ಹಾಗೂ ದೈವಸ್ಥಾನಗಳಲ್ಲಿ ನಾಗಸ್ವರ ಹಾಗೂ ಬ್ಯಾಂಡ್‌ಸೆಟ್ ಪರಿಕರಗಳ ವಾದಕ, ಅನಾರೋಗ್ಯ ಪೀಡಿತ ಸುರೇಂದ್ರ ದೇವಾಡಿಗರ ಪತ್ನಿ ಮೋಹಿನಿಯವರಿಗೆ ಉಷಾ ಭಂಡಾರಿಯವರು ಧನಸಹಾಯ ಹಸ್ತಾಂತರಿಸಿದರು.

ಯಕ್ಷಗಾನ ಅಕಾಡೆಮಿ ಸದಸ್ಯ ಸತೀಶ್ ಅಡಪ ಸಂಕಬೈಲು, ಶ್ರೀಧರ ಭಂಡಾರಿಯವರ ಪತ್ನಿ ಉಷಾ ಭಂಡಾರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಭಂಡಾರಿಯವರ ಪುತ್ರಿ ಅನಿಲಾ ದೀಪಕ್ ರೈ ಸನ್ಮಾನ ಪತ್ರ ವಾಚಿಸಿದರು. ಮೇಳದ ಸಂಚಾಲಕ ಚಂದ್ರಶೇಖರ ಧರ್ಮಸ್ಥಳ ಅತಿಥಿಗಳನ್ನು ಶಾಲು, ಸ್ಮರಣಿಕೆ ನೀಡಿ ಗೌರವಿಸಿ ವಂದಿಸಿದರು.

ರೋಹನ್‌ನಲ್ಲಿ ಸ್ವಾತಂತ್ರ್ಯ ಸಂಭ್ರಮ

ಮಂಗಳೂರು: ಭಾರತದ 79ನೇ ಸ್ವಾತಂತ್ರ್ಯ ದಿನವನ್ನು ರೋಹನ್ ಕಾರ್ಪೋರೇಶನ್ ಸಂಸ್ಥೆಯ ಪಂಪ್ ವೆಲ್‌ನ ರೋಹನ್ ಸ್ಕ್ವೇರ್ ಆವರಣದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮ ಧ್ವಜಾರೋಹಣದೊಂದಿಗೆ ಪ್ರಾರಂಭವಾಯಿತು. ಸಂಸ್ಥೆಯ ಸಿಬ್ಬಂದಿ, ಕಾರ್ಮಿಕರು ಹಾಗೂ ಸ್ಥಳೀಯ ನಾಗರಿಕರು

ಭಾಗವಹಿಸಿದ್ದರು. ನಿವೃತ್ತ ಸೇನಾ ಅಧಿಕಾರಿ ಸುಬೇದಾರ್ ಅಪ್ಪು ಶೆಟ್ಟಿ ರವರು ಧ್ವಜಾರೋಹಣ ನೆರವೇರಿಸಿದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ರೋಹನ್ ಕಾರ್ಪೊರೇಷನ್ ಸಂಸ್ಥೆಯ ಸ್ಥಾಪಕರಾದ ರೋಹನ್ ಮೊಂತೆರೋರವರು, ಸ್ವಾತಂತ್ರ್ಯ ಕೇವಲ ಒಂದು ದಿನದ ಆಚರಣೆಯಲ್ಲ. ಪ್ರತಿದಿನವೂ ಅದನ್ನು ಕಾಪಾಡುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ಯುವ ಪೀಳಿಗೆ ದೇಶಾಭಿವೃದ್ಧಿಯಲ್ಲಿ ತೊಡಗಿಕೊಳ್ಳುವುದು ಅತ್ಯವಶ್ಯಕ ಎಂದು ಹೇಳಿದರು. ಈ ಸಂದರ್ಭದಲ್ಲಿ ನಿವೃತ್ತ ಸೇನಾ ಅಧಿಕಾರಿ ಸುಬೇದಾರ್ ಅಪ್ಪು ಶೆಟ್ಟಿ ಅವರು ರಾಷ್ಟ್ರಸೇವೆಗೆ ಸಲ್ಲಿಸಿದ ಮಹತ್ತರ ಕೊಡುಗೆಯನ್ನು ಗುರುತಿಸಿ ಸನ್ಮಾನಿಸಲಾಯಿತು. ಧನ್ಯವಾದ ಸ್ವೀಕರಿಸಿ ಮಾತನಾಡಿನ ಅವರು, ದೇಶ ಸೇವೆ ನನ್ನ ಜೀವನದ ಅತ್ಯಂತ ಹೆಮ್ಮೆಯ ಕ್ಷಣ. ಈ ಗೌರವ ನನ್ನ ನಿವೃತ್ತ ಜೀವನದಲ್ಲೂ ದೇಶಸೇವೆಯ ನೆನಪುಗಳನ್ನು ಮತ್ತಷ್ಟು ಸ್ಮರಣೀಯವಾಗಿಸುತ್ತದೆ. ಓದು, ಉದ್ಯೋಗ, ಹಣ ಇವು ಜೀವನದ ಒಂದು ಭಾಗ ಮಾತ್ರ. ಇಂದಿನ ಯುವ ಪೀಳಿಗೆ ದೇಶಕ್ಕಾಗಿ ಸೇವೆ ಸಲ್ಲಿಸುವ ಧ್ಯೇಯ ಹೃದಯದಲ್ಲಿ ಇಟ್ಟುಕೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ನಿರ್ದೇಶಕ ಡಿಯಾನ್ ಮೊಂತೆರೋ ಮತ್ತು ಜನರಲ್ ಮ್ಯಾನೇಜರ್ ಸುಮನಾ ಭಾಗವಹಿಸಿದ್ದರು.

ನಿವೃತ್ತ ಸೇನಾ ಅಧಿಕಾರಿ ಸುಬೇದಾರ್ ಅಪ್ಪು ಶೆಟ್ಟಿ ಅವರಿಗೆ ಸನ್ಮಾನಿಸಲಾಯಿತು.

ರಾಜ್ಯದ ಅರ್ಥ ವ್ಯವಸ್ಥೆ ಆರೋಗ್ಯಕರ: ಸಚಿವೆ

ಉಡುಪಿ : ದೇಶದಲ್ಲಿಯೇ ಅತಿ ಹೆಚ್ಚು ತಲಾ ಆದಾಯ ಹೊಂದಿರುವ ರಾಜ್ಯವಾಗಿ ಕರ್ನಾಟಕ ಹೊರಹೊಮ್ಮಿದೆ. ರಾಜ್ಯ ಸರಕಾರ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ದೃಷ್ಟಿಯಿಂದ ವಿತ್ತೀಯ ನಿರ್ವಹಣೆಯಲ್ಲಿ ತನ್ನ ಕಾರ್ಯಕ್ಷಮತೆಯನ್ನು ತೋರಿಸಿದೆ ಎಂದು ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಅಜ್ಜರಕಾಡಿನ ಜಿಲ್ಲಾ ಕ್ರೀಡಾಂಗಣದಲ್ಲಿ 79ನೇ ಸ್ವಾತಂತ್ರ್ಯ ದಿನದ ಧ್ವಜಾರೋಹಣ ನೇರವೇರಿಸಿ ಬಳಿಕ ಮಾತನಾಡಿದರು.

ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕ ರಾಜ್ಯ ದೇಶದಲ್ಲಿಯೇ ಎರಡನೇ ಸ್ಥಾನದಲ್ಲಿರುವುದು ರಾಜ್ಯದ ಅರ್ಥ ವ್ಯವಸ್ಥೆ ಆರೋಗ್ಯವಂತವಾಗಿದೆ ಎಂಬುದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ ಎಂದರು.

ಸ್ವಾತಂತ್ರ್ಯ ಹೋರಾಟದ ನಾಯಕತ್ವವನ್ನು ವಹಿಸಿ, ಜಗತ್ತಿನ ಚರಿತ್ರೆಯಲ್ಲಿ ಮೊದಲ ಬಾರಿಗೆ ಅಹಿಂಸೆಯ ಮೂಲಕ ಸ್ವಾತಂತ್ರ್ಯವನ್ನು ತಂದುಕೊಟ್ಟ ಗಾಂಧೀಜಿಯವರು ಉಡುಪಿಗೆ ಆಗಮಿಸಿ, ಅಜ್ಜರಕಾಡಿನಲ್ಲಿ ದೇಶ ಪ್ರೇಮಿಗಳ ಹೋರಾಟಕ್ಕೆ ಕರೆ ನೀಡಿದ್ದು ಮರೆಯಲಾಗದ ಘಟನೆ. ಅದರ ಸ್ಮಾರಕವೂ ಈ ನೆಲದಲ್ಲಿ ಇಂದು ಚಿರಸ್ಥಾಯಿಯಾಗಿದೆ ಎಂದು ಸಚಿವರು ಸ್ಮರಿಸಿದರು.

ಬಡತನ ನಿವಾರಣೆಗೆ ನೇರ ನಗದು ನೀಡುವ ಗೃಹಲಕ್ಷ್ಮೀ ಯೋಜನೆ ಅಡಿಯಲ್ಲಿ ರಾಜ್ಯದಾದ್ಯಂತ 1.23 ಕೋಟಿ ರೂ. ಫಲಾನುಭವಿಗಳಿಗೆ ಈವರೆಗೆ 47,400 ಕೋಟಿ ರೂ. ಗಳಷ್ಟು ಜಮಾ ಮಾಡಲಾಗಿದೆ. ಜಿಲ್ಲೆಯಲ್ಲಿ 2,25,131 ಫಲಾನುಭವಿಗಳಿಗೆ 870.83 ಕೋಟಿ ರೂ. ಹಣ ಸಂದಾಯ ಮಾಡಲಾಗಿದೆ. ಅಕ್ಕ ಕೋ-ಆಪರೇಟಿವ್ ಸೊಸೈಟಿಗಳನ್ನು ಸ್ಥಾಪಿಸಿ ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳನ್ನು ಸದಸ್ಯರನ್ನಾಗಿಸಲಾಗುತ್ತಿದೆ ಎಂದು ಹೇಳಿದರು.

ಅಂಗನವಾಡಿಗಳಲ್ಲಿ ಎಲ್.ಕೆ.ಜಿ., ಯು.ಕೆ.ಜಿ. ನಡೆಸಲು 10 ಸಾವಿರ ಅಂಗನವಾಡಿ ಕೇಂದ್ರಗಳನ್ನು ಗುರುತಿಸಲಾಗಿದ್ದು, 4 ರಿಂದ 5 ಸಾವಿರ ಅಂಗನವಾಡಿಗಳಲ್ಲಿ ಸದ್ಯದಲ್ಲಿಯೇ ತರಗತಿಗಳನ್ನು ಆರಂಭಿಸಲಾಗುವುದು. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಎಲ್ಲ ಕೇಂದ್ರಗಳಿಗೆ ವಿಸ್ತರಿಸಲಾಗುವುದು ಎಂದರು.

ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್, ಜಿ.ಪಂ. ಸಿಇಒ ಪ್ರತೀಕ್ ಬಾಯಲ್, ಅಪರ ಜಿಲ್ಲಾಧಿಕಾರಿ ಗದ್ಯಾಳ, ಗ್ಯಾರಂಟಿ ಸಮಿತಿ ಅಧ್ಯಕ್ಷ ಅಶೋಕ್ ಕೊಡವೂರು, ಸೈನಿಕರ ವೇದಿಕೆಯ ಅಧ್ಯಕ್ಷ ಕರ್ನಲ್ ರೋಡಿಗ್ರೆಸ್, ಗಣಪಯ್ಯ ಸೇರಿಗಾರ್, ಸುಂದರ ಬಂಗೇರ, ದಯಾನಂದ ಪೂಜಾರಿ, ಗಣೇಶ್ ರಾವ್, ಮಾಜಿ ಸೈನಿಕರ ಸೊಸೈಟಿ ಸಿಇಒ ಪರಮಶಿವ ಉಪಸ್ಥಿತರಿದ್ದರು.

ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅಜ್ಜರಕಾಡಿನ ಜಿಲ್ಲಾ ಕ್ರೀಡಾಂಗಣದಲ್ಲಿ 79ನೇ ಸ್ವಾತಂತ್ರ್ಯ ದಿನದ ಧ್ವಜಾರೋಹಣ ನೇರವೇರಿಸಿದರು.

ಸಮೂಹ ಶ್ರಮದಿಂದ ಆಧುನಿಕ ಭಾರತ



ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ.) ವತಿಯಿಂದ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆ.

ಜಿಟಿ ಜಿಟಿ ಮಳೆಯ ನಡುವೆ ಆಚರಣೆ

ಎನ್‌ಸಿಸಿ ಕೆಡೆಟ್ ಸೀನಿಯರ್ ಅಂಡರ್ ಆಫೀಸರ್ ಅರ್ಚನಾ ನಾಗರಾಜ್ ಅವರಿಂದ ಗೌರವ ರಕ್ಷೆ ಸ್ವೀಕರಿಸಿದ ಬಳಿಕ ಎನ್‌ಸಿಸಿ ಜೂನಿಯರ್ ಅಂಡರ್ ಆಫೀಸರ್‌ಗಳಾದ ಸಂಜುಶ್ರೀ, ಗೀತಾ, ನಯನಾ ಹಾಗೂ ರಾಣಿ ಅತಿಥಿಗಳನ್ನು ವೇದಿಕೆಗೆ ಕರೆತಂದರು. ಪೆರೇಡ್ ಕಮಾಂಡರ್ ಭರತ್ ಗೌಡ ಅವರಿಂದ ವರದಿ ಪಡೆದು ಧ್ವಜರೋಹಣ ಮಾಡಲಾಯಿತು. ಜಿಟಿ ಜಿಟಿ ಮಳೆಯ ನಡುವೆಯೂ ವಿಚಲಿತರಾಗದೆ ವಂದೇ ಮಾತರಂ, ದೇಶ ಭಕ್ತಿಗೀತೆ ಹಾಡುಗಳನ್ನು ಹಾಡುವ ಮೂಲಕ ವಿದ್ಯಾರ್ಥಿಗಳು ಸಂಭ್ರಮಿಸಿದರು.

ಮೂಡುಬಿದಿರೆ: ಶಿಕ್ಷಕರು ಉತ್ತಮ ವಿದ್ಯಾರ್ಥಿಗಳನ್ನು ರೂಪಿಸಿ ಆಧುನಿಕ ಭಾರತ ನಿರ್ಮಿಸುವಲ್ಲಿ ಶ್ರಮವಹಿಸುತ್ತಿದ್ದಾರೆ ಎಂದು ಭಾರತೀಯ ಸೇನೆ ನಿವೃತ್ತ ಅಧಿಕಾರಿ ಲೆ. ಜನರಲ್ ಅರುಣ್ ಅನಂತನಾರಾಯಣ್ ಹೇಳಿದರು.

ವಿದ್ಯಾಗಿರಿಯ ಕೆ. ವಿ. ಸುಬ್ಬಣ್ಣ ಬಯಲು ವೇದಿಕೆಯಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ.) ವತಿಯಿಂದ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಇಂದಿನ ಪೀಳಿಗೆಗೆ ಸ್ವಾತಂತ್ರ್ಯವೆಂದರೆ ಏನನ್ನಾದರೂ ಸಾಧಿಸುವ ಅವಕಾಶ ಎಂದು ಭಾಸವಾಗಬಹುದು. ಆದರೆ ನಮ್ಮ ಹಿರಿಯರು ಸರಿಯಾದ ಶಿಕ್ಷಣ, ವೈದ್ಯಕೀಯ ಸೌಲಭ್ಯ ಮತ್ತು ಇನ್ನಿತರ ಮೂಲಭೂತ ಸೌಲಭ್ಯಗಳಿಲ್ಲದೇ ಬದುಕಿದ್ದರು. ಅಭಿವೃದ್ಧಿಯ ಸೌಲಭ್ಯ ಪ್ರತಿಯೊಬ್ಬರಿಗೂ ತಲುಪಿದಾಗ ಸಾಧನೆ ಸಾಧ್ಯವಾಗುವುದು.ಆಧುನಿಕ ಭಾರತವನ್ನು ಒಬ್ಬ ವ್ಯಕ್ತಿ ಮಾತ್ರ ನಿರ್ಮಿಸಲು ಸಾಧ್ಯವಿಲ್ಲ,ಅದಕ್ಕೆ ಸಮೂಹ ಶ್ರಮ ಅಗತ್ಯ. ಶಿಕ್ಷಕರು ಕೇವಲ ವೃತ್ತಿಯಲ್ಲಿಲ್ಲ, ಸೇವೆಯಲ್ಲಿ ಇದ್ದು, ಉತ್ತಮ ವಿದ್ಯಾರ್ಥಿಗಳನ್ನು ರೂಪಿಸಿ ಆಧುನಿಕ ಭಾರತವನ್ನು ಕಟ್ಟುವವರಾಗಿದ್ದಾರೆ ಎಂದರು. ಇಂತಹ ಮೌಲ್ಯಯುತ ಶಿಕ್ಷಣ ಪಡೆದ ಸಮೂಹದಿಂದ ನವ ಭಾರತದ ನಿರ್ಮಾಣ ಸಾಧ್ಯ ಎಂದರು. ಕಾರ್ಯಕ್ರಮದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ, ಮೂಲ್ಕಿ-ಮೂಡುಬಿದಿರೆ ವಿಧಾನ ಸಭಾ ಕ್ಷೇತ್ರದ ಶಾಸಕ ಉಮಾನಾಥ ಕೋಟ್ಯಾನ್,ಇದ್ದರು.

ಉಳ್ಳಾಲ : ದೇಶದ ಸ್ವಾತಂತ್ರ್ಯ ದಿನಾಚರಣೆಯನ್ನು ಇಲ್ಲಿನ ನಗರಸಭೆ ಆವರಣದಲ್ಲಿ ನಡೆಯಿತು. ಅಧ್ಯಕ್ಷ ಶಶಿಕಲಾ ರವರು ಧ್ವಜಾರೋಹಣ ಮಾಡಿ ಶುಭ ಸಂದೇಶ ನೀಡಿದರು. ಮುಖ್ಯ ಭಾಷಣ ಕರ್ತರಾಗಿ ಪೌರಾಯುಕ್ತ ನವೀನ್ ಕುಮಾರ್ ಬಿ. ಎನ್, ಮಾಜಿ ಅಧ್ಯಕ್ಷ ಇಸ್ಮಾಯಿಲ್ ಅಲೆಕಲ, ಕೌನ್ಸಿಲರ್ ಖಲೀಲ್ ಮುಕಚೇರಿ ಮೊದಲಾದವರು ಮಾತನಾಡಿದರು. ಸಮಾಜ ಕಲ್ಯಾಣ ಅಧಿಕಾರಿ ರೋಹಿನಾಥ್ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಹಾಲಿ ಮತ್ತು ಮಾಜಿ ಕೌನ್ಸಿಲರ್ ಗಳು, ನಗರ ಸಭೆಯ ಅಧಿಕಾರಿ ವರ್ಗ ಭಾಗವಹಿಸಿದ್ದರು.

ಸ್ವಾತಂತ್ರ್ಯದ ತ್ಯಾಗ, ಬಲಿದಾನ ಸ್ಮರಣೆ

ಅಜ್ಜಂಪುರದಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ವಿನಾಯಕ್ ಸಾಗರ್ ಪಾಲ್ಗೊಂಡಿದ್ದರು.

ಅಜ್ಜಂಪುರ: ಭಾರತದ ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನ ಮಾಡಿದ ಮಹನೀಯರನ್ನು ಸ್ಮರಿಸುವುದು, ಗೌರವಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ ಎಂದು ತಹಸೀಲ್ದಾರ್ ವಿನಾಯಕ್ ಸಾಗರ್‌ಅಭಿಪ್ರಾಯಪಟ್ಟರು.

ಪಟ್ಟಣದ ಶೆಟ್ರು ಸಿದ್ದಪ್ಪ ಪದವಿ ಪೂರ್ವ ಕಾಲೇಜುಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ 79 ನೇ ಸ್ವಾಂತ್ರ್ಯೋತ್ಸವದಧ್ವಜಾರೋಹಣ ನೆರವೇರಿಸಿ, ಅವರು ಮಾತನಾಡಿದರು.

ವಿದ್ಯಾರ್ಥಿಗಳು, ಯುವಕರು ಶಿಸ್ತಿನ ಜೀವನ ರೂಢಿಸಿಕೊಳ್ಳಬೇಕು. ಸದೃಢ ಭಾರತನಿರ್ಮಾಣಕ್ಕೆ ಮುಂದಾಗಬೇಕು ಎಂದರು.

ಪಟ್ಟಣ ಪಂಚಾಯಿತಿಗೆ ಭಾನುವಾರ ನಡೆಯಲಿರುವ ಚುನಾವಣೆಯಲ್ಲಿ ಪಟ್ಟಣ ವ್ಯಾಪ್ತಿ ಮತದಾರರು ಆಮಿಷಕ್ಕೆ ಒಳಗಾಗದೇ, ಪಟ್ಟಣದ ಅಭಿವೃದ್ದಿಗಾಗಿ ಮತ ನೀಡಿ ಎಂದು ಮನವಿ ಮಾಡಿದರು.

ಇದಕ್ಕೂ ಮುನ್ನ ಪೊಲೀಸ್, ಗೃಹ ರಕ್ಷಕ ಸಿಬ್ಬಂದಿ, ಶಾಲಾ-ಕಾಲೇಜು ವಿದ್ಯಾರ್ಥಿಗಳು ಪಥ ಸಂಚಲನ ನಡೆಸಿ, ಧ್ವಜ ವಂದನೆ ಸಲ್ಲಿಸಿದ್ದರು. ಮಳೆಯಿಂದಾಗಿ ಸಾಂಸ್ಕೃತಿಕ ಕಾರ್ಯಕ್ರಮ ರದ್ದಾದವು. ತಾ.ಪಂಚಾಯಿತಿ ಇಒ ವಿಜಯ್ ಕುಮಾರ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿರಮೇಶ್, ಸರ್ಕಲ್‌ಇನ್ಸ್ಪೆಕ್ಟರ್ ವಿರೇಂದ್ರ, ನೌಕರ ಸಂಘ ಅಧ್ಯಕ್ಷ ಪುಟ್ಟಸ್ವಾಮಿ, ಭದ್ರಾಮೇಲ್ದಂಡೆ ಯೋಜನೆ

ಅಭಿಯಂತರ ಸಿದ್ದೇಶ್, ಹಿರಿಯ ನಾಗರೀಕ ವೇದಿಕೆ ಅಧ್ಯಕ್ಷ ಶಿವಮೂರ್ತಿ, ಕಾಂತೇಶ್, ಎಚ್.ಪುಟ್ಟಸ್ವಾಮಿ ಇದ್ದರು.

ಮಂಗಳೂರು: ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ದ.ಕ. ಜಿಲ್ಲಾ ಸಮಿತಿಯ ಶತಮಾನೋತ್ಸವ ಕಟ್ಟಡ ಆವರಣದಲ್ಲಿ ಮಾಜಿ ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು ಧ್ವಜಾರೋಹಣ ನೆರವೇರಿಸಿದರು. ಜಿಲ್ಲಾ ಸಮಿತಿಯ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ, ಖಜಾಂಜಿ ಕೆ.ಮೋಹನ ಶೆಟ್ಟಿ, ಕಾರ್ಯದರ್ಶಿ ಕಿಶೋರ್‌ಚಂದ್ರ, ಹೆಗ್ಡೆ, ಆಡಳಿತ ಮಂಡಳಿ ನಿರ್ದೇಶಕರಾದ ಪುಷ್ಪರಾಜ್ ಜೈನ್, ಡಾ.ಸಚ್ಚಿದಾನಂದ ರೈ, ಗುರುದತ್ ಕಾಮತ್, ಪಿ.ಬಿ.ಹರೀಶ್ ರೈ, ಕಾರ್ಯದರ್ಶಿ ಕಿಶೋರ್‌ಚಂದ್ರ ಹೆಗ್ಡೆ, ಸಿಬ್ಬಂದಿ ಮಲ್ಲಿಕಾ, ಗಿರೀಶ್ ಕುಮಾರ್, ಒಝೂಸ್ ಸಂಸ್ಥೆಯ ಗೌರವಾಧ್ಯಕ್ಷ ನಂದಕುಮಾರ್, ಅಧ್ಯಕ್ಷೆ ಮಂಗಳಾ ನಂದಕುಮಾರ್, ಪದಾಧಿಕಾರಿಗಳಾದ ಲತಾ,ಸಾಕ್ಷಿ,ತನ್ಮಯ್ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಪಿಎಸ್ಐ ಪತ್ನಿ ಆತ್ಮಹತ್ಯೆ

ಬಳ್ಳಾರಿ: ಪಿಎಸ್ಐ ಪತಿ ಹಾಗೂ ಇಬ್ಬರು ಮಕ್ಕಳನ್ನ ರೆಡಿ ಮಾಡಿ, ಧ್ವಜಾರೋಹಣಕ್ಕೆ ಕಳಿಸಿದ ಬಳಿಕ ಪಿಎಸ್ಐ ಪತ್ನಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬಳ್ಳಾರಿ ಜಿಲ್ಲೆಯ ಮೋಕಾದಲ್ಲಿ ನಡೆದಿದೆ. ಮೋಕಾ

ಪೊಲೀಸ್ ಠಾಣೆಯ ಪಿಎಸ್ಐ ಕೆ.ಕಾಳಿಂಗ ಪತ್ನಿ ಚೈತ್ರಾ (36) ಆತ್ಮಹತ್ಯೆ ಮಾಡಿಕೊಂಡಿರುವ ಮಹಿಳೆ. ಸಹೋದರ ಹಾಗೂ ಇಬ್ಬರು ಸಹೋದರಿಯರ ಸಾವಿನಿಂದ ಚೈತ್ರಾ ಮಾನಸಿಕ ಖಿನ್ನತೆಗೆ ಒಳಗಾಗಿದ್ರು ಎನ್ನಲಾಗಿದೆ. 2 ತಿಂಗಳ ಹಿಂದೆ ಚೈತ್ರಾ ಅವರ ಸಹೋದರ ಆತ್ಮಹತ್ಯೆ ಮಾಡಿಕೊಂಡಿದ್ದ. 2 ವರ್ಷಗಳ ಅಂತರದಲ್ಲಿ ಇದ್ದ ಒಬ್ಬ ಸಹೋದರ ಹಾಗೂ ಇಬ್ಬರು ಸಹೋದರಿಯರು ಮೃತಪಟ್ಟಿದ್ರು. ಹೀಗಾಗಿ ಚೈತ್ರಾ ಮಾನಸಿಕ ಖಿನ್ನತೆಗೆ ಒಳಗಾಗಿದ್ರು ಅಂತ ತಿಳಿದುಬಂದಿದೆ. ಮಾನಸಿಕ ಖಿನ್ನತೆಗೆ ಒಳಗಾಗಿದ್ದರಿಂದ ಶಿವಮೊಗ್ಗದಲ್ಲಿ ಚಿಕಿತ್ಸೆಯನ್ನೂ ಕೊಡಿಸಲಾಗಿತ್ತು. ಶುಕ್ರವಾರ ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆ ಬೆಳಗ್ಗೆ ಮಕ್ಕಳನ್ನ ರೆಡಿ ಮಾಡಿದ್ದ ಚೈತ್ರಾ, ಪತಿಯ ಜತೆ ಧ್ವಜಾರೋಹಣಕ್ಕೆ ಕಳಿಸಿದ್ರು. ಮಕ್ಕಳು ಹಾಗೂ ಗಂಡ ಮನೆಯಿಂದ ಹೊರ ಹೋಗ್ತಿದ್ದಂತೆ ಚೈತ್ರಾ ನೇಣಿಗೆ ಶರಣಾಗಿದ್ದಾರೆ.

ಕೂಲಿ ಹಣಕ್ಕಾಗಿ ವ್ಯಕ್ತಿಯ ಭೀಕರ ಕೊಲೆ

ಶಿರಸಿ: ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಮುಗಿಸಿದ ವ್ಯಕ್ತಿಯೊಬ್ಬ ಕೇವಲ 200 ರು.ಗಳಿಗೆ ತನ್ನದೇ ಜತೆ ಕೆಲಸ ಮಾಡುವ ಇನ್ನೊಂದು ವ್ಯಕ್ತಿಯನ್ನು

ಗುದ್ದಲಿಯಿಂದ ತಲೆಗೆ ಹೊಡೆದು ಭೀಕರವಾಗಿ ಕೊಲೆ ಮಾಡಿದ ಘಟನೆ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ನಡೆದಿದೆ. ಆರೋಪಿಯನ್ನು ಕೊಲೆ ನಡೆದ ಕೆಲವೇ ಗಂಟೆಗಳಲ್ಲಿ ಪೊಲೀಸರು ಬಂಧಿಸಿದ್ದಾರೆ. ಶಿರಸಿ ತಾಲೂಕಿನ ಕಮಟಗೇರಿಯಲ್ಲಿ ಗುರುವಾರ ರಾತ್ರಿ ಭೀಕರ ಕೊಲೆ ನಡೆದಿದ್ದು, ಶುಕ್ರವಾರ ಬೆಳಗ್ಗೆ ಘಟನೆ ಬೆಳಕಿಗೆ ಬಂದಿದೆ. ಆರೋಪಿ ಕಮಟಗೇರಿಯ ಮಂಜುನಾಥ ಬಸಯ್ಯ ಚನ್ನಯ್ಯ ಈ ಹಿಂದೆಯೂ ಕೊಲೆ ಪ್ರಕರಣದಲ್ಲಿಯೇ ಜೀವಾವಧಿ ಶಿಕ್ಷೆ ಅನುಭವಿಸಿ ಹೊರ ಬಂದಿದ್ದ. ಈಗ ಮದ್ಯದ ನಶೆಯಲ್ಲಿ ಹಣಕ್ಕಾಗಿ ಅದೇ ಗ್ರಾಮದ ರವೀಶ್ ಗಣಪತಿ ಚನ್ನಯ್ಯ (35) ನನ್ನು ಕೊಲೆ ಮಾಡಿದ್ದಾನೆ. ಆರೋಪಿಯನ್ನು ಶಿರಸಿ ತಾಲೂಕಿನ ಸೋಂದಾ ಕ್ರಾಸ್ ಸಮೀಪ ಶುಕ್ರವಾರ ಬಂಧಿಸಲಾಗಿದೆ.

ಕಾದಾಟದಲ್ಲಿ ಗಾಯಗೊಂಡ ವ್ಯಾಘ್ರ

ಚಾಮರಾಜನಗರ: ಹಾಡಹಗಲೇ ಹುಲಿಗಳು ಕಾದಾಡಿ ಅದರಲ್ಲಿ ಒಂದು ವ್ಯಾಘ್ರ ತೀವ್ರವಾಗಿ ಗಾಯಗೊಂಡು ಜಮೀನಿನಲ್ಲಿ ಮಲಗಿದ ಘಟನೆ ಗುಂಡ್ಲುಪೇಟೆ ತಾಲೂಕಿನ ಕುಂದಕೆರೆ ಗ್ರಾಮದಲ್ಲಿ ನಡೆದಿದೆ. ಕುಂದಕೆರೆ ಗ್ರಾಮದ ಮಂಚಣ್ಣ ಎಂಬವರ ಜಮೀನಿನಲ್ಲಿ ಈ ಘಟನೆ ಆಗಿದೆ ಎಂದು ತಿಳಿದುಬಂದಿದ್ದು ಕಾದಾಟದಲ್ಲಿ ಗಾಯಗೊಂಡ ಹುಲಿ ಕಂಡು ರೈತ ಭಯಗೊಂಡು ಕಾಲ್ಕಿತ್ತಿದ್ದಾರೆ. ಬಳಿಕ, ಅರಣ್ಯ ಇಲಾಖೆಗೆ ಈ ವಿಚಾರ ಮುಟ್ಟಿಸಿದ್ದಾರೆ. ಈ ಕುರಿತು ಬಂಡೀಪುರ ಎಸಿಎಫ್ ನವೀನ್ ಕುಮಾರ್ ಪ್ರತಿಕ್ರಿಯಿಸಿ, ಹುಲಿಗಳ ಕಾದಾಟದಲ್ಲಿ ಒಂದು ಹುಲಿ ಗಾಯಗೊಂಡು ಅಸ್ವಸ್ಥವಾಗಿದ್ದು ಸ್ಥಳಕ್ಕೆ ಅರಣ್ಯ ಸಿಬ್ಬಂದಿ ಭೇಟಿ ಕೊಟ್ಟಿದ್ದಾರೆ. ಹುಲಿ ಮೇಲೆ ನಿಗಾ ಇಡಲಾಗಿತ್ತು. ನಂತರ ಡಾ.ವಾಸೀಂ ಅವರನ್ನು ಸ್ಥಳಕ್ಕೆ ಕರೆಸಿ ಅರವಳಿಕೆ ಮದ್ದು ನೀಡಿ ನಂತರ ಹುಲಿಯನ್ನು ಮೈಸೂರಿನ ಕೂರ್ಗಳ್ಳಿಗೆ ರವಾನಿಸಲಾಗಿದ್ದು ಚಿಕಿತ್ಸೆ ನೀಡಲಾಗಿದೆ. ಇನ್ನು ಕಾದಾಡಿದ ಮತ್ತೊಂದು ಹುಲಿಯನ್ನ ಸೆರೆ ಹಿಡಿಯಲು ಸಹ ಅರಣ್ಯಾಧಿಕಾರಿಗಳು ಚಿಂತನೆ ನಡೆಸಿದ್ದಾರೆ ಎನ್ನಲಾಗಿದೆ.

ಎಸ್ಐಟಿ ಮಧ್ಯಂತರ ವರದಿಗೆ ಆಗ್ರಹ

ಮೈಸೂರು: ಧರ್ಮಸ್ಥಳದಲ್ಲಿ ಎಸ್ಐಟಿ ನಡೆಸುತ್ತಿರುವ ತನಿಖೆ ಕುರಿತು ಮಧ್ಯಂತರ ವರದಿ ನೀಡಲಿ ಎಂದು ಸಂಸದ ಯದುವೀರ್ ಆಗ್ರಹಿಸಿದರು.ಸುದ್ದಿ

ಗಾರರೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳ ಪ್ರಕರಣ ಕುರಿತು ತನಿಖೆ ನಡೆಯುತ್ತಿರುವ ವೇಳೆ ಹೇಳಿಕೆ ಕೊಡುವುದು ಸೂಕ್ತ ಅಲ್ಲ. ಇದುವರೆಗೂ ಏನೆಲ್ಲಾ ತನಿಖೆ ನಡೆದಿದೆ ಎಂಬ ಬಗ್ಗೆ ಮಧ್ಯಂತರ ವರದಿ ಬಿಡುಗಡೆ ಮಾಡಬೇಕು. ಅದು ಜನರಿಗೆ ಗೊತ್ತಾಗಬೇಕು ಎಂದು ಹೇಳಿದರು. ಧರ್ಮಸ್ಥಳ ಕುರಿತು ಅಪಪ್ರಚಾರ ಮಾಡುವವರ ಮೇಲೆ ಕ್ರಮ ಕೈಗೊಳ್ಳಬೇಕು. ಸಾಮಾಜಿಕ ಜಾಲತಾಣಗಳು, ಯೂಟ್ಯೂಬ್ ಗಳ ವಿರುದ್ಧ ಕಠಿಣ ಕ್ರಮ ಆಗಬೇಕು ಎಂದು ಒತ್ತಾಯಿಸಿದರು.

KARNATAKA URBAN WATER SUPPLY AND DRAINAGE BOARD, DIVISION, BALLARI
OFFICE OF THE EXECUTIVE ENGINEER
PHONE No. 08392 - 267762.
Web site: www.eproc.karnataka.gov.in
Email: Email: eekwbbellary@gmail.com

BID NOTIFICATION

The lumpsum tender for the following work is invited through Karnataka public procurement portal (kpp portal) Firm / Contractor who fulfills the qualification criteria as detailed in the bidding document. The details can be obtained from the Karnataka Public Procurement Portal.
Indent No: KUWSDB/2025-26/WS/WORK_INDENT373
Amount put tender in Rs: 84,35,928-00. **Bid Security (In Rs.):** 1,69,000-00. **Period of completion:** 03 Months
Contact Authority:- Executive Engineer, Ph: 08392 267762
Sd/- Executive Engineer
KUWS & DB, Division, Ballari
DIPR/Ballari/374/KSMCA/2025-26

ಬೆಂಗಳೂರಿನ ಮಾರ್ಷಲ್ ಮಾಣಿಕ್ ಷಾ ಮೈದಾನದಲ್ಲಿ ಶುಕ್ರವಾರ ನಡೆದ 79ನೇ ಸ್ವಾತಂತ್ರ್ಯೋತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

> ಕರ್ನಾಟಕವನ್ನು ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿಯೇ ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಸಾಮರಸ್ಯದಿಂದ ಕೂಡಿದ ಸಮೃದ್ಧ ಕರ್ನಾಟಕವನ್ನು ನಿರ್ಮಾಣ ಮಾಡುವುದರ ಮೂಲಕ ಸಶಕ್ತ ಭಾರತವನ್ನು ಕಟ್ಟೋಣ. ಸ್ವಾತಂತ್ರ್ಯ, ಸಂವಿಧಾನ ಹಾಗೂ ನೈಜ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಜೀವಕ್ಕಿಂತ ಮಿಗಿಲು ಎಂದು ಭಾವಿಸೋಣ. ಸಾಮಾಜಿಕ, ಆರ್ಥಿಕ, ರಾಜಕೀಯ ಸ್ವಾತಂತ್ರ್ಯ ಹಾಗೂ ನ್ಯಾಯಗಳನ್ನು ನಿರಂತರವಾಗಿ ರಕ್ಷಿಸಿಕೊಳ್ಳುವ ಪ್ರತಿಜ್ಞೆ ಮಾಡಬೇಕು.
>
> - ಸಿದ್ದರಾಮಯ್ಯ, ಮುಖ್ಯಮಂತ್ರಿ

ಧ್ವಜಾರೋಹಣ ಬಳಿಕ ಕೇಂದ್ರದ ವಿರುದ್ಧ ಅಸಮಾಧಾನ | ಇಡಿ, ಸಿಐಡಿ, ಐಟಿ ಮೂಲಕ ಪ್ರತಿಪಕ್ಷಗಳ ಹತ್ತಿಕ್ಕುವ ಕೆಲಸ | ಗ್ಯಾರಂಟಿ ಯೋಜನೆಗೆ 96 ಸಾವಿರ ಕೋಟಿ ಖರ್ಚು ಮಾಡಿದ್ದೇವೆ: ಸಿದ್ದರಾಮಯ್ಯ

ಕೇಂದ್ರದ ಅನ್ಯಾಯ ಪ್ರಶ್ನಿಸಬೇಕು: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೇಂದ್ರ ಸರಕಾರ ನೀಡಬೇಕಿರುವ ತೆರಿಗೆ ಹಂಚಿಕೆಯಲ್ಲಿ ಪಕ್ಷಪಾತ, ಅಸಮಾನತೆಯ ಬಗ್ಗೆ ಹಾಗೂ ಸಾಂವಿಧಾನಿಕ ಸಂಸ್ಥೆಗಳ ದುರ್ಬಳಕೆ ವಿರುದ್ಧ ಸಾರ್ವಜನಿಕರು ಧ್ವನಿ ಎತ್ತಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

79ನೇ ಸ್ವಾತಂತ್ರ್ಯೋತ್ಸವದ ಹಿನ್ನೆಲೆ ಯಲ್ಲಿ ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಮೈದಾನದಲ್ಲಿ ತ್ರಿವರ್ಣ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಒಕ್ಕೂಟ ಸರಕಾರವು ತೆರಿಗೆ ಮುಂತಾದ ಸಂಪನ್ಮೂಲಗಳನ್ನು ಹಂಚುವಾಗ ನಿಷ್ಪಕ್ಷಪಾತವಾದ ಧೋರಣೆ ಅನುಸರಿಸುತ್ತಿಲ್ಲ. ಐಟಿ, ಇಡಿ, ಸಿಬಿಐ ಮತ್ತಿತರ ಸಾಂವಿಧಾನಿಕ ಸಂಸ್ಥೆಗಳು ಪ್ರಜಾಪ್ರಭುತ್ವದ ಹಾಗೂ ಸಂವಿಧಾನದ ನೈಜ ಮೌಲ್ಯಗಳ ಉಳಿವಿಗೆ ಕಾರ್ಯ ನಿರ್ವಹಿಸುತ್ತಿಲ್ಲ ಎಂಬ ಆಕ್ರೋಶವು ವಿವಿಧ ವೇದಿಕೆಗಳಿಂದ ವ್ಯಕ್ತವಾಗುತ್ತಿದೆ. ಈ ಕುರಿತು ಜವಾಬ್ದಾರಿಯುಳ್ಳ ನಾಗರಿಕರೆಲ್ಲರೂ ಧ್ವನಿ ಎತ್ತಬೇಕಿದೆ ಎಂದರು.

ಕರ್ನಾಟಕವನ್ನು ಸರ್ವಜನಾಂಗದ ಶಾಂತಿಯ ತೋಟವನ್ನಾಗಿಯೇ ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಸಾಮರಸ್ಯದಿಂದ ಕೂಡಿದ ಸಮೃದ್ಧ ಕರ್ನಾಟಕವನ್ನು ನಿರ್ಮಾಣ ಮಾಡುವುದರ ಮೂಲಕ ಸಶಕ್ತ ಭಾರತವನ್ನು ಕಟ್ಟಬೇಕು. ಬಲಾಢ್ಯರು ಮಾತ್ರ ಬದುಕಬೇಕು. ಉಳಿದವರು ಗುಲಾಮರಾಗಿ ದುಡಿಯಬೇಕು ಎನ್ನುವ ಮನುವಾದಿ ಸಿದ್ಧಾಂತ ಮಾದರಿಯೇ ಸಾಮಾಜಿಕ ಡಾರ್ವಿನ್ ವಾದ, ಈ ಮೃಗೀಯ ಸಿದ್ಧಾಂತಕ್ಕೆ ಎದುರಾಗಿ ಅಸಹಾಯಕರಿಗೆ ಮೊದಲು ಆದ್ಯತೆ ಸಿಗಬೇಕು ಎನ್ನುವುದು ನಮ್ಮ ಸಂವಿಧಾನದ ವಾದ. ಆದ್ದರಿಂದ ನಾವು ಸಂವಿಧಾನದ ಉಳಿವಿಗಾಗಿ ಪಣ ತೊಡೋಣ ಎಂದರು.

ಗ್ಯಾರಂಟಿಗಾಗಿ 96ಸಾವಿರ ಕೋಟಿ ಖರ್ಚು
ಗ್ಯಾರಂಟಿ ಯೋಜನೆಗಳು ರಾಜ್ಯದ ಅಭಿವೃದ್ಧಿಯ ದಿಕ್ಕನ್ನು ಬದಲಾಯಿಸುತ್ತಿವೆ. 2023ರ ಮೇ ತಿಂಗಳಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ನಾವು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲು ಆರಂಭಿಸಿದೆವು. ಅನ್ನಭಾಗ್ಯ, ಶಕ್ತಿ, ಗೃಹಲಕ್ಷ್ಮಿ, ಗೃಹ ಜ್ಯೋತಿ, ಯುವನಿಧಿ ಯೋಜನೆಗಳಿಗೆ ಈವರೆಗೆ 96,000 ಕೋಟಿ ರು. ಗಳಿಗೂ ಹೆಚ್ಚಿನ ಮೊತ್ತವನ್ನು ವಿನಿಯೋಗಿಸಿದ್ದೇವೆ. ಶಕ್ತಿ ಯೋಜನೆಯಲ್ಲಿ 500 ಕೋಟಿ ಟ್ರಿಪ್‌ಗಳ ಮೂಲಕ ಮಹಿಳೆಯರು ಉಚಿತವಾಗಿ ಸರಕಾರಿ ಬಸ್ಸುಗಳಲ್ಲಿ ಪ್ರಯಾಣ ಮಾಡಿದ್ದನ್ನು ಇತ್ತೀಚೆಗೆ ಆಚರಣೆ ಮಾಡಿದ್ದೇವೆ. ಮಧ್ಯವರ್ತಿಗಳ ಹಾವಳಿಯಿಲ್ಲದೆ ನೇರವಾಗಿ ಜನರಿಗೆ ತಲುಪುವ ಈ ಯೋಜನೆಗಳು ರಾಜ್ಯದ ಜನರ ತಲಾದಾಯವನ್ನು ಹೆಚ್ಚಿಸುತ್ತಿರುವುದಲ್ಲದೆ ಕಾರ್ಮಿಕ ಶಕ್ತಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಶೇ.23ರಷ್ಟು ಹೆಚ್ಚಿಸಿವೆ. ಶಕ್ತಿ ಯೋಜನೆಯನ್ನು ಜಾರಿಗೊಳಿಸುವುದರೊಂದಿಗೆ ಸಾರಿಗೆ ಇಲಾಖೆಗೆ ವಿವಿಧ ಮಾದರಿಯ ವಾಹನಗಳು ಸೇರಿದಂತೆ ಒಟ್ಟು 5,049 ಹೊಸ ಬಸ್ಸುಗಳ ಖರೀದಿ ಮತ್ತು 8,473 ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿದ್ದೇವೆ ಎಂದು ಹೇಳಿದರು.

ತಲಾದಾಯದಲ್ಲಿ ನಾವೇ ಮೊದಲು: ಕರ್ನಾಟಕವು ಈಗ ತಲಾದಾಯದ ವಿಚಾರದಲ್ಲಿ ಮೊದಲ ಸ್ಥಾನದಲ್ಲಿದೆ. ತಲಾದಾಯದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಶೇ.101ರಷ್ಟು ಪ್ರಗತಿಯನ್ನು ಸಾಧಿಸಿದ ರಾಜ್ಯ ನಮ್ಮ ಕರ್ನಾಟಕವಾಗಿದೆ. 2013-14ರಲ್ಲಿ ಸ್ಥಿರ ದರಗಳಲ್ಲಿ 1,01,858 ರೂಪಾಯಿಗಳಷ್ಟಿದ್ದ ತಲಾದಾಯವು 2024-25ರ ವೇಳೆಗೆ 2,04,605 ರು.ಗಳಿಗೆ ತಲುಪಿದೆ. ನಮ್ಮ ಸರಕಾರವು ಗ್ಯಾರಂಟಿ ಯೋಜನೆಗಳೂ ಸೇರಿದಂತೆ ಸಹಾಯಧನ, ಪ್ರೋತ್ಸಾಹ ಧನ, ವಿದ್ಯಾರ್ಥಿವೇತನ, ಸಾಮಾಜಿಕ ಯೋಜನೆಗಳಿಗಾಗಿ ವಿನಿಯೋಗಿಸುತ್ತಿರುವ ಪಿಂಚಣಿ ಮುಂತಾದವುಗಳಿಗಾಗಿ 1.12 ಲಕ್ಷ ಕೋಟಿಗಳಿಗೂ ಹೆಚ್ಚಿನ ಮೊತ್ತವನ್ನು ಜನ ಕಲ್ಯಾಣಕ್ಕಾಗಿ ಖರ್ಚು ಮಾಡುತ್ತಿದೆ ಎಂದು ತಿಳಿಸಿದರು. ಕೈಗಾರಿಕಾ ಕ್ಷೇತ್ರದ ಬೆಳವಣಿಗೆಗೆ ಆದ್ಯತೆ ನೀಡುವ ವಿಷಯದಲ್ಲಿ ಸರಕಾರ ಮುಂದಿದೆ. ರಾಜ್ಯದಲ್ಲಿರುವ ಅತಿದೊಡ್ಡ ಕೈಗಾರಿಕಾ ಪ್ರದೇಶಗಳನ್ನು ನಿರ್ವಹಿಸಲು ಮತ್ತು ಜಾಗತಿಕ ಉತ್ಪಾದನಾ ತಾಣಗಳಾಗಿ ಅಭಿವೃದ್ಧಿಪಡಿಸಲು, ವಿಶ್ವ ದರ್ಜೆಯ ಮೂಲಸೌಕರ್ಯವನ್ನು ಒದಗಿಸುವ ಉದ್ದೇಶದಿಂದ 44,166 ಎಕರೆ ಪ್ರದೇಶವುಳ್ಳ 18 ಕೈಗಾರಿಕಾ ಪ್ರದೇಶಗಳನ್ನು ವಿಶೇಷ ಹೂಡಿಕೆ ಪ್ರದೇಶಗಳೆಂದು ಘೋಷಿಸಲಾಗಿದೆ. ಇವುಗಳೊಂದಿಗೆ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೂ ಆದ್ಯತೆ ನೀಡುತ್ತಿದ್ದೇವೆ. 10 ಲಕ್ಷ ಕೋಟಿಗಳಿಗಿಂತ ಹೆಚ್ಚಿನ ಹೂಡಿಕೆ ಮಾಡಲು ಕೈಗಾರಿಕೋದ್ಯಮಿಗಳು ಆಸಕ್ತಿ ತೋರಿಸಿದ್ದಾರೆ ಎಂದು ತಿಳಿಸಿದರು.

ಬೆಂಗಳೂರಿನ ಮಾರ್ಷಲ್ ಮಾಣಿಕ್ ಷಾ ಮೈದಾನದಲ್ಲಿ ಶುಕ್ರವಾರ ನಡೆದ 79ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೌರವ ವಂದನೆ ಸ್ವೀಕರಿಸಿದರು.

ತಾಯಂದಿರ ಮರಣ ಪ್ರಮಾಣ ಕಡಿಮೆ

ನಮ್ಮ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಆರೋಗ್ಯ ಇಲಾಖೆಯಲ್ಲಿ ಹಲವು ಯೋಜನೆ ಜಾರಿಗೊಳಿಸಲಾಗಿದೆ. ಪ್ರಮುಖವಾಗಿ, ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆಯನ್ನು ರಾಜ್ಯಾದ್ಯಂತ ವಿಸ್ತರಿಸಲಾಗಿದೆ. ಕ್ಯಾನ್ಸರ್ ರೋಗಿಗಳ ಪ್ರಯಾಣ ಮತ್ತು ಚಿಕಿತ್ಸೆಯ ಹೊರೆ ಕಡಿಮೆ ಮಾಡಲು ಹಬ್ ಮತ್ತು ಸ್ಪೋಕ್ ಮಾದರಿಯಲ್ಲಿ ಜಿಲ್ಲಾಸ್ಪತ್ರೆಗಳಲ್ಲಿ ಕ್ಯಾನ್ಸರ್ ಆರೈಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ನಾವು ತೆಗೆದುಕೊಂಡ ಕ್ರಮಗಳಿಂದಾಗಿ 2025ನೇ ಸಾಲಿನಲ್ಲಿ ತಾಯಂದಿರ ಮರಣ ಪ್ರಮಾಣ ಶೇ.26ರಷ್ಟು ಕಡಿಮೆಯಾಗಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಸಂಪತ್ತು ಮೀಸಲು

ದೇಶದ ಪ್ರಮುಖ ಸಂಸ್ಥೆಗಳು ಮಾಡಿ ರುವ ಸಮೀಕ್ಷೆಗಳ ಪ್ರಕಾರ, ಶೇ.10 ರಷ್ಟಿರುವ ಶ್ರೀಮಂತರ ಬಳಿ ಶೇ.80ರಷ್ಟು ಸಂಪತ್ತು ಶೇಖರಣೆಯಾಗಿದೆ. ಆದರೆ ಶೇ.10ರಷ್ಟು ಜನರು ಕೇವಲ ಶೇ.3ರಷ್ಟು ಮಾತ್ರ ಜಿಎಸ್‌ಟಿ ಪಾವತಿಸುತ್ತಿದ್ದಾರೆ. ಉಳಿದ ಶೇ.90ರಷ್ಟು ಜನ ಹೊಟ್ಟೆ-ಬಟ್ಟೆಗೆ ದುಡಿಯುವವರಾದ್ದರಿಂದ ಶೇ.97ರಷ್ಟು ಜಿಎಸ್‌ಟಿ ಪಾವತಿಸುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಯಾವ ಆರ್ಥಿಕತೆ ಮುಂದುವರೆಯಲು ಸಾಧ್ಯ? ಸಂವಿಧಾನದ ಆಶಯಗಳನ್ನು ಈಡೇರಿಸು ವುದು ಹೇಗೆ? ಈ ಬೃಹತ್ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಉದ್ದೇಶದಿಂದಲೇ ನಾವು ಗ್ಯಾರಂಟಿ ಯೋಜನೆಗಳು ಹಾಗೂ ಇನ್ನಿತರೆ ಜನ ಕಲ್ಯಾಣದ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೇವೆ ಎಂದು ಸಿಎಂ ವಿವರಿಸಿದರು.

ಬುರುಡೆ ಪ್ರಕರಣದಲ್ಲಿ ರಾಜಕೀಯ ಸಾಧ್ಯವಿಲ್ಲ

ಗದಗ: ಧರ್ಮಸ್ಥಳ ಪ್ರಕರಣವನ್ನು ರಾಜಕೀಯಕ್ಕೆ ಬಳಕೆ ಮಾಡಲು ಸಾಧ್ಯನಾ ಅಂತ ನೋಡಲು ಪ್ರಯತ್ನ ಮಾಡ್ತಿದ್ದಾರೆ. ಅಂತವರಿಗೆ ಯಾವ ಕಾರಣಕ್ಕೂ ಅವಕಾಶ ನೀಡುವುದಿಲ್ಲ ಎಂದು ಕಾನೂನು, ನ್ಯಾಯ ಸಚಿವ ಎಚ್.ಕೆ ಪಾಟೀಲ್ ಹೇಳಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅವರು, ಧರ್ಮಸ್ಥಳದ ವಿಷಯ ವಿಧಾನಸಭೆ ಒಳಗೆ ಚರ್ಚೆಗೆ ಬಂದಿದೆ. ಗೃಹ ಸಚಿವರು ಈ ಬಗ್ಗೆ ಸ್ಪಷ್ಟಪಡಿಸಿದ್ದಾರೆ. ಅನಾಮಿಕ ವ್ಯಕ್ತಿ ನ್ಯಾಯಾಲಯದಲ್ಲಿ ಸಿಆರ್‌ಪಿಸಿ ಸೆಕ್ಷನ್ 164ರ ಅಡಿ ಹೇಳಿಕೆ ನೀಡಿದ್ದ. ಅದರ ಬಗ್ಗೆ ನ್ಯಾಯಯುತವಾಗಿ ತನಿಖೆ ನಡೆಯಬೇಕಾಗಿತ್ತು. ಆ ತನಿಖೆ ನಡೆದಿದೆ. ತನಿಖೆಯು ಯಾವ ಹಂತದಲ್ಲಿದೆ ಎಂಬ ಕೆಲವು ಭಾಗ ಮಾಧ್ಯಮಗಳ ಮೂಲಕ ಗೊತ್ತಾಗಿದೆ. ಈ ಬಗ್ಗೆ ಬಹುಶಃ ಸೋಮವಾರ ಇನ್ನು ಹೆಚ್ಚಿನ ಮಾಹಿತಿಯನ್ನು ಗೃಹ ಸಚಿವರು ನೀಡುತ್ತಾರೆ ಎಂದಿದ್ದಾರೆ.

ಶಾಸನ ಸಭೆಯಲ್ಲಿ ಚರ್ಚೆ ಮಾಡಿದ್ದರಿಂದ ಸೋಮವಾರ ಸರಕಾರ ತನ್ನ ಉತ್ತರ ನೀಡಲಿದೆ. ನಾವು ಧರ್ಮಸ್ಥಳ ಮಂಜುನಾಥನ ಸನ್ನಿಧಾನ ಬಗ್ಗೆ ವಿಶೇಷ ಭಕ್ತಿ, ಗೌರವ, ಅಭಿಮಾನ ಹೊಂದಿದವರು. ಆದ್ದರಿಂದ ಸರಕಾರದ ಬಗ್ಗೆ ಯಾರು ಅನುಮಾನದ ಮಾತುಗಳನ್ನಾಡುತ್ತಿದ್ದಾರೆ. ಅವರು ಕೇವಲ ರಾಜಕೀಯಕ್ಕಾಗಿ ಮಾತನಾಡುತ್ತಿದ್ದಾರೆ. ಇವತ್ತು ಮಾತನಾಡುವವರು 10 ದಿನಗಳ ಹಿಂದೆ ಯಾಕೆ ಮಾತನಾಡಲಿಲ್ಲ. ಸಮಯದ ಉಪಯೋಗ ಮಾಡಿಕೊಂಡು ಏನಾದ್ರು ಮಾಡುವ ಪ್ರಯತ್ನಿಸಿದರೆ ಅದರಿಂದ ಏನು ಲಾಭ ಆಗುವುದಿಲ್ಲ ಎಂದು ಧರ್ಮಸ್ಥಳ ಪ್ರಕರಣ ರಾಜಕೀಯಕ್ಕೆ ಬಳಸಿಕೊಳ್ಳುವವರಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಉದ್ದೇಶಪೂರ್ವಕವಾಗಿ ವರದಿ ತಪ್ಪು ಕೊಡುವುದಿಲ್ಲ

ನ್ಯಾ.ನಾಗಮೋಹನ್ ದಾಸ್ ಸಲ್ಲಿಕೆ ವರದಿ ಪರಿಪೂರ್ಣ

ಬಾಗಲಕೋಟೆ: ಯಾವುದೇ ಒಂದು ಆಯೋಗದ ವರದಿ ಬಂದಾಗ ಪರ ವಿರೋಧ ಸ್ವಲ್ಪ ಪ್ರಮಾಣದಲ್ಲಿ ಇರುತ್ತದೆ. ನ್ಯಾಯ ಕೊಡುವ ಪ್ರಶ್ನೆ ಬಂದಾಗ ಕೆಲವು ವಿಚಾರಗಳಲ್ಲಿ ಏರುಪೇರು ಸಹಜ. ನ್ಯಾ. ನಾಗಮೋಹನ್ ದಾಸ್ ಅವರು ನೀಡಿರುವ ವರದಿ ಪರಿಪೂರ್ಣವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನ್ಯಾ. ನಾಗಮೋಹನ್ ದಾಸ್ ಅವರು ನೀಡಿರುವ ವರದಿ ಚರ್ಚೆಯಲ್ಲಿದೆ. ಯಾರಿಗೂ ಅನ್ಯಾಯವಾಗದೇ ಶೇ. 99 ರಷ್ಟು ಸರಿಮಾಡುವ ಕೆಲಸ ನಮ್ಮ ಮಂತ್ರಿಮಂಡಲ, ಸಿಎಂ ಮಾಡುತ್ತಾರೆ. ಉದ್ದೇಶಪೂರ್ವಕವಾಗಿ ಯಾರೂ ವರದಿ ತಪ್ಪು ಕೊಡುವುದಿಲ್ಲ. ಸಣ್ಣಪುಟ್ಟ ಇದ್ದರೆ ಸರಿಮಾಡಿಕೊಳ್ಳೋಣ ಎಂದರು. ಒಳಮೀಸಲಾತಿ ಜಾರಿ ಮಾಡದಿದ್ದರೆ ಸಿಎಂ ಕ್ಷೇತ್ರದಲ್ಲಿ ಹೋರಾಟದ ಎಚ್ಚರಿಕೆ ವಿಚಾರಕ್ಕೆ ಉತ್ತರಿಸಿದ ಅವರು, ಉಗ್ರವಾದ ಹೋರಾಟ ನಡೆದಿರುತ್ತವೆ. ಹಿಂದೆ ಮಂಡಲ್ ವರದಿ ಬಂದಾಗ ಹೋರಾಟ ನಡೆದಿತ್ತು. ಆದರೆ, ನಮ್ಮ ಸರಕಾರ ತಾಯಿಯಂತೆ ಎಲ್ಲರ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳಲಿದೆ ಎಂದರು.

> ರಾಜ್ಯದಲ್ಲಿ ಮತ್ತೆ ಮದ್ಯದ ದರ ಹೆಚ್ಚಿಗೆ ಮಾಡುವ ಅಥವಾ ಕಡಿಮೆ ಮಾಡುವ ಯಾವ ಪ್ರಸ್ತಾವನೆ ಇಲ್ಲ. ಪ್ರಿಮಿಯಂ ಬ್ರ್ಯಾಂಡ್‌ಗಳು ಬೇರೆ ರಾಜ್ಯಕ್ಕಿಂತ ನಮ್ಮದು ಸ್ವಲ್ಪ ಹೆಚ್ಚಿದೆ. ಅದರ ಬಗ್ಗೆ ಗಮನ ಹರಿಸಬೇಕಿದೆ. ಗೋವಾದಲ್ಲಿ ಅಷ್ಟು ಕ್ವಾಲಿಟಿ ಡ್ರಿಂಕ್ ಇದೆ ಎಂದು ನನಗೆ ಅನಿಸಲ್ಲ. ಮಹಾರಾಷ್ಟ್ರ, ಗೋವಾ ಹಾಗೂ ಕರ್ನಾಟಕಕ್ಕೂ ಹೋಲಿಕೆ ಮಾಡಲು ಆಗಲ್ಲ.
>
> -ಆರ್.ಬಿ.ತಿಮ್ಮಾಪುರ, ಸಚಿವ

ಉತ್ತಮ ಅಧಿಕಾರಿಗಳ ಮೂಲಕ ನಡೆಯುತ್ತಿದೆ ತನಿಖೆ

ಎಡ ಸಂಘಟನೆಗಳಿಂದ ಒತ್ತಡ ಬಂದದ್ದು ನಿಜ: ಗುಂಡೂರಾವ್

ಮಂಗಳೂರು: ಧರ್ಮಸ್ಥಳ ಪ್ರಕರಣದ ತನಿಖೆ ನಡೆಸಲು ಒತ್ತಡ ಹಾಕಿದವರು ಎಡ ಸಂಘಟನೆಗಳು ಹೇಳಿದ್ದು ನಿಜ. ನಿವೃತ್ತ ನ್ಯಾಯಾಧೀಶ ಗೋಪಾಲಗೌಡರೂ ಒತ್ತಾಯಿಸಿದ್ದರು. ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರೂ ಎಸ್ಐಟಿ ತನಿಖೆಯಾದರೆ ಒಳ್ಳೆಯದು ಎಂದಿದ್ದರು ಎಂದು ದ.ಕ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ನಾನು ದ.ಕ. ಜಿಲ್ಲಾ ಪೊಲೀಸರೇ ತನಿಖೆ ಮಾಡುತ್ತಾರೆ, ಎಸ್ಐಟಿ ಅಗತ್ಯ ಇಲ್ಲ ಎಂದು ಹೇಳಿದ್ದೆ. ಆದರೆ ಎಸ್ಐಟಿ ಮಾಡಿದ್ದೇ ಒಳ್ಳೆಯದಾಯಿತು. ಇಲ್ಲವಾದರೆ ಸ್ಥಳೀಯ ಪೊಲೀಸರು ಸರಿಯಾಗಿ ಮಾಡಿಲ್ಲ ಎಂಬ ಗೂಬೆ ಕೂರಿಸುವ ಕೆಲಸ ಆಗುತ್ತಿತ್ತು. ಉತ್ತಮ ಅಧಿಕಾರಿಗಳ ಮೂಲಕ ಒತ್ತಡವಿಲ್ಲದೆ ತನಿಖೆ ನಡೆಯುತ್ತಿದೆ ಎಂದರು. ಬಿಜೆಪಿಯವರಿಗೆ ರಾಜಕೀಯ ಲಾಭ ನೋಡುವವರು. ಅವರಿಗೆ ಇಂತಹದ್ದೇ ವಿಷಯಗಳು ಬೇಕು. ಮೊದಲು 10 ದಿನ ಏನೂ ಮಾತನಾಡಿಲ್ಲ. ಈಗ ವಿಷಯಗಳು ಹೊರ ಬರುತ್ತಿರುವಾಗ ಅದನ್ನು ತಮ್ಮ ರಾಜಕೀಯ ಲಾಭಕ್ಕೆ ಹೇಗೆ ಉಪಯೋಗಿಸಿಕೊಳ್ಳಬಹುದು ಎಂಬುದು ಅವರ ಲೆಕ್ಕಾಚಾರ. ನಮಗೆ ಅದು ಬೇಕಾಗಿಲ್ಲ. ನಮಗೆ ಸತ್ಯಾಂಶ ಹೊರಬರಬೇಕು. ಬಿಜೆಪಿಯವರದ್ದು ಇದು ಹಳೆಯ ಚಾಳಿ. ಧಾರ್ಮಿಕ ವಿಚಾರವನ್ನು ಉಪಯೋಗಿಸಿಕೊಳ್ಳುವುದೇ ಅವರ ಚಾಳಿ ಎಂದರು.

> ಧರ್ಮಸ್ಥಳ ಪುಣ್ಯಕ್ಷೇತ್ರದ ಹೆಸರು ಕೆಡುತ್ತಿದೆ ಎಂಬ ವಿಚಾರಕ್ಕೂ ತನಿಖೆಗೂ ಸಂಬಂಧವೇ ಇಲ್ಲ. ಮಂಜುನಾಥ ಸ್ವಾಮಿ ಕ್ಷೇತ್ರದ ಪಾವಿತ್ರ್ಯತೆ ಹಾಳಾಗಿಲ್ಲ. ಕ್ಷೇತ್ರದಲ್ಲಿ ಅಗೆದಿಲ್ಲ. ಕಾಡಿನಲ್ಲಿ ಅಗೆದಿರುವುದು. ಬಿಜೆಪಿಯವರು ಅನಗತ್ಯವಾಗಿ ತಿರುಚಿ ಉದ್ದೇಶಪೂರ್ವಕವಾಗಿ ಹೆಸರು ಹಾಳು ಮಾಡುತ್ತಿದ್ದಾರೆ.
>
> -ದಿನೇಶ್ ಗುಂಡೂರಾವ್, ಸಚಿವ

ಪೊಲೀಸ್ ಅಧಿಕಾರಿ ಡಾ.ರಾಮಕೃಷ್ಣ ಮುದ್ದೇಪಾಲಗೆ ಉನ್ನತ ಗೌರವ

ಕರ್ತವ್ಯನಿಷ್ಠೆಗೆ ಒಲಿದ ರಾಷ್ಟ್ರಪತಿ ಪದಕ

ಶಿರಸಿ: ಜಿಲ್ಲೆಯ ಯಲ್ಲಾಪುರ ತಾಲೂಕಿನ ಗ್ರಾಮೀಣ ಭಾಗದಲ್ಲಿ ಕಲಿತು ಕೆಎಸ್‌ಪಿಎಸ್ ಹುದ್ದೆ ಪಡೆದು ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿ ರುವ

ಡಾ.ರಾಮಕೃಷ್ಣ ಮುದ್ದೇಪಾಲಗೆ ರಾಷ್ಟ್ರಪತಿ ಪದಕ ಒಲಿದು ಬಂದಿದೆ.

ಡಾ.ರಾಮಕೃಷ್ಣ ಅವರ ಕರ್ತವ್ಯ, ನಿಷ್ಠೆಯನ್ನು ಪರಿಗಣಿಸಿ ಕರ್ನಾಟಕದಿಂದ ರಾಷ್ಟ್ರಪತಿ ಪದಕಕ್ಕೆ ಆಯ್ಕೆ ಮಾಡಲಾಗಿದ್ದು, ಉತ್ತರ ಕನ್ನಡ ಜಿಲ್ಲೆಯ ಹೆಮ್ಮೆ ಇದೀಗ ರಾಷ್ಟ್ರ ಮಟ್ಟದಲ್ಲಿ ಮಿಂಚುವಂತಾಗಿದೆ. ಮೂಲತಃ ಯಲ್ಲಾಪುರದ ದೇಹಳ್ಳಿಯ ವರಾದ ಡಾ.ರಾಮಕೃಷ್ಣ ಪ್ರಾಥಮಿಕ ಶಾಲೆಯನ್ನು ಅಲ್ಲಿಯೇ ಕಲಿತಿದ್ದು, ಕನ್ನಡ ವಿದ್ಯಾಭ್ಯಾಸದಿಂದ ಶಾಲೆ ಆರಂಭಿಸಿ ಇದೀಗ ರಾಜ್ಯ ಹೆಮ್ಮೆ ಪಡುವಂತೇ ಕರ್ತವ್ಯ ನಿರ್ವಹಣೆಯಲ್ಲಿ ಶ್ರೇಷ್ಠತೆ ತೋರುತ್ತಿದ್ದಾರೆ.

ಯಲ್ಲಾಪುರದ ಮುದ್ದೇಪಾಲಿನ ವೆಂಕಟ್ರಮಣ ಭಟ್ ಹಾಗೂ ಅನಸೂಯ ದಂಪತಿಯ ಪುತ್ರರಾಗಿರುವ ಡಾ. ರಾಮಕೃಷ್ಣ ಅವರು ಕರ್ನಾಟಕ ರಾಜ್ಯ ಮೀಸಲು ಪೊಲೀಸ್‌ನಲ್ಲಿ ಎಸ್.ಪಿ. ದರ್ಜೆಯ ಕಮಾಂಡೆಂಟ್ ಆಗಿ ಬೆಂಗಳೂರಿನ 9ನೇ ಪಡೆಯಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದಾರೆ. ತಮ್ಮ ಪ್ರೌಢಶಾಲೆ ಯನ್ನು ವೈಟಿಎಸ್‌ಎಸ್ ಯಲ್ಲಾಪುರದಲ್ಲಿ, ಪಿಯುಸಿ ಯನ್ನು ಹುಬ್ಬಳ್ಳಿಯ ಜಾಬಿನ್ ಮಹಾವಿದ್ಯಾಲಯದಲ್ಲಿ ಹಾಗೂ ಪದವಿಯನ್ನು ಬೀದರ ಪಶು ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ ಪಡೆದುಕೊಂಡಿದ್ದಾರೆ. ಬಳಿಕ 2006 ರಲ್ಲಿ ಲೋಕಸೇವಾ ಆಯೋಗ ನಡೆಸುವ ಕೆ.ಎ.ಎಸ್. ಪರೀಕ್ಷೆಯ ಮೂಲಕ ಡಿವೈಎಸ್ಪಿ ಶ್ರೇಣಿಯ ಸಹಾಯಕ ಕಮಾಂಡೆಂಟ್ ಹುದ್ದೆಗೆ ನೇಮಕಗೊಂಡು ಬೆಳಗಾವಿ, ಕೊಪ್ಪಳ, ವಿಜಯಪುರ ಜಿಲ್ಲೆಗಳಲ್ಲಿ ವಿವಿಧ ಹುದ್ದೆ ನಿರ್ವಹಿಸಿ ಪ್ರಸ್ತುತ ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದಾರೆ.

ಮುಖ್ಯಮಂತ್ರಿ ಪದಕ: ಡಾ.ರಾಮಕೃಷ್ಣ ಅವರಿಗೆ ಈಗ ರಾಷ್ಟ್ರಪತಿ ಪದಕ ಒಲಿದು ಬಂದಿದ್ದರೂ 2012 ರಲ್ಲಿಯೇ ಮುಖ್ಯಮಂತ್ರಿ ಪದಕ ನೀಡಿ ಗೌರವಿಸಲಾಗಿದೆ. ಅಂದಿನ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಅವರು ಪದಕ ನೀಡಿ ಗೌರಿಸಿರುವುದು ಉಲ್ಲೇಖನೀಯ. ಇದಲ್ಲದೇ 2017 ರಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಅಧಿಕಾರಿಗಳ ಉನ್ನತ ಮಟ್ಟದ ನಿಯೋಗದ ಸದಸ್ಯರಾಗಿ ಜರ್ಮನಿಯ ಬವೇರಿಯಾಗೆ ತೆರಳಿ ಅಲ್ಲಿಯ ಪೊಲೀಸ್ ವ್ಯವಸ್ಥೆಯ ಕುರಿತು ಅಧ್ಯಯನ ಮಾಡಿ ಸರಕಾರಕ್ಕೆ ವರದಿ ಸಲ್ಲಿಸಿರುವ ಹೆಮ್ಮೆಯೂ ಇದೆ.

ಪತ್ರಕರ್ತರಾಗಿಯೂ ಕೆಲಸ

ಇನ್ನು ಪೊಲೀಸ್ ಇಲಾಖೆಯ ಜತೆಗೆ ವಿವಿಧ ಕ್ಷೇತ್ರಗಳಲ್ಲಿಯೂ ಸಾಧನೆ ಮಾಡಿದ ಗೌರವ ಡಾ.ರಾಮಕೃಷ್ಣ ಅವರದ್ದಾಗಿದೆ. ಪೊಲೀಸ್ ಇಲಾಖೆಯಲ್ಲಿ ಭರ್ತಿಯಾಗುವ ಪೂರ್ವದಲ್ಲಿ ಖಾಸಗಿ ವಲಯ ದಲ್ಲಿ ವಿಶೇಷವಾಗಿ ಪತ್ರಿ ಕೋದ್ಯಮ ವಿಭಾಗದಲ್ಲಿ ಕೆಲಸ ಮಾಡಿದ್ದು, 2003ರಲ್ಲಿ ವಿಶ್ವೇಶ್ವರ ಭಟ್ ಅವರು ವಿಜಯಕರ್ನಾಟಕ ಸಂಪಾದಕರಾಗಿದ್ದ ವೇಳೆ ರಾಮಕೃಷ್ಣ ಮುದ್ದೇಪಾಲ ಅವರು ವಿಜಯ ಟೈಮ್ಸ್ ಆಂಗ್ಲ ಪತ್ರಿಕೆಯಲ್ಲಿ ಉಪ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ ಎಂಬುದು ವಿಶೇಷ.

ಯಕ್ಷಗಾನದಲ್ಲಿ ಆಸಕ್ತಿ

ಪೊಲೀಸ್ ಇಲಾಖೆಯ ಕರ್ತವ್ಯ ನಿಷ್ಠೆಯ ಜೊತೆಗೆ ಯಕ್ಷಗಾನ ಭಾಗವತಿಕೆಯಲ್ಲಿ ಡಾ.ರಾಮಕೃಷ್ಣ ಅವರಿಗೆ ಆಸಕ್ತಿಯಿದ್ದು, ಗಂಡು ಕಲೆ ಯಕ್ಷಗಾನ ಉಳಿಸಬೇಕು ಎನ್ನುವುದೂ ಸಹ ಅವರ ಆಶಯವಾಗಿದೆ. ಹೀಗೆ ವಿವಿಧ ರಂಗದಲ್ಲಿ ಸೇವೆ ಸಲ್ಲಿಸಿ, ಆಸಕ್ತಿ ಹೊಂದಿರುವ ಅವರಿಗೆ ರಾಷ್ಟ್ರಪತಿ ಪದಕ ಒಲಿದು ಬಂದಿದೆ.

ಧರ್ಮಸ್ಥಳ ಪರಿಸರದಲ್ಲಿ ಶವಗಳ ಹೂತಿಟ್ಟ ಪ್ರಕರಣ | ಮುಂದೆಲ್ಲಿ ನಡೆಯಲಿದೆ ಶೋಧ? ಬುರುಡೆ ಬಿಡುತ್ತಿದ್ದಾನಾ ಮುಸುಕುಧಾರಿ?

ಮುಸುಕುಧಾರಿ ಗುರಿ ಠಾಣೆ, ಬಸ್‌ನಿಲ್ದಾಣ !

ಜಿತೇಂದ್ರ ಕುಂದೇಶ್ವರ, ಮಂಗಳೂರು

ಅನಾಮಿಕ ಮುಸುಕುಧಾರಿ ಬುರುಡೆ ಬಿಟ್ಟ ಗುಟ್ಟು ರಟ್ಟಾಗುತ್ತಿದ್ದಂತೆ ಇನ್ನೂ 13 ಸ್ಥಳಗಳಲ್ಲಿ ಬುರುಡೆ ಶೋಧ ನಡೆಸಲೇ ಬೇಕು ಎಂದು ಪಟ್ಟು ಹಿಡಿದಿದ್ದಾನೆ. ದೇವಸ್ಥಾನ, ಬಸ್ ನಿಲ್ದಾಣ ಮತ್ತು ಪೊಲೀಸ್ ಠಾಣೆ ಮತ್ತು ಆತ ಹಿಂದೆ ಕೆಲಸ ಮಾಡುತ್ತಿದ್ದ ಸಾರ್ವಜನಿಕ ಶೌಚಾಲಯದ ಬಳಿ ಸೇರಿ ಇನ್ನೂ ಹೆಚ್ಚಿನ ಪಾಯಿಂಟ್‌ಗಳನ್ನು ಹೇಳುತ್ತಿದ್ದಾನೆ.

ಮುಸುಕುಧಾರಿ ಅನಾಮಿಕ ವ್ಯಕ್ತಿಯು ಗುರುವಾರ ದೇವಸ್ಥಾನ ಆವರಣ ಬಳಿಕ ಪಾರ್ಕಿಂಗ್ ಸ್ಥಳದಲ್ಲಿ ಸ್ಥಳ ಮಹಜರಿಗೆ ತೆರಳಿರುವುದು ಭಕ್ತರಲ್ಲಿ ಆತಂಕ ಮೂಡುವಂತೆ ಮಾಡಿತ್ತು. ಈತನೇ ಹೇಳಿದ ಪ್ರಕಾರ ಈ ಮಾರ್ಕಿಂಗ್ ಮಾಡಿದ ಬಳಿ ತೋಡಿದ ಗುಂಡಿಗಳಲ್ಲಿ ನೂರಕ್ಕೂ ಹೆಚ್ಚು ಶವ ಸಿಗಬೇಕಿತ್ತು. 30 ಹೊಂಡಗಳಲ್ಲಿ 300 ಹೆಣ ಹೂತಿರುವುದಾಗಿ ಹೇಳಿದ್ದ. ಆದರೆ ಒಂದೇ ಒಂದು ಹೆಣ್ಣು ಅಸ್ಥಿಪಂಜರ ಲಭಿಸಿಲ್ಲ. ಆದರೂ ಈತ ಹೇಳಿದಂತೆ ಎಸ್ಐಟಿ ತಂಡ ಹೋದಲ್ಲಿ ಗುಂಡಿ ತೋಡುತ್ತಿದೆ.

ಭಾನುವಾರ ಬಿಜೆಪಿ ನಿಯೋಗ ಧರ್ಮಸ್ಥಳ ಭೇಟಿ ಮಾಡುವ ಹಿನ್ನೆಲೆಯಲ್ಲಿ ಹೊಂಡ ತೋಡುವ ಕಾರ್ಯಕ್ರಮ ಮುಂದೂಡಲಾದ ಮಾಹಿತಿ ಬಂದಿದೆ. ಆದರೆ ಎಸ್ಐಟಿ ಇನ್ನಿತರ ದಾಖಲೆ ಕ್ರೋಢೀಕರಣ ನಡೆಸಲಿದೆ. ಮುಸುಕುಧಾರಿ ಆತ ಹೂತಿದ್ದಾನೆ ಎಂದು ಹೇಳಲಾಗುವ ಸಮಾಧಿಯನ್ನು ಸೋಮವಾರ ಮಾರ್ಕಿಂಗ್ ಮಾಡಿ ಅಸ್ಥಿ ಉತ್ಖನನಕ್ಕೆ ಸಿದ್ಧತೆ ಮಾಡಲಾಗಿದೆ. ವಿಧಾನಸಭೆಯಲ್ಲಿ ಸೋಮವಾರ ಗೃಹಸಚಿವರು ಉತ್ತರ ಹೇಳುವ ಮುನ್ನ ಕೊನೆಯ ಅವಕಾಶವಾಗಿ ಆತ ಹೇಳಿದಂತೆ ರಾಜರಸ್ತೆಯ ಬಳಿಯ ಪೊಲೀಸ್ ಠಾಣೆ, ಕೆಎಸ್‌ಆರ್‌ಟಿಸಿ ಅಥವಾ ಶೌಚಾಲಯ ಬಳಿ ಹೊಂಡ ತೋಡುವುದು ಖಚಿತವಾಗಿದೆ. ಲೋಕಕ್ಕೆ ಮಂಕುಬೂದಿ ಎರಚಿದ ಈತನ ಪ್ರಕರಣ ರಾಜ್ಯಾದ್ಯಂತ ಢಾಣಾ ಡಂಗುರ ಹೊಡೆದರೂ ಮುಸುಕುಧಾರಿ ಮಾತ್ರ ದೃಶ್ಯಂ ಸಿನಿಮಾದಂತೆ ಪೊಲೀಸ್ ಠಾಣೆಯ ಅಡಿಭಾಗದಲ್ಲಿಯೇ ಹೆಣ ಹೂತಿರುವ ಕತೆಯಂತೆ ಇಲ್ಲಿಯೂ ಆದದ್ದಾಗಲಿ ಎಂದು ಗಿಮಿಕ್ ಮಾಡುತ್ತಿದ್ದನೇ ಎಂಬ ಸಂಶಯವೂ ಕಾಡುತ್ತಿದೆ.

ಸ್ಥಳೀಯ ತಂಡ ನಿರ್ದೇಶನ: ಸಾಕ್ಷಿ ರಕ್ಷಣೆಯಡಿ ಮಾಧ್ಯಮಗಳು ಮುಸುಕುಧಾರಿ ಹತ್ತಿರ ಸುಳಿಯದಂತೆ ಎಸ್ಐಟಿ ಬಂದೋಬಸ್ತ್ ಏರ್ಪಡಿಸಿದೆ. ಆದರೆ ರಾಷ್ಟ್ರೀಯ ಖಾಸಗಿ ವಾಹಿನಿಗೆ ಈತ ಸಂದರ್ಶನ ನೀಡಿ, ಹಳೆಯ ನೂರಾರು ಶವಗಳ ಕಟ್ಟುಕಥೆ ಜತೆ ತನ್ನ ಜತೆ ಹೂಳಲು ಬಂದವರ ಹೆಸರು ಹೇಳಿದ್ದಾನೆ. ಈ ಸಂದರ್ಭ ಸಂದರ್ಶನದ ಮಧ್ಯೆ ಧರ್ಮಸ್ಥಳ ವಿರೋಧಿ ತಂಡದ ಪ್ರಮುಖ ಹೋರಾಟಗಾರನೊಬ್ಬ ಪ್ರಾಮ್ಟ್ ಮಾಡುತ್ತಿರುವ ಸ್ವರ ಕೇಳಿಸಿದೆ. ಹೀಗಾಗಿ ಇವೆಲ್ಲವೂ ಧರ್ಮಸ್ಥಳ ಟಾರ್ಗೆಟ್ ಮಾಡುವ ತಂಡದ ನಿರ್ದೇಶನದಂತೆ ನಡೆದಿರುವುದಕ್ಕೆ ಪುಷ್ಟಿ ನೀಡಿದೆ. ಇದೇ ತಂಡವೇ ಧರ್ಮಸ್ಥಳ ತೇಜೋವಧೆಗೆ ಸ್ಥಳೀಯ ಮಟ್ಟದಲ್ಲಿ ಸಂಪನ್ಮೂಲ ಕ್ರೋಢೀಕರಿಸಿದ ಶಂಕೆ ವ್ಯಕ್ತವಾಗಿದೆ.



- ಮುಸುಕುಧಾರಿಯ ಮಂಪರು ಪರೀಕ್ಷೆ ಎಸ್ಐಟಿ ಚಿಂತನೆ
- ಈಗಾಗಲೇ ಗುರುತಿಸಿದ 13 ಸ್ಥಳಗಳಲ್ಲಿ ಭೂ ಉತ್ಖನನ
- ಬಸ್‌ಸ್ಟ್ಯಾಂಡ್, ಶೌಚಾಲಯ ಸೇರಿ ಹಲವೆಡೆ ಶೋಧಿಸಲು ಸಿದ್ಧತೆ

ಮುಸುಕುಧಾರಿಗೆ ಎರಡೇಟು ಬಿತ್ತು

ಎಸ್ಐಟಿಗೆ ಬರುವ ವೇಳೆಗೆ ಮುಖಕ್ಕೆ ಮುಸುಕು ವೇಷ ಹಾಕಿ ಸಿದ್ಧನಾಗುವ ಈತ ಹಗಲು ಇಡೀ ಎಸ್ಐಟಿ ಜತೆ ಇದ್ದು ಊಟ, ಪಾನೀಯ ಸೇವಿಸಿ ಬಳಿಕ ಹೋರಾಟಗಾರರ ಮನೆಯಲ್ಲಿ ತಂಗುತ್ತಿರುವುದು ಬೆಳಕಿಗೆ ಬಂದಿದೆ. ರಾತ್ರಿ ಪಾನೀಯ, ಪಾರ್ಟಿ ನಡೆಸಿ ಮುಂದಿನ ಕಾರ್ಯಾಲೋಚನೆ ಕುರಿತು ಮಂತ್ರಾಲೋಚನೆ ನಡೆಸಿದ ಬಳಿಕ ನಿದ್ದೆಗೆ ಜಾರುತ್ತಿದ್ದರು ಎನ್ನಲಾಗಿದೆ. ಆದರೆ ಈ ಸಂದರ್ಭ ಗಲಾಟೆಗಳೂ ನಡೆದಿವೆ. ಹೇಳಿದಂತೆ ಅಸ್ಥಿಪಂಜರವೂ ಸಿಕ್ಕಿಲ್ಲ. ನಿನಗೆ ಇಷ್ಟೆಲ್ಲ ಕೊಟ್ಟು ಕರೆಸಿಕೊಂಡದ್ದು ವ್ಯರ್ಥವಾಯಿತು ಎಂಬ ಆಕ್ರೋಶ, ಎರಡೇಟು ಬಿಗಿದ ಮಾಹಿತಿಯೂ ಹೊರಬಿದ್ದಿದೆ. ಈ ಹಿನ್ನೆಲೆಯಲ್ಲಿ ಇದ್ದಬದ್ದ ಕಡೆಯಲ್ಲಿ ಜಾಗ ತೋರಿಸುವ ತರಾತುರಿಗೆ ಬಿದ್ದಿರುವ ಸಾಧ್ಯತೆ ಇದೆ. ಆದರೆ ದಕ್ಷಿಣ ಕನ್ನಡ ಜಿಲ್ಲಾ ಎಸ್‌ಪಿ ಅರುಣ್ ಕುಮಾರ್ ಸೂಚಿಸಿದಂತೆ ಮೊದಲೇ ಮಂಪರು ಪರೀಕ್ಷೆಯಾಗಿದ್ದರೆ ಇಷ್ಟೆಲ್ಲ ನಾಟಕ ನಡೆಯುವ ಸಾಧ್ಯತೆ ಇರಲಿಲ್ಲ. ಇದೀಗ ಮಂಪರು ಪರೀಕ್ಷೆ ನಡೆಸುವ ಚಿಂತನೆಗೆ ಎಸ್ಐಟಿ ಬಂದಿದೆ.

ಮಹಾಮನೆ ತೊರೆದ ಅಪ್ಪ

ಶ್ರೀ ಶರಣಬಸವೇಶ್ವರ ಮಹಾದಾಸೋಹ ಸಂಸ್ಥಾನದ 8ನೇ ಪೀಠಾಧಿಪತಿಗಳು, ಮಹಾದಾಸೋಹಿ, ಶಿಕ್ಷಣದ ಸಂತ, ಪರಮಪೂಜ್ಯ ಶ್ರೀಡಾ.ಶರಣಬಸಪ್ಪ ಅಪ್ಪ ಅವರು ದೈವಾಧೀನರಾದ ಸುದ್ದಿ ಕೇಳಿ ಹೃದಯ ಭಾರವಾಗಿದೆ. ಬಸವ ತತ್ವ, ದಾಸೋಹ ಧರ್ಮ ಮತ್ತು ಸಮಾಜ ಸೇವೆಗೆ ಅರ್ಪಿಸಿಕೊಂಡ ಮಹಾನ್ ಸಾಧಕ.ಆತ್ಮಕ್ಕೆ ಶಾಂತಿ ನೀಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

- ಡಾ.ಅಜಯ್ ಸಿಂಗ್, ಕೆಕೆಆರ್‌ಡಿಬಿ ಅಧ್ಯಕ್ಷ

ನಮ್ಮ ನಾಡಿನ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಲಯಕ್ಕೆ ಅನುಪಮ ಸೇವೆ ಸಲ್ಲಿಸಿದ್ದ ಶೈಕ್ಷಣಿಕ ಮಹಾ ದಾಸೋಹಿ ಕಲಬುರಗಿಯ ಶ್ರೀಶರಣ ಬಸವೇಶ್ವರ ಸಂಸ್ಥಾನದ ಡಾ.ಶರಣ ಬಸವಪ್ಪನವರ ಅಗಲಿಕೆ ಸಮಸ್ತ ನಾಡಿನ ಹಾಗೂ ಸಮಾಜಕ್ಕೆ ತುಂಬಲಾರದ ದುಃಖವನ್ನುಂಟು ಮಾಡಿದೆ. ಅವರ ಸೇವೆ ಸಮಾಜದಲ್ಲಿ ಹಸಿರಾಗಿ ಶಾಶ್ವತವಾಗಿ ಉಳಿದಿದೆ. ಶರಣ ಹೃದಯದ ಅಪ್ಪಾಜಿಯವರ ಅಗಲಿಕೆ ನೋವು ತಂದಿದೆ.

- ಡಾ.ಪ್ರಭಾಕರ ಕೋರೆ, ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ

ಅಪ್ಪಾಜಿಯವರ ಅಗಲಿಕೆ ನಾಡಿನ ಕೋಟ್ಯಂತರ ಭಕ್ತರಿಗೆ ದುಃಖ ತಂದಿದೆ.ಅಗಲಿಕೆಯಿಂದ ನಾಡು ಒಬ್ಬ ಮಹಾ ಸಂತನನ್ನು ಕಳೆದುಕೊಂಡಿದೆ. ಸಮ ಸಮಾಜ ನಿರ್ಮಾಣ ಮಾಡುವಲ್ಲಿ ಅಪ್ಪಾಜಿಯವರ ಕೊಡುಗೆ ಅಪಾರವಾಗಿದೆ. ಯುವ ಜನತೆಗೆ ಆಸರೆಯಾಗಿ ಜೀವನ ಕಟ್ಟಿಕೊಳ್ಳಲು ದಾರಿಯಾಗಿ ಕ್ಷೇತ್ರವನ್ನು ಬಲವಾಗಿ ಕಟ್ಟಿದ್ದಾರೆ. ಅವರ ಆತ್ಮಕ್ಕೆ ಭಗವಂತ ಶಾಂತಿ ಕರುಣಿಸಲಿ.

- ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಧಾರ್ಮಿಕ, ಶೈಕ್ಷಣಿಕವಾಗಿ ಕಾರ್ಯ ಮಾಡಿ ಅಪ್ಪಾಜಿ ಅವರು ನಮ್ಮಿಂದ ದೂರವಾಗಿದ್ದಾರೆ. ಧಾರ್ಮಿಕ ಕ್ಷೇತ್ರದ ಧ್ರುವತಾರೆಯ ನಕ್ಷತ್ರ ಕಳೆದುಕೊಂಡಂತಾಗಿದೆ. ಅಪ್ಪಾಜಿಯವರ ಹಾಗೂ ಹಾರಕೂಡ್ ಮಠದ ನಡುವಿನ ಸಂಬಂಧ ಅನ್ಯೋನ್ಯವಾಗಿತ್ತು. ಭೌತಿಕವಾಗಿ ದೂರವಾದರು, ದಿವ್ಯ ಶಕ್ತಿಯಾಗಿ ನಮ್ಮೊಂದಿಗೆ ಇರಲಿದ್ದಾರೆ. ದಿವ್ಯ ಚೇತನದ ಆತ್ಮಕ್ಕೆ ಶಾಂತಿ ಪ್ರಾಪ್ತಿಯಾಗಲಿ.

-ಚನ್ನವೀರ ಶಿವಾಚಾರ್ಯರು,ಹಾರಕೂಡ ಸಂಸ್ಥಾನ, ಕಲಬುರಗಿ

ಕಲ್ಯಾಣ ಕರ್ನಾಟಕ ಭಾಗಕ್ಕೆ ಹಿಂದುಳಿದ ಹಣೆಪಟ್ಟಿ ಕಳಚಲು ಸಾಕಷ್ಟು ಶ್ರಮಿಸಿ, ಇಡೀ ಜೀವನ ಮುಡಿಪಾಗಿಟ್ಟರು. ಲಕ್ಷಾಂತರ ಮಕ್ಕಳ ಬಾಳಿಗೆ ಬೆಳಕಾಗಿ ಒಳ್ಳೆ ದಾರಿ ತೋರಿದ್ದಾರೆ. ಅಪ್ಪಾಜಿಯವರ ಶಿಕ್ಷಣ ಸಂಸ್ಥೆಯಲ್ಲೇ ಕಲಿತಿದ್ದಕ್ಕೆ ನಾನು ಇಂದು ರಾಜಕೀಯ ಕ್ಷೇತ್ರದಲ್ಲಿ ಬೆಳೆದಿದ್ದೇನೆ. ನಾವೆಲ್ಲರೂ ಶರಣಬಸವೇಶ್ವರರ ರೂಪದಲ್ಲಿ ಅಪ್ಪಾಜಿಯವರನ್ನು ಕಾಣೋಣ.

-ದತ್ತಾತ್ರೇಯ ಪಾಟೀಲ್ ರೇವೂರ್ ಮಾಜಿ ಶಾಸಕ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿ ಮಾಡಿದ ಅಪ್ಪಾಜಿ ಅಗಲಿಕೆ ನಮಗೆಲ್ಲಾ ನೋವು ತಂದಿದೆ. ಶರಣಬಸವೇಶ್ವರ ಸಂಸ್ಥಾನದ ಅಡಿಯಲ್ಲಿ ನಡೆಯುವ ಶಿಕ್ಷಣ ಸಂಸ್ಥೆಗಳಲ್ಲಿ 25 ಸಾವಿರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅಪ್ಪಾಜಿಯವರ ಆಶೀರ್ವಾದದಿಂದ ನಾಡಿನ ಹಲವು ಮಕ್ಕಳು ಉನ್ನತ ಸ್ಥಾನಕ್ಕೆ ತಲುಪಿದ್ದು, ಸಂಸ್ಥಾನದ ಶಕ್ತಿಯಾಗಿ ನಾವೆಲ್ಲರೂ ಜತೆಗಿರೋಣ.

-ಬಸವರಾಜ ಮತ್ತಿಮಡು ಶಾಸಕ, ಕಲಬುರಗಿ ಗ್ರಾಮೀಣ

ಧರ್ಮ, ಸಂಸ್ಕೃತಿ, ಆಧ್ಯಾತ್ಮ ಹಾಗೂ ಶಿಕ್ಷಣದಿಂದ ಕಲ್ಯಾಣ ಕರ್ನಾಟಕ ಭಾಗವನ್ನು ಕಳಸದ ಎತ್ತರಕ್ಕೆ ಬೆಳೆಸಿದ ಕೀರ್ತಿ ಲಿಂಗೈಕ್ಯರಾದ ಡಾ.ಶರಣಬಸವಪ್ಪ ಅಪ್ಪಾಜಿಗೆ ಸಲ್ಲುತ್ತದೆ. ಶಿಕ್ಷಣ ಕ್ಷೇತ್ರದ ತವರು ಮನೆಯಂತೆ ಕಲಬು ರಗಿಯನ್ನು ಮಾಡಿದ್ದಾರೆ. ಭಗವಂತ ಅವರ ಆತ್ಮಕ್ಕೆ ಶಾಂತಿ ನೀಡಲಿ.

- ಬಸವರಾಜ ಪಾಟೀಲ್,
ಸೇಡಂ ಮಾಜಿ ಸಂಸದ

ನಾಡಿಗೆ ದಾಸೋಹ ಪರಂಪರೆ ಪರಿಚಯಿಸುವ ಮೂಲಕ ಅದನ್ನು ಉತ್ತುಂಗಕ್ಕೆ ಬೆಳೆಸಿದ್ದಾರೆ. ದಾಸೋಹ ಪರಂಪರೆಗೆ ಹೊಸ ರೂಪ ಕೊಟ್ಟು, ಇತರರಿಗೆ ಮಾದರಿಯಾಗಿದ್ದಾರೆ. 1972ರಲ್ಲಿ ಪೋಸ್ಟ್ ಗ್ರಾ ್ಯಜುವೇಟ್ ಪ್ರಾರಂಭ ಮಾಡಿದ್ರು, 1982ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯ ಹುಟ್ಟು ಹಾಕಿದ್ದೆ ಡಾ.ಶರಣಬಸವಪ್ಪ ಅಪ್ಪಾಜಿ. ಅವರ ಆತ್ಮಕ್ಕೆ ಶಾಂತಿ ಸಿಗಲಿ.

-ಶಶೀಲ್ ನಮೋಶಿ, ವಿಧಾನ ಪರಿಷತ್ ಸದಸ್ಯ

ಶರಣಬಸವೇಶ್ವರ ಸಂಸ್ಥಾನದ 8ನೇ ಪೀಠಾಧಿಪತಿ ಶರಣಬಸಪ್ಪಾ ಅಪ್ಪಾ ಅವರ ಅಗಲಿಕೆಯಿಂದ ನಾಡಿಗೆ ತುಂಬಲಾರದ ನಷ್ಟವಾಗಿದೆ. ದಾಸೋಹ ಪರಂಪರೆ ನಾಡಿಗೆ ಸ್ಪೂರ್ತಿ ನೀಡಿದೆ. ದಾಸೋಹ ಪರಂಪರೆ ಜತೆಗೆ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ನಡೆಯೋಣ.

-ಡಿ.ಜಿ.ಸಾಗರ್ ರಾಜ್ಯಾಧ್ಯಕ್ಷ, ದಲಿತ ಸಂಘರ್ಷ ಸಮಿತಿ

9 ದಶಕಗಳ ಕಾಲ ಭೂಮಿ ಮೇಲೆ ದೇವ ಸ್ವರೂಪಿಯಾಗಿ ಧಾರ್ಮಿಕ ಕಾರ್ಯ ಮಾಡಿರುವ ಕೀರ್ತಿ ಶರಣಬಸಪ್ಪಾ ಅಪ್ಪಾಜಿಗೆ ಸಲ್ಲುತ್ತದೆ. ಶರಣರ ನಡೆದಾಡಿದ ನೆಲದಲ್ಲಿ ಅಪ್ಪಾಜಿ ನಡೆದಾಡಿದ್ದು, ನಮಗೆ ಹೆಮ್ಮೆ ವಿಷಯ.ಅವರ ದಾಸೋಹ ಪರಂಪರೆಯನ್ನು ನಾವು ಮುಂದುವರೆಸಿಕೊಂಡು ಹೋಗೋಣ.

-ಎಂ.ವೈ.ಪಾಟೀಲ್, ಶಾಸಕ

ಪೂಜ್ಯ ಡಾ.ಶರಣಬಸವಪ್ಪ ಅಪ್ಪ ಪಂಚಭೂತಗಳಲ್ಲಿ ಲೀನ I ದುಃಖದ ಮಡುವಿನಲ್ಲಿ ಮಿಂದೆದ್ದ ಭಕ್ತ ಸಾಗರ I ರಾಜಕೀಯ ಗಣ್ಯರು, ಲಕ್ಷಾಂತರ ಜನ ಸೇರಿ ಅಂತಿಮ ನಮನ

ಶಿಕ್ಷಣ ಸಂತನಿಗೆ ಕಣ್ಣೀರ ವಿದಾಯ..!

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಶರಣು. ಹೋಗಿಬನ್ನಿ ಅಪ್ಪಾಜಿ ಎಂದು ಭಕ್ತರು ಶ್ರೀ ಶರಣ ಬಸವೇಶ್ವರ ಸಂಸ್ಥಾನದ ಎಂಟನೇ ಪೀಠಾಧಿಪತಿ, ಅಕ್ಷರದಾಸೋಹಿ, ವಿದ್ಯಾಭಂಡಾರಿ ಪೂಜ್ಯ ಲಿಂಗೈಕ್ಯ ಡಾ. ಶರಣಬಸವಪ್ಪ ಅಪ್ಪ ಅವರಿಗೆ ಅಶ್ರುತರ್ಪಣದೊಂದಿಗೆ ಅಂತಿಮ ವಿದಾಯ ಹೇಳಿದರು.

ಗುರುವಾರ ಸಂಸ್ಥಾನದ ಅಪ್ಪಾಜಿ ಇನ್ನಿಲ್ಲ ಎನ್ನುವ ವಿಷಯ ತಿಳಿಯುತಲೇ ಶ್ರೀ ಶರಣಬಸವೇಶ್ವರ ದೇವಸ್ಥಾನಕ್ಕೆ ಶುಕ್ರವಾರ ಬೆಳಗಿನ ಜಾವದಿಂದಲೇ ಸಾವಿರಾರು ಭಕ್ತರು ಹರಿದು ಬಂದು, ಡಾ. ಶರಣಬಸವಪ್ಪ ಅಪ್ಪ ಅವರ ಅಂತಿಮ ನಮನಕ್ಕಾಗಿ ಸಾಲಿನಲ್ಲಿ ನಿಂತು ದರ್ಶನ ಪಡೆದು ಪುನೀತರಾದರು. ಹೂವಿನ ಹಾರ, ಬಸವನ ಕೊಂಬು, ಕರ್ಪೂರ, ಬಿಲ್ವಪತ್ರಿಗಳೊಂದಿಗೆ ಆಗಮಿಸಿದ ಭಕ್ತ ಸಾಗರ ಅಗಲಿದ ಶರಣ ಚೇತನಕ್ಕೆ ನಮಿಸಿದರು.

ಮುಖ್ಯಾಂಶಗಳು

- ಮಧ್ಯಾಹ್ನದ ವರೆಗೆ ಭಕ್ತರ ಅಂತಿಮ ದರ್ಶನ
- ಮಠಾಧೀಶರ ನೇತೃತ್ವದಲ್ಲಿ ವೀರಶೈವ-ಲಿಂಗಾಯತ ವಿಧಿವಿಧಾನ
- ದೊಡ್ಡಪ್ಪ ಅಪ್ಪ ಗದ್ದುಗೆ ಬಳಿ ಅಂತ್ಯಕ್ರಿಯೆ
- ಪಂಚಭೂತಗಳಲ್ಲಿ ಲೀನ - ಶರಣ ಪರಂಪರೆ ಅನುಸಾರ
- ಅನೇಕ ಗಣ್ಯರಿಂದ ಶ್ರದ್ಧಾಂಜಲಿ

ಡಾ. ಶರಣಬಸವಪ್ಪ ಅಪ್ಪ ಅವರ ದರ್ಶನ ಪಡೆಯಲು ಮಠಾಧೀಶರು, ರಾಜಕೀಯ ಮುಖಂಡರು, ಗಣ್ಯರು ಆಗ ಮಿಸಿದರು. ಸರಕಾರದ ಪರವಾಗಿ ಡಿಸಿಎಂ ಡಿಕೆ ಶಿವಕುಮಾರ್, ಜಿಲ್ಲಾ ಉಸ್ತು ವಾರಿ ಸಚಿವ ಪ್ರಿಯಾಂಕ್ ಖರ್ಗೆ ಆಗಮಿಸಿ ಸಕಲ ಸರಕಾರಿ ಗೌರವ ಸಲ್ಲಿಸಿ, ಅಪ್ಪಾಜಿ ಅವರ ಸಾಧನೆಗ ಳನ್ನು ಮೆಲಕು ಹಾಕಿದರು. ಈ ವೇಳೆ ಆಗಸದಲ್ಲಿ ಮೂರು ಸುತ್ತಿನ ಕುಶಾಲ ತೋಪು ಹಾರಿಸುವ ಮೂಲಕ ಗೌರವ ಸಲ್ಲಿಸಲಾಯಿತು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ಸಚಿವರಾದ ಈಶ್ವರ ಖಂಡ್ರೆ, ಶರಣಪ್ರಕಾಶ್ ಪಾಟೀಲ್, ಶಾಸಕರಾದ ಡಾ. ಅಜಯ್ ಸಿಂಗ್, ಎಂ.ವೈ ಪಾಟೀಲ್, ಬಿ.ಆರ್ ಪಾಟೀಲ್, ಖನೀಜ್ ಪತೀಮಾ, ಬಸವರಾಜ್ ಮತ್ತಿಮಡು, ಡಾ.ಅವಿನಾಶ್ ಜಾಧವ್, ಅಲ್ಲಮಪ್ರಭು ಪಾಟೀಲ್, ಶರಣು ಸಲಗರ, ಶೈಲೇಂದ್ರ ಬೆಲ್ದಾಳೆ, ಸಿದ್ದು ಪಾಟೀಲ್, ಚನ್ನಾರೆಡ್ಡಿ ಪಾಟೀಲ್ ತುನ್ನೂರ್, ಶರಣಗೌಡ ಕಂದಕೂರು, ಶಶೀಲ್ ನಮೋಶಿ, ಬಿಜಿ ಪಾಟೀಲ್, ಚಂದ್ರಶೇಖರ್ ಪಾಟೀಲ್, ದತ್ತಾತ್ರೇಯ ಪಾಟೀಲ್ ರೇವೂರ ರಾಜಕುಮಾರ್ ಪಾಟೀಲ್, ಶರಣು ಮೋದಿ ಸೇರಿ ಅನೇಕರು ದರ್ಶನ ಪಡೆದರು.

ಶುಕ್ರವಾರ ಬೆಳಗ್ಗೆ 7 ರಿಂದ ಮಧ್ಯಾಹ್ನ 4ಗಂಟೆ ವರೆಗೂ ಪಾರ್ಥಿವ ಶರೀರದ ದರ್ಶನಕ್ಕಾಗಿ ಸಾರ್ವಜನಿಕರಿಗೆ ಅನುವು ಮಾಡಿಕೊಡಲಾಗಿತ್ತು. ನಂತರ ಕುಟುಂಬಸ್ಥರು ಹಾಗೂ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ ಮಠಾಧೀಶರ ನೇತೃತ್ವದಲ್ಲಿ ವೀರಶೈವ ಪರಂಪರೆಯಂತೆ ಧಾರ್ಮಿಕ ವಿಧಿ-ವಿಧಾನಗಳು ನಡೆದವು.

ಅಧಿಕಾರ ಹಸ್ತಾಂತರ: ಸಂಪ್ರದಾಯದಂತೆ ಡಾ. ಶರಣಬಸವಪ್ಪ ಅಪ್ಪ ಅವರ ಸಂಪೂರ್ಣ ಅಧಿಕಾರವನ್ನು ಚಿ. ದೊಡ್ಡಪ್ಪ ಅಪ್ಪ ಅವರಿಗೆ ವರ್ಗಾಯಿಸಲಾಯಿತು. ಅಪ್ಪಾಜಿ ಅವರ ಕೊರಳಿನಲ್ಲಿನ ಲಿಂಗ, ಪರಷು ಬಟ್ಟಲು 9ನೇ ಪೀಠಾಧಿಪತಿ ಚಿ.ದೊಡ್ಡಪ್ಪ ಅವರಿಗೆ ಹಸ್ತಾಂತರಿಸಿ ಅಂತ್ಯಕ್ರಿಯೆ ಪ್ರಕ್ರಿಯೆ ಸಂಪನ್ನಗೊಳಿಸಲಾಯಿತು.

ಶರಣಬಸವೇಶ್ವರ ಸಂಸ್ಥಾನದ 8ನೇ ಮಹಾದಾಸೋಹ ಪೀಠಾಧಿಪತಿ ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರ ಪಾರ್ಥಿವ ಶರೀರಕ್ಕೆ ಕುಟುಂಬಸ್ಥರು ಅಂತಿಮ ನಮನ ಸಲ್ಲಿಸಿದರು.

ಪಲ್ಲಕ್ಕಿಯಲ್ಲಿ ಮೆರವಣಿಗೆ

ಸಾಯಂಕಾಲ ಬೆಳ್ಳಿ ಪಲ್ಲಕ್ಕಿಯಲ್ಲಿ ಅಪ್ಪಾಜೀ ಅವರ ಪಾರ್ಥಿವ ಶರೀರವನ್ನು ಐದು ಸುತ್ತು ದೇವಸ್ಥಾನದ ಪ್ರದಕ್ಷಿಣೆ ಹಾಕಲಾಯಿತು. ನಂತರ ವಿವಿಧ ಮಠಾಧೀಶರ ನೇತೃತ್ವದಲ್ಲಿ ವೀರಶೈವ ಧರ್ಮದ ಪ್ರಕಾರ ಶ್ರದ್ಧಾಪೂರ್ವಕ ವಿಧಿವಿಧಾನಗಳು ನೆರವೇರಿದವು. ಶರಣಬಸವೇಶ್ವರ ಸಂಸ್ಥಾನ ಸಂಸಾರಿಕ ಪೀಠವಾಗಿರುವ ಹಿನ್ನೆಲೆ, ಡಾ. ಶರಣಬಸವಪ್ಪ ಅಪ್ಪ ಅವರ ಕ್ರಿಯಾಸಮಾಧಿಗೆ ಮೂರು ಸೋಪಾನಗಳನ್ನು ನಿರ್ಮಿಸಿ, ಸಮಾಧಿಗೆ ಹತ್ತು ಸಾವಿರ ವಿಭೂತಿ ಅರ್ಪಣೆ, 1009 ರುದ್ರಾಕ್ಷಿ ಸಮರ್ಪಣೆ ಹಾಗೂ ಒಂದು ಲಕ್ಷಕ್ಕೂ ಹೆಚ್ಚು ಬಿಲ್ವಪತ್ರಿಗಳನ್ನು ಒಪ್ಪಿಸಿದರು.

ಕುಟುಂಬಸ್ಥರಿಂದ ನಮನ

ಡಾ. ಶರಣಬಸವಪ್ಪ ಅಪ್ಪ ಅವರ ಅಂತಿಮ ಕಾರ್ಯದಲ್ಲಿ ಅವರ ಧರ್ಮಪತ್ನಿ, ಮಾತೋಶ್ರೀ ಡಾ.ದಾಕ್ಷಾಯಿಣಿ ಅಪ್ಪ, ಮಹಾದಾಸೋಹ ಸಂಸ್ಥಾನದ 9ನೇ ಪೀಠಾಧಿಪತಿ ಚಿ.ದೊಡ್ಡಪ್ಪ ಅಪ್ಪ, ಗಂಗಾಂಬಿಕಾತಾಯಿ, ತೇಜಸ್ವಿನಿತಾಯಿ, ಉಮಾತಾಯಿ, ಗೋದುತಾಯಿ, ಪುತ್ರಿಯರಾದ ಕುಮಾರಿ ಶಿವಾನಿ, ಕುಮಾರಿ ಕೋಮಲಾದೇವಿ ಹಾಗೂ ಕುಮಾರಿ ಮಹೇಶ್ವರಿ ಹಾಗೂ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ್ ದೇಶಮುಖ, ಲಿಂಗರಾಜಪ್ಪ ಅಪ್ಪ ಹಾಗೂ ಸೊಸೆಯಂದಿರು, ಅಳಿಯಂದಿರು, ಮಮ್ಮೊಕ್ಕಳು ಸೇರಿ ಅಪಾರ ಭಕ್ತರು, ಬಂಧುಗಳು ಭಾಗಿಯಾಗಿ ನಮನ ಸಲ್ಲಿಸಿದರು.

ವೀರಶೈವ ವಿಧಿವಿಧಾನ

ಶ್ರೀಶರಣಬಸವೇಶ್ವರ ಸಂಸ್ಥಾನದ ಎಂಟನೇ ಪೀಠಾಧಿಪತಿ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜೀ ಅವರ ಅಂತ್ಯಕ್ರಿಯೆ ಸಕಲ ವಿಧಿವಿಧಾನ ಸಂಪ್ರದಾಯಾನುಸಾರವಾಗಿ ಜರುಗಿತು. ಹಾರಕೊಡದ ಶ್ರೀಗಳು, ಸಾರಂಗಧರ ದೇಶಿಕೇಂದ್ರ ಶ್ರೀಗಳು, ಬಳಗಂಪಿ ಶ್ರೀಗಳು, ಚೌದಾಪುರಿ ಶ್ರೀಗಳು, ಬಬಲಾದ ಶ್ರೀಗಳ ಸಮ್ಮುಖದಲ್ಲಿ ಸೋಮನಾಥ ಶಾಸ್ತ್ರಿಗಳ ನೇತೃತ್ವದಲ್ಲಿ ಸಕಲ ಧಾರ್ಮಿಕ ವಿಧಿವಿಧಾನ ನಡೆದವು. ಇದಕ್ಕೂ ಮುನ್ನ, ಶುಕ್ರವಾರ ಬೆಳಗಿನ ಜಾವ ಬ್ರಾಹ್ಮಿ ಮುಹೂರ್ತದಲ್ಲಿ ಅಪ್ಪಾಜೀ ಅವರ ಪಾರ್ಥಿವ ಶರೀರಕ್ಕೆ ಮಂಗಳ ಸ್ನಾನ, ಬಿಲ್ವಾರ್ಚನೆ, ಮಂಗಳಾರತಿ ನಡೆಯಿತು.

ಲಕ್ಷಾಂತರ ಭಕ್ತರ ನಮನ

ಡಾ.ಶರಣಬಸವಪ್ಪ ಅಪ್ಪ ಲಿಂಗೈಕ್ಯ ಹಿನ್ನೆಲೆಯಲ್ಲಿ ಕಲಬುರಗಿ, ಬೀದರ್, ಯಾದಗಿರಿ, ಕೊಪ್ಪಳ, ರಾಯಚೂರು, ಗದಗ, ಬಳ್ಳಾರಿ ಸೇರಿ ನಾಡಿನ ವಿವಿಧೆಡೆಯಿಂದ ಲಕ್ಷಾಂತರ ಭಕ್ತರು ಆಗಮಿಸಿ, ದರ್ಶನ ಪಡೆದರು. ಮಹಿಳೆಯರು, ಮಕ್ಕಳು, ಪುರುಷರಿಗೆ ಪ್ರತ್ಯೇಕ ಮೂರು ಸರತಿಯಲ್ಲಿ ದರ್ಶನಕ್ಕೆ ಅವಕಾಶ ನೀಡಿದ್ದರಿಂದ ಎಲ್ಲರೂ ಶಾಂತಿ, ಸಮಾಧಾನದಿಂದ ದರ್ಶನ ಪಡೆದರು. ಹಲವು ಗ್ರಾಮಗಳ ಭಕ್ತರು ಡೊಳ್ಳು, ಹಲಗೆ ಮೇಳ, ಭಜನಾ ಮೇಳದೊಂದಿಗೆ ಸರತಿಯಲ್ಲಿಯೇ ತಮ್ಮ ಕಲಾ ಪ್ರದರ್ಶನದ ನಮನ, ಭಜನೆಯ ಗಾಯನದೊಂದಿಗೆ ಭಕ್ತಿ ಅರ್ಪಿಸಿದರು. ಸುಮಾರು 3 ಲಕ್ಷ ಜನರು ಅಂತಿಮ ದರ್ಶನ ಪಡೆದರು.

ಅಪ್ಪಾಜಿ ಜೀವನದ ಹಾದಿ

1935
ನವೆಂಬರ್ 14 ಕಲಬುರಗಿ, ಶರಣಬಸವೇಶ್ವರ ಮಹಾದಾಸೋಹ ಪೀಠದ 7ನೇ ಪೀಠಾಧಿಪತಿ ಪೂಜ್ಯ ದೊಡ್ಡಪ್ಪ ಅಪ್ಪಾಜಿ ಮತ್ತು ಮಾತೋಶ್ರೀ ಗೋದುತಾಯಿ ದಂಪತಿಗಳ ಪುತ್ರರಾಗಿ ಜನನ.

1948
ಬಾಲಕ ಕವಿಯಾಗಿ ಗುರುತಿಸಿಕೊಂಡರು; ಆಲ್ ಇಂಡಿಯಾ ರೇಡಿಯೋ ಹೈದರಾಬಾದ್ ಆಯೋಜಿಸಿದ ಮಕ್ಕಳ ಕಾವ್ಯ ಸ್ಪರ್ಧೆ ಯಲ್ಲಿ ಪೆನ್ಸಿಲ್ ಕವಿತೆಗೆ ಅತ್ಯುತ್ತಮ ಕವಿತೆ ಪ್ರಶಸ್ತಿ.

1957
ಫೆಬ್ರವರಿ 1 ಮಾತೋಶ್ರೀ ಕೋಮಲಾದೇವಿ ಅವರೊಂದಿಗೆ ವಿವಾಹ.

1971
ಶರಣಬಸವೇಶ್ವರ ವಸತಿ ಶಾಲೆಯ ಪ್ರಾರಂಭ - ಹೈದರಾಬಾದ್ ಕರ್ನಾಟಕದ ಮೊದಲ ಮಾದರಿ ವಸತಿ ಶಾಲೆ.

1974
ವೀರಶೈವ ಮಹಾಸಭಾದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ.

1975
ಲಲಿತಕಲಾ ವಿಭಾಗ ಸ್ಥಾಪನೆ - ದಕ್ಷಿಣ ಭಾರತದ ಮೊದಲ ಖಾಸಗಿ ಲಲಿತಕಲಾ ವಿಭಾಗ.

1983
ಶರಣಬಸವೇಶ್ವರ ಮಹಾದಾಸೋಹ ಪೀಠದ 8ನೇ ಪೀಠಾಧಿಪತಿಯಾಗಿ ಪೀಠಾರೋಹಣ.

1988
ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ.

1989
ಕಲಬುರಗಿಯಲ್ಲಿ 59ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿ ಆಯೋಜನೆ.

1991
ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರಾಗಿ ಆಯ್ಕೆ.

1999
ಗೌರವ ಡಾಕ್ಟರೇಟ್ (ಗುಲ್ಬರ್ಗಾ ವಿಶ್ವವಿದ್ಯಾಲಯ).

2002
ಮಾರ್ಚ್ 4 ಪುಣ್ಯಶ್ಲೋಕ ಶಿವ-ಪಾರ್ವತಿ ಆಧ್ಯಾತ್ಮಿಕ ಪ್ರಶಸ್ತಿ (ನಾಸಿಕ್).

2003
ಏಪ್ರಿಲ್ 28 ಸಂಸತ್ ಭವನ, ನವದೆಹಲಿ - ಬಸವೇಶ್ವರರ 18 ಅಡಿ ಎತ್ತರದ ಕಂಚಿನ ಪ್ರತಿಮೆ ಅನಾವರಣ.

2010
ಪ್ರವಾಸೋದ್ಯಮ ವಿಭಾಗ ಪ್ರಾರಂಭ - ಉತ್ತರ ಕರ್ನಾಟಕದ ಪ್ರವರ್ತಕ ಸಂಸ್ಥೆ.

2017
ಶರಣಬಸವ ವಿಶ್ವವಿದ್ಯಾಲಯ ಸ್ಥಾಪನೆ - ಕುಲಪತಿಯಾಗಿ ಸೇವೆ.

2022
ಅಕ್ಟೋಬರ್ 2 ಶ್ರೀ ಚನ್ನರೇಣುಕ ಬಸವ ಪ್ರಶಸ್ತಿ ಪ್ರದಾನ.

2024
ಜನವರಿ 1 ಗೌಡ ಪ್ರಶಸ್ತಿ ಪ್ರದಾನ.

2025
ಆಗಸ್ಟ್ 15 ಲಿಂಗೈಕ್ಯ.

ತಂದೆಯ ಸಮಾಧಿ ಪಕ್ಕದಲ್ಲೇ ಪುತ್ರನ ಕ್ರಿಯಾಸಮಾಧಿ ನಿರ್ಮಾಣ I ಅನಂತಲೋಕಕ್ಕೆ ಅಪ್ಪಾಜಿ ಪಯಣ

ಅಧಿಕಾರ ವಹಿಸಿಕೊಂಡ ಚಿ.ದೊಡ್ಡಪ್ಪ ಅಪ್ಪ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಶರಣಬಸವೇಶ್ವರ ಸಂಸ್ಥಾನದ 8ನೇ ಮಹಾದಾಸೋಹ ಪೀಠಾಧಿಪತಿ ಹಾಗೂ ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿ ಪೂಜ್ಯ ಡಾ. ಶರಣಬಸವಪ್ಪ ಅಪ್ಪ ಅವರ ಪಾರ್ಥಿವ ಶರೀರವನ್ನು, ಅವರ ತಂದೆ 7ನೇ ಪೀಠಾಧಿಪತಿ ಲಿಂಗೈಕ್ಯ ದೊಡ್ಡಪ್ಪ ಅಪ್ಪಾಜಿ ಅವರ ಸಮಾಧಿಯ ಪಕ್ಕದಲ್ಲಿ ಶುಕ್ರವಾರ ಸಕಲ ಸರಕಾರಿ ಗೌರವಗಳೊಂದಿಗೆ ಅಂತ್ಯಸಂಸ್ಕಾರ ನೆರವೇರಿತು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೇರಿದಂತೆ ಹಲವು ಗಣ್ಯರು ಹಾಜರಿದ್ದರು. ಡಿ.ಕೆ. ಶಿವಕುಮಾರ್ ಅವರು ರಾಜ್ಯ ಸರಕಾರದ ಪರವಾಗಿ ಗೌರವ ಸೂಚಕವಾಗಿ ಗಾಳಿಯಲ್ಲಿ ಮೂರು ಸುತ್ತಿನ ಗುಂಡು ಹಾರಿಸಿ ನಮನ ಸಲ್ಲಿಸಿದರು. ಹಾರಕೂಡ ಮಠದ ಶ್ರೀ ಚೆನ್ನವೀರ ಶಿವಾಚಾರ್ಯರು ಹಾಗೂ ವಿವಿಧ ಮಠಾಧೀಶರ ನೇತೃತ್ವದಲ್ಲಿ ವೀರಶೈವ ಸಾಂಪ್ರದಾಯದಂತೆ ವಿಧಿವಿಧಾನ ನೆರವೇರಿಸಲಾಯಿತು. ಹತ್ತು ಸಾವಿರ ವಿಭೂತಿ, ಒಂದು ಲಕ್ಷ ಬಿಲ್ವಪತ್ರೆ, 1008 ರುದ್ರಾಕ್ಷಿ, ನೂರಾರು ಔಷಧಿ ಗಿಡಗಳ ಬಳಕೆಯಿಂದ ಪಾರ್ಥಿವ ಶರೀರಕ್ಕೆ ಪೂಜೆ ಸಲ್ಲಿಸಲಾಯಿತು. ಬೆಳ್ಳಿ ಪಲ್ಲಕ್ಕಿಯಲ್ಲಿ ಅಲಂಕರಿಸಿದ ಪಾರ್ಥಿವ ಶರೀರವನ್ನು ಶರಣಬಸವೇಶ್ವರ ದೇವಾಲಯದ ಸುತ್ತ ಐದು ಸುತ್ತು ಪ್ರದಕ್ಷಿಣೆ ಹಾಕಿ ಸಮಾಧಿ ಸ್ಥಳಕ್ಕೆ ತರಲಾಯಿತು. ಸಮಾಧಿ ವಿಧಿವಿಧಾನ ವೇಳೆ, ಅಪ್ಪಾಜಿಯವರ ಧರಿಸಿದ್ದ ಪೇಠ ಮತ್ತು ಕೊರಳಿನ ಲಿಂಗವನ್ನು ಪುತ್ರ ಚಿರಂಜೀವಿ ದೊಡ್ಡಪ್ಪ ಅಪ್ಪ ಅವರಿಗೆ ಹಸ್ತಾಂತರಿಸುವ ಮೂಲಕ 9ನೇ ಪೀಠಾಧಿಪತಿಯಾಗಿ ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದರು.

ದಾಸೋಹ ಕ್ಷೇತ್ರಕ್ಕೆ ಹೊಸ ರೂಪ ನೀಡಿದ ಪೀಠಾಧಿಕಾರಿ: ಶರಣಬಸವೇಶ್ವರ ದೇವಸ್ಥಾನದ ತ್ರಿಕಾಲ ಪೂಜೆ, ಪಾಠ, ಪ್ರವಚನ ನಡೆಸಿಕೊಂಡು ಬಂದರು. ದೇವಾಲಯದ ಪ್ರಾಕೃತಿಕ ಸೌಂದರ್ಯ ಹೆಚ್ಚಿಸಿ ಪಾವಿತ್ರತೆ ಮನೋಭಾವ ಬೆಳೆಸಿದ ಹರಿಕಾರರು. ಮೂರು ಹಂತಕ್ಕೆ ನಿಂತ್ತಿದ್ದ ಗೋಪುರವನ್ನು ಡಾ.ಅಪ್ಪ ಐದು ಹಂತಗಳಾಗಿಸಿ, ಕಲಾತ್ಮಕವಾಗಿ ರೂಪಿಸಿ ಇಡೀ ಗೋಪುರವನ್ನು ನವೀಕರಣಗೊಳಿಸಿ ಇಂದು ದಕ್ಷಿಣ ಭಾರತದಲ್ಲಿ ಅತಿ ಎತ್ತರವಾದ ಸುವರ್ಣ ಗೋಪುರ ನಿರ್ಮಿಸಲು ಅಡಿಗಲ್ಲಿಟ್ಟು, ಯಶಸ್ವಿಯಾದರು. ಲಾಲಧರಿ ಕಲ್ಲುಗಳನ್ನು ಹಾಸಿ ಭಕ್ತರ ಕಾಲಿಗೆ ಬಿಸಿಲಿನ ಬೇಗೆ ಬರದಂತೆ ತಡೆದರು. ಗಾಜಿನ ಅಲಂಕಾರ ಮಾಡುವ ಮೂಲಕ ದೇವಾಲಯದ ಮುಖ ಮಂಟಪದ ಸೌಂದರ್ಯ ಹೆಚ್ಚಿಸಿದರು.

ಹಾರಕೋಡ ಶ್ರೀಗಳ ನೇತೃತ್ವದಲ್ಲಿ ಚಿರಂಜೀವಿ ದೊಡ್ಡಪ್ಪ ಅಪ್ಪ ಅವರಿಗೆ ಅಧಿಕಾರಿ ಹಸ್ತಾಂತರಿಸುವ ಪ್ರಕ್ರಿಯೆ ಜರುಗಿತು.

ಅಪ್ಪಾಜಿ ಕುರಿತು ಗಣ್ಯರ ಪ್ರಶಂಸೆ

14ನೇ ವಯಸ್ಸಿನಲ್ಲಿ ಅರ್ಚನ, ಅರ್ಪಣ, ದಾಸೋಹ ಕಾರ್ಯದಲ್ಲಿ ತೊಡಗಿಸಿಕೊಂಡ ಅಪ್ಪ ಅವರು ಆಧುನಿಕ ಜಗತ್ತಿಗೆ 21 ದಾಸೋಹ ಸೂತ್ರಗಳ ಮೂಲಕ ಆಧ್ಯಾತ್ಮಿಕ ಸಾರ ನೀಡಿದ್ದಾರೆ. ಇದನ್ನು ನೋಡಿದ ಅಮೆರಿಕ ದೇಶದ ಚಿಕಾಗೊ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕರಾದ ಡಾ.ಜುದಿತ್ ಕ್ರೈಲ್ ಪ್ರಶಂಸಿದ್ದಾರೆ. ಪ್ರಸಿದ್ಧ ರಾಜಕಾರಣಿ ಹಾಗೂ ಪತ್ರಿಕೋದ್ಯಮಿ ಎಂ.ಜೆ.ಅಕ್ಬರ್ ಅವರು, ಡಾ.ಅಪ್ಪಾ ಅವರ ದಾಸೋಹ ಸೂತ್ರಗಳು ಭಾವೈಕ್ಯದ ಪ್ರತಿಕವಾಗಿವೆ ಎಂದಿದ್ದಾರೆ. ಹೆಸರಾಂತ ಪತ್ರಿಕೋದ್ಯಮಿ ಎಂ.ವಿ.ಕಾಮತ್ ಅವರು, ಈ ದಾಸೋಹ ಸೂತ್ರಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸುವುದರೊಂದಿಗೆ ಆಧುನಿಕ ತತ್ವ ಜ್ಞಾನಿಗಳ ಸಾಲಿನಲ್ಲಿ ಅಪ್ಪ ಅವರು ನಿಸ್ವಾರ್ಥ ಸೇವೆಗಾಗಿ ಮಂಚೂಣಿಯಲ್ಲಿ ಕಾಣಿಸಿಕೊಳ್ಳುತ್ತಾರೆ ಎಂದಿದ್ದಾರೆ. ಕರ್ನಾಟಕ ವಿಶ್ವವಿದ್ಯಾನಿಲಯದ ನಿವೃತ್ತ ಕುಲಪತಿ ಡಾ.ಆರ್.ಸಿ.ಹಿರೇಮಠ ಅವರು ವಿಶ್ವವಿದ್ಯಾಲಯದಲ್ಲಿ ನಡೆಯಲಾರದಷ್ಟು ಸಾಹಿತ್ಯಿಕ, ಸಾಂಸತಿಕ, ಆಧ್ಯಾತ್ಮಿಕ ಚಟುವಟಿಕೆಗಳು ಪೂಜ್ಯ ಡಾ.ಶರಣಬಸಪ್ಪ ಅಪ್ಪಾ ಅವರ ದಾಸೋಹ ಕ್ಷೇತ್ರದಲ್ಲಿ ನಡೆಯುತ್ತವೆ ಎಂದು ಹೇಳಿದ್ದಾರೆ.

ನಿರಂತರವಾಗಿ ನಡೆದ ದಾಸೋಹ

ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜೀ ಲಿಂಗೈಕ್ಯದ ಹಿನ್ನೆಲೆಯಲ್ಲಿ, ಮಹಾದಾಸೋಹ ಮನೆಯಲ್ಲಿ ಅವರ ಆಸೆಯಂತೆ ಅನ್ನದಾಸೋಹ ನಿರಂತರವಾಗಿ ಸಾಗಿತು. ದೂರದೂರಿನಿಂದ ಆಗಮಿಸಿದ ಸಾವಿರಾರು ಭಕ್ತರಿಗೆ ಹಸಿವಿನಿಂದ ಯಾರೂ ಇರಬಾರದು ಎಂಬ ಅಪ್ಪಾಜೀ ಅವರ ತತ್ವದಂತೆ ಒಂದು ಕ್ವಿಂಟಾಲ್ ಅನ್ನ, ಸಾಂಬಾರ ಮತ್ತು ಒಂದು ಕ್ವಿಂಟಾಲ್ ಸಜ್ಜುವನ್ನು ವಿಶೇಷ ವಾಗಿ ತಯಾರಿಸಲಾಯಿತು. ಬೆಳಗಿನ ಉಪಹಾ ರಕ್ಕಾಗಿ ಭಕ್ತರಿಗಾಗಿ ಉಪ್ಪಿಟ್ಟು ಮಾಡಲಾಗಿತ್ತು. ಅದನ್ನು ಸರತಿ ಸಾಲಿನಲ್ಲಿ ನಿಂತು ಸವಿದರು. ಡಾ.ಶರಣಬಸವಪ್ಪ ಅಪ್ಪಾಜೀ ತಮ್ಮ ಜೀವಿತಾವಧಿಯೆಲ್ಲ ದಾಸೋಹ ಧರ್ಮದ ಅಂಗವೆಂದು ಪೋಷಿಸಿದ್ದರು. ಆ ತತ್ವಕ್ಕೆ ತಕ್ಕಂತೆ, ಅವರ ಲಿಂಗೈಕ್ಯದ ದಿನವೂ ಭಕ್ತ ರಿಗೆ ಅನ್ನ ದಾಸೋಹ ವ್ಯವಸ್ಥೆ ಮಾಡಲಾಗಿತ್ತು. ಭೋಜನ ಮಂದಿ ರದಲ್ಲಿ ಭಕ್ತರು ಭಾವಪೂರ್ಣದೊಂದಿಗೆ ಅನ್ನ ಪ್ರಸಾದ ಸೇವಿಸಿದರು.

ಅಪ್ಪಾಜಿ ಅವರಿಗೆ ದರ್ಶನಕ್ಕೆ ಸರತಿ ಸಾಲಿನಲ್ಲಿ ನಿಂತಿದ್ದ ಭಕ್ತರು.

ಕುಶಾಲುತೋಪು ಹಾರಿಸಿ ಪೊಲೀಸರಿಂದ ಗೌರವ.

ಡಿಸಿಎಂ ಡಿಕೆಶಿ ಅವರಿಂದ ಅಪ್ಪಾಜಿ ಅವರ ಅಂತಿಮ ದರ್ಶನ.

ಮಣ್ಣಲ್ಲಿ ಮಣ್ಣಾದ ಪೂಜ್ಯ ಲಿಂಗೈಕ್ಯ ಡಾ. ಶರಣಬಸವಪ್ಪ ಅಪ್ಪ

ವಿಶ್ವವಾಣಿ ಸಂಪಾದಕೀಯ

ಇನ್ನಷ್ಟು ಬೇಟೆ ನಡೆಯಲಿ

'ಪ್ಯಾರಿಮ್ಯಾಚ್ ಡಾಟ್ ಕಾಮ್' ಹೆಸರಿನ ಸೈಪ್ರಸ್ ಮೂಲದ ಅಕ್ರಮ ಆನ್‌ಲೈನ್ ಬೆಟ್ಟಿಂಗ್ ಸಂಸ್ಥೆಯು ಭಾರತದಲ್ಲಿ ಕಾರ್ಯಾಚರಣೆ ನಡೆಸುತ್ತಿರುವುದನ್ನು ಗಮನಿಸಿದ ಜಾರಿ ನಿರ್ದೇಶನಾಲಯ (ಇ.ಡಿ), ಅದರ ಮೇಲೆ ದಾಳಿ ನಡೆಸಿರುವುದು ಶ್ಲಾಘನೀಯ. ಇದರ ಭಾಗವಾಗಿ ಸಂಸ್ಥೆಯ ಬ್ಯಾಂಕ್ ಖಾತೆಯಲ್ಲಿದ್ದ 110 ಕೋಟಿ ರುಪಾಯಿ ಹಣವನ್ನು ಜಪ್ತಿ ಮಾಡಿ, ಈ ಸಂಸ್ಥೆಗೆ ವಿತರಣೆಯಾಗಿದ್ದ 1,200 ಕ್ರೆಡಿಟ್ ಕಾರ್ಡ್‌ಗಳನ್ನೂ ಇ.ಡಿ ವಶಪಡಿಸಿಕೊಂಡಿದೆ ಎಂದು ತಿಳಿದುಬಂದಿದೆ. 'ಟಿಪ್ ಆಫ್ ದಿ ಐಸ್‌ಬರ್ಗ್' ಎನ್ನುವಂತೆ, ಸದರಿ 'ಪ್ಯಾರಿಮ್ಯಾಚ್' ಸಂಸ್ಥೆಯು ಇಂಥ ಅಕ್ರಮ ಸಂಸ್ಥೆಗಳ ಜಾಲದಲ್ಲಿನ ಒಂದು ಕೊಂಡಿಯಷ್ಟೇ. ಮೈಕೊಡವಿಕೊಂಡು ಆಳಕ್ಕಿಳಿದು ಒಮ್ಮೆ ಬಗೆದುನೋಡಿದರೆ, ಇದನ್ನೂ ಮೀರಿಸುವ ಆನ್‌ಲೈನ್ ಬೆಟ್ಟಿಂಗ್ ಸಂಸ್ಥೆಗಳ ಆಗಾಧ ಕಾರ್ಯಾಚರಣೆಗಳ ಜಾಲ ಅರಿವಿಗೆ ಬಂದೀತು. ಸಂಬಂಧಪಟ್ಟವರು ಮುಂಜಾಗ್ರತಾ ಕ್ರಮವಾಗಿ ಎಷ್ಟೇ ಬುದ್ಧಿವಾದ ಹೇಳಿದರೂ, ಕೆಲವೇ ದಿನಗಳಲ್ಲಿ ಕುಬೇರರಾಗಿಬಿಡುವ ಹುಕಿಯೊಂದಿಗೆ ಇಂಥ ಕೆಲವೊಂದು ಆನ್‌ಲೈನ್ ಬೆಟ್ಟಿಂಗ್ ತಾಣಗಳ ಬಲೆಗೆ ಸಿಲುಕಿ ಹಣ ಮತ್ತು ಭವಿಷ್ಯ ಎರಡನ್ನೂ ಕಳೆದುಕೊಂಡವರು ಸಾಕಷ್ಟಿದ್ದಾರೆ. ಇಂಥ ತಾಣಗಳ ಜಾಹೀರಾತಿನಲ್ಲಿ ಸಿನಿಮಾ ತಾರೆಯರು, ಕ್ರೀಡಾಪಟುಗಳು ಸೇರಿದಂತೆ ಸೆಲೆಬ್ರಿಟಿ ವಲಯದ ಸಾಕಷ್ಟು ಮಂದಿ ಕಾಣಿಸಿ ಕೊಳ್ಳುವುದರಿಂದ, ಆಯಾ ವಲಯದ ಅಭಿಮಾನಿಗಳು ಅವಕ್ಕೆ ಸುಲಭದಲ್ಲಿ ಸಿಕ್ಕಿಬೀಳುವ ಮಿಕಗಳಾಗಿಬಿಡುತ್ತಾರೆ. 'ಪ್ಯಾರಿಮ್ಯಾಚ್' ಸಂಸ್ಥೆಯ ಮೇಲೆ ನಡೆದಿರುವ ದಾಳಿ ಅಷ್ಟಕ್ಕೇ ನಿಲ್ಲದೆ, ಅಂಥ ಇನ್ನಿತರ ಅಕ್ರಮ ಸಂಸ್ಥೆಗಳ ಮೇಲಿನ ದಾಳಿಗೆ ಮುನ್ನುಡಿಯಾಗಬೇಕು. ಮದ್ಯ, ಇಸ್ಪೀಟು, ಅಮಲುಕಾರಕ ವಸ್ತುಗಳ ಚಾಳಿಗೆ ಸಿಲುಕಿ ಭವಿಷ್ಯವನ್ನೇ ಹಾಳುಮಾಡಿಕೊಳ್ಳುವವರನ್ನು ಇಷ್ಟು ದಿನ ಕಾಣುತ್ತಿದ್ದೆವು; ಈಗ ಆ ಸಾಲಿಗೆ ಆನ್‌ಲೈನ್ ಬೆಟ್ಟಿಂಗ್ ಕೂಡ ಸೇರಿಕೊಂಡು ಸಾಕಷ್ಟು ಮಂದಿಗೆ ಒಂದು 'ಗತಿ' ಕಾಣಿಸಿದೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಹೀಗಾಗಿ ಮತ್ತಷ್ಟು ಅಕ್ರಮ ಬೆಟ್ಟಿಂಗ್ ಸಂಸ್ಥೆಗಳ ಬೇಟೆ ನಡೆದರೆ, ಸಹೃದಯಿಗಳು ನಿರಾಳವಾಗಿ ಉಸಿರಾಡಬಹುದು.

ಸೊಂಪಾದಕೀಯ

ಸ್ವಾಮಿ ದೇವರೆ ರಾಜ್ಯಪಾಲರೆ...

ಸೋಷಿಯಲ್ ಮೀಡಿಯಾಗಳಲ್ಲಿ ತಮ್ಮ ಸ್ವಂತ ಅಕೌಂಟ್‌ನಿಂದ ವ್ಯವಹರಿಸುವವರಿಗಿಂತ ಫೇಕ್ ಅಕೌಂಟ್‌ಗಳಿಂದ ಕಳ್ಳ ವ್ಯವಹಾರ ಮಾಡುವವರ ಸಂಖ್ಯೆಯೇ ಹೆಚ್ಚು. ಹೆಸರಿಲ್ಲದ ಅಕೌಂಟ್‌ಗಳನ್ನು ತೆರೆದು ಬೇಕಾಬಿಟ್ಟಿ ಮಾತನಾಡುವವರನ್ನು ನಾವು ನೋಡಿದ್ದೇವೆ. ನಟ ದರ್ಶನ್ ಅವರಿಗೆ ಇರೋ ಅಭಿಮಾನಿಗಳು ಇಂಥ ಫೇಕ್ ಐಡಿ ಮಾಡುವುದರಲ್ಲಿ ಎತ್ತಿದ ಕೈ. ಆದರೆ ತಮ್ಮ ಈ ಕೈವಾಡದಿಂದ ನಟಿ ರಮ್ಯಾಗೆ ಅಶ್ಲೀಲ ಸಂದೇಶಗಳನ್ನು ಕಳಿಸಿ ತಮ್ಮ ಬಾಸ್ ಥರ ಅವರೂ ಈಗ ಜೈಲುಪಾಲಾಗಿದ್ದಾರೆ. ಇನ್ನು, ಇನ್ನೊಬ್ಬರ ಹೆಸರು ಮತ್ತು ಫೋಟೋ ಬಳಸಿಕೊಂಡು ಅವರ ಫೇಕ್ ಅಕೌಂಟ್ ಮಾಡುವವರದ್ದು ಇನ್ನೊಂದು ಕೆಟಗರಿ. ಇವರ ಮುಖ್ಯ ಉದ್ಯೋಗ ಅಂದ್ರೆ ಆ ಅಕೌಂಟ್‌ನ ಒರಿಜಿನಲ್ ಮಾಲೀಕರ ಸ್ನೇಹಿತರಿಗೆ ಮೆಸೇಜ್ ಮಾಡಿ ಹಣ ಕೇಳೋದು. ಇದು ಜನಸಾಮಾನ್ಯರಿಗೆ ಮಾತ್ರ ಸೀಮಿತ ಆಗಿಲ್ಲ. ಇತ್ತೀಚೆಗೆ ಉನ್ನತ ಪೊಲೀಸ್ ಅಧಿಕಾರಿಯೊಬ್ಬರ ಹೆಸರಿನಲ್ಲಿ ಅಕೌಂಟ್ ತೆರೆದು ಹಣ ಕೇಳಿದ್ದನ್ನು ನೋಡಿದ ಹಲವರಿಗೆ, ಪೊಲೀಸರು ಆನ್ ಲೈನ್ ಅಕೌಂಟ್‌ಗಳಲ್ಲೂ ಮಾಮೂಲಿ ಕೇಳ್ತಾರಾ ಅಂತ ಆಶ್ಚರ್ಯ ಆಗಿತ್ತು. ಈಗ ಇಂಥ ಫೇಕೇಂದ್ರರಿಗೆ ಆಹಾರ ಆಗುವ ಸಮಯ ನಮ್ಮ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರದ್ದು. ಹೌದು ಈ ಕಿಡಿಗೇಡಿಗಳು ರಾಜ್ಯಪಾಲರನ್ನೂ ಬಿಟ್ಟಿಲ್ಲ. ಶಿಶುಪಾಲನ ನೂರು ತಪ್ಪುಗಳನ್ನು ಕೃಷ್ಣ ಕ್ಷಮಿಸಿದ್ದನಂತೆ. ಅದೇ ನಿಟ್ಟಿನಲ್ಲಿ ರಾಜ್ಯಪಾಲರೂ ತಮ್ಮ ತಪ್ಪುಗಳನ್ನು ಕ್ಷಮಿಸುತ್ತಾರೆ ಅನ್ನೋ ನಂಬಿಕೆಯಲ್ಲಿ ಕಿಡಿಗೇಡಿಗಳು ಈ ಕೆಲಸ ಮಾಡಿದ್ದಾರೆ. ಅವರ ಹೆಸರಿನಲ್ಲಿ ಅನೇಕರಿಗೆ ಮೆಸೇಜ್ ಕಳಿಸಿದ್ದಾರೆ. ಆದರೆ ನಮ್ಮ ರಾಜ್ಯಪಾಲರ ಹೆಸರು ಅದೆಷ್ಟು ಜನರಿಗೆ ಗೊತ್ತಿದೆಯೋ ಗೊತ್ತಿಲ್ಲ. ರಾಷ್ಟ್ರಪತಿಗಳು ಮತ್ತು ರಾಜ್ಯಪಾಲರು ನಮ್ಮ ದೇಶದಲ್ಲಿ ಅನಾಮಿಕರೇ. ಯಾಕಂದ್ರೆ ಅವರ ಕೆಲಸ ಕೂಡಾ ರಬ್ಬರ್ ಸ್ಟ್ಯಾಂಪ್‌ನಂತೆ ಅನ್ನೋ ಮಾತು ಜನಜನಿತ. ಅಷ್ಟೇ ಅಲ್ಲದೆ ನಮ್ಮ ರಾಜ್ಯಪಾಲರು ಕನ್ನಡದವರಲ್ಲ. ಹಾಗಾಗಿ ಅವರ ಹೆಸರು ಕೂಡಾ ಪರಿಚಿತರ ಹೆಸರಿನಂತೆ ಕಾಣಿಸದೆ, ಅನೇಕರು ಥಾವರ್ ಚಂದ್ ಗೆಹ್ಲೋಟ್ ಅಂತ ಹೆಸರು ನೋಡಿ ಹಂಗಂದ್ರೇನು ಅಂತ ತಲೆಕೆಡಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳಾದರೆ ಮಾತ್ರ, ಶಾಲೆಯಲ್ಲಿ ಹೇಳಿಕೊಟ್ಟಿರ್ತಾರೆ ಅನ್ನೋ ಕಾರಣಕ್ಕೆ, 'ಓಹೋ ರಾಜ್ಯಪಾಲರು ನಂಗೆ ಮೆಸೇಜ್ ಮಾಡಿದ್ದಾರೆ' ಅಂತ ಖುಷಿಯಾಗಿರಬಹುದೇನೋ..

ಸಂಪಾದಕರ ಸದ್ಯಶೋಧನೆ

ಕಾರ್ಗೋ ನಿರ್ವಹಣೆ

ವಿಮಾನಗಳಲ್ಲಿ ಪ್ರಯಾಣಿಕರ ಲಗೇಜ್ ಮತ್ತು ಕಾರ್ಗೋವನ್ನು ಯಾವ ರೀತಿ ನಿರ್ವಹಿಸುತ್ತಾರೆ ಎಂದು ಯೋಚಿಸಿದ್ದೀರಾ? ಇದು ನಿಜಕ್ಕೂ ಅತ್ಯಂತ ಕುತೂಹಲಕರ ಸಂಗತಿ. ಸಾಮಾನ್ಯವಾಗಿ, ಪ್ರಯಾಣಿಕರ ವಿಮಾನದಲ್ಲಿ ಎರಡು ವಿಧದ ಕಾರ್ಗೋ ವಿಭಾಗಗಳು ಇರುತ್ತವೆ. ಮೊದಲನೆಯದು, ಬಲ್ಕ್ ಕಾರ್ಗೋ ವಿಭಾಗ (Bulk Cargo Section). ಇದು ವಿಮಾನದ ಹಿಂಭಾಗದಲ್ಲಿ ಇರುವ ಸಣ್ಣ ವಿಭಾಗವಾಗಿದೆ. ಇಲ್ಲಿ ಸಾಮಾನ್ಯವಾಗಿ ಪ್ರಯಾಣಿಕರ ಲಗೇಜ್ ಮತ್ತು ಸಣ್ಣ ಗಾತ್ರದ ಕಾರ್ಗೋವನ್ನು ಇರಿಸಲಾಗುತ್ತದೆ. ಇಲ್ಲಿ ಯಾವುದೇ ವಿಶೇಷ ಕಂಟೇನರ್‌ಗಳು ಇರುವುದಿಲ್ಲ. ಲಗೇಜ್ ಮತ್ತು ಇತರ ವಸ್ತುಗಳನ್ನು ನೇರವಾಗಿ ವಿಮಾನದೊಳಗೆ ಇರಿಸಲಾಗುತ್ತದೆ. ಇದು ಸಾಮಾನ್ಯವಾಗಿ ನಿರ್ದಿಷ್ಟ ಪ್ರಮಾಣದ ತೂಕ ಮತ್ತು ಗಾತ್ರವನ್ನು ಮಾತ್ರ ನಿರ್ವಹಿಸಬಲ್ಲದು. ಇನ್ನೊಂದು ಕಂಟೇನರೈಸ್ಡ್ ಕಾರ್ಗೋ ವಿಭಾಗ (Containerized Cargo Section). ಇದು ದೊಡ್ಡ ವಿಮಾನಗಳಲ್ಲಿ ಕಂಡುಬರುತ್ತದೆ. ಈ ವಿಭಾಗದಲ್ಲಿ, ಕಾರ್ಗೋವನ್ನು ಯುನಿಟ್ ಲೋಡ್ ಡಿವೈಸ್ (ULD) ಎಂದು ಕರೆಯುವ ವಿಶೇಷ ಕಂಟೇನರ್‌ಗಳು ಅಥವಾ ಪ್ಯಾಲೆಟ್‌ಗಳಲ್ಲಿ ಇರಿಸಲಾಗುತ್ತದೆ. ಈ ಕಂಟೇನರ್‌ಗಳನ್ನು ವಿಮಾನದ ಆಕಾರಕ್ಕೆ ಸರಿಹೊಂದುವಂತೆ ವಿನ್ಯಾಸಗೊಳಿಸಲಾಗಿರುತ್ತದೆ ಮತ್ತು ಅವುಗಳನ್ನು ವಿಮಾನದ ಕಾರ್ಗೋ ವಿಭಾಗದೊಳಗೆ ಸುಲಭವಾಗಿ ಲೋಡ್ ಮತ್ತು ಅನ್‌ಲೋಡ್ ಮಾಡಲು ಅನುಕೂಲವಾಗುತ್ತದೆ. ಈ ವ್ಯವಸ್ಥೆಯು ಕಾರ್ಗೋವನ್ನು ಸುರಕ್ಷಿತವಾಗಿ ಮತ್ತು ವ್ಯವಸ್ಥಿತವಾಗಿ ನಿರ್ವಹಿಸಲು ಸಹಾಯ ಮಾಡುತ್ತದೆ. ಈ ವಿಭಾಗದಲ್ಲಿ, ಕಾರ್ಗೋವನ್ನು ತೂಕ ಮತ್ತು ಗಾತ್ರದ ಪ್ರಕಾರ ವರ್ಗೀಕರಿಸಿ, ಅವುಗಳಿಗೆ ಸೂಕ್ತವಾದ ಕಂಟೇನರ್‌ಗಳಲ್ಲಿ ಇರಿಸಲಾಗುತ್ತದೆ. ಈ ಕಂಟೇನರ್‌ಗಳನ್ನು ಹೈಡ್ರಾಲಿಕ್ ಲಿಫ್ಟ್‌ಗಳು ಮತ್ತು ಕನ್ವೇಯರ್ ಬೆಲ್ಟ್‌ಗಳಂಥ ಯಾಂತ್ರೀಕೃತ ವ್ಯವಸ್ಥೆಗಳನ್ನು ಬಳಸಿ ವಿಮಾನದೊಳಗೆ ಮತ್ತು ಹೊರಗೆ ಚಲಿಸಲಾಗುತ್ತದೆ. ವಿಮಾನದಲ್ಲಿ ಕಾರ್ಗೋ ಸಾಗಿಸುವಾಗ ಸುರಕ್ಷತೆಗೆ ಹೆಚ್ಚಿನ ಪ್ರಾಮುಖ್ಯ ನೀಡಲಾಗುತ್ತದೆ. ಅಪಾಯಕಾರಿ ವಸ್ತುಗಳು, ಸ್ಫೋಟಕಗಳು ಅಥವಾ ಇತರ ನಿಷಿದ್ಧ ವಸ್ತುಗಳನ್ನು ಸಾಗಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ವಿಮಾನದಲ್ಲಿ ಕಾರ್ಗೋ ಲೋಡ್ ಮಾಡುವ ಮೊದಲು ಅದನ್ನು ಸಂಪೂರ್ಣವಾಗಿ ಸ್ಕ್ಯಾನ್ ಮಾಡಲಾಗುತ್ತದೆ ಮತ್ತು ಭದ್ರತಾ ತಪಾಸಣೆ ನಡೆಸಲಾಗುತ್ತದೆ. ಕೆಲವು ವಿಮಾನಗಳಲ್ಲಿ, ತಾಪಮಾನ ನಿಯಂತ್ರಣ ವ್ಯವಸ್ಥೆಗಳು ಇರುತ್ತವೆ, ಇದು ನಿರ್ದಿಷ್ಟ ತಾಪಮಾನದಲ್ಲಿ ಇರಿಸಬೇಕಾದ ವಸ್ತುಗಳನ್ನು (ಉದಾಹರಣೆಗೆ, ಹಣ್ಣು, ತರಕಾರಿ ಅಥವಾ ಔಷಧಗಳು) ಸಾಗಿಸಲು ಸಹಾಯ ಮಾಡುತ್ತದೆ. ವಿಮಾನದ ಒಟ್ಟು ತೂಕ ಮತ್ತು ಸಮತೋಲನವು ಸುರಕ್ಷಿತ ಹಾರಾಟಕ್ಕೆ ಅತ್ಯಗತ್ಯ. ಕಾರ್ಗೋವನ್ನು ವಿಮಾನದಲ್ಲಿ ಸಮತೋಲನದಿಂದ ಇರಿಸಲಾಗುತ್ತದೆ, ಇದರಿಂದಾಗಿ ಹಾರಾಟದ ಸಮಯದಲ್ಲಿ ಯಾವುದೇ ಅಸಮತೋಲನ ಉಂಟಾಗುವುದಿಲ್ಲ. ಪ್ರಯಾಣಿಕರ ವಿಮಾನದಲ್ಲಿ ಕಾರ್ಗೋ ವಿಭಾಗಗಳು ಕೇವಲ ಲಗೇಜ್ ಇಡಲು ಮಾತ್ರ ಸೀಮಿತವಾಗಿಲ್ಲ. ಅವುಗಳನ್ನು ವಿಮಾನದ ಕೆಳಭಾಗದಲ್ಲಿ (ಕೆಳಗಿನ ಡೆಕ್) ಯೋಜಿಸಲಾಗಿರುತ್ತದೆ ಮತ್ತು ಇದನ್ನು 'ಬೆಲ್ಲಿ ಹೋಲ್ಡ್' ಅಥವಾ 'ಕಾರ್ಗೋ ಹೋಲ್ಡ್' ಎಂದು ಕರೆಯಲಾಗುತ್ತದೆ. ಇದು ಸಾಮಾನ್ಯವಾಗಿ ವಿಮಾನದ ಹಿಂಭಾಗದ ಪ್ರದೇಶದಲ್ಲಿ, ಪ್ರಯಾಣಿಕರ ಕ್ಯಾಬಿನ್‌ನ ಕೆಳಗೆ ಇರುತ್ತದೆ. ಈ ವಿಭಾಗವು ಗಾತ್ರದಲ್ಲಿ ಚಿಕ್ಕದಾಗಿದ್ದು, ಇದನ್ನು ಕೈಯಿಂದಲೇ ಲೋಡ್ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಪ್ರಯಾಣಿಕರ ಲಗೇಜ್, ಗಾಲಿಕುರ್ಚಿಗಳು (wheel chairs), ಮಕ್ಕಳ ಸ್ಟ್ರಾಲರ್‌ಗಳು ಮತ್ತು ಕೆಲವು ಸಣ್ಣ ಪ್ರಮಾಣದ ಸರಕುಗಳನ್ನು ಇಲ್ಲಿ ಇಡಲಾಗುತ್ತದೆ. ಇಲ್ಲಿ ಯಾವುದೇ ಕಂಟೇನರ್‌ಗಳನ್ನು ಬಳಸಲಾಗುವುದಿಲ್ಲ, ವಸ್ತುಗಳನ್ನು ನೇರವಾಗಿ ವಿಮಾನದೊಳಗೆ ಇಡಲಾಗುತ್ತದೆ. ಇದು ಸರಳ ಮತ್ತು ಸುಲಭವಾದ ಲೋಡಿಂಗ್ ಪ್ರಕ್ರಿಯೆಯನ್ನು ಹೊಂದಿದೆ. ಚಿಕ್ಕ ವಿಮಾನಗಳಿಗೆ ಇದು ಹೆಚ್ಚು ಸೂಕ್ತವಾಗಿರುತ್ತದೆ. ಲೋಡಿಂಗ್ ಮತ್ತು ಅನ್‌ಲೋಡಿಂಗ್‌ಗೆ ಹೆಚ್ಚು ಸಮಯ ಬೇಕಾಗುತ್ತದೆ ಮತ್ತು ದೊಡ್ಡ ಗಾತ್ರದ ವಸ್ತುಗಳನ್ನು ಇಲ್ಲಿ ಇಡಲು ಸಾಧ್ಯವಿಲ್ಲ. ಕಂಟೇನರೈಸ್ಡ್ ಕಾರ್ಗೋ ಹೋಲ್ಡ್ ದೊಡ್ಡ ವಿಮಾನಗಳಾದ ಬೋಯಿಂಗ್ 747, 777, ಏರ್‌ಬಸ್ ಎ-380, ಎ-350ರಂಥ ವಿಮಾನಗಳ ಮಧ್ಯಭಾಗ ಮತ್ತು ಮುಂಭಾಗದ ಕಾರ್ಗೋ ವಿಭಾಗಗಳಲ್ಲಿ ಕಂಡುಬರುತ್ತದೆ. ವಿಮಾನದ ಒಟ್ಟು ತೂಕವನ್ನು ವಿಮಾನದ ಗುರುತ್ವ ಕೇಂದ್ರದ (Center of Gravity) ಮೇಲೆ ಪರಿಣಾಮ ಬೀರದಂತೆ ಸಮತೋಲನಗೊಳಿಸುವುದು ಅತ್ಯಗತ್ಯ. ವಿಮಾನದ ಹಾರಾಟದ ಸುರಕ್ಷತೆ ಮತ್ತು ದಕ್ಷತೆಯನ್ನು ಇದು ನಿರ್ಧರಿಸುತ್ತದೆ. ತೂಕವನ್ನು ಸಮವಾಗಿ ಹಂಚಲು ಲೋಡಿಂಗ್ ಸಿಬ್ಬಂದಿ ನಿರ್ದಿಷ್ಟ ಮಾರ್ಗಸೂಚಿಗಳನ್ನು ಅನುಸರಿಸುತ್ತಾರೆ.

ನಗರ ನಕ್ಸಲರ ಟಾರ್ಗೆಟ್: ಧರ್ಮಸ್ಥಳ

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳು ಹಿಂದುತ್ವದ ಭದ್ರಕೋಟೆ. ಈ ಕೋಟೆಯನ್ನು ಭೇದಿಸಬೇಕಾದರೆ ಹಿಂದೂ ಸಮಾಜದಲ್ಲಿ ಒಡಕು ಮೂಡಿಸಬೇಕೆಂಬ ಸ್ಪಷ್ಟತೆ ನಗರ ನಕ್ಸಲರಿಗಿದೆ. ಧರ್ಮಸ್ಥಳದ ಎಸ್‌ಐಟಿ ತನಿಖೆಯ ನೆಪವನ್ನು ಮುಂದಿಟ್ಟುಕೊಂಡು, ಹಿಂದೂಗಳ ಒಗ್ಗಟ್ಟನ್ನು ಒಡೆಯುವ ಹುನ್ನಾರ ನಡೆಯುತ್ತಿದೆ. ತನಿಖೆಯ ವೇಳೆ ಸಾಮಾಜಿಕ ಜಾಲತಾಣಗಳಲ್ಲಿ ಧರ್ಮಸ್ಥಳದ ಬಗ್ಗೆ ಕೆಲವರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದುದು ಇದಕ್ಕೆ ಸಾಕ್ಷಿ.

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ನಮ್ಮ ಅಜ್ಜ, ಮುತ್ತಜ್ಜನ ಕಾಲದಿಂದಲೂ ಬಹುತೇಕ ಹಿಂದೂಗಳ ಮನೆಗಳಲ್ಲಿ ಕಷ್ಟ ಬಂದ ಕೂಡಲೇ ಧರ್ಮಸ್ಥಳದ ಮಂಜುನಾಥನಿಗೆ ಹರಕೆ ಹೊತ್ತು ಕುಟುಂಬ ಸಮೇತರಾಗಿ ಮಂಜುನಾಥನ ದರ್ಶನ ಮಾಡಿ ಬರುವುದು ರೂಢಿಯಲ್ಲಿದೆ. ಇಂದಿಗೂ ಮನಸ್ಸಿಗೆ ಬಂದ ಕೂಡಲೇ ರಾತ್ರೋರಾತ್ರಿ ಧರ್ಮಸ್ಥಳಕ್ಕೆ ಭೇಟಿ ನೀಡಿ ಮಂಜುನಾಥನ ದರ್ಶನ ಮಾಡಿಕೊಂಡು ಬರುವ ಸಾವಿರಾರು ಭಕ್ತರಿದ್ದಾರೆ. ಮನೆಯಲ್ಲಿ ಅಪ್ಪಿತಪ್ಪಿಯೂ ಧರ್ಮಸ್ಥಳದ ಮಂಜುನಾಥನ ಮೇಲೆ ಆಣೆ ಮಾಡಿ ಸುಳ್ಳು ಹೇಳುವವರಿಲ್ಲ. ಅನೇಕ ಬಾರಿ ಸಂದಿಗ್ಧ ಪರಿಸ್ಥಿತಿಯಲ್ಲಿ 'ಮಂಜುನಾಥನ ಮೇಲೆ ಆಣೆ ಮಾಡಿ ಹೇಳು' ಎಂದು ಹೇಳುವುದು ಅನೇಕ ಹಿಂದೂಗಳ ದೃಢ ನಂಬಿಕೆ. ದೊಡ್ಡ ದೊಡ್ಡ ರಾಜಕಾರಣಿಗಳು ಅನೇಕ ಸಂದರ್ಭಗಳಲ್ಲಿ ಧರ್ಮಸ್ಥಳದ ಮಂಜುನಾಥನ ಮೇಲೆ ಆಣೆ ಮಾಡಲು ಹೇಳಿದ ಉದಾಹರಣೆಗಳಿವೆ. ಧರ್ಮಸ್ಥಳದ ಮಂಜುನಾಥನೆಂದರೆ ಅಸಾಮಾನ್ಯ ಶಕ್ತಿ. ವರ್ಷಕ್ಕೆ ಒಮ್ಮೆಯಾದರೂ ಸ್ವಾಮಿಯ ದರ್ಶನ ಮಾಡಿದರೆ ಕಷ್ಟಗಳು ಹತ್ತಿರವೂ ಸುಳಿಯುವುದಿಲ್ಲ. ದಕ್ಷಿಣ ಕನ್ನಡದಲ್ಲಿ ಹಿಂದೂಗಳ ಬೃಹತ್ ಧಾರ್ಮಿಕ ಶಕ್ತಿಕೇಂದ್ರ ಧರ್ಮಸ್ಥಳ. ಹಲವು ದಶಕಗಳಿಂದ ಕರ್ನಾಟಕದ ವಿವಿಧ ಭಾಗಗಳಿಂದ ಭಕ್ತರು ಧರ್ಮಸ್ಥಳಕ್ಕೆ ಭೇಟಿ ನೀಡುತ್ತಿದ್ದಾರೆ.

ಹಲವು ದಶಕಗಳಿಂದ ಒಂದು ಮಾತಿದೆ– 'ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ತೀರ್ಥಯಾತ್ರೆಗೆ ಹೊರಟರೆ, ಹೋಟೆಲುಗಳಲ್ಲಿ ಊಟ ಮಾಡಬೇಕಾದ ಪ್ರಸಂಗವೇ ಬರುವುದಿಲ್ಲ' ಅಂತ. ಇದು ನಿಜ. ಧರ್ಮಸ್ಥಳ, ಉಡುಪಿ, ಕುಕ್ಕೆಸುಬ್ರಹ್ಮಣ್ಯ, ಹೊರನಾಡು, ಆನೆಗುಡ್ಡ, ಕೊಲ್ಲೂರು, ಕಮಲಶಿಲೆ ಹೀಗೆ ಅನೇಕ ದೇವಸ್ಥಾನಗಳಲ್ಲಿ, ಬರುವ ಭಕ್ತಾದಿಗಳಿಗೆ ವರ್ಷದ 365 ದಿವಸ ಅನ್ನ ಸಂತರ್ಪಣೆ ನಡೆಯುತ್ತದೆ. ಹಲವು ದಶಕಗಳಿಂದ ಧರ್ಮಸ್ಥಳಕ್ಕೆ ಭೇಟಿ ನೀಡುತ್ತ ಬಂದಿರುವ ಲಕ್ಷಾಂತರ ಭಕ್ತರಿಗೆ, ದರ್ಶನದ ನಂತರ ಉಚಿತವಾಗಿ ಅನ್ನ ಸಂತರ್ಪಣೆ ನಡೆಯುತ್ತಾ ಬಂದಿದೆ. ಧರ್ಮಸ್ಥಳಕ್ಕೆ ಹೋದವರು ಊಟವಿಲ್ಲದೆ ಬಂದಿರುವ ಉದಾಹರಣೆಯಿಲ್ಲ. ಪ್ರತಿನಿತ್ಯ ಕಡಿಮೆಯೆಂದರೂ 25,000 ಜನರಿಗೆ ಅನ್ನಸಂತರ್ಪಣೆ ನಡೆಯುತ್ತದೆ. ಸಾಲು ಸಾಲು ರಜೆಗಳ ಸಂದರ್ಭದಲ್ಲಿ ಊಟ ಮಾಡಿದವರ ಸಂಖ್ಯೆ ದಿನವೊಂದಕ್ಕೆ ಲಕ್ಷ ದಾಟಿರುತ್ತದೆ. ಅನ್ನದಾನ ಶ್ರೇಷ್ಠದಾನವೆಂದು ಹೇಳಲಾಗುತ್ತದೆ. ಹಸಿದು ಬಂದ ಭಕ್ತರಿಗೆ ಹೊಟ್ಟೆ ತುಂಬಾ ಅನ್ನ ನೀಡುವ ಹಿಂದೂಗಳ ಧಾರ್ಮಿಕ ಶಕ್ತಿಕೇಂದ್ರವೇ ಧರ್ಮಸ್ಥಳ.

ಆದರೆ ಕೆಲದಿನಗಳಿಂದ, ತನಿಖೆ ನಡೆಸುವ ನೆಪದಲ್ಲಿ ಕೋಟ್ಯಂತರ ಭಕ್ತರು ನಂಬಿರುವ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಕಳಂಕ ತರುವ ಷಡ್ಯಂತ್ರ ದೊಡ್ಡಮಟ್ಟದಲ್ಲಿ ನಗರ ನಕ್ಸಲರ ಮೂಲಕ ನಡೆಯುತ್ತಿದೆ. ಧರ್ಮಸ್ಥಳದಲ್ಲಿ ರಾಜ್ಯ ಸರಕಾರ ನಡೆಸುತ್ತಿರುವ ಎಸ್‌ಐಟಿ ತನಿಖೆಯ ಬಗ್ಗೆ ನಮಗೆ ತಕರಾರಿಲ್ಲ, ಸಮಾಜದಲ್ಲಿ ನೊಂದವರಿಗೆ ನ್ಯಾಯ ಸಿಗಲೇಬೇಕು. ಆದರೆ ತನಿಖೆಯ ನೆಪದಲ್ಲಿ ಧರ್ಮಸ್ಥಳವನ್ನು ಟಾರ್ಗೆಟ್ ಮಾಡಿ ಹಿಂದೂಗಳ ಭಾವನೆಗಳಿಗೆ ಧಕ್ಕೆ ತರುವ ಕಾರ್ಯ ಸತತವಾಗಿ ಕೆಲದಿನಗಳಿಂದ ನಡೆಯುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಲಂಗು ಲಗಾಮಿಲ್ಲದೆ ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡುವ ಕೆಲಸ ಭರದಿಂದ ಸಾಗಿದೆ. ತಂತ್ರಜ್ಞಾನವನ್ನು ಬಳಸಿ ಕೃತಕ ಬುದ್ಧಿಮತ್ತೆಯ (ಎಐ) ಮೂಲಕ ಸಿನಿಮಾವನ್ನು ಮೀರಿಸುವ ರೀತಿಯಲ್ಲಿ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲಾಯಿತು. ಎಸ್‌ಐಟಿ ತನಿಖೆ ಪ್ರಾರಂಭವಾದ ದಿನದಿಂದಲೂ ಪ್ರತಿನಿತ್ಯ ಮಾಧ್ಯಮಗಳಲ್ಲಿ ಗುಂಡಿಗಳದ್ದೇ ಸುದ್ದಿ. ಮೊದಲ ಗುಂಡಿಯಿಂದ ಹದಿಮೂರನೇ ಗುಂಡಿಯವರೆಗೂ ಪ್ರಸಾರವಾದ ಸುದ್ದಿಯ ಹಿಂದೆ ಧರ್ಮಸ್ಥಳದ ಹೆಸರು ದೊಡ್ಡದಾಗಿ ಟಿವಿ ಪರದೆಯಲ್ಲಿ ರಾರಾಜಿಸುತ್ತಿತ್ತು. ಮಾಧ್ಯಮಗಳಲ್ಲಿ ಪ್ರಸಾರವಾದ ಸುದ್ದಿಗಳೆಲ್ಲವೂ ಧರ್ಮಸ್ಥಳದ ಹೆಸರಿನಲ್ಲಿದ್ದಾಗ, 'ಧರ್ಮಸ್ಥಳವನ್ನು ಟಾರ್ಗೆಟ್ ಮಾಡುತ್ತಿಲ್ಲ' ಎಂಬ ಸಬೂಬನ್ನು ಒಪ್ಪಲಾಗದು.

ಹಲವು ದಶಕಗಳಿಂದ, ಕುಡಿತದ ಚಟವಿರುವ ಅನೇಕರನ್ನು ಧರ್ಮಸ್ಥಳಕ್ಕೆ ಕರೆತಂದು ಚಟಬಿಡಿಸಲಾಗುತ್ತದೆ. ಕುಡಿತದ ಚಟ ಬಿಟ್ಟು ತನ್ನ ಕುಟುಂಬದವರ ಜತೆ ಸುಖಜೀವನ ನಡೆಸುತ್ತಿರುವ ಲಕ್ಷಾಂತರ ಕುಟುಂಬಗಳಿವೆ. ಕುಡಿತದ ಚಟದಿಂದ ಲಕ್ಷಾಂತರ ಕುಟುಂಬಗಳು ಬೀದಿಗೆ ಬೀಳುವುದನ್ನು ತಪ್ಪಿಸಿರುವ ಧರ್ಮಸ್ಥಳದ ಬಗ್ಗೆ ಕೆಟ್ಟದಾಗಿ ಮಾತನಾಡುವ ನೈತಿಕತೆ ಎಡಚರರಿಗೆ ಇಲ್ಲ. ತನಿಖೆ ನಡೆಯಬೇಕೆಂಬ ಬೇಡಿಕೆ ಒಂದು ನೆಪ ಮಾತ್ರ. ಅವರ ಟಾರ್ಗೆಟ್ ಹಿಂದೂಗಳ ಶಕ್ತಿಕೇಂದ್ರ ಧರ್ಮಸ್ಥಳ. ದಕ್ಷಿಣ ಭಾರತದಲ್ಲಿ ಕೋಟ್ಯಂತರ ಭಕ್ತರು ಆಗಮಿಸುವ ಶ್ರೀಕ್ಷೇತ್ರ ಧರ್ಮಸ್ಥಳ. ಅದರ ಬಗ್ಗೆ ಅಪಪ್ರಚಾರ ನಡೆಸಿ ಭಕ್ತರನ್ನು ಬರದಂತೆ ತಡೆಯುವುದು ನಟೋರಿಯಸ್ ನಗರ ನಕ್ಸಲರ ಉದ್ದೇಶ. ಪ್ರತಿನಿತ್ಯ ಸುಳ್ಳುಗಳ ಸರಮಾಲೆಗಳನ್ನು ಪೋಣಿಸಿ ಧರ್ಮಸ್ಥಳದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ಮಾಡುವ ಕೆಲಸ ನಡೆಸುತ್ತಿದ್ದಾರೆ. ಒಬ್ಬನಂತೂ ಬಹಿರಂಗವಾಗಿ, 'ಧರ್ಮಸ್ಥಳಕ್ಕೆ ಹೋಗಬೇಡಿ, ಮಂಜುನಾಥ ಹಿಮಾಲಯಕ್ಕೆ ಹೋಗಿದ್ದಾನೆ' ಎಂದು ಹೇಳುತ್ತಾನೆ. ಆದರೀಗ ಹಿಂದೂ ಸಮಾಜದ ತಾಳ್ಮೆಯ ಕಟ್ಟೆ ಒಡೆದಿದೆ. ರಾಜ್ಯದ ಮೂಲೆಮೂಲೆಗಳಲ್ಲಿ ಲಕ್ಷಾಂತರ ಭಕ್ತರು ಧರ್ಮಸ್ಥಳದ ಪರವಾಗಿ ನಿಂತಿದ್ದಾರೆ.

ಹಿಂದೂಗಳ ಧಾರ್ಮಿಕ ಕ್ಷೇತ್ರಗಳನ್ನು ಟಾರ್ಗೆಟ್ ಮಾಡಿ ಅಪಪ್ರಚಾರ ಮಾಡುವ ಕೆಲಸ ಭಾರತದಲ್ಲಿ ನಿರಂತರವಾಗಿ ನಡೆಯುತ್ತಿದೆ. ತಮಿಳುನಾಡಿನ ಕೊಯಮತ್ತೂರಿನ 'ಈಶಾ' ಸಂಸ್ಥೆಯನ್ನು ಟಾರ್ಗೆಟ್ ಮಾಡಲಾಯಿತು. ಕೇರಳದ ಶಬರಿಮಲೆಯನ್ನು ಟಾರ್ಗೆಟ್ ಮಾಡಿ ಅಪಪ್ರಚಾರ ಮಾಡಲಾಯಿತು. ಈಗ ನಗರ ನಕ್ಸಲರ ಕಣ್ಣು ಧರ್ಮಸ್ಥಳದ ಮೇಲೆ ಬಿದ್ದಿದೆ. ರಾಜ್ಯ ಸರಕಾರ ಅಪಪ್ರಚಾರ ಮಾಡುವವರ ಮೇಲೆ ಕ್ರಮ ಕೈಗೊಳ್ಳುತ್ತಿಲ್ಲ, ಹಾಗಾಗಿ ಸರಕಾರದ ನಿಲುವನ್ನು ಜನರು ಅನುಮಾನದಿಂದ ನೋಡುತ್ತಿದ್ದಾರೆ. ಬೆಂಗಳೂರಿನ ಹೃದಯ ಭಾಗದಲ್ಲಿರುವ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಅವ್ಯವಹಾರ ನಡೆದಿದೆಯೆಂದು ರಾಜ್ಯ ಸರಕಾರವು ಮುಜರಾಯಿ ಇಲಾಖೆಗೆ ಸೇರಿಸಿಕೊಂಡಿತು. ಆದರೆ ಪ್ರತಿಷ್ಠಿತ ಬಾಲ್ಡ್‌ವಿನ್ ಶಿಕ್ಷಣ ಸಂಸ್ಥೆಯ ಮೂಲಸಂಸ್ಥೆಯಾದ 'ಮೆಥಡಿಸ್ಟ್ ಚರ್ಚ್'ನ ಮಾಜಿ ಆರ್ಚ್ ಬಿಷಪ್ 'ಕರ್ಕರೆ' ಅವರ ಮೇಲೆ 300 ಕೋಟಿ ರುಪಾಯಿಗೂ ಅಧಿಕ ಅವ್ಯವಹಾರ ನಡೆಸಿರುವ ಆರೋಪವಿದೆ. ಚರ್ಚಿನ ಹಿಂಬಾಲಕರು ಕಳೆದ ಒಂದು ವರ್ಷದಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಆದರೆ ಸರಕಾರ ಮಾತ್ರ ಆ ಸಂಸ್ಥೆಯ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ, ಧರ್ಮಸ್ಥಳದ ವಿಚಾರದಲ್ಲಿ ಮನವಿ ಮಾಡಿದ 48 ಗಂಟೆಗಳಲ್ಲಿ ಎಸ್‌ಐಟಿಯನ್ನು ರಚನೆ ಮಾಡಿದೆ.

ದಕ್ಷಿಣ ಭಾರತದಲ್ಲಿ ದೇವಸ್ಥಾನಗಳೆಂದರೆ ನೆನಪಾಗುವುದು ತಮಿಳುನಾಡು. ಇಲ್ಲಿನ ಅಷ್ಟ ದಿಕ್ಕುಗಳಲ್ಲಿ ಸಾವಿರಾರು ದೇವಸ್ಥಾನಗಳಿವೆ. ಸಾವಿರಾರು ಹಿಂದೂಗಳ ದೇವಸ್ಥಾನವಿರುವ ತಮಿಳುನಾಡಿನಲ್ಲಿ ದೇವರನ್ನೇ ನಂಬದ ದ್ರಾವಿಡ ಚಳವಳಿಯೊಂದು ಪ್ರಾರಂಭವಾಯಿತು. ಪರಿಣಾಮ ದೇವಾಲಯಗಳ ನಾಡಿನಲ್ಲಿ ದೇವರನ್ನೇ ನಂಬದ ಪಕ್ಷವು ದಶಕಗಳಿಂದ ಆಡಳಿತ ನಡೆಸುತ್ತಾ ಬಂದಿದೆ. ದೇವಸ್ಥಾನದಿಂದ ಬರುವ ಆದಾಯ ನೇರವಾಗಿ ಸರಕಾರಕ್ಕೆ ಹೋಗುತ್ತಿದೆ. ಆದರೆ ಸರಕಾರವನ್ನು ನಡೆಸುತ್ತಿರುವವರು ಪ್ರತಿನಿತ್ಯ ಹಿಂದೂ ಧರ್ಮದ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಾ ಬಂದಿದ್ದಾರೆ. ಕ್ರಿಶ್ಚಿಯನ್ ಮಿಷನರಿಗಳು ತಮಿಳುನಾಡಿನ ಅನೇಕ ಜಿಲ್ಲೆಗಳನ್ನು ಟಾರ್ಗೆಟ್ ಮಾಡಿ ಹಿಂದೂಗಳನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಮಾಡಿವೆ. ಕನ್ಯಾಕುಮಾರಿಯು ತಮಿಳುನಾಡಿನಲ್ಲಿ ಹೆಚ್ಚು ಮತಾಂತರಕ್ಕೊಳಗಾಗಿರುವ ಜಿಲ್ಲೆ. ಇಲ್ಲಿನ ಅನೇಕ ಚರ್ಚುಗಳು ನೋಡುವುದಕ್ಕೆ ದೇವಸ್ಥಾನದ ರೀತಿ ಕಾಣುತ್ತವೆ. ತಮಿಳುನಾಡಿನ ಮಾದರಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಚರ್ಚುಗಳ ಮುಂದೆ ಹಿಂದೂ ದೇವಸ್ಥಾನದಲ್ಲಿರುವಂತೆ 'ಗರುಡಗಂಬ'ಗಳನ್ನು ಕಾಣಬಹುದು. ತಕ್ಷಣಕ್ಕೆ ನೋಡಿದಾಕ್ಷಣ ಅದನ್ನು ಚರ್ಚ್ ಎಂದು ಹೇಳುವುದಕ್ಕೆ ಆಗುವುದಿಲ್ಲ. ತಮಿಳುನಾಡಿನ ಮಾದರಿಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಹಿಂದೂ ಧಾರ್ಮಿಕ ಕ್ಷೇತ್ರಗಳನ್ನು ಟಾರ್ಗೆಟ್ ಮಾಡಿ, ಜನರ ತಲೆಯಲ್ಲಿ ಅಪನಂಬಿಕೆ ಮೂಡಿಸುವ ಷಡ್ಯಂತ್ರ ಬಹಳ ದಿನದಿಂದಲೂ ನಡೆಯುತ್ತಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಹಿಂದುತ್ವದ ಭದ್ರಕೋಟೆ. ಈ ಕೋಟೆಯನ್ನು ಭೇದಿಸಬೇಕಾದರೆ ಹಿಂದೂ ಸಮಾಜದಲ್ಲಿ ಒಡಕು ಮೂಡಿಸಬೇಕೆಂಬ ಸ್ಪಷ್ಟತೆ ನಗರ ನಕ್ಸಲರಿಗಿದೆ. ಧರ್ಮಸ್ಥಳದ ಎಸ್‌ಐಟಿ ತನಿಖೆಯ ನೆಪವನ್ನು ಮುಂದಿಟ್ಟುಕೊಂಡು, ಹಿಂದೂಗಳ ಒಗ್ಗಟ್ಟನ್ನು ಒಡೆಯುವ ಹುನ್ನಾರ ನಡೆಯುತ್ತಿದೆ. ತನಿಖೆ ನಡೆಯುತ್ತಿರುವ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಧರ್ಮಸ್ಥಳದ ಬಗ್ಗೆ ಕೆಲವರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದರೂ, ಸರಕಾರ ಸುಮ್ಮನಿರುವುದು ಹಿಂದೂ ಸಮಾಜದ ಅನುಮಾನಕ್ಕೆ ಕಾರಣವಾಗಿದೆ.

ಧರ್ಮಸ್ಥಳವು ಶಿಕ್ಷಣ ಕಾಶಿ. ಉಜಿರೆಯಲ್ಲಿರುವ ಧರ್ಮಸ್ಥಳದ ಶಿಕ್ಷಣ ಸಂಸ್ಥೆಗಳು ಲಕ್ಷಾಂತರ ಜನರಿಗೆ ಹಲವು ದಶಕಗಳಿಂದ ವಿದ್ಯಾದಾನ ಮಾಡುತ್ತಾ ಬಂದಿವೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆಯಲು ಧರ್ಮಸ್ಥಳಕ್ಕೆ ಬರುತ್ತಾರೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಧರ್ಮಸ್ಥಳದ ಶಿಕ್ಷಣ ಸಂಸ್ಥೆಗಳಿವೆ. ಅಂಗವಿಕಲರ ಶಿಕ್ಷಣಕ್ಕಾಗಿ 'ಮಂಗಳ ಜ್ಯೋತಿ' ಶಾಲೆ ಇದೆ. ಕಾನೂನು, ವೈದ್ಯಕೀಯ, ತಾಂತ್ರಿಕ ಶಿಕ್ಷಣ ಸಂಸ್ಥೆಗಳಿವೆ. ಧರ್ಮಸ್ಥಳದಲ್ಲಿ ಶಿಕ್ಷಣ ಪಡೆದ ಅನೇಕ ವಿದ್ಯಾರ್ಥಿಗಳು ದೇಶ-ವಿದೇಶಗಳಲ್ಲಿ ಅತ್ಯುನ್ನತ ಸ್ಥಾನದಲ್ಲಿದ್ದಾರೆ. ಸಾವಿರಾರು ವರ್ಷಗಳ ಇತಿಹಾಸವಿರುವ ಭಾರತದ ಆಯುರ್ವೇದ ವೈದ್ಯಕೀಯ ಪದ್ಧತಿಯನ್ನು ದೇಶದೆಲ್ಲೆಡೆ ಪ್ರಚಾರ ಮಾಡುವುದರಲ್ಲಿ ಧರ್ಮಸ್ಥಳದ ಪಾತ್ರ ಬಹಳ ದೊಡ್ಡದು. ಇಂದಿಗೂ ರಾಜ್ಯದ ಮೂಲೆಮೂಲೆಗಳಿಂದ ಅನೇಕರು ಧರ್ಮಸ್ಥಳ ಆಯುರ್ವೇದ ಕೇಂದ್ರಕ್ಕೆ ಭೇಟಿ ನೀಡಿ ಅಧ್ಯಯನ ನಡೆಸುತ್ತಾರೆ ಮತ್ತು ವಿದೇಶದಿಂದ ಬಂದು ಚಿಕಿತ್ಸೆ ಪಡೆಯುತ್ತಾರೆ. ಶಿಥಿಲಾವಸ್ಥೆಯಲ್ಲಿರುವ ನೂರಾರು ವರ್ಷಗಳ ಹಳೆಯ ಹಿಂದೂ ದೇವಸ್ಥಾನಗಳನ್ನು ಪುನರುಜ್ಜೀವನಗೊಳಿಸುವಲ್ಲಿ ಧರ್ಮಸ್ಥಳ ದೇವಸ್ಥಾನ ಕಟಿಬದ್ಧವಾಗಿದೆ. ಇದರ ತೆಕ್ಕೆಯಲ್ಲಿರುವ 'ಧರ್ಮೋತ್ಥಾನ' ಸಂಸ್ಥೆಯ ಮೂಲಕ ಇದುವರೆಗೂ 25 ಜಿಲ್ಲೆಗಳ 240 ಹಿಂದೂ ದೇವಸ್ಥಾನಗಳನ್ನು ಪುನರುಜ್ಜೀವನಗೊಳಿಸಲಾಗಿದೆ.

ಧರ್ಮಸ್ಥಳವೆಂಬ ದೊಡ್ಡ ಆಲದಮರದಲ್ಲಿ ಶಿಕ್ಷಣ, ವೈದ್ಯಕೀಯ, ಹೈನುಗಾರಿಕೆ, ಆಯುರ್ವೇದ, ಗ್ರಾಮೀಣಾಭಿವೃದ್ಧಿ, ಸಣ್ಣ ಉದ್ದಿಮೆ, ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಕೋಟ್ಯಂತರ ಜನರು ಆಶ್ರಯ ಪಡೆದಿದ್ದಾರೆ. ಸರಕಾರ ಮಾಡಬೇಕಿರುವ ಅನೇಕ ಸಮಾಜಮುಖಿ ಕಾರ್ಯಗಳನ್ನು ಹಿಂದೂ ಧರ್ಮದ ದೇವಸ್ಥಾನವೊಂದು ತಲೆಮಾರುಗಳಿಂದ ಮಾಡುತ್ತಾ ಬಂದಿದೆ. ಧರ್ಮಸ್ಥಳವನ್ನು ಟಾರ್ಗೆಟ್ ಮಾಡಿ ಅಪಪ್ರಚಾರ ಮಾಡಿ, ಧರ್ಮಸ್ಥಳವೆಂಬ ದೊಡ್ಡ ಆಲದಮರಕ್ಕೆ ಕೊಡಲಿ ಹಾಕುವುದು ನಗರ ನಕ್ಸಲರ ಹುನ್ನಾರ. ತಲೆಬುಡವಿಲ್ಲದ ವಾದಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ತೇಲಿಬಿಟ್ಟು ಹಿಂದೂಗಳ ಮತ್ತೊಂದು ಪ್ರಮುಖ ಶ್ರದ್ಧಾಕೇಂದ್ರಕ್ಕೆ ಧಕ್ಕೆ ತಂದು ಧರ್ಮಸ್ಥಳದ ಮೇಲಿನ ನಂಬಿಕೆಗೆ ಪೆಟ್ಟು ನೀಡಬೇಕೆಂಬ ನಗರ ನಕ್ಸಲರ ಷಡ್ಯಂತ್ರ ದಿನದಿಂದ ದಿನಕ್ಕೆ ಬಯಲಾಗುತ್ತಿದೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಹುರುಳಿಲ್ಲದ ಆರೋಪ

'ಕ್ರಿಯಾಲೋಪ' ಅಂಕಣದಲ್ಲಿ (ಆ.14) ಪ್ರಕಟವಾದ ಅರುಣ್ ಜೋಶಿಯವರ 'ಮತಗಳ್ಳತನದ ಆರೋಪ: ಇದರಲ್ಲಿದೆ ಪೊಳ್ಳುತನ' ಎಂಬ ಬರಹ ಬಹಳ ಚೆನ್ನಾಗಿ ಮೂಡಿಬಂದಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ಪಕ್ಷದ ಮುಖ್ಯಸ್ಥ ಪ್ರಧಾನ ಮಂತ್ರಿಯಾದರೆ, ವಿಪಕ್ಷ ನಾಯಕ ಎನಿಸಿಕೊಳ್ಳುವವರು ಒಬ್ಬ ಸಂಪುಟ ದರ್ಜೆಯ ಸಚಿವರಿಗೆ ಸಮನಾಗಿ ಸರಕಾರದಿಂದ ಸಿಗುವ ಎಲ್ಲಾ ಸವಲತ್ತುಗಳಿಗೂ ಭಾಜನರಾಗುತ್ತಾರೆ. ನಮ್ಮ ಸಂವಿಧಾನಕರ್ತರು ಇವರಿಗೆ ವಿಶಿಷ್ಟ ಸ್ಥಾನಮಾನವನ್ನೇ ಕಲ್ಪಿಸಿದ್ದಾರೆ. ಇದರರ್ಥ, ತಮಗೆ ದೇಶದ ಪ್ರಧಾನ ಮಂತ್ರಿಗಿರುವಷ್ಟೇ ಹೊಣೆಯಿದೆ ಎಂಬುದರ ಸ್ಪಷ್ಟ ಅರಿವು ವಿಪಕ್ಷ ನಾಯಕರಿಗೆ ಇರಬೇಕು. ಅವರು ಕಾಲಕಾಲಕ್ಕೆ ಸರಕಾರದ ತಪ್ಪುನಡೆಗಳನ್ನು ಎತ್ತಿ ತೋರಿಸಿ ಸರಿಪಡಿಸುವ ಪ್ರಯತ್ನ ಮಾಡಬೇಕು. ಹಾಗೆಯೇ, ಸರಕಾರವು ಕೈಗೊಳ್ಳುವ ಜನಪರ ನೀತಿ, ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅನುಸಾರವಾಗಿ ತೆಗೆದುಕೊಂಡ ಕಠಿಣ ನಿರ್ಧಾರಗಳಿಗೆ ಸಹಮತ ಸೂಚಿಸುವ ವಿಶಾಲ ಮನೋಭಾವ ಮತ್ತು ಸಮಚಿತ್ತವನ್ನೂ ರೂಢಿಸಿಕೊಳ್ಳಬೇಕು.

ಆದರೆ ಇತ್ತೀಚಿನ ದಿನಗಳಲ್ಲಿ ವಿಪಕ್ಷಗಳ ನಡೆ ನಿಗೂಢವಾಗುತ್ತಿದೆ. ತಾವಿರುವುದೇ ಸರಕಾರದ ಎಲ್ಲಾ ನಡೆಗಳನ್ನು ಸಾರಾಸಗಟಾಗಿ ತಡೆಯುವುದಕ್ಕೆ ಎನ್ನುವ ಮನಸ್ಥಿತಿಗೆ ವಿರೋಧ ಪಕ್ಷಗಳು ತಲುಪಿದಂತಿದೆ. ಈಗ ಮತದಾರರ ಪಟ್ಟಿಯಲ್ಲಿ ಕಂಡುಬಂದಿರುವ ಕೆಲವು ವ್ಯತ್ಯಾಸ/ಲೋಪದೋಷಗಳಿಗೆ ಆ ಪಟ್ಟಿಯ ನಿರ್ವಹಣೆಗೆ ಕಾರಣರಾದವರೇ ನೇರಹೊಣೆ ಎಂದು ಭಾವಿಸಿ ಅಷ್ಟಕ್ಕೇ ಸುಮ್ಮನಾಗದೆ, 'ಆಡಳಿತ ಪಕ್ಷವು ಚುನಾವಣಾ ಆಯೋಗದ ಜತೆ ಸೇರಿಕೊಂಡು ಮತಗಳನ್ನು ಕಳ್ಳತನ ಮಾಡಿದೆ' ಎನ್ನುವ ಬಾಲಿಶ ಆರೋಪವನ್ನು ವಿಪಕ್ಷದವರು ಮಾಡುತ್ತಿರುವುದು ಹತಾಶೆಯ ಪರಮಾವಧಿಯಷ್ಟೇ! ಮತಪಟ್ಟಿಯಲ್ಲಿ ಆಗಿರಬಹುದಾದ ಸಣ್ಣಪುಟ್ಟ ವ್ಯತ್ಯಾಸಗಳನ್ನು ಸರಿಪಡಿಸಲು ಕಾನೂನುರೀತ್ಯಾ ದಾಖಲೆಗಳ ಜತೆಗೆ ಅರ್ಜಿ ಸಲ್ಲಿಸುವಂತೆ ಸೂಚಿಸಿದರೂ ಅವರು ಒಪ್ಪುತ್ತಿಲ್ಲ. 'ಚುನಾವಣಾ ಆಯೋಗಕ್ಕೆ ಯಾವುದೇ ಪ್ರಮಾಣಪತ್ರ ಸಲ್ಲಿಸುವುದಿಲ್ಲ' ಎಂಬ ರಾಹುಲ್ ಗಾಂಧಿಯವರ ವಾದವನ್ನು ಒಪ್ಪಲಾದೀತೇ? ತಾವು ಈ ನೆಲದ ಕಾನೂನಿಗೆ ಅತೀತರು ಎಂಬ ಇವರ ಧೋರಣೆಗೆ ಇಂಬುಕೊಡುವ ಹಿಂಬಾಲಕರೂ ಅವರ ಪಕ್ಷದಲ್ಲಿ ಸಾಕಷ್ಟಿದ್ದಾರೆ ಎನ್ನಿ. ಆದರೆ, 'ನಮ್ಮ ಪಕ್ಷದ ಅಧಿಕಾರಾವಧಿಯಲ್ಲೇ ಮತಪಟ್ಟಿಯನ್ನು ತಯಾರಿಸಿರುವಾಗ, ಆದ ತಪ್ಪುಗಳಿಗೆ ನಾವೇ ಹೊಣೆಯಲ್ಲವೇ?' ಎನ್ನುವ ಮೂಲಕ ಸಾಮಾನ್ಯ ವಿಚಾರವನ್ನು ಎತ್ತಿಹಿಡಿದ ಸ್ವಪಕ್ಷೀಯ ಸಚಿವರೊಬ್ಬರನ್ನು ಕೆಲವೇ ತಾಸುಗಳೊಳಗೆ ಮನೆಗೆ ಕಳುಹಿಸಲಾಯಿತು. ಶತಮಾನದ ಇತಿಹಾಸ ಹೊಂದಿರುವ ಕಾಂಗ್ರೆಸ್ ಪಕ್ಷವು ಕಹಿಸತ್ಯವೊಂದನ್ನು ಅರಗಿಸಿಕೊಳ್ಳದಾಯಿತೇ? ಇದರಿಂದ ತಿಳಿಯುವ ಸಂಗತಿಯೆಂದರೆ, ತಾವು ಮಂಡಿಸುತ್ತಿರುವುದು ಪೊಳ್ಳುವಾದ ಎಂಬುದು ಅವರಿಗೆ ಮನವರಿಕೆಯಾಗಿದೆ; ಆದರೂ ಜನರನ್ನು ಗೊಂದಲಕ್ಕೆ ತಳ್ಳುವುದೇ ಅವರ ಉದ್ದೇಶವಾಗಿದೆ!

ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ಅವಿಭಾಜ್ಯ ಅಂಗಗಳಾಗಿರುವ ಸಾಂವಿಧಾನಿಕ ಸಂಸ್ಥೆಗಳ ಮೇಲೆಯೇ ಭರವಸೆ ಇಲ್ಲ ಎಂದು ಕಾಂಗ್ರೆಸ್ಸಿಗರು ಹುಯಿಲೆಬ್ಬಿಸುವುದು ಮಾತ್ರವಲ್ಲದೆ ಅವುಗಳ ಮೇಲೆ ನಿರಾಧಾರಿತ ಆರೋಪ ಹೊರಿಸುವುದು ಎಷ್ಟರ ಮಟ್ಟಿಗೆ ಸರಿ? ಈ ಬಗ್ಗೆ ಕಾಂಗ್ರೆಸ್ಸಿನ ಹಿರಿತಲೆಗಳು ಆತ್ಮಾವಲೋಕನ ಮಾಡಿಕೊಳ್ಳಬೇಕಲ್ಲವೇ? ಪ್ರಧಾನಿ ಗದ್ದುಗೆಗೇರುವ ತರಾತುರಿಯಲ್ಲಿ ರಾಹುಲ್ ಗಾಂಧಿಯವರು ಸಮಂಜಸವಲ್ಲದ ನಿರ್ಧಾರಗಳಿಗೆ ಮುಂದಾಗುತ್ತಿದ್ದಾರೆ. ಅವರ ರಾಷ್ಟ್ರಪ್ರೇಮದ ಬಗ್ಗೆ ಸುಪ್ರೀಂ ಕೋರ್ಟ್ ಇತ್ತೀಚೆಗಷ್ಟೇ ಅನುಮಾನ ವ್ಯಕ್ತಪಡಿಸಿತ್ತು; ಈ ಕಹಿಘಟನೆ ಜನಮಾನಸದಲ್ಲಿ ಹಚ್ಚಹಸುರಾಗಿಯೇ ಉಳಿದಿದೆ. ಹಾಗಾಗಿ ಅವರಾಡುವ ನುಡಿಗಳ ಬಗ್ಗೆ ಹಿರಿಯ ಕಾಂಗ್ರೆಸ್ಸಿಗರು ಇನ್ನಾದರೂ ಗಮನಹರಿಸಬೇಕಿದೆ. ಗದ್ದಾಗ ಗದ್ದುಗೆಯಲ್ಲಿ ಸಂಭ್ರಮಿಸಿ, ಸೋತಾಗ ಅತಾರ್ಕಿಕ ವಾದಗಳನ್ನು ಮುಂದಿಟ್ಟುಕೊಂಡು ವ್ಯವಸ್ಥೆಯನ್ನು ದೂಷಿಸಿದರೆ ಅದೇ ತಿರುಗುಬಾಣವಾಗುವ ಸಾಧ್ಯತೆಗಳು ದಟ್ಟವಾಗಿವೆ. ಏಕೆಂದರೆ, ಮತದಾರ ಪ್ರಭುಗಳು ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ.

– ಹೊಸೂರು ರತ್ನಾಕರ ಶೆಟ್ಟಿ, ಹಿರಿಯಡ್ಕ

ಠುಸ್ ಎಂದಿತು ರಾಹುಲ್ ಸಿಡಿಸಿದ ಆಟಂಬಾಂಬ್..!

ಪ್ರಕಾಶಪಥ

ಪ್ರಕಾಶ್ ಶೇಷರಾಘವಾಚಾರ್
vveditoped@gmail.com

"ಚುನಾವಣಾ ಆಯೋಗದ ವಿರುದ್ಧ ನಾನು ಹೊರಹಾಕುವ ಮಾಹಿತಿಯು ಅಣುಬಾಂಬ್ ಸ್ಫೋಟದಂತೆ ಇರಲಿದೆ'' ಎಂಬುದಾಗಿ ಸಂಸತ್ತಿನ ಆವರಣದಲ್ಲಿ ಗರ್ಜಿಸಿದ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿಯವರು ತಮ್ಮ ಆ ಸ್ಫೋಟಕ ಹೇಳಿಕೆಯಿಂದ ತಲ್ಲಣವನ್ನೇ ಸೃಷ್ಟಿಸಿಬಿಟ್ಟರು. ''ಬೆಂಗಳೂರು ಸೆಂಟ್ರಲ್ ಲೋಕಸಭಾ ಕ್ಷೇತ್ರದ ಭಾಗವಾದ ಮಹದೇವಪುರ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಅವ್ಯವಹಾರ ನಡೆದಿದೆ. ಕಳೆದ 6 ತಿಂಗಳಿಂದ ಮತದಾರರ ಪಟ್ಟಿಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಅನೇಕ ಆಘಾತಕಾರಿ ವಿಷಯಗಳು ಬಯಲಾಗಿವೆ. ಇದನ್ನು ಸಾಕ್ಷಿ ಸಮೇತ ಸಾಬೀತುಪಡಿಸುವೆ'' ಎಂದು ಅವರು ಘೋಷಿಸಿದ್ದರ ಜತೆಗೆ, ''ಚುನಾವಣಾ ಆಯೋಗವು ಬಿಜೆಪಿಯ ಕೈಗೊಂಬೆಯಾಗಿ ವರ್ತಿಸಿ ಮತದಾರರ ಪಟ್ಟಿಯಲ್ಲಿ ಭಾರಿ ವಂಚನೆ ನಡೆಸಿದೆ'' ಎನ್ನುವ ಮೂಲಕ ಈ ಸಂವಿಧಾನಬದ್ಧ ಸಂಸ್ಥೆಯನ್ನು 'ವಂಚಕ' ಎಂದು ಹೀಗಳೆದರು.

ದೆಹಲಿಯಲ್ಲಿ ಆಗಸ್ಟ್ 7ರಂದು ಅವರು ನಡೆಸಿದ ಬಹುನಿರೀಕ್ಷಿತ ಪತ್ರಿಕಾಗೋಷ್ಠಿಯಲ್ಲಿ, ''ಮಹದೇವಪುರ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಸುಮಾರು ಒಂದು ಲಕ್ಷದ ಇನ್ನೂರೈವತ್ತು ನಕಲಿ ಮತದಾರರನ್ನು ಸೇರ್ಪಡೆ ಮಾಡಲಾಗಿದ್ದು, ಇದರಿಂದಾಗಿ ಕಾಂಗ್ರೆಸ್ ಅಭ್ಯರ್ಥಿ 35 ಸಾವಿರ ಮತಗಳ ಅಂತರದಿಂದ ಸೋಲುವಂತಾಯಿತು'' ಎಂದರು. ರಾಹುಲರು ಪಟ್ಟಿಮಾಡಿದ ಐದು ಬಗೆಯ ಲೋಪಗಳು ಹೀಗಿವೆ:

1. ನಕಲಿ ಮತದಾರರು: 11,965
2. ನಕಲಿ ಮತ್ತು ಅಮಾನ್ಯ ವಿಳಾಸಗಳು: 40,009
3. ಒಂದೇ ವಿಳಾಸದಲ್ಲಿ ಹೆಚ್ಚು ಮತಗಳು: 10,452
4. ಅಮಾನ್ಯ ಫೋಟೋಗಳು: 4,132
5. ಫಾರಂ 6ರ ದುರುಪಯೋಗ: 33,692

ರಾಹುಲ್ ಗಾಂಧಿಯವರು ಮಹದೇವಪುರ ಮೀಸಲು ಕ್ಷೇತ್ರವನ್ನು ತಮ್ಮ ಪ್ರಯೋಗಕ್ಕೆ ಆಯ್ಕೆಮಾಡಿಕೊಂಡಿದ್ದು ಅಚ್ಚರಿದಾಯಕವಾಗಿದೆ. ಈ ಕ್ಷೇತ್ರದಲ್ಲಿ 3 ಬಾರಿ ಶಾಸಕರಾಗಿದ್ದ ಅರವಿಂದ ಲಿಂಬಾವಳಿಯವರು 4ನೇ ಬಾರಿಗೆ ತಮ್ಮ ಪತ್ನಿಯನ್ನು ಗೆಲ್ಲಿಸಿಕೊಂಡಿದ್ದಾರೆ. ಕ್ಷೇತ್ರದ ಮೇಲೆ ಅವರಿಗೆ ಅಂಥದೊಂದು ಹಿಡಿತವಿರುವಾಗ ಆರೋಪ ಮಾಡುವವರು ಹೆಚ್ಚಿನ ಎಚ್ಚರಿಕೆಯನ್ನು ವಹಿಸಬೇಕಾಗಿತ್ತು. ಆದರೆ ಅವರು ದೆಹಲಿಯಲ್ಲಿ ಕುಳಿತು ತಮ್ಮ ಸಂಶೋಧನಾ ತಂಡಕ್ಕೆ ಮತದಾರರ ಪಟ್ಟಿಯನ್ನು ನೀಡಿ, ಅದರಲ್ಲಿರುವ ತಪ್ಪುಗಳನ್ನು ಪತ್ತೆಹಚ್ಚುವಂತೆ ತಾಕೀತುಮಾಡಿದ್ದಾರೆ. ತಲಸ್ಪರ್ಶಿ ವಾಸ್ತವಿಕತೆಯ ಅರಿವಿಲ್ಲದೆ ಅಥವಾ ತಪ್ಪು ಮಾಹಿತಿಯನ್ನು ನೀಡಿ ಜನರನ್ನು ದಾರಿ ತಪ್ಪಿಸುವ ಸಲುವಾಗಿಯೇ, ''ಮತದಾರರ ಪಟ್ಟಿಯಲ್ಲಿ ನಕಲಿ ಮತದಾರರನ್ನು ಸೇರಿಸಿ ಬಿಜೆಪಿಯು ಚುನಾವಣೆಯನ್ನು ಗೆಲ್ಲುತ್ತಿದೆ'' ಎಂದು ಅಪಪ್ರಚಾರ ಕೈಗೊಳ್ಳುವ ತಂತ್ರಗಾರಿಕೆಯನ್ನು ರಾಹುಲ್‌ರವರು ಅನುಸರಿಸುತ್ತಿದ್ದಾರೆ.

ಮಹದೇವಪುರ ಕ್ಷೇತ್ರದಲ್ಲಿ 11,965 ನಕಲಿ ಮತದಾರರಿದ್ದಾರೆ, ಒಂದಕ್ಕಿಂತ ಹೆಚ್ಚು ಕಡೆ ಮತದಾರರಾಗಿ ನೋಂದಣಿ ಮಾಡಿಸಿದ್ದಾರೆ ಎಂಬುದು ಇವರ ಮೊದಲ ಆರೋಪ. ಅವರೆಲ್ಲರೂ ಬಿಜೆಪಿಗೇ ವೋಟು ಮಾಡಿದ್ದಾರೆಂದು ರಾಹುಲ್ ಪತ್ತೆ ಹಚ್ಚಿದ್ದಾರೆಂದರೆ ಅದೆಂಥಾ ಪವಾಡಸದೃಶ ಸಂಶೋಧನೆ! ವಾಸ್ತವವೇನೆಂದರೆ, ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಕಡೆ ನೋಂದಾಯಿಸಿರುವುದು ಹೊಸದಲ್ಲ. ವರ್ಗಾವಣೆಯ ಕೆಲಸದಲ್ಲಿರುವವರು, ಮನೆ ಅಥವಾ ಊರು ಬದಲಾಯಿಸಿದವರು, ತಾವು ತೆರಳಿದ ಸ್ಥಳದ ವ್ಯಾಪ್ತಿಯಲ್ಲಿ ಮತ್ತೆ ನೋಂದಣಿ ಮಾಡಿಸುವುದರಿಂದ ಅವರ ಹೆಸರು ಒಂದಕ್ಕಿಂತ ಹೆಚ್ಚು ಸ್ಥಳದಲ್ಲಿ ನೋಂದಣಿಯಾಗಿರುತ್ತದೆ. ಈ ರೀತಿ ವಿಳಾಸ ಬದಲಾಯಿಸಿದವರು ಫಾರಂ 7ನ್ನು ಸಲ್ಲಿಸಿ, ತಮ್ಮ ಹೆಸರನ್ನು ಕೈಬಿಡಲು ಕೋರಬೇಕು. ಆದರೆ ಬಹುತೇಕರು ಅರ್ಜಿ ಸಲ್ಲಿಸುವ ಗೋಜಿಗೇ ಹೋಗುವುದಿಲ್ಲ. ಹೀಗಾಗಿ ಅವರ ಹೆಸರು ಒಂದಕ್ಕಿಂತ ಹೆಚ್ಚು ಸ್ಥಳದಲ್ಲಿ ನೋಂದಣಿಯಾಗಿರುತ್ತದೆ. ಅದನ್ನು ರುಜುವಾತುಪಡಿಸಿದಾಗ ಅವರ ಮೇಲೆ ಚುನಾವಣಾ ಆಯೋಗವು ಕ್ರಮವನ್ನು ಜರುಗಿಸಬಹುದು. ಆದರೆ ರಾಹುಲ್ ತಮ್ಮ ಆರೋಪವನ್ನು ದೃಢಪಡಿಸಲು ಈತನಕ ಯಾವ ಸಾಕ್ಷ್ಯವನ್ನೂ ನೀಡಿಲ್ಲ.

ನಕಲಿ ಮತ್ತು ಅಮಾನ್ಯ ವಿಳಾಸಗಳ ಬಾಬತ್ತಿನಲ್ಲಿ ಅವರು 40 ಸಾವಿರ ಮತಗಳು ಎಂದು ಲೆಕ್ಕ ಹಾಕಿದ್ದಾರೆ. ಮತದಾರರ ಪಟ್ಟಿಯಲ್ಲಿ ಪುಟಗಟ್ಟಳೆಯಾಗಿ ಮನೆಗಳ ಸಂಖ್ಯೆಯನ್ನು 'ಸೊನ್ನೆ' ಎಂದು ತಪ್ಪಾಗಿ ನಮೂದಿಸಲಾಗಿದೆ ಎಂಬುದು ರಾಹುಲರ ಎರಡನೆಯ ಆರೋಪ. ಇದು ಮಹದೇವಪುರ ಕ್ಷೇತ್ರಕ್ಕಷ್ಟೇ ಸೀಮಿತವಾಗಿಲ್ಲ; ಮಸ್ಕಿ, ಸೊಂಡೂರು, ಸಿದ್ದರಾಮಯ್ಯನವರ ವರುಣಾ, ಡಿ.ಕೆ. ಶಿವಕುಮಾರ್‌ರವರ ಕನಕಪುರ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಈ ಪರಿಯನ್ನು ಕಾಣಬಹುದು. ಇದರರ್ಥ ಈ ವಿಳಾಸಗಳು ನಕಲಿ ಅಂತಲ್ಲ; ಅಲ್ಲಿ ಮನೆಗಳಿವೆ ಮತ್ತು ಮತದಾರರ ಪಟ್ಟಿಯಲ್ಲಿರುವವರು ಆ ಮನೆಗಳಲ್ಲಿ ವಾಸಮಾಡುತ್ತಿದ್ದಾರೆ ಎಂದರ್ಥ. ರಾಹುಲ್ ಗಾಂಧಿಯವರು ಇಂಥ ವಿಳಾಸದ ಮನೆಗಳ ತಪಾಸಣೆ ಮಾಡಿಸಿ, ಆ ವಿಳಾಸದಲ್ಲಿ ಮತದಾರರು ಇದ್ದಾರಾ ಅಥವಾ ಖಾಲಿ ನಿವೇಶನವಾ? ಎಂಬುದನ್ನು ಖಚಿತಪಡಿಸಿಕೊಳ್ಳಬೇಕಿತ್ತು. ಆದರೆ, ಅವರು ವಾಸ್ತವಿಕತೆಯನ್ನು ಅರಿಯದೆ 'ಸೊನ್ನೆ' ಎಂದು ನಮೂದಿಸಿರುವ ಮನೆಗಳನ್ನು 'ನಕಲಿ ಮತದಾರರು' ಎಂದು ಹಣೆಪಟ್ಟಿ ಕಟ್ಟಿಬಿಟ್ಟರು!

ಇನ್ನು, ಒಂದೇ ವಿಳಾಸದಲ್ಲಿ 10,452ಕ್ಕೂ ಹೆಚ್ಚು ಮತಗಳಿವೆ ಎಂಬ ಆರೋಪವು, ಮತ್ತದೇ ತಲಸ್ಪರ್ಶಿ ಮಾಹಿತಿ ಪಡೆಯದೆ ಮಾಡಿರುವಂಥದ್ದು. ಮುನಿರೆಡ್ಡಿ ಗಾರ್ಡನ್ 'ಮನೆ ಸಂಖ್ಯೆ 35' ಇಂದು ದೇಶದಲ್ಲೆಲ್ಲಾ ಚಿರಪರಿಚಿತವಾಗಿದೆ. ಈ ಮನೆಯ ಹೆಸರಲ್ಲಿ 80 ಮತಗಳು ನೋಂದಣಿಯಾಗಿವೆ ಎಂಬ ಗಂಭೀರ ಆರೋಪ ರಾಹುಲರದ್ದು. ಆದರೆ ಇದರ ಹಿನ್ನೆಲೆಯನ್ನು ಒಮ್ಮೆ ತನಿಖೆ ಮಾಡಿದ್ದಿದ್ದರೆ ಅವರಿಗೆ ಸತ್ಯ ಗೊತ್ತಾಗುತ್ತಿತ್ತು. ಆ ಮನೆಯಲ್ಲಿ ಕಳೆದ 10 ವರ್ಷದಿಂದ ಬಾಡಿಗೆಗೆ ಬಂದವರು ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಿಕೊಂಡಿರುತ್ತಾರೆ; ಅವರು ಮನೆ ಬಿಟ್ಟು ಬೇರೆಡೆಗೆ ಹೋಗಿ ಹೊಸದಾಗಿ ಬಾಡಿಗೆಗೆ ಬಂದವರು ಅದೇ ವಿಳಾಸವನ್ನು ಕೊಟ್ಟು ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಿಸುತ್ತಿದ್ದರು ಮತ್ತು ಮನೆಬಿಟ್ಟು ಹೋದವರು ಮತದಾರರ ಪಟ್ಟಿಯಿಂದ ತಮ್ಮ ಹೆಸರನ್ನು ತೆಗೆಸಲು ಅರ್ಜಿಯನ್ನು ಕೊಡುತ್ತಿರಲಿಲ್ಲ. ಹೀಗಾಗಿ ಒಂದೇ ವಿಳಾಸದಲ್ಲಿ 80 ಮತದಾರರ ನೋಂದಣಿಯಾಗಿದೆ. ವಾಸ್ತವವಾಗಿ ಆ ವಿಳಾಸದಲ್ಲಿ ಸದ್ಯ ವಾಸವಿರುವ 6 ಜನ ಮಾತ್ರವೇ ಮತದಾನ ಮಾಡಿರುವುದು. ಗಾಂಧಿನಗರ, ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಇಂಥ ಪ್ರಕರಣಗಳು ದೊರೆಯುತ್ತವೆ. ಪಾಲಿಕೆಯ ಅಧಿಕಾರಿಗಳು ಮತ್ತು ರಾಜಕೀಯ ಪಕ್ಷಗಳ ಕಾರ್ಯಕರ್ತರು ಸರಿಯಾಗಿ ಕೆಲಸ ಮಾಡಿದ್ದರೆ, ವಿಳಾಸದಲ್ಲಿ ವಾಸವಿಲ್ಲದ ಮತದಾರರು ಪಟ್ಟಿಯಿಂದ ಎಂದೋ ಹೊರಗಿರುತ್ತಿದ್ದರು.

''ನನ್ನ ಮತ ಈಗಲೂ ಮೂರು ಕಡೆ ಇದೆ, ಕಾರಣ ವರ್ಗಾವಣೆಯಾಗಿ ಹೋದ ಊರಲ್ಲಿ ಮತದಾರರ ಪಟ್ಟಿಗೆ ಸೇರ್ಪಡೆಯಾಗುತ್ತಿದ್ದೆ. ಫಾರಂ 7 ಸಲ್ಲಿಸಿ ನನ್ನ ಹೆಸರನ್ನು ತೆಗೆಸಲು ಕೋರುವ ತಾಪತ್ರಯಕ್ಕೆ ಹೋಗಿಲ್ಲ'' ಎನ್ನುತ್ತಾರೆ ನನ್ನ ಸ್ನೇಹಿತರೊಬ್ಬರು. ಮತದಾರರ ಪಟ್ಟಿಯಿಂದ ಹೆಸರು ತೆಗೆಯುವ ಪ್ರಕ್ರಿಯೆ ಸರಳೀಕರಣಗೊಂಡಿಲ್ಲ. ಹೀಗಾಗಿ ಅದರ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಇದಕ್ಕೆ ಪರಿಹಾರವೆಂದರೆ, ಆಧಾರ್ ಸಂಖ್ಯೆಯನ್ನು ಮತದಾರರ ಗುರುತಿನ ಚೀಟಿಯೊಂದಿಗೆ ಜೋಡಣೆ ಮಾಡುವುದು. ಆಗ ಹೆಚ್ಚುವರಿಯಾಗಿರುವ ಸಾವಿರಾರು ಮತದಾರರು ಪಟ್ಟಿಯಿಂದ ಹೊರಹೋಗುತ್ತಾರೆ.

ಮಹದೇವಪುರದ ಐಟಿ ಕ್ಷೇತ್ರದ ಮತದಾರರು ಒಂದಕ್ಕಿಂತ ಹೆಚ್ಚು ಕಡೆ ಮತ ಚಲಾಯಿಸಿದ್ದಾರೆ ಎಂದರೆ ಅದು ನಂಬಲಾಗದ ವಿಷಯ. ಯಾರೂ ತಮ್ಮ ಭವಿಷ್ಯವನ್ನು ಪಣಕ್ಕಿಟ್ಟು ಹೀಗೆ ನಕಲಿ ಮತವನ್ನು ಚಲಾಯಿಸುವುದಿಲ್ಲ. ಅವರು ಒಮ್ಮೆ ಬಂದು ಮತ ಚಲಾಯಿಸಿದರೆ ಸಾಕಾಗಿದೆ; ಹೀಗಿರುವಾಗ ಇನ್ನೂ 2-3 ಬಾರಿ ವೋಟು ಹಾಕಿ ಸಿಕ್ಕಿಬಿದ್ದು ಜೈಲಿಗೆ ಹೋಗುವಷ್ಟು ಮೂರ್ಖರಲ್ಲ ಅವರು. ಇನ್ನು, ವಲಸೆ ಬಂದ ಕಾರ್ಮಿಕರು ತಮ್ಮ ಜೀವನ ನಿರ್ವಹಣೆಯಾದರೆ ಸಾಕಪ್ಪ ಅಂತ ಇರುತ್ತಾರೆ, ಅವರು ಯಾರನ್ನೋ ಗೆಲ್ಲಿಸಲು ತಮ್ಮ ಭವಿಷ್ಯವನ್ನು ಅಪಾಯಕ್ಕೆ ತಳ್ಳಿಕೊಳ್ಳುತ್ತಾರೆ ಎಂದರೆ ಅದನ್ನು ರಾಹುಲ್ ಗಾಂಧಿಯವರಷ್ಟೇ ನಂಬಬೇಕು.

ಎರಡೆರಡು ಕಡೆ ನೋಂದಣಿಯಾಗಿರುವುದು, ಮನೆಯ ವಿಳಾಸವನ್ನು 'ಸೊನ್ನೆ' ಎಂದು ತಪ್ಪಾಗಿ ನಮೂದಿಸಿರುವುದು ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಅಧಿಕಾರಿಗಳ ಕರ್ತವ್ಯಲೋಪದಿಂದ ಆಗಿರುವಂಥದ್ದೇ ವಿನಾ, ಅದರಲ್ಲಿ ಯಾವುದೇ ರಾಜಕೀಯ ಪಕ್ಷದ ಕೈವಾಡವಿರಲು ಸಾಧ್ಯವೇ ಇಲ್ಲ. ಆದಾಗ್ಯೂ, ಬಿಜೆಪಿಯು ಚುನಾವಣೆಯನ್ನು ವಂಚನೆಯಿಂದ ಗೆಲ್ಲುತ್ತಿದೆ ಎಂದು ಜನರನ್ನು ನಂಬಿಸುವ ಸಲುವಾಗಿ ತಪ್ಪು ಮಾಹಿತಿಯನ್ನು ನೀಡಲಾಗುತ್ತಿದೆ.

'ಶಗುನ್ ರಾಣಿ ಎಂಬ 70 ವರ್ಷದ ಹಿರಿಯ ನಾಗರಿಕರ ಹೆಸರು 3 ಕಡೆ ಇದೆ ಮತ್ತು ಅವರು 2 ಕಡೆ ವೋಟು ಮಾಡಿದ್ದಾರೆ' ಎಂದು ಹೇಳಿ ಫೋಟೋಶಾಪ್ ಮಾಡಲಾದ ಚಿತ್ರವನ್ನು ಬಳಸಿ ರಾಹುಲ್ ಆಕೆಗೆ ಅಪಮಾನ ಮಾಡಿದ್ದಾರೆ, ಹಲವು ಮತದಾರರ ವಿವರವನ್ನು ಹೇಳಿ ಆ ಅಮಾಯಕರಿಗೆ ತೀವ್ರ ಮುಜುಗರ ಉಂಟುಮಾಡಿದ್ದಾರೆ. ಇವರ ಪೈಕಿ ಯಾರಾದರೂ ಒಂದೊಮ್ಮೆ ಮಾನನಷ್ಟದ ನ್ಯಾಯಾಲಯದ ಮೆಟ್ಟಿಲೇರಿದರೆ ರಾಹುಲ್ ಸಂಕಷ್ಟಕ್ಕೆ ಸಿಲುಕುವುದು ನಿಶ್ಚಿತ. ಇನ್ನು, ಮತದಾರರ ಪಟ್ಟಿಯಲ್ಲಿ 4,132 ಜನರ ಫೋಟೋ ಚಿಕ್ಕದಿರುವುದನ್ನು ಕಂಡು ರಾಹುಲರು 'ಅಮಾನ್ಯ ಫೋಟೋ' ಎಂದು ನಿರ್ಧರಿಸಿಬಿಟ್ಟಿದ್ದಾರೆ; ಮತದಾನದ ದಿನದಂದು ಡ್ರೈವಿಂಗ್ ಲೈಸೆನ್ಸ್ ಅಥವಾ ಆಧಾರ್ ಕಾರ್ಡ್ ಮುಂತಾದ, ಚುನಾವಣಾ ಆಯೋಗವು ತಿಳಿಸಿರುವ 32 ಬಗೆಯ ಗುರುತಿನ ಚೀಟಿಗಳ ಪೈಕಿ ಒಂದನ್ನು ತೋರಿಸಬಹುದು. ಆದ್ದರಿಂದ ಈ ಆರೋಪವೂ ನಿರಾಧಾರವಾಗಿದೆ.

2014, 2019 ಮತ್ತು 2024ರ ವರ್ಷಗಳಲ್ಲಿ ಲೋಕಸಭಾ ಚುನಾವಣೆಗಳು ನಡೆದಾಗ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿತ್ತು. ರಾಜ್ಯ ಸರಕಾರದ ಸಿಬ್ಬಂದಿಗಳೇ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವವರು ಎಂಬ ಪ್ರಾಥಮಿಕ ಮಾಹಿತಿಯು ರಾಹುಲ್‌ರವರಿಗೆ ತಿಳಿದಿಲ್ಲವಾ? ಮತದಾರರ ಪಟ್ಟಿಯಲ್ಲಿ ದೋಷವಿದ್ದರೆ, ಆ ಕಾಲಘಟ್ಟದ ರಾಜ್ಯ ಸರಕಾರವು ಅದರ ಹೊಣೆಯನ್ನು ಹೊರಬೇಕು; ಆದರೆ ಇದರ ಕುರಿತು ಸತ್ಯವನ್ನು ನುಡಿದ ಸಚಿವ ರಾಜಣ್ಣನವರನ್ನು ಸಂಪುಟದಿಂದ ವಜಾ ಮಾಡಲಾಗಿದೆ.

ಚುನಾವಣಾ ಆಯೋಗದ ಮೇಲೆ ಜನರಿಟ್ಟಿರುವ ವಿಶ್ವಾಸವನ್ನು ಹಾಳುಮಾಡುವ ಪ್ರಯತ್ನವು ನಿರಂತರವಾಗಿ ನಡೆಯುತ್ತಿದೆ. ಚುನಾವಣೆಗಳಲ್ಲಿ ಬಿಜೆಪಿಯು ಮತವಂಚನೆಯ ಮೂಲಕ ಗೆಲ್ಲುತ್ತಿದೆ ಎಂದು ನಂಬಿಸಲು ಕಾಂಗ್ರೆಸ್ ಪಕ್ಷವು ಶಕ್ತಿಮೀರಿ ಪ್ರಯತ್ನಿಸುತ್ತಿರುವುದು ಸ್ಪಷ್ಟ. ಅಂತೆಯೇ, ತಮ್ಮ ಉದ್ದೇಶ ಸಾಧನೆಗೆಂದು ಸಂವಿಧಾನಬದ್ಧ ಸಂಸ್ಥೆಯೊಂದನ್ನು ಬೆದರಿಸುವ ಅತಿರೇಕದ ವರ್ತನೆಯನ್ನು ರಾಹುಲ್ ಗಾಂಧಿಯವರು ತೋರಿ ತಮ್ಮ ಹತಾಶೆಯನ್ನು ಬಯಲುಮಾಡಿಕೊಂಡಿದ್ದಾರೆ, ಅಷ್ಟೇ!

(ಲೇಖಕರು ಬಿಜೆಪಿಯ ವಕ್ತಾರರು)

ಭಟ್ಟರ್ ಸ್ಕಾಚ್

- **ಶಂಕರ ಪಿ.ನಾರಾಯಣ, ಬೆಂಗಳೂರು**
ಭಟ್ರೇ, ನೀವು ದೆವ್ವವನ್ನು ನೋಡಿದ್ದೀರಾ?
- **ಪ್ರತಿ ಬೆಳಗ್ಗೆ ಕನ್ನಡಿ ಎದುರಿಗೆ ನಿಂತಾಗ ಕಾಣುವುದನ್ನು ನೋಡಿಲ್ಲವಾ?!**

- **ರಾಜು ಶೆಟ್ಟಿ, ಕೊಪ್ಪ**
ಭಟ್ರೇ, ನಿಮ್ಮ ಪ್ರಕಾರ 'ಡಯಟ್' ಅಂದರೆ ಏನು?
- **ದಿನವಿಡೀ ಯಾವ ಆಹಾರ ತಿನ್ನಬೇಕು ಅಂತ ಯೋಚಿಸುವುದು!**

- **ದಿವಾಕರ ಹೆಗಡೆ, ಶಿರಸಿ**
ಭಟ್ರೇ, ಕೆಲವರು ಅಡುಗೆ ಮಾಡಲು ಹೋದಾಗ ಏನಾಗುತ್ತದೆ?
- **ಅಡುಗೆಮನೆಯಲ್ಲಿರುವ ಫೈರ್ ಅಲಾರಂ ಕಿರುಚಿಕೊಳ್ಳುತ್ತದೆ!**

- **ಸೌಂದರ್ಯ, (ಇಮೇಲ್ ಮೂಲಕ)**
ಭಟ್ರೇ, ಕೆಲವರು ಪಾಸ್‌ಪೋರ್ಟ್ ಫೋಟೋದಲ್ಲಿ ಯಾವಾಗ್ಲೂ ಯಾಕೆ ನಗುವುದಿಲ್ಲ?
- **ಯಾಕೆಂದರೆ, ಮುಂದಿನ ಹತ್ತು ವರ್ಷ ನಾನೇ ಇರುತ್ತೇನೆ ಅಂತ ಅವರಿಗೆ ಗೊತ್ತಿರುತ್ತದೆ!**

- **ಪ್ರಭಾ ನಿಟ್ಟೆಕಾರ, ಬೆಂಗಳೂರು**
ಭಟ್ರೇ, ಬೆಳಗ್ಗೆ ಎದ್ದ ಕೂಡಲೇ ಕೆಲವರ ಚಾಕರಿ ಏನು?
- **ಆನ್‌ಲೈನ್ ಶಾಪಿಂಗ್ ಮಾಡುವುದು!**

- **ರೂಪಾ ಮಠದ, ಹುಬ್ಬಳ್ಳಿ**
ಭಟ್ರೇ, ಜನ ಸಿನಿಮಾ ನೋಡಲು ಥಿಯೇಟರ್‌ಗೆ ಏಕೆ ಹೋಗುತ್ತಾರೆ?
- **ಪಾಪ್‌ಕಾರ್ನ್ ತಿನ್ನಲು!**

- **ನೂತನ ಕೊಪಲಿ, (ಇಮೇಲ್ ಮೂಲಕ)**
ಭಟ್ರೇ, ಕೆಲವರು ದಿನವಿಡೀ ಮೊಬೈಲ್ ಹಿಡಿದೇ ಇರ್ತಾರಲ್ಲ?
- **ಅವರ ಫೋನ್, ಅವರ ಹಕ್ಕು!**

- **ಭರತ್ ಮೊಂಡಾಜೆ, ಮಂಗಳೂರು**
ಭಟ್ರೇ, ನಿಮ್ಮ ಜೀವನದ ಅತಿ ದೊಡ್ಡ ಸವಾಲು ಯಾವುದು?
- **ಟಿವಿ ರಿಮೋಟ್ ಕಂಟ್ರೋಲ್ ಎಲ್ಲಿ ಇಟ್ಟಿದ್ದೇನೆ ಅಂತ ಹುಡುಕುವುದು!**

- **ಕಿರಣ್ ರವಿ ವಿ., ಕತ್ತರಿಗುಪ್ಪೆ**
ಭಟ್ರೇ, ನಿಮ್ಮ ಅಂಕಣ ನನಗೆ ಟಾನಿಕ್ ಇದ್ದ ಹಾಗೆ ಅಂತ ನನ್ನ ಸ್ನೇಹಿತೆ ಹೇಳ್ತಾಳಲ್ಲ?
- **ಆದರೂ ಟಾನಿಕ್ ತೆಗೆದುಕೊಳ್ಳುವುದನ್ನು ಮರೆಯಬೇಡ ಅಂತ ಹೇಳಬೇಕಿತ್ತು!**

ಆಹಾರ ಸೇವಿಸುವ ಮುನ್ನ ಗಮನಿಸಿ ಈ ಆರನ್ನು...

ಆಯುರ್ವೇದದ ಪ್ರಕಾರ ಚಿಂತಾ, ಶೋಕ, ಭಯ, ಕ್ರೋಧ ಮತ್ತು ಉದ್ವೇಗಗಳು ಇದ್ದಾಗ ಆಹಾರ ಸೇವಿಸಿದರೆ ಅದು ಸರಿಯಾಗಿ ಜೀರ್ಣವಾಗುವುದಿಲ್ಲ. ಕಾರಣ, ನಮ್ಮ ಭಾವನೆಗಳಿಗೂ ಮತ್ತು ನಮ್ಮ ಜೀರ್ಣಕ್ರಿಯೆಗೂ ನೇರವಾದ ಸಂಬಂಧವಿದೆ. ಮಾನಸಿಕ ಏರುಪೇರುಗಳಿಂದ ಜೀರ್ಣಕ್ರಿಯೆಯೂ ಏರುಪೇರು ಆಗುತ್ತದೆ. ಅಂತೆಯೇ ಜೀರ್ಣಕ್ರಿಯೆ ಸರಿ ಇಲ್ಲದಿದ್ದಾಗ ಮಾನಸಿಕ ಅಸಮತೋಲನವು ಕಾಣಿಸಿಕೊಳ್ಳುತ್ತದೆ. ಹಾಗಾಗಿ ಒಳ್ಳೆಯ ಮನಸ್ಸಿನಿಂದ ಮತ್ತು ಉತ್ತಮ ಭಾವನೆಗಳೊಂದಿಗೆ ಆಹಾರವನ್ನು ಸೇವಿಸುವುದು ಸದಾ ಶ್ರೇಷ್ಠ.

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ಬೆಳಗ್ಗೆ ಎದ್ದ ಕೂಡಲೇ ಒಂದು ಲೀಟರ್‌ನಷ್ಟು ನೀರು, ಸ್ವಲ್ಪ ಹೊತ್ತು ಬಿಟ್ಟು ಒಂದು ಬಟ್ಟಲಿನಷ್ಟು ನೆನೆಸಿಟ್ಟ ಡ್ರೈ ಫ್ರೂಟ್ಸ್, ಸ್ವಲ್ಪ ಸಮಯದ ನಂತರ ರಾಗಿ ಗಂಜಿ/ಅಂಬಲಿ. ಇದಾದ ಮೇಲೆ ವ್ಯಾಯಾಮ. ವ್ಯಾಯಾಮದ ಮಧ್ಯೆ ಮಧ್ಯೆ ಜ್ಯೂಸ್ ಹೀರುವ ಅಭ್ಯಾಸ. ನಂತರ ಮನೆಯಲ್ಲಿ ಎಲ್ಲರಿಗೂ ತಯಾರಿಸಿದಂಥ ತಿಂಡಿಯ ಸೇವನೆ. ಜತೆಗೆ ಟೀ ಅಥವಾ ಕಾಫಿ ಇರಲೇಬೇಕು. ಒಂದೆರಡು ಗಂಟೆಗಳು ಕಳೆದ ಮೇಲೆ ಒಂದು ಬಟ್ಟಲಿನಷ್ಟು ಹಣ್ಣು. ಸ್ವಲ್ಪ ಹೊತ್ತಾದ ಮೇಲೆ ಸ್ಪ್ರೌಟ್ಸ್ ಅಥವಾ ಸಲಾಡ್. ಮಧ್ಯಾಹ್ನದ ಊಟವಂತೂ ಇದ್ದಿದ್ದೇ. ಊಟದ ನಂತರ ಸ್ವೀಟ್ ತಿನ್ನಬೇಕೆಂಬುವ ಚಪಲ. ಸುಮಾರು ನಾಲ್ಕೂವರೆ ಹೊತ್ತಿಗೆ ಟೀ ಜತೆಗೆ ಬಿಸ್ಕತ್ತು ಅಥವಾ ಖಾರದ ಯಾವುದಾದರೂ ಒಂದು ಕರಿದ ಪದಾರ್ಥ. ನಂತರ ವಾಕಿಂಗ್‌ಗೆ ಹೋಗಿಬಂದ ಮೇಲೆ ಯಾವುದಾದರೂ ಒಂದು ಪಾನೀಯ. ನಂತರದ ಪ್ರಾಣಾಯಾಮಾಭ್ಯಾಸವನ್ನು ಮುಗಿಸಿ ರಾತ್ರಿಯ ಊಟ. ಮಲಗುವ ಮುನ್ನ ಒಂದು ಲೋಟ ಹಾಲನ್ನು ಕುಡಿದರೆ ನಿದ್ದೆಗೆ ಒಳ್ಳೆಯದು ಎಂಬ ಗೆಳೆಯರ ಆದೇಶದಂತೆ ನಿತ್ಯವೂ ರಾತ್ರಿಯ ಸಮಯದಲ್ಲಿ ಕ್ಷೀರಪಾನ. ಇನ್ನು, ಯಾರಾದರೂ ಅತಿಥಿಗಳು ಮನೆಗೆ ಬಂದಾಗ ಅಗಷ್ಟೇ ತಿಂಡಿ ತಿಂದು ಕುಳಿತಿದ್ದರೂ, ಅವರಿಗೆ ಕಾಫಿ ತಿಂಡಿಯನ್ನು ನೀಡಿ ಅವರ ಜತೆಗೆ ಮತ್ತೆ ಮೆಲ್ಲುವ ಅಭ್ಯಾಸ. ಮತ್ತೆ, ವಾಕಿಂಗ್‌ಗೆ ಹೋದಾಗ ಯಾರಾದರೂ ಸ್ನೇಹಿತರು ಸಿಕ್ಕಿಬಿಟ್ಟರೆ ಅಲ್ಲೇ ಹತ್ತಿರದ ಹೋಟೆಲ್‌ಗೆ ಹೋಗಿ ಅವರ ಜತೆ ಸ್ವಲ್ಪ ಕಾಫಿ ಅಥವಾ ಸ್ವಲ್ಪ ತಿಂಡಿ ಸೇವಿಸುವ ಅಭ್ಯಾಸ...

ಮೇಲಿನ ಅಭ್ಯಾಸವಿರುವ ಈ ವ್ಯಕ್ತಿ ನಮ್ಮೆಲ್ಲರಿಗೂ ಚಿರಪರಿಚಿತ ಅನ್ನಿಸುತ್ತಾರೆ, ಅಲ್ಲವೇ? ಕಾರಣ ಮಾಡರ್ನ್ ಲೈಫ್‌ಸ್ಟೈಲ್‌ನ ಮೋಡಿಗೆ ಒಳಗಾದ ನಮ್ಮೆಲ್ಲರದ್ದೂ ಹೆಚ್ಚು ಕಡಿಮೆ ಇದೇ ಕಥೆ. 'ಬದುಕುವುದಕ್ಕಾಗಿ ತಿನ್ನುವುದು' ಎಂದು ನಮ್ಮ ಹಿರಿಯರು ತೋರಿಸಿಕೊಟ್ಟ ಮಾರ್ಗವನ್ನು ಮರೆತು 'ತಿನ್ನುವುದಕ್ಕಾಗಿಯೇ ಬದುಕುವುದು' ಎಂಬ ಆಧುನಿಕತೆಯ ದಾರಿಯನ್ನು ನಮ್ಮದಾಗಿಸುವ ಪ್ರಯತ್ನದಲ್ಲಿದ್ದೇವೆ.

ಕೆಲವರಿಗೆ, ನನ್ನ ಮಾತುಗಳು ಅಚ್ಚರಿಯೆನಿಸಬಹುದು. ಅರೆ, ಇವರು ಯಾಕಪ್ಪ ಹೀಗೆ ಮಾತಾಡ್ತಾ ಇದ್ದಾರೆ?! ಈ ರೀತಿ ತಿನ್ನುವುದರಲ್ಲಿ ತಪ್ಪೇನಿಲ್ವಲ್ಲ? ನಾವೆಲ್ಲರೂ ಇದನ್ನೇ ಮಾಡುವುದಲ್ಲವೇ? ಎಂದೆನಿಸುವುದು ಸಹಜ. ಆದರೆ ಆಯುರ್ವೇದ ಹೇಳುವಂತೆ ನೀತಿ-ನಿಯಮ ಇಲ್ಲದ ಬದುಕು ಮತ್ತು ಶಿಸ್ತು-ಬದ್ಧತೆ ಇಲ್ಲದ ಊಟ ಎಂದಿಗೂ ರೋಗಕಾರಕ. ಹಾಗಾದರೆ, ಬನ್ನಿ ಯಾವಾಗ ತಿನ್ನಬೇಕು ಮತ್ತು ಎಷ್ಟು ತಿನ್ನಬೇಕು ಎಂಬ ಪ್ರಶ್ನೆಗಳಿಗೆ ಆಯುರ್ವೇದ ಸಿದ್ಧಾಂತದಲ್ಲಿ ಸಮಂಜಸವಾದ ಉತ್ತರವನ್ನು ಹುಡುಕೋಣ.

ಆಯುರ್ವೇದದ ಶಾಸ್ತ್ರದಲ್ಲಿ ನಮ್ಮ ಆಚಾರ್ಯರು ಒಂದು ಕಡೆ ಹೀಗೆ ಉಲ್ಲೇಖಿಸಿದ್ದಾರೆ- ಸಾಮಾನ್ಯವಾಗಿ ಎಲ್ಲಾ ರೋಗಗಳಿಗೂ ಮೂಲ ಕಾರಣವೇ 'ಆಹಾರ'. ಮತ್ತೊಂದೆಡೆ ಆಹಾರವನ್ನು 'ಮಹಾಭೈಷಜ್ಯ' ಎಂದು ಕರೆದಿದ್ದಾರೆ. ಅಂದರೆ, ಆಹಾರಕ್ಕೆ ಮಿಗಿಲಾದ ಔಷಧವಿಲ್ಲ ಎಂದು. ಹಾಗಾದರೆ, ಎಲ್ಲ ವ್ಯಾಧಿಗಳಿಗೂ ಕಾರಣವಾಗುವ ಆಹಾರವನ್ನು ಒಂದು ಮಹತ್ತರವಾದ ಔಷಧಿಯನ್ನಾಗಿ ಬದಲಾಯಿಸುವ ವಿಧಿ ಏನು? ಎನ್ನುವ ಪ್ರಶ್ನೆಗೆ ಏಕೈಕ ಉತ್ತರವೆಂದರೆ ಆಹಾರ ಸೇವನಾ ನಿಯಮವನ್ನು ಪಾಲಿಸುವುದು. ಆಯುರ್ವೇದದಲ್ಲಿ ಉಲ್ಲೇಖಿಸಿರುವ ಆಹಾರ ವಿಜ್ಞಾನದ ಬಗ್ಗೆ ಅರಿವು ಮೂಡಿಸಿಕೊಳ್ಳುವುದು. ನಮ್ಮ ಶಾಸ್ತ್ರದ ಆಹಾರ ವಿಜ್ಞಾನದಲ್ಲಿ ಯಾವಾಗ ತಿನ್ನಬೇಕು ಎಂಬ ಮುಖ್ಯವಾದ ಪ್ರಶ್ನೆಗೆ ಬಹಳ ವೈಜ್ಞಾನಿಕವಾದ ಉತ್ತರವನ್ನು ಕಾಣಬಹುದು. ಅದರಂತೆ, ಆಹಾರವನ್ನು ಸೇವಿಸುವ ಮುನ್ನ ಈ ಕೆಳಗೆ ಹೇಳಿದ ಲಕ್ಷಣಗಳು ಇವೆಯೇ ಎಂದು ಗಮನಿಸಬೇಕು.

1. **ಮಲ ಮೂತ್ರ ವಿಸರ್ಜನೆ ಆಗಿರಬೇಕು:** ನಾವು ಸೇವಿಸುವ ಆಹಾರವು ಪಚನವಾಗುವಾಗ ಆಹಾರದ ಸಾರಭಾಗ ಹಾಗೂ ಬೇಡದ ವಸ್ತುಗಳ ಮಲಭಾಗವು ಬೇರ್ಪಡೆಯಾಗುತ್ತವೆ. ಸಾರಭಾಗವು ನಮ್ಮ ದೇಹದ ಎಲ್ಲಾ ಧಾತುಗಳನ್ನು ಪೋಷಿಸಿದರೆ, ಮಲಭಾಗವು ಸಮಯಕ್ಕೆ ಸರಿಯಾಗಿ ದೇಹದಿಂದ ಹೊರಹೋಗುವ ಮೂಲಕ ಆರೋಗ್ಯವನ್ನು ಕಾಪಾಡುತ್ತದೆ. ಬೆಳಗ್ಗೆ ಎದ್ದ ಕೂಡಲೇ ಯಾವುದೇ ಬಾಹ್ಯ ಪ್ರಚೋದನೆ ಇಲ್ಲದೆ ಆಗುವ ಮಲಪ್ರವೃತ್ತಿಯು ಸಮಯಕ್ಕೆ ಸರಿಯಾಗಿ ಆಗದಿದ್ದರೆ ಹಸಿವು ಚೆನ್ನಾಗಿ ಆಗುವುದಿಲ್ಲ ಎಂಬುದು ಎಲ್ಲರ ಅನುಭವ. ಆದ್ದರಿಂದ ನಮ್ಮ ಅಗ್ನಿಯು ಸರಿಯಾಗಿ ಪ್ರಚೋದನೆಗೊಂಡು ಸೇವಿಸಿದ ಆಹಾರವು ಉತ್ತಮ ರೀತಿಯಲ್ಲಿ ಜೀರ್ಣವಾಗಬೇಕಾದರೆ, ಸಕಾಲದಲ್ಲಿ ಮಲಪ್ರವೃತ್ತಿಯಾಗಿರಬೇಕು. ಆಹಾರ ಸೇವನೆಗೆ ಇದು ಬಹಳ ಅವಶ್ಯಕವಾದ ಲಕ್ಷಣ.

2. **ಶರೀರವು ಲಘುವಾಗಿರಬೇಕು:** ಸಾಮಾನ್ಯವಾಗಿ ಜೀರ್ಣಕ್ರಿಯೆ ಉತ್ತಮವಾಗಿದ್ದು ದೇಹದಲ್ಲಿ ಯಾವುದೇ ರೀತಿಯ ಆಮ (ಸರಿಯಾಗಿ ಜೀರ್ಣವಾಗದ ಆಹಾರ) ಶೇಖರಣೆ ಇಲ್ಲವಾದರೆ

ಶರೀರವು ಲಘು ಎನಿಸುತ್ತದೆ. ಅಂತೆಯೇ, ಯಾವುದೇ ರೀತಿಯ ಜಡತ್ವ ಅಥವಾ ಆಲಸ್ಯವಿಲ್ಲದಿದ್ದಾಗ ಸೇವಿಸಿದ ಆಹಾರವು ಸರಿಯಾಗಿ ಜೀರ್ಣವಾಗುತ್ತದೆ. ಹಾಗಾಗಿ, ಆಹಾರ ಸೇವನೆಯ ಮುನ್ನವಾಗಿ ನಮ್ಮ ಶರೀರದ ಸ್ಥಿತಿಯನ್ನು ಗಮನಿಸಿ ನಂತರ ಆಹಾರ ಬೇಕೇ ಬೇಡವೇ ಎಂದು ವಿವೇಚಿಸಿ ಸೇವಿಸುವುದು ಒಳ್ಳೆಯದು. ಇಂದ್ರಿಯಗಳು ಶುದ್ಧವಾಗಿರಬೇಕು- ಇಂದ್ರಿಯಗಳಲ್ಲಿ, ವಿಶೇಷವಾಗಿ ನಮ್ಮ ನಾಲಿಗೆ ಮತ್ತು ಮೂಗುಗಳು ಸುಸ್ಥಿತಿಯಲ್ಲಿದ್ದಾಗ ಆಹಾರವು ಹೆಚ್ಚು ರುಚಿಸುತ್ತದೆ. ಆಹಾರದ ದೃಶ್ಯ ಮತ್ತು ಘಮಘಮಿಸುವ ಪರಿಮಳ ಬಂದರೆ ಅದರಿಂದ ನಮ್ಮ ಹಸಿವು ಇನ್ನೂ ಹೆಚ್ಚಾಗಿ, ಜೀರ್ಣಕ್ರಿಯೆ ಉತ್ತಮಗೊಂಡು, ಆಹಾರವು ಸರಿಯಾದ ರೀತಿಯಲ್ಲಿ ಜೀರ್ಣಗೊಳ್ಳುತ್ತದೆ. ಆದರೆ ಇಂದ್ರಿಯಗಳಲ್ಲಿಯೇ ಜಡತ್ವವಿದ್ದರೆ ಅದು ಖಂಡಿತವಾಗಿಯೂ ಅಜೀರ್ಣದ ಲಕ್ಷಣ. ಅಂಥ ಸ್ಥಿತಿಯಲ್ಲಿ ಆಹಾರವನ್ನು ಸೇವಿಸಿದರೆ ಮತ್ತಷ್ಟು ತೊಂದರೆಯಾಗಿ ಆರೋಗ್ಯ ಹದಗೆಡುವುದು.

3. **ಮನಸ್ಸು ಸಂತೋಷದಿಂದಿರಬೇಕು:** ಆಯುರ್ವೇದದ ಪ್ರಕಾರ ಚಿಂತಾ, ಶೋಕ, ಭಯ, ಕ್ರೋಧ ಮತ್ತು ಉದ್ವೇಗಗಳು ಇದ್ದಾಗ ಆಹಾರ ಸೇವಿಸಿದರೆ ಅದು ಸರಿಯಾಗಿ ಜೀರ್ಣವಾಗುವುದಿಲ್ಲ. ಕಾರಣ, ನಮ್ಮ ಭಾವನೆಗಳಿಗೂ ಮತ್ತು ನಮ್ಮ ಜೀರ್ಣಕ್ರಿಯೆಗೂ ನೇರವಾದ ಸಂಬಂಧವಿದೆ. ಮಾನಸಿಕ ಏರುಪೇರುಗಳಿಂದ ಜೀರ್ಣ ಕ್ರಿಯೆಯೂ ಏರುಪೇರು ಆಗುತ್ತದೆ. ಅಂತೆಯೇ ಜೀರ್ಣಕ್ರಿಯೆ ಸರಿ ಇಲ್ಲದಿದ್ದಾಗ ಮಾನಸಿಕ ಅಸಮತೋಲನವು ಕಾಣಿಸಿಕೊಳ್ಳುತ್ತದೆ. ಹಾಗಾಗಿ ಒಳ್ಳೆಯ ಮನಸ್ಸಿನಿಂದ ಮತ್ತು ಉತ್ತಮ ಭಾವನೆಗಳೊಂದಿಗೆ ಆಹಾರವನ್ನು ಸೇವಿಸುವುದು ಸದಾ ಶ್ರೇಷ್ಠ. ಅಳುತ್ತಿರುವಾಗ, ಬೇರೆ ಯಾರ ಮೇಲೋ ಕೋಪಗೊಂಡಾಗ, ಯಾವುದೋ ವಿಷಯದ ಬಗ್ಗೆ ಅತಿಯಾಗಿ ಚಿಂತಿಸುತ್ತಿರುವಾಗ ಆಹಾರದಿಂದ ದೂರ ಇರುವುದೇ ಉತ್ತಮ.

4. **ಶುದ್ಧವಾದ ತೇಗು ಬರಬೇಕು:** ನಮ್ಮ ಜೀರ್ಣಾಂಗದಲ್ಲಿ ಮೊದಲು ಸೇವಿಸಿದ ಆಹಾರವು ಇನ್ನೂ ಜೀರ್ಣವಾಗದೆ ಇದ್ದರೆ ತೇಗು ಬಂದಾಗ ನಾವು ಮೊದಲು ಸೇವಿಸಿದ ಆಹಾರದ್ದೇ ವಾಸನೆ ಮತ್ತು ರುಚಿ ಇರುತ್ತವೆ. ಅಂಥ ತೇಗು ಬಂದಾಗ ಮತ್ತೆ ಆಹಾರ ಸೇವಿಸಬಾರದು. ತೇಗು ಸಂಪೂರ್ಣವಾಗಿ ಶುದ್ಧವಾಗಿದ್ದಾಗ ಮಾತ್ರ ಅದು ಆಹಾರ ಸೇವಿಸಲು ಯೋಗ್ಯ ಸಮಯ ಎಂದರ್ಥ. ಹಸಿವೆ ಇರಬೇಕು- ನಾವು ಪ್ರತಿ ಬಾರಿಯೂ ಆಹಾರ ಸೇವಿಸುವ ಮುನ್ನ ಗಮನಿಸಲೇಬೇಕಾದ ಲಕ್ಷಣವೆಂದರೆ ಹಸಿವು. ಆಯುರ್ವೇದದ ಪ್ರಕಾರ ನಮಗೆ ಹಸಿವಿದ್ದಾಗ ಮಾತ್ರ ಆಹಾರವನ್ನು ಸೇವಿಸಬೇಕು. ನಾವು ಯಾವಾಗ ತಿನ್ನಬೇಕು ಎನ್ನುವ ಪ್ರಶ್ನೆಗೆ ಒಂದೇ ವಾಕ್ಯದಲ್ಲಿ ಉತ್ತರ ಕೊಡಬೇಕೆಂದರೆ, ಹಸಿವೆ ಇದ್ದಾಗ ಮಾತ್ರ ಆಹಾರ ಸೇವಿಸತಕ್ಕದ್ದು. ಕಾರಣ, ಶರೀರಕ್ಕೆ ಆಹಾರವು ಅಗತ್ಯವಿದ್ದಾಗ ಅದು ಹಸಿವೆ ಎಂಬ ಕರೆಯ ಮೂಲಕ ನಮಗೆ ಸೂಚನೆಯನ್ನು ನೀಡುತ್ತದೆ. ಆ ಸೂಚನೆಯ ಅರ್ಥವೇನೆಂದರೆ, ಜೀರ್ಣಾಂಗವ್ಯೂಹವು ಖಾಲಿಯಾಗಿದ್ದು ಈಗ ಸೇವಿಸುವ ಆಹಾರವನ್ನು ಸಂಪೂರ್ಣವಾಗಿ ಜೀರ್ಣಮಾಡಿಕೊಳ್ಳಲು ಸಿದ್ಧವಿದೆ ಎಂದರ್ಥ. ನಮಗೆ ಹಸಿವಿಲ್ಲದಿದ್ದರೆ ಅದು ಆಹಾರವು ಇನ್ನೂ ಜೀರ್ಣಗೊಳ್ಳುತ್ತಿದೆ ಎಂಬುದರ ಸೂಚಕ. ಅಂಥ ಸಮಯದಲ್ಲಿ ಆಹಾರವನ್ನು ಪದೇಪದೆ ಸೇವಿಸುತ್ತಿದ್ದರೆ ಅದು ಸರಿಯಾಗಿ ಜೀರ್ಣಗೊಳ್ಳದೆ, ಅಗ್ನಿಯನ್ನು ಹಾಳು ಮಾಡಿ, ಬೇರೆ ಬೇರೆ ರೀತಿಯ ಕಾಯಿಲೆಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಆಹಾರ ಸೇವಿಸುವ ಮುನ್ನ ಹಸಿವು ಎಂಬ ಲಕ್ಷಣ ಇರಲೇಬೇಕು.

5. **ವಾತಾನುಲೋಮನವಾಗಿರಬೇಕು:** ಜೀರ್ಣ ಕ್ರಿಯೆಯು ನಡೆಯುವ ಸಂದರ್ಭದಲ್ಲಿ ಇಡೀ ಜೀರ್ಣಾಂಗದಲ್ಲಿ ವಿವಿಧ ರೀತಿಯ ಚಲನೆಗಳು ಉಂಟಾಗುತ್ತವೆ. ಅಂತೆಯೇ, ನಾವು ಸೇವಿಸುವ ಆಹಾರದ ಗುಣಗಳಿಂದ ಜೀರ್ಣಾಂಗವ್ಯೂಹದಲ್ಲಿ ಒಂದು ರೀತಿಯ ಗಾಳಿಯು ಉತ್ಪತ್ತಿಯಾಗುತ್ತದೆ. ಈ ಗಾಳಿಯು ತೇಗಿನ ರೂಪದಲ್ಲಿ ಮೇಲ್ಮುಖವಾಗಿ ಹೊರಗೆ ಹೋಗುತ್ತದೆ ಮತ್ತು ಅಧೋವಾತದ ರೂಪದಲ್ಲಿ ಗುದಮಾರ್ಗದ ಮೂಲಕ ಹೊರಕ್ಕೆ ಹೋದಾಗ ಜೀರ್ಣಾಂಗವ್ಯೂಹವು ಮತ್ತೊಮ್ಮೆ ಆಹಾರವನ್ನು ಸ್ವೀಕರಿಸಿ ಅದನ್ನು ಪಚನ ಮಾಡಲು ಯೋಗ್ಯವಾಗಿದೆ ಎಂದು ನಾವು ತಿಳಿಯಬೇಕು. ಸರಿಯಾದ ಸಮಯಕ್ಕೆ ವಾತಾನುಲೋಮನವು ಆಗದಿದ್ದರೆ ಹೊಟ್ಟೆ ಉಬ್ಬರ, ಹೊಟ್ಟೆ ನೋವು, ಹೊಟ್ಟೆ ಬಿಗಿತ, ಮಲಬದ್ಧತೆ, ತಲೆನೋವಿನಂಥ ವಿವಿಧ ರೀತಿಯ ತೊಂದರೆಗಳು ಕಾಣಿಸಿಕೊಳ್ಳಬಹುದು.

6. **ಜೀರ್ಣಶಕ್ತಿ ಉತ್ತಮವಾಗಿರಬೇಕು:** ನಾವು ಆಹಾರದಲ್ಲಿ ಘನ ಪದಾರ್ಥಗಳನ್ನು ಸೇವಿಸಬೇಕೆಂದರೆ ಅದಕ್ಕೆ ಉತ್ತಮ ಜೀರ್ಣಶಕ್ತಿಯ ಅವಶ್ಯಕತೆ ಇರುತ್ತದೆ. ಹಸಿವು ಸರಿಯಾದ ಸಮಯದಲ್ಲಿ ಆಗುತ್ತಿದೆಯೇ, ಸೇವಿಸಿದ ಆಹಾರವು ಯಾವುದೇ ತೊಂದರೆ ಇಲ್ಲದೆ ಜೀರ್ಣವಾಗುತ್ತಿದೆಯೇ ಎಂದು ಗಮನಿಸಿ, ನಂತರ ಯಾವ ರೀತಿಯ ಆಹಾರವನ್ನು ಸೇವಿಸಬೇಕು ಎಂದು ನಿರ್ಧರಿಸಬೇಕು. ಒಂದು ವೇಳೆ, ಜೀರ್ಣಕ್ರಿಯೆ ಉತ್ತಮವಾಗಿಲ್ಲವೆಂದರೆ ಗಂಜಿ/ಕಟ್ಟು ಸಾರು/ತೊವ್ವೆ/ತಂಬುಳಿ ಮುಂತಾದ ತಿಳಿಯ ಪದಾರ್ಥಗಳನ್ನು ಸೇವಿಸುವುದು ಉತ್ತಮ.

ಮೇಲಿನ ಲಕ್ಷಣಗಳೆಲ್ಲವೂ ಕಂಡುಬಂದಾಗ ಅದೇ ಆಹಾರವನ್ನು ಸೇವಿಸಲು ಯೋಗ್ಯವಾದ ಕಾಲ. ನಮ್ಮ ಆಹಾರದ ಗುಣಗಳನ್ನು ಮತ್ತು ಪ್ರಮಾಣವನ್ನು ಸರಿಯಾಗಿ ಸಂಯೋಜಿಸಿಕೊಳ್ಳುವ ಮೂಲಕ, ಕೇವಲ ಎರಡು ಅಥವಾ ಮೂರು ಆಹಾರ ಕಾಲದಲ್ಲಿ ಮಾತ್ರ ಆಹಾರವನ್ನು ಸೇವಿಸಿ, ಅವುಗಳ ಮಧ್ಯೆ ಏನನ್ನೂ ತಿನ್ನದೆ ಅಥವಾ ಕುಡಿಯದೆ ಇದ್ದರೆ ಆಗ ಪ್ರತಿ ಆಹಾರ ಕಾಲದಲ್ಲಿಯೂ ಈ ಲಕ್ಷಣಗಳನ್ನು ಗಮನಿಸಬಹುದು. ಈ ಲಕ್ಷಣಗಳನ್ನು ಸಾಧಿಸಿಕೊಂಡಾಗ ಮಾತ್ರ ನಾವು ಆಹಾರವನ್ನು ಸೇವಿಸುತ್ತಾ ಬಂದರೆ ನಮಗಿರುವ ಎಷ್ಟೋ ಆರೋಗ್ಯದ ಸಮಸ್ಯೆಗಳು ಯಾವುದೇ ಬೇರೆ ಪ್ರಯತ್ನ ಅಥವಾ ಔಷಧಿಗಳಿಲ್ಲದೆ ಶಮನವಾಗುವುದನ್ನು ನಾವು ಅನುಭವಿಸಬಹುದು.

ಇದರಿಂದ ಯಾವಾಗ ಆಹಾರವನ್ನು ಸೇವಿಸಬೇಕು ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿತು. ಆದರೆ 'ಎಷ್ಟು' ಸೇವಿಸಬೇಕು ಎನ್ನುವ ಪ್ರಶ್ನೆ ಇನ್ನೂ ಹಾಗೇ ಉಳಿದಿದೆ, ಅಲ್ಲವೇ? ಸ್ನೇಹಿತರೆ, ಸಾಮಾನ್ಯವಾಗಿ ನಾವು ಸೇವಿಸುವ ಆಹಾರವು 'ಘನ' ಮತ್ತು 'ದ್ರವ' ಎಂಬ ಎರಡು ಪ್ರಕಾರದ್ದಾಗಿರುತ್ತದೆ. ನಮ್ಮ ಹೊಟ್ಟೆಯನ್ನು ಕಾಲ್ಪನಿಕವಾಗಿ ನಾಲ್ಕು ಭಾಗಗಳಾಗಿ ವಿಭಾಗಿಸಿದರೆ ಅದರಲ್ಲಿ ಅರ್ಧದಷ್ಟು ಘನ ಆಹಾರದಿಂದಲೂ, ಕಾಲುಭಾಗವನ್ನು ದ್ರವ ಆಹಾರದಿಂದಲೂ ತುಂಬಿಸಿ ಉಳಿದ ಕಾಲುಭಾಗವನ್ನು ಖಾಲಿ ಬಿಡತಕ್ಕದ್ದು. ಹೀಗೆ ಖಾಲಿ ಬಿಡುವುದರಿಂದ ಆಹಾರವು ಸರಿಯಾಗಿ ಜೀರ್ಣವಾಗಲು ಸಹಕಾರಿಯಾಗುತ್ತದೆ. ಊಟದ ನಂತರದ ಹೊಟ್ಟೆಭಾರ, ಉಸಿರಾಟಕ್ಕೆ ತೊಂದರೆ, ಕುಳಿತುಕೊಳ್ಳಲು, ಓಡಾಡಲು, ನಿಂತುಕೊಳ್ಳಲು ಕಷ್ಟವಾಗುವುದು, ಮುಂದಿನ ಆಹಾರದ ಕಾಲದ ಹೊತ್ತಿಗೆ ಹಸಿವೆ ಆಗದೆ ಇರುವುದು, ಶರೀರದಲ್ಲಿ ಆಲಸ್ಯ ಮತ್ತು ಜಡತ್ವ- ಇವುಗಳು ನಾವು ಸೇವಿಸಿದ ಆಹಾರದ ಪ್ರಮಾಣವು ಹೆಚ್ಚಾಯಿತು ಎಂದು ಸೂಚಿಸುತ್ತವೆ. ಹೊಟ್ಟೆಯು ಸಂಪೂರ್ಣವಾಗಿ ತುಂಬಿದ ಲಕ್ಷಣ ಕಂಡುಬರುವ ಮುನ್ನವೇ ಅಂದರೆ ಹೊಟ್ಟೆಯಲ್ಲಿ ಇನ್ನೂ ಸ್ವಲ್ಪ ಜಾಗವಿದೆ ಎಂಬ ಭಾವನೆ ಇದ್ದಾಗಲೇ ಆಹಾರ ಸೇವನೆಯನ್ನು ನಿಲ್ಲಿಸುವುದು ಆರೋಗ್ಯ ರಕ್ಷಕವಾಗಿ ಪರಿಣಮಿಸುತ್ತದೆ. ಈ ರೀತಿಯಾಗಿ ಎಚ್ಚರದಿಂದ ಆಹಾರವನ್ನು ಸೇವಿಸುವುದರಿಂದ ಮಾತ್ರ ನಾವು ರೋಗಕಾರಕ ಆಹಾರವನ್ನು ಮಹಾಭೈಷಜ್ಯವನ್ನಾಗಿಸಬಹುದು!

ಕೃಷ್ಣೆಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ಪೋಷಿಸೋಣ...

ಕೃಷ್ಣಾರತಿ
ಸಂಗಮೇಶ ಆರ್. ನಿರಾಣಿ
vveditoped@gmail.com

ಗಂಗಾ, ಯಮುನಾ, ಗೋದಾವರಿ, ಕಾವೇರಿ ಮುಂತಾದ ನದಿಗಳಿಗೆ ಆರತಿ ಮಾಡಲಾಗುತ್ತದೆ. ನಮ್ಮ ಜೀವನಾಡಿಗಳಾಗಿರುವ ನದಿಗಳನ್ನು ಭಕ್ತಿಭಾವದಿಂದ ಸ್ಮರಿಸಿ, ಪೂಜಿಸಿ, ಶುಭ ಸಂಕೇತವಾದ ದೀಪ ಹಚ್ಚಿ ಉತ್ಸವದ ರೀತಿ ಸಂಭ್ರಮಿಸಲಾಗುತ್ತದೆ. ಈ ನದಿ ಆರಾಧನೆಯ ಸಂಸ್ಕೃತಿಯು ಕೃಷ್ಣೆಗೂ ವಿಸ್ತರಣೆಯಾಗಲಿ ಎಂಬ ಹಂಬಲವು 'ಕೃಷ್ಣಾ ಆರತಿ' ಆರಂಭಕ್ಕೆ ಮುನ್ನುಡಿ ಬರೆದಿದೆ.

ಭಾರತದ 4ನೇ ಅತಿದೊಡ್ಡ ಮತ್ತು ದಕ್ಷಿಣ ಭಾರತದ 2ನೇ ಅತಿದೊಡ್ಡ ನದಿಯಾಗಿರುವ ಕೃಷ್ಣೆ, ಉತ್ತರ ಕರ್ನಾಟಕದ ಜೀವನದಿಯಾಗಿದೆ. ಮಹಾರಾಷ್ಟ್ರದ ಸಹ್ಯಾದ್ರಿ ಪರ್ವತಶ್ರೇಣಿಯ ಮಹಾಬಲೇಶ್ವರದಿಂದ ಆಂಧ್ರಪ್ರದೇಶದ ಬಂಗಾಳ ಕೊಲ್ಲಿಯ ಹಂಸಲದೀವಿಯವರೆಗೆ 1392 ಕಿ.ಮೀ. ಹರಿಯುವ ಈ ನದಿಯು ಕರ್ನಾಟಕದಲ್ಲಿ 483 ಕಿ.ಮೀ. ಹರಿಯುತ್ತದೆ. 1,13,271 ಚ.ಕಿ.ಮೀ. ಜಲಾನಯನ ಪ್ರದೇಶವಿದೆ. ಕೃಷ್ಣಾನದಿ ಮೂಲಕ ಒಟ್ಟು 303 ಟಿಎಂಸಿ ನೀರು ಲಭ್ಯವಿದ್ದು, ಅದರಲ್ಲಿ 173 ಟಿಎಂಸಿ ಮೊದಲ ಹಂತದಲ್ಲಿ ಬಳಕೆಯಾಗಿದೆ; ಬಚಾವತ್ ಆಯೋಗ ಬಿ-ಸ್ಕೀಮ್‌ನಲ್ಲಿ ಹಂಚಿಕೆಯಾದ 130 ಟಿಎಂಸಿ ನೀರನ್ನು 1 ದಶಕಕ್ಕೂ ಅಧಿಕ ಕಾಲ ಕಳೆದರೂ ಬಳಸಿಕೊಳ್ಳಲಾಗುತ್ತಿಲ್ಲ. ವಿಪರ್ಯಾಸವೆಂದರೆ, ಕಾವೇರಿ ಜಲಾನಯನ ಪ್ರದೇಶದ ಎಲ್ಲ ಯೋಜನೆಗಳು ಪೂರ್ಣಗೊಂಡು ದಶಕಗಳೇ ಕಳೆದುಹೋಗಿವೆ; ಈಗ ಮೇಕೆದಾಟು ಯೋಜನೆಗಾಗಿ ಸರಕಾರ ತುದಿಗಾಲಲ್ಲಿ ನಿಂತಿದೆ. ಕಾವೇರಿ ಬಗೆಗೆ ಅಲ್ಲಿಯ ಜನಕ್ಕೆ ಹಾಗೂ ನಮ್ಮ ಸರಕಾರಕ್ಕೆ ಅಭಿಮಾನವಿದೆ; ಆದರೆ ಕೃಷ್ಣೆಯ ವಿಷಯದಲ್ಲಿ ಹಾಗಾಗಲಿಲ್ಲ. ಅದನ್ನು ಸರಕಾರವು ಮೊದಲಿನಿಂದಲೂ 2ನೇ ದರ್ಜೆಗೆ ಸೇರಿಸಿ ಆ ದೃಷ್ಟಿಯಿಂದಲೇ ನೋಡುತ್ತಾ ಬಂದಿದೆ. ನೆಹರು-ಶಾಸ್ತ್ರಿ ಕಾಲದಲ್ಲಿ ಆರಂಭವಾದ ಆಣೆಕಟ್ಟು ಕಾಮಗಾರಿಯು ಮನಮೋಹನ್ ಸಿಂಗ್ ಕಾಲದಲ್ಲಿ ಉದ್ಘಾಟನೆಯಾಗಿದ್ದೇ ಇದಕ್ಕೆ ಸಾಕ್ಷಿ. ನಮ್ಮ ಜನರ ಅಭಿಮಾನಶೂನ್ಯತೆಯೂ ಇದಕ್ಕೆ ಕಾರಣವಾಗಿರಬಹುದು.

ಕೃಷ್ಣೆಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ವೈಭವವನ್ನು ಪುನರುತ್ಥಾನಗೊಳಿಸಲು ಜನಜಾಗೃತಿಗೆ ಮುಂದಾಗಬೇಕಾದ ಅವಶ್ಯಕತೆಯಿದೆ. 'ನಮ್ಮ ನೀರು-ನಮ್ಮ ಹಕ್ಕು' ಎನ್ನುವ ಮಾತು ಕಾವೇರಿಗಷ್ಟೇ ಸೀಮಿತವಲ್ಲ; ಕೃಷ್ಣೆಯಲ್ಲಿ ಹರಿಯುವ ನೀರೂ ಕರ್ನಾಟಕದ್ದೇ ಅಲ್ಲವೇ? ಕಾವೇರಿ, ಶರಾವತಿ, ನೇತ್ರಾವತಿ ನದಿಗಳಂತೆ ಕೃಷ್ಣೆಗೂ ಧಾರ್ಮಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಿದೆ ಎಂಬುದನ್ನು ನಮ್ಮ ಜನರಿಗೆ ತಿಳಿಸಿಕೊಡಬೇಕಿದೆ. ತನ್ಮೂಲಕ ಈ ಜೀವನದಿಯ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಅನಾವರಣಗೊಳಿಸಬೇಕಿದೆ.

ತಲಕಾವೇರಿಯಲ್ಲಿ ಪ್ರತಿವರ್ಷ ತೀರ್ಥೋದ್ಭವವಾದಾಗ ಕುಂಭಮೇಳವನ್ನು ನಡೆಸುತ್ತಾರೆ. ಶಿವಮೊಗ್ಗ ಮತ್ತು ಉತ್ತರ ಕನ್ನಡದ ಜನರು ಶರಾವತಿಗೆ ತೆಪ್ಪೋತ್ಸವ ಮಾಡುತ್ತಾರೆ. ಆ ಮೂಲಕ ತಮ್ಮ ಜೀವನಾಡಿಯಂತಿರುವ ನದಿಗಳ ಸಾಂಸ್ಕೃತಿಕ ಹಿರಿಮೆಯನ್ನು ಹಬ್ಬವಾಗಿಸಿ ಮುಂದಿನ ಪೀಳಿಗೆಯು ನದಿಗಳ ಬಗ್ಗೆ ಮಾತೃತ್ವದ ಗೌರವವನ್ನು ಹೊಂದುವಂತೆ ನೋಡಿಕೊಳ್ಳುತ್ತಾರೆ. ಆದರೆ, ತಲೆ-ತಲಾಂತರಗಳಿಂದ ನಮ್ಮನ್ನು ಪಾಲಿಸಿ-ಪೋಷಿಸುತ್ತಿರುವ ಕೃಷ್ಣೆಗೆ ವರ್ಷಕ್ಕೊಮ್ಮೆ ಪೂಜೆಮಾಡಿ ಬಾಗಿನ ಕೊಟ್ಟು ಕೈಮುಗಿಯಬೇಕು, ಕಾರ್ತಿಕ ಮಾಸದಲ್ಲಿ ದೀಪ ಹಚ್ಚಬೇಕು, ಪ್ರತಿ 12 ವರ್ಷಗಳಿಗೊಮ್ಮೆ ಗುರುವು ಕನ್ಯಾರಾಶಿಯನ್ನು ಪ್ರವೇಶಿಸಿದಾಗ ಸಾಕ್ಷಾತ್ ಗಂಗೆಯೇ ಕೃಷ್ಣೆಯ ಭೆಟ್ಟಿಗೆ ಆಗಮಿಸುವ ವೇಳೆ ನೆರವೇರುವ ಕನ್ಯಾಗತವನ್ನು ಅದ್ದೂರಿಯಾಗಿ ಆಚರಿಸಬೇಕು ಅಂತ ನಮಗೆ ಎಂದಿಗೂ ಅನಿಸಲಿಲ್ಲ. ಕೊಡಗಿನ ಜನರಿಗೆ ಕಾವೇರಿ ಕುಲದೈವವಾದಳು; ಆದರೆ ಮಹಾರಾಷ್ಟ್ರದ ಜನರು ಕೃಷ್ಣೆಯ ದೈವತ್ವವನ್ನು ಇಂದಿಗೂ ಅರಿಯದಿರುವುದು ಉತ್ತರ ಕರ್ನಾಟಕದವರ ಪಾಲಿಗೆ ಅತಿದೊಡ್ಡ ಸಾಂಸ್ಕೃತಿಕ ದುರಂತ ಎಂದರೆ ತಪ್ಪಾಗಲಾರದು.

ಕರ್ನಾಟಕದ ಮಟ್ಟಿಗೆ ಕಾವೇರಿ ದಕ್ಷಿಣದ ಗಂಗೆಯಾದರೆ, ಕೃಷ್ಣೆ ಉತ್ತರದ ಗಂಗೆಯಾಗಿದ್ದಾಳೆ; ಇಬ್ಬರಿಗೂ ಸಮಾನ ಪ್ರಾತಿನಿಧ್ಯ ಸಿಕ್ಕಾಗ ಮಾತ್ರವೇ 'ಕಾವೇರಿ ಆರತಿ'ಯಂಥ ಸರಕಾರದ ಹೊಸತನದ ಪ್ರಯತ್ನಕ್ಕೊಂದು ಅರ್ಥ ಬರುತ್ತದೆ. ಆ ಕಾರಣಕ್ಕಾಗಿ, ಕಾವೇರಿಯಂತೆ ಕೃಷ್ಣೆಗೂ ಆರತಿ ಎಲ್ಲ ಆಯಾ ಹೊತ್ತು. ಶ್ರೀಕೃಷ್ಣ ಜನ್ಮಾಷ್ಟಮಿ ಮತ್ತು ಮಾಜಿ ಸಚಿವರು ಹಾಗೂ ಸೋದರರಾದ ಮುರುಗೇಶ ನಿರಾಣಿಯವರ ಹುಟ್ಟುಹಬ್ಬದ ನಿಮಿತ್ತ ಆಗಸ್ಟ್ 16ರಂದು ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ಕೃಷ್ಣಾನದಿ ತೀರದಲ್ಲಿ 2ನೇ ಬಾರಿಗೆ ಕೃಷ್ಣಾ ಆರತಿಯನ್ನು ಹಮ್ಮಿಕೊಳ್ಳಲಾಗಿದೆ. ಈ ಬಾರಿ ಹಿಪ್ಪರಗಿಯಲ್ಲಿ ನಾನಾ ಸಾಧುಗಳನ್ನು ಕರೆಸಿ ಕುಂಭಮೇಳ ಮಾದರಿಯಲ್ಲಿ ಕೃಷ್ಣಾ ಪುಣ್ಯಸ್ನಾನವನ್ನು ಆಯೋಜಿಸಲಾಗಿದೆ.

ಕೃಷ್ಣೆಯ ಧಾರ್ಮಿಕ ಹಿನ್ನೆಲೆ: ಸ್ಕಂದ ಪುರಾಣದ ಭಾಗವಾದ 'ಶ್ರೀ ಕೃಷ್ಣವೇಣಿ ಮಹಾತ್ಮೆ'ಯು ಕೃಷ್ಣಾನದಿಯ ಜನ್ಮದ ರೋಚಕತೆಗಳನ್ನು ತೆರೆದಿಡುತ್ತದೆ. ಮುಂದೆ ಬರುವ ಕಲಿಯುಗದಲ್ಲಿ ಪಾಪ ಕರ್ಮಗಳು ಹೆಚ್ಚಾಗಿ, ಕಾಮಧೇನು-ಕಲ್ಪವೃಕ್ಷಗಳ ಪ್ರಭಾವ ಕಡಿಮೆಯಾಗಬಹುದು ಎಂಬುದನ್ನರಿತ ನಾರದರು ಭಗವಾನ್ ವಿಷ್ಣುವಿನ ಮೊರೆಹೋಗುತ್ತಾರೆ. ಆಗ ವಿಷ್ಣುವು, ''ಜನರ ಕಷ್ಟಗಳು ಮತ್ತು ಪಾಪಕರ್ಮಗಳ ಪರಿಹಾರಕ್ಕಾಗಿ ಕಾಮಧೇನು-ಕಲ್ಪವೃಕ್ಷಗಳ ಬದಲಾಗಿ ತೀರ್ಥರೂಪದಲ್ಲಿರುವ ನದಿಯ ನೀರನ್ನು ಜನರು ವಿಶ್ವಾಸದಿಂದ ಪೂಜಿಸಿ ಸೇವೆ ಸಲ್ಲಿಸುವುದರಿಂದ ಪಾಪ ಕಳೆದು ಸನ್ಮಾರ್ಗದ ದಾರಿಯಲ್ಲಿ ನಡೆದು ಮೋಕ್ಷ ಹೊಂದುತ್ತಾರೆ. ಹೀಗಾಗಿ ನಾನೇ ಸ್ವತಃ 'ಕೃಷ್ಣಾ' ಎಂಬ ಹೆಸರಿನಿಂದ ನದಿಯಾಗಿ ಹರಿದು ಮನುಕುಲವನ್ನು ಉದ್ಧರಿಸುತ್ತೇನೆ'' ಎನ್ನುತ್ತಾನೆ. ನಂತರ, ನೀಲಿ ಮತ್ತು ಕಪ್ಪು ಬಣ್ಣದ ಮೈಕಾಂತಿಯನ್ನು ಹೊಂದಿರುವ, ನಾಲ್ಕು ಕೈಗಳುಳ್ಳ, ತನ್ನಂತೆಯೇ ರೇಷ್ಮೆಯ ಪೀತಾಂಬರವನ್ನು ತೊಟ್ಟಿರುವ ದಿವ್ಯ ಬಾಲೆಯನ್ನು ವಿಷ್ಣು ಸೃಷ್ಟಿಸುತ್ತಾನೆ. ಅವಳನ್ನು ಮಗಳಾಗಿ ಸ್ವೀಕರಿಸುವ ಬ್ರಹ್ಮನು, ಆಕೆಯನ್ನು ಸ್ಪರ್ಶಿಸುವ ಮೂಲಕ ಕೆಲವು ತೀರ್ಥಗಳನ್ನು ಸೃಷ್ಟಿಸುತ್ತಾನೆ. ಹೀಗೆ ಜನಿಸಿದ ದೇವಿ ಕೃಷ್ಣೆಯು ಬ್ರಹ್ಮ-ವಿಷ್ಣು-ಮಹೇಶ್ವರ, ಋಷಿ-ಮುನಿಗಳ ಜತೆ ಆಗಮಿಸುತ್ತಾಳೆ. ತನ್ನ ಮಡಿಲಿನಲ್ಲಿಯೇ ಹುಟ್ಟುವಂತೆ ಸಹ್ಯಾದ್ರಿ ಪರ್ವತವು ಕೃಷ್ಣೆಯಲ್ಲಿ ಹಾಗೂ ದೇವತೆಗಳಲ್ಲಿ ನಿವೇದಿಸಿಕೊಳ್ಳುತ್ತದೆ. ಋಷಿ-ಮುನಿಗಳ ಯಜ್ಞ-ಯಾಗಾದಿಗಳು ಮತ್ತು ಮಂತ್ರಘೋಷಗಳ ನಡುವೆ, ಸಹ್ಯಾದ್ರಿ ಪರ್ವತದ ಮಡಿಲಲ್ಲಿ ಕೃಷ್ಣೆಯು ಉಗಮಿಸುತ್ತಾಳೆ. ಇದು ಕೃಷ್ಣೆಯ ಹುಟ್ಟಿನ ಕುರಿತಾದ ಒಂದು ಉಲ್ಲೇಖ.

ಒಮ್ಮೆ ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿ ಅಶ್ವತ್ಥ ಮರ ಸೇರಿದಂತೆ 5 ಬಗೆಯ ದೇವವೃಕ್ಷಗಳ ಕೆಳಗೆ ಹರಿಯುವ ನದಿ ತೀರದಲ್ಲಿ ಮಾರ್ಕಂಡೇಯ ಮಹಾಋಷಿಗಳು ಬೆಳಗಿನ ಸಂಧ್ಯಾವಂದನೆ ವಿಧಿಗಳನ್ನು ಪೂರ್ಣಗೊಳಿಸಿ ಸೂರ್ಯದೇವನಿಗೆ ಅರ್ಘ್ಯ ಕೊಡುವ ಸಂದರ್ಭದಲ್ಲಿ, ಅಲ್ಲಿದ್ದ ಎಲೆಯ ಮೇಲೆ ಬೆಳಕು ಚೆಲ್ಲುತ್ತಿರುವ ಬಾಲಕೃಷ್ಣನ ತೇಜೋಬಿಂಬ ಕಂಡುಬರುತ್ತದೆ. ಅದುವೇ ಕೃಷ್ಣಾನದಿ ಎಂಬ ಪೌರಾಣಿಕ ಹಿನ್ನೆಲೆಯೂ ಕೃಷ್ಣೆಗಿದೆ. ಹೀಗಾಗಿ, ಕಲ್ಪವೃಕ್ಷ-ಕಾಮಧೇನುಗಳ ನಂತರ ಇಷ್ಟಾರ್ಥಗಳನ್ನು ಪೂರೈಸುವ, ಮೋಕ್ಷ ಕರುಣಿಸುವ ಎಲ್ಲವನ್ನೂ ಕರುಣಿಸುವ ಕೃಷ್ಣಾನದಿಯ ರೂಪವಾಗಿ ಭಗವಾನ್ ವಿಷ್ಣುವು ಭೂಲೋಕದಲ್ಲಿ ಅವತರಿಸಿದ್ದಾನೆ.

ಒಮ್ಮೆ ಶಿವನ ದರ್ಶನಕ್ಕೆಂದು ಋಷಿಗಳೊಂದಿಗೆ ಕೈಲಾಸಕ್ಕೆ ಬಂದ ಶ್ರೀ ಸುಬ್ರಹ್ಮಣ್ಯ ದೇವರು, ಕೃಷ್ಣಾ ನದಿಯ ಹಿರಿಮೆಯನ್ನು ತಿಳಿಸಿಕೊಡುವಂತೆ ಪರಮೇಶ್ವರನನ್ನು ಕೋರಿದಾಗ, ''ಶ್ರೀ ವಿಷ್ಣುವಿನ ಪಾದಗಳನ್ನು ಒಮ್ಮೆ ಮಾತ್ರ ಸ್ಪರ್ಶಿಸಿದ ಗಂಗೆಯು ಮಾನವನಿಗೆ ಆಲೋಚನೆ ಮಾತ್ರದಿಂದಲೇ ಮೋಕ್ಷವನ್ನು ನೀಡಬಲ್ಲವಳಾದರೆ, ಕೃಷ್ಣಾನದಿಯು ನಿಜವಾಗಿಯೂ ವಿಷ್ಣುವಿನ ದೇಹ. ಹೀಗಾಗಿ ಕೃಷ್ಣೆಯ ವ್ಯಕ್ತಿತ್ವ ಎಲ್ಲರಿಗಿಂತ ಹಿರಿದಾಗಿದೆ'' ಎಂದು ಪರಶಿವನು ಸಂಕ್ಷಿಪ್ತವಾಗಿ ವಿವರಿಸುತ್ತಾನೆ. ಅಂತೆಯೇ ನಮ್ಮ ಶರಣರು ಕೂಡ ಕೃಷ್ಣೆಯನ್ನು 'ಹಿರಿಹೊಳೆ' ಎಂದು ಕರೆದಿದ್ದಾರೆ; ಅಂದರೆ ಆಕೆ ಎಲ್ಲರಿಗಿಂತ ದೊಡ್ಡವಳು ಎಂಬರ್ಥ.

ಸ್ಕಂದ ಪುರಾಣದಲ್ಲಿ ಉಲ್ಲೇಖವಾಗಿರುವಂತೆ, ತನ್ನ ಪವಿತ್ರತೆಯನ್ನು ಭೂಮಿಯಲ್ಲಿ ಹರಡಲು ಬಯಸಿದ ಗಂಗಾ ಮಾತೆಯು ಅನೇಕ ತೀರ್ಥಗಳು ಮತ್ತು ನದಿಗಳಿಗೆ ತನ್ನ ಪುಣ್ಯಶಕ್ತಿಯನ್ನು ಹಂಚಿರುತ್ತಾಳೆ. ಅದರಲ್ಲಿ ಕೃಷ್ಣಾನದಿಗೆ ಅಗ್ರಸ್ಥಾನ ದೊರೆಯುತ್ತದೆ. ಆ ಕಾರಣಕ್ಕೆ, 'ಕೃಷ್ಣಾಸ್ನಾನ ಮಾಡಿದರೆ ಗಂಗಾಸ್ನಾನ ಮಾಡಿದ ಪುಣ್ಯ ಪ್ರಾಪ್ತಿಯಾಗುತ್ತದೆ' ಎಂದು ಹೇಳಲಾಗಿದೆ.

ದೇವಗಂಗೆಯು ಕೂಡ ಎಲ್ಲರ ಪಾಪವನ್ನು ತೊಳೆದು ಮಲಿನವಾದಾಗ, ಪಾಪ ಪರಿಹಾರಕ್ಕೆಂದು ಮಹಾವಿಷ್ಣುವಿನ ಬಳಿಗೆ ಹೋಗುತ್ತಾಳೆ. ಆಗ ವಿಷ್ಣುವು, ''ಎಲ್ಲಾ ನದಿಗಳಲ್ಲಿ ಸ್ನಾನ ಮಾಡಿ ನಿನ್ನ ಪುಣ್ಯಶಕ್ತಿಯನ್ನು ಪುನಃ ವೃದ್ಧಿಸಿಕೊ'' ಎಂದು ಮಾರ್ಗದರ್ಶನ ಮಾಡುತ್ತಾನೆ. ''ಸ್ನಾನಕ್ಕೆ ಯಾವ ರೀತಿ ತೆರಳಬೇಕು, ಯಾವ ನದೀತೀರ್ಥದಲ್ಲಿ ಪುಣ್ಯವೃದ್ಧಿಯಾಗುತ್ತದೆ?'' ಎಂದು ದೇವಗಂಗೆಯು ಕೇಳಿದಾಗ ವಿಷ್ಣುವು ಆಕೆಗೆ ಕಾಗೆಯ ರೂಪ ನೀಡಿ, ''ಯಾವ ನದೀಸ್ನಾನದಿಂದಾಗಿ ನೀನು ಶ್ವೇತವರ್ಣಕ್ಕೆ ತಿರುಗಿ ಹಂಸವಾಗಿ ಪರಿವರ್ತನೆಯಾಗುವೆಯೋ, ಆಗ ನಿನಗೆ ಪುನಃ ಪುಣ್ಯಪ್ರಾಪ್ತಿಯಾಗುತ್ತದೆ'' ಎಂದು ಹೇಳುತ್ತಾನೆ. ಹೀಗೆ, ಅಲ್ಲಿಂದ ಕಾಗೆಯ ರೂಪದಲ್ಲಿ ಹೊರಟ ಗಂಗೆಯು ಭೂಲೋಕದ ಎಲ್ಲ ನದಿಗಳಲ್ಲಿ ಸ್ನಾನಮಾಡಿ ದಣಿದು ಕಲ್ಲುಬಂಡೆಯ ಮೇಲೆ ಕುಳಿತಾಗ ನಾರದ ಮಹರ್ಷಿಗಳು ಪ್ರತ್ಯಕ್ಷರಾಗಿ, ''ಕೃಷ್ಣೆಯಲ್ಲಿ ಸ್ನಾನ ಮಾಡಿದಾಗ ನೀನು ಹಂಸವಾಗಿ ಪರಿವರ್ತನೆ ಆಗುತ್ತೀಯೆ'' ಎಂದು ಸಲಹೆ ನೀಡುತ್ತಾರೆ. ಅಂತೆಯೇ, ಗಂಗೆಯ ರೂಪದ ಕಾಗೆ ಕೃಷ್ಣೆಯಲ್ಲಿ ಸ್ನಾನ ಮಾಡುತ್ತಿದ್ದಂತೆಯೇ ಹಂಸವಾಗಿ ಪರಿವರ್ತನೆಯಾಗಿ ಬದಲಾಗುತ್ತದೆ. ಈಗಿನ ಆಂಧ್ರಪ್ರದೇಶದ ವಿಜಯವಾಡ ಜಿಲ್ಲೆಯಲ್ಲಿ ಕೃಷ್ಣೆಯು ಬಂಗಾಳ ಕೊಲ್ಲಿಯನ್ನು ಸೇರುವ ಸ್ಥಳವು ಇಂದಿಗೂ 'ಹಂಸಲದೀವಿ' ಎಂದೇ ಪ್ರಖ್ಯಾತವಾಗಿದೆ. ಅಲ್ಲಿ ಗಂಗಾಮಾತೆಯ ಸ್ವರೂಪದ ಹಂಸಲದೇವಿ ದೇವಸ್ಥಾನವಿದೆ.

ಮಹಾಭಾರತದಲ್ಲಿ, ವನವಾಸದಲ್ಲಿದ್ದ ಪಾಂಡವರು ಅಜ್ಞಾತವಾಸಕ್ಕಿಂತ ಮೊದಲು ತೀರ್ಥಯಾತ್ರೆಗೆ ಹೋದಾಗ ಕೃಷ್ಣಾ ನದಿಯಲ್ಲಿ ಸ್ನಾನ ಮಾಡಿ, ಆ ನೀರನ್ನು ಕುಡಿದು ಅಲ್ಲಿ ತಪಸ್ಸು ಮಾಡಿದರು ಎಂಬ ಉಲ್ಲೇಖವಿದೆ. ಅವರ ತಪಸ್ಸಿನಿಂದಾಗಿ ನದಿಗೆ ಧರ್ಮ-ಶೌರ್ಯ-ಶುದ್ಧತೆ ಎಂಬ ಗುಣಗಳು ಸೇರಿಕೊಂಡವು ಎಂದು ಪುರಾಣಗಳು ಹೇಳುತ್ತವೆ. ಪದ್ಮಪುರಾಣದಲ್ಲಿ ಉಲ್ಲೇಖವಾಗಿರುವಂತೆ, ಭೂಮಿಯಲ್ಲಿ 21 ಸಲ ಕ್ಷತ್ರಿಯರನ್ನು ಜಯಿಸಿದ ನಂತರ ಭಗವಾನ್ ಪರಶುರಾಮರು ಕೃಷ್ಣಾನದಿಯಲ್ಲಿ ಸ್ನಾನ ಮಾಡಿ ತಪಶ್ಚರ್ಯೆ ಮಾಡಿ ತಮ್ಮ ಪಾಪ ಪರಿಹಾರ ಮಾಡಿಕೊಂಡರು. ಆ ದಿನದಿಂದಲೇ ಕೃಷ್ಣಾನದಿ 'ಪಾಪಹಾರಿಣಿ' ಎಂದು ಖ್ಯಾತಿಪಡೆದಳು.

ಅಭಿಮಾನಶೂನ್ಯತೆ ದೂರವಾಗಲಿ: ಇಷ್ಟೊಂದು ಅಗಾಧ ಧಾರ್ಮಿಕ ಮತ್ತು ಪೌರಾಣಿಕ ಹಿನ್ನೆಲೆ ಹೊಂದಿರುವ ಕೃಷ್ಣೆಯನ್ನು ಅರಿತು ಆಕೆಗೆ ಹಿರಿತನದ ಸ್ಥಾನ ನೀಡುವಲ್ಲಿ ನಾವು ಎಡವಿದ್ದೇವೆ. ಉತ್ತರಭಾರತದ 'ಗಂಗೆ'ಯು ಇಡೀ ದೇಶಕ್ಕೆ ಪಾಪವಿನಾಶಿನಿಯಾದರೆ, 'ಕಾವೇರಿ'ಯು ಕನ್ನಡನಾಡಿನ ಜೀವನದಿಯಾದಳು. 'ಶರಾವತಿ'ಯು ಕನ್ನಡನಾಡಿನ ಭಾಗ್ಯದಾಯಿನಿಯಾದಳು. 'ಗಂಗಾ ಸ್ನಾನ, ತುಂಗಾ ಪಾನ' ಎನ್ನುವ ಮೂಲಕ ಹಿರಿಯರು ತುಂಗೆಗೂ ಧಾರ್ಮಿಕ ಮಹತ್ವ ನೀಡಿದರು. ಪಕ್ಕದ ಆಂಧ್ರದವರು ಗೋದಾವರಿಯನ್ನು 'ತಾಯಿ' ಎಂದರು. ಅಷ್ಟೇಕೆ, ಮಹಾರಾಷ್ಟ್ರದವರು ಕೂಡ ಇದೇ ಕೃಷ್ಣೆಯನ್ನು 'ಮಾಯಿ' ಎಂದು ಕರೆದರು. ಆದರೆ, ನಮ್ಮ ಉತ್ತರ ಕರ್ನಾಟಕ ಜನತೆಗೆ ಮಾತ್ರ ಕೃಷ್ಣೆಯ ಮಹತ್ವ ಮತ್ತು ಹಿರಿಮೆ ಅರ್ಥವಾಗದಿರುವುದು ನಿಜಕ್ಕೂ ವಿಷಾದನೀಯ.

ಧಾರ್ಮಿಕತೆಗಾಗಿ ಮಾತ್ರವಲ್ಲದೆ, ಸಾಂಸ್ಕೃತಿಕ-ಸಾಹಿತ್ಯಕವಾಗಿ ಕೃಷ್ಣೆಯನ್ನು ಸ್ತುತಿಸುವಲ್ಲಿಯೂ ನಾವು ಹಿಂದೆ ಬಿದ್ದಿದ್ದೇವೆ. ಕಾವೇರಿ, ಶರಾವತಿ, ತುಂಗೆ-ಭದ್ರೆಯರ ಕುರಿತು ಸಾಹಿತ್ಯ, ನೃತ್ಯ, ಸಿನಿಮಾ ಹಾಡುಗಳು ರಚಿತವಾದವು. ಈ ನದಿಗಳ ವೈಭವವು ಹಿರಿಯ ಕವಿವರ್ಯರ ಬಾಯಲ್ಲಿ ನಲಿದಾಡಿತು. ಆದರೆ ಈ ಪ್ರಾಮುಖ್ಯವು ಕೃಷ್ಣೆಗೆ ಇಂದಿಗೂ ದೊರೆತಿಲ್ಲವೇಕೆ ಎಂಬುದು ಯಕ್ಷಪ್ರಶ್ನೆಯಾಗಿಯೇ ಉಳಿದಿದೆ. ಇದು ನಮ್ಮ ಜನರ ಅಭಿಮಾನಶೂನ್ಯತೆಯನ್ನು ಬಿಂಬಿಸುತ್ತದೆ. ಇನ್ನಾದರೂ ಎಚ್ಚೆತ್ತುಕೊಂಡು ಕೃಷ್ಣೆಯ ಹಿರಿತನವನ್ನು ಅರಿತು, ಆಕೆಗೆ ಧಾರ್ಮಿಕ ಹಿರಿತನದ ಪ್ರಾಶಸ್ತ್ಯವನ್ನು ನೀಡಬೇಕಿದೆ. ಹಾಗೆ ನೋಡಿದರೆ, ಈ ಅಭಿಮಾನರಾಹಿತ್ಯದಿಂದಾಗಿ ಸಾಮಾಜಿಕ ನ್ಯಾಯವನ್ನು ಪಡೆಯುವಲ್ಲಿಯೂ ನಾವು ಹಿಂದೆ ಬಿದ್ದಿದ್ದೇವೆ. ಹೌದು, ಕಾವೇರಿ ಜಲಾನಯನ ಪ್ರದೇಶದ ಯೋಜನೆಗಳು ಅಲ್ಲಿಯ ಜನರಿಗೆ ಅಸ್ಮಿತೆಯ ಸಂಕೇತವಾದರೆ, ನಮ್ಮ ಕೃಷ್ಣಾ ಮೇಲ್ದಂಡೆ ಯೋಜನೆ ಸೇರಿದಂತೆ ಕೃಷ್ಣಾ, ಘಟಪ್ರಭಾ ಮತ್ತು ಮಲಪ್ರಭಾ ಜಲಾನಯನ ಪ್ರದೇಶದ ಯೋಜನೆಗಳು ರಾಜಕೀಯ ಪ್ರಚಾರಕ್ಕಷ್ಟೇ ಸೀಮಿತವಾದವು. ಹೀಗಾಗಿ ನಮ್ಮ ಮಹತ್ವಾಕಾಂಕ್ಷೆಯ ನೀರಾವರಿ ಯೋಜನೆಗಳು ಇಂದಿಗೂ ಪೂರ್ಣಗೊಂಡಿಲ್ಲ.

ನಮಗೇ ಜಲಸಂಕಷ್ಟ ಇರುವಾಗಲೂ ತಮಿಳುನಾಡಿನವರು ಕಾವೇರಿ ನೀರನ್ನು ಹರಿಸುವಂತೆ ಕೇಳಿದರೆ ಹಳೇ ಮೈಸೂರು ಭಾಗದ ಜನರು ಬೀದಿಗಿಳಿದು ಹೋರಾಟ ಮಾಡುತ್ತಾರೆ. ಆದರೆ, ಸಾವಿರಾರು ಟಿಎಂಸಿ ಪ್ರಮಾಣದಷ್ಟು ಕೃಷ್ಣೆಯ ನೀರು ಆಂಧ್ರ-ತೆಲಂಗಾಣದ ಪಾಲಾದರೂ, ನಮ್ಮ ಜನರು ಗಾಢನಿದ್ರೆಯಲ್ಲಿದ್ದಾರೆ. ಯೋಜನೆ ಘೋಷಿಸಿದಾಗ ಇದ್ದ ಯೋಜನಾ ವೆಚ್ಚ ಇಂದು ಹತ್ತು ಪಟ್ಟು ಹೆಚ್ಚಾಗಿದೆ; ಆದರೂ ನಮ್ಮ ಸರಕಾರಗಳಿಗೆ 'ಭದ್ರಾ ಮೇಲ್ದಂಡೆ-ಮೇಕೆದಾಟು-ಎತ್ತಿನಹೊಳೆ' ಯೋಜನೆಗಳ ಮೇಲೆ ಇರುವಷ್ಟು ಮಮಕಾರವು ಕೃಷ್ಣೆಯ ಮೇಲೆ ಹುಟ್ಟುತ್ತಿಲ್ಲ! ಶರಾವತಿ ಹಿನ್ನೀರಿನ 10 ಹಳ್ಳಿಯ ಜನರಿಗಾಗಿ ಕೇಂದ್ರ ಸರಕಾರವು 350 ಕೋಟಿ ರು. ಬಿಡುಗಡೆ ಮಾಡಿ ದೇಶದಲ್ಲೇ ಅತಿದೊಡ್ಡ ಕೇಬಲ್ ಬ್ರಿಡ್ಜ್ ನಿರ್ಮಿಸಿದ್ದು ಸ್ವಾಗತಾರ್ಹ. ಆದರೆ ಜಿಲ್ಲಾಗಡಿಗಳನ್ನು ಬೆಸೆಯುವ ಒಂದು ಸೇತುವೆಯಿಲ್ಲದೆ ಜಮಖಂಡಿ ಹತ್ತಿರ ಅಥಣಿ ಈ ಎರಡು ತಾಲೂಕಿನ ಜನರು ಬ್ಯಾರೇಜ್ ಸರ್ವಿಸ್ ರಸ್ತೆಯ ಮೇಲೆ ಇನ್ನೆಷ್ಟು ವರ್ಷ ಸಂಚರಿಸಬೇಕು? ನಮ್ಮ ಜನರ ಸಂಕಷ್ಟಕ್ಕೆ ದೇವರೇ ಗತಿ ಅಲ್ಲವೇ?

ಎತ್ತಿನಹೊಳೆಯ 6 ಟಿಎಂಸಿ ನೀರಿಗಾಗಿ ಕಳೆದ 2-3 ಸರಕಾರಗಳು 25 ಸಾವಿರ ಕೋಟಿಗೂ ಹೆಚ್ಚಿನ ಹಣವನ್ನು ಸುರಿದಿವೆ. ಆದರೆ ಕಳೆದ ಒಂದು ದಶಕದಿಂದ ಕೃಷ್ಣೆಯ 130 ಟಿಎಂಸಿ ನೀರು ನಮ್ಮ ಉತ್ತರ ಕರ್ನಾಟಕಕ್ಕೆ ಬಳಕೆಯಾಗದೆ ಆಂಧ್ರ-ತೆಲಂಗಾಣದ ಪಾಲಾಗುತ್ತಿದೆ. ಕೃಷ್ಣೆಯಷ್ಟು ಹಿರಿದಾಗಿಲ್ಲದ ಕಾವೇರಿಗೆ, ಕೃಷ್ಣೆಗಿಂತ 3 ಪಟ್ಟು ಹೆಚ್ಚು ಹಣ ನೀಡುತ್ತಾರೆ. ಕೃಷ್ಣೆಗೆ ಪ್ರತಿ ವರ್ಷ ರಾಜ್ಯ ಬಜೆಟ್‌ನಲ್ಲಿ ನೀರಾವರಿಗೆ ಮೀಸಲಿರಿಸುವ ಅನುದಾನವೇ ಅಲ್ಪಮೊತ್ತದ್ದು. ಅದರಲ್ಲೂ ದಕ್ಷಿಣ ಕರ್ನಾಟಕಕ್ಕೆ ಸಿಂಹಪಾಲು! ಈ ಅಸಮಾನತೆಯನ್ನು, ಮಲತಾಯಿ ಧೋರಣೆಯನ್ನು ಇನ್ನೆಷ್ಟು ವರ್ಷ ಸಹಿಸಿಕೊಳ್ಳೋಣ?

ಕಾವೇರಿಯ ಮೇಲೆ ಮೈಸೂರು ಮಹಾರಾಜರಿಗೆ ವಿಶೇಷ ಅಕ್ಕರೆಯಿತ್ತು. ತುಂಗಭದ್ರೆಯ ದಡದಲ್ಲಿ ವೈಭವದ ವಿಜಯನಗರ ಸಾಮ್ರಾಜ್ಯ ನಿರ್ಮಾಣವಾಗಿತ್ತು. ಹೀಗಾಗಿ ವಿಜಯನಗರದ ಅರಸರು ತುಂಗಭದ್ರೆಯನ್ನು ದೈವವಾಗಿ ಕಂಡರು. ಆದರೆ ನಮ್ಮ ಕೃಷ್ಣೆಗೆ ಮೈಸೂರು ಮಹಾರಾಜರೂ ಸಿಗಲಿಲ್ಲ, ವಿಜಯನಗರದ ವೈಭವವೂ ದೊರೆಯಲಿಲ್ಲ. ಹೀಗಾಗಿ ಕೃಷ್ಣೆಯ ದೈವತ್ವ, ಪೂಜ್ಯತೆ, ಸಮೃದ್ಧತೆ, ವೈಶಾಲ್ಯಗಳು ನಮ್ಮ ಜನಕ್ಕೆ ಅರ್ಥವಾಗದೆ ಉಳಿದುಹೋಗಿವೆ.

ಸಾಂಸ್ಕೃತಿಕ ಹಿನ್ನೆಲೆ, ಜಲಸಂಪನ್ಮೂಲ, ನೀರಾವರಿ ಉದ್ದೇಶಕ್ಕಾಗಿನ ಬಳಕೆ- ಈ ಎಲ್ಲದರಲ್ಲೂ ಕೃಷ್ಣೆಯು ಕಾವೇರಿಗಿಂತ ಹಿರಿದಾಗಿದ್ದಾಳೆ. ಆದರೆ ಸರಕಾರ ಮತ್ತು ಸಾರ್ವಜನಿಕ ವಲಯ ಎರಡರಲ್ಲೂ ಕೃಷ್ಣೆಗೆ ದೊರೆಯಬೇಕಿದ್ದ ಸಾಂಸ್ಕೃತಿಕ-ಧಾರ್ಮಿಕ ಪ್ರಾತಿನಿಧ್ಯ ಇಂದಿಗೂ ದೊರೆತಿಲ್ಲ. ಸರಕಾರಿ ಯೋಜನೆಗಳ ಅನುಷ್ಠಾನದ ವಿಷಯದಲ್ಲೂ ಕಾವೇರಿ ಕೊಳ್ಳಕ್ಕೆ ಸಿಕ್ಕಿರುವ ಪ್ರಾಮುಖ್ಯ ಮತ್ತು ಗಂಭೀರತೆ ಕೃಷ್ಣೆಯ ವಿಷಯದಲ್ಲಿ ಇಂದಿಗೂ ದಕ್ಕದಿರುವುದು ವಿಷಾದನೀಯ ಸಂಗತಿ. ಈ ಹಿಂದೆ ಬಿಜೆಪಿ ಸರಕಾರವು, ಹರಿಹರದಲ್ಲಿನ ತುಂಗಭದ್ರೆಯ ದಂಡೆಯಲ್ಲಿ ಗಂಗಾತಟದ ಮಾದರಿಯಲ್ಲಿ ಮಂಟಪಗಳು ಹಾಗೂ ಸ್ನಾನಘಟ್ಟವನ್ನು ನಿರ್ಮಿಸಿ, 'ತುಂಗಾರತಿ' ಮಾಡುವುದಾಗಿ ಘೋಷಿಸಿತ್ತು. ಈಗ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಕಾವೇರಿಗೆ ಆರತಿಯನ್ನು ಮಾಡಿದ್ದಾರೆ. ತುಂಗೆ, ಕಾವೇರಿಯ ಜತೆಜತೆಗೆ ಕೃಷ್ಣೆಯ ವಿಷಯದಲ್ಲಿಯೂ ಧಾರ್ಮಿಕ ಮತ್ತು ಸಾಮಾಜಿಕ ಕಳಕಳಿ ವ್ಯಕ್ತವಾದಾಗ ಮಾತ್ರವೇ ನಾಡಿನಲ್ಲಿ ಸಾಮರಸ್ಯ ಮೂಡುತ್ತದೆ.

ಕೃಷ್ಣೆಯ ಬಗ್ಗೆ ಸಮಗ್ರ ಅಧ್ಯಯನ, ಸಂಶೋಧನೆ ನಡೆಯಬೇಕು. ಹಾಡು, ಕಥೆ, ನೃತ್ಯ, ರೂಪಕಗಳ ರಚನೆಯಾಗಬೇಕು. ಸಿನಿಮಾ ನಟರು ಕೃಷ್ಣೆಯ ತಟದಲ್ಲಿ ಎಲ್ಲ ಕಲಾಪ್ರಕಾರದಲ್ಲಿ ಕೃಷ್ಣೆಯನ್ನು ಕಲಾತ್ಮಕವಾಗಿ ಹಾಗೂ ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸಬೇಕು. ನದಿಪೂಜೆ, ದೀಪೋತ್ಸವ, ತೆಪ್ಪೋತ್ಸವ, ಕೃಷ್ಣಾರತಿಗಳು ನಡೆಯಬೇಕು, ಉಪನದಿಗಳ ಸಂಗಮಕ್ಷೇತ್ರದಲ್ಲಿ ಕುಂಭಮೇಳಗಳು ಜರುಗಬೇಕು. ಪ್ರತಿವರ್ಷವೂ ಕೃಷ್ಣೆಯ ಸಾಂಸ್ಕೃತಿಕ ಉತ್ಸವವನ್ನು ಹಮ್ಮಿಕೊಳ್ಳುವ ಮೂಲಕ ಅರಿವಿನ ಪ್ರಸಾರಕಾರ್ಯ ನಡೆಯುವಂತಾಗಬೇಕು. ಈ ನಿಟ್ಟಿನಲ್ಲಿ ಸರಕಾರದ ಜತೆಗೆ ಸಹಭಾಗಿತ್ವ, ಆಸಕ್ತಿ, ಅಭಿಮಾನಗಳು ಮಹತ್ವವನ್ನು ಪಡೆದುಕೊಳ್ಳುತ್ತವೆ.

ಬನ್ನಿ, ಕೃಷ್ಣೆಯ ಬಗೆಗಿನ ಶತಮಾನಗಳ ಅಭಿಮಾನಶೂನ್ಯತೆಯನ್ನು ಕಳಚಿ ಜಾಗೃತರಾಗೋಣ...

(ಲೇಖಕರು ಅಧ್ಯಕ್ಷರು, ಉತ್ತರ ಕರ್ನಾಟಕ ಸಮಗ್ರ ನೀರಾವರಿ ಹೋರಾಟ ಸಮಿತಿ)

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 214

ಸಮಾಚಾರ ಸಣ್ಣದಲ್ಲ

ಟ್ರಕ್‌ಗೆ ಬಸ್ ಡಿಕ್ಕಿ, 10 ಭಕ್ತರ ಸಾವು

ಬುರ್ದ್ವಾನ್: ಪಶ್ಚಿಮ ಬಂಗಾಳದ ಬುರ್ದಾನ್‌ನಲ್ಲಿ ಶುಕ್ರವಾರ ರಸ್ತೆ ಪಕ್ಕ ನಿಲುಗಡೆಯಾಗಿದ್ದ ಟ್ರಕ್‌ಗೆ ಪ್ರವಾಸಿಗರ ಬಸ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಮಹಿಳೆಯರು ಸೇರಿದಂತೆ ಬಿಹಾರದ ಒಟ್ಟು 10 ಯಾತ್ರಾರ್ಥಿಗಳು ದುರ್ಮರಣಕ್ಕೀಡಾಗಿದ್ದಾರೆ. 6 ಮಕ್ಕಳು ಸೇರಿದಂತೆ 35 ಯಾತ್ರಿಕರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಬುರ್ದ್ವಾನ್ ವೈದ್ಯಕೀಯ ಕಾಲೇಜು-ಆಸ್ಪತ್ರೆಗೆ ದಾಖಲಿಸಲಾಗಿದೆ. ಬಿಹಾರದ ಪೂರ್ವ ಚಂಪಾರಣ್ ಜಿಲ್ಲೆಯ ಮೋತಿಹಾರ್ ಪ್ರದೇಶದ ಜನರು ಆ.8ರಂದು ಪ್ರವಾಸ ಹೊರಟು ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಗಂಗಾ ಸಾಗರ್‌ಗೆ ಭೇಟಿ ನೀಡಿ ಊರಿಗೆ ವಾಪಸಾಗುತ್ತಿದ್ದರು. 45 ಜನರಿದ್ದ ಬಸ್ ಪುಬಾರ್ ಬರ್ಧಮಾನ್ ಜಿಲ್ಲೆಯ ಫಗುಯಿಪುರ ಬಳಿ ರಾಷ್ಟ್ರೀಯ ಹೆದ್ದಾರಿ-19ರಲ್ಲಿ ಟ್ರಕ್‌ಗೆ ಡಿಕ್ಕಿ ಹೊಡೆದಿದೆ.

ಸಿಎಂ ಯೋಗಿ ಪ್ರಶಂಸೆ: ಎಸ್ಪಿ ಶಾಸಕಿ ಉಚ್ಚಾಟನೆ!

ಲಖನೌ: ಅತೀಕ್ ಅಹಮದ್‌ನಂತಹ ಅಪರಾಧಿಗಳನ್ನು ನಿರ್ಮೂಲನೆ ಮಾಡಿ ರಾಜ್ಯದ ಮಹಿಳೆಯರಿಗೆ ನ್ಯಾಯ ಒದಗಿಸಿದ, ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಕಾಪಾಡಿದ್ದಕ್ಕಾಗಿ ಮುಖ್ಯಮಂತ್ರಿ

ಯೋಗಿ ಆದಿತ್ಯ ನಾಥ್ ಅವರಿಗೆ ಧನ್ಯವಾದ ಸಲ್ಲಿಸುವೆ ಎಂದು ವಿಧಾನ ಸಭೆ ಅಧಿವೇಶನದಲ್ಲಿ ಹೊಗಳಿದ್ದೇ ಸಮಾಜವಾದಿ ಪಕ್ಷದ ಶಾಸಕಿ ಪೂಜಾ ಪಾಲ್ ಅವರಿಗೆ ಸಂಕಷ್ಟ ತಂದಿಟ್ಟಿದೆ. ಶಾಸಕಿ ಪೂಜಾ ಹಿಂದೆಯೂ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದಾರೆ. ಈಗ ವಿಧಾನಸಭೆಯಲ್ಲಿನ ಅವರ ನಡೆ ಪಕ್ಷಕ್ಕೆ ಹಾನಿ ಉಂಟು ಮಾಡಿದೆ ಎಂದಿರುವ ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್, ಉಚ್ಚಾಟನೆ ಆದೇಶ ಹೊರಡಿಸಿದ್ದಾರೆ. ಶಾಸಕಿಯ ಪತಿ ರಾಜು ಪಾಲ್ ಹತ್ಯೆಯಾಗಿದ್ದು, ಅದರ ಹಿಂದೆ ಅತೀಕ್ ಅಹಮದ್ ಮತ್ತು ಗ್ಯಾಂಗ್ ಕೈವಾಡವಿದೆ ಎಂಬ ಆರೋಪವಿದೆ. ಹಾಗಾಗಿಯೇ ಪತಿ ಹಂತಕರನ್ನು ನಿರ್ಮೂಲನೆ ಮಾಡಿದ್ದಕ್ಕಾಗಿ ಶಾಸಕಿ ಪೂಜಾ, ಸಿಎಂಗೆ ಧನ್ಯವಾದ ಹೇಳಿದ್ದರು.

ಒತ್ತಾಯದ ಧರ್ಮಾಂತರ: ಜೀವಾವಧಿ, 10ಲಕ್ಷ ದಂಡ

ಡೆಹರಾಡೂನ್: ಉತ್ತರಾಖಂಡ ಸರಕಾರ ರಾಜ್ಯದಲ್ಲಿ ಬಲವಂತದ ಧರ್ಮಾಂತರ ತಡೆಗೆ ಕಠಿಣ ಕ್ರಮಕ್ಕೆ ಮುಂದಾಗಿದ್ದು, ಒತ್ತಾಯದಿಂದ ಧರ್ಮ ಪರಿವರ್ತನೆಗೆ ಮುಂದಾದವರಿಗೆ ಜೀವಾವಧಿ ಶಿಕ್ಷೆ ಮತ್ತು 10 ಲಕ್ಷ ರು. ದಂಡ ವಿಧಿಸುವ ಕಾಯಿದೆ ಜಾರಿಗೆ ತರಲು ನಿರ್ಧರಿಸಿದೆ. ಮುಖ್ಯಮಂತ್ರಿ ಪುಷ್ಕರ್‌ಸಿಂಗ್ ಧಾಮಿ ಸರಕಾರ 'ಲವ್ ಜಿಹಾದ್' ವಿರುದ್ಧದ ಕಾಯಿದೆಯನ್ನು ಮತ್ತಷ್ಟು ಕಠಿಣಗೊಳಿಸಲು ಮುಂದಾಗಿದೆ. ಧಾಮಿ ಸಚಿವ ಸಂಪುಟ ಹೊಸ ತಿದ್ದುಪಡಿ ಕಾಯಿದೆ ಜಾರಿಗೆ ಸಮ್ಮತಿಸಿದೆ. ವಿಧಾನಸಭೆ ಮಳೆಗಾಲದ ಅಧಿವೇಶನ ಆ.19ರಂದು ಆರಂಭಗೊಳ್ಳಲಿದ್ದು, ಇದೇ ಅವಧಿಯಲ್ಲೇ ಈ ಕಠಿಣ ವಿಧೇಯಕ ಮಂಡನೆಗೆ ಪ್ರಯತ್ನ ನಡೆದಿದೆ ಎಂದು ಹೇಳಲಾಗಿದೆ.

ಪಾಕ್ ವಿದೇಶಾಂಗ ಸಚಿವ ಬಾಂಗ್ಲಾಕ್ಕೆ!

ಇಸ್ಲಾಮಾಬಾದ್: ಷೇಕ್ ಹಸೀನಾ ಅವರು ಪ್ರಧಾನಿಯಾಗಿದ್ದಾಗ ಬಾಂಗ್ಲಾದೇಶ ಭಾರತದ ಆಪ್ತಮಿತ್ರನಾಗಿತ್ತು. ಹಸೀನಾ ಪದಚ್ಯುತಿ ಬಳಿಕ ರಚನೆಯಾದ ಮಧ್ಯಂತರ ಸರಕಾರದಲ್ಲಿ ಮೊಹಮ್ಮದ ಯೂನುಸ್ ಮುಖ್ಯ ಸಲಹೆಗಾರರಾದ ಬಳಿಕ ಭಾರತದಿಂದ ಬಾಂಗ್ಲಾದೇಶ ದೂರವಾಗಿದೆ. ಬದಲಾಗಿ ಪಾಕಿಸ್ತಾನಕ್ಕೆ ಹತ್ತಿರವಾಗಿದೆ. ಇದೇ ಕಾರಣವಾಗಿ ಪಾಕ್‌ನ ವಿದೇಶಾಂಗ ಸಚಿವ ಇಶಾಖ್ ದರ್, ಇದೇ ಆ.23ರಂದು ಬಾಂಗ್ಲಾದೇಶಕ್ಕೆ ಭೇಟಿ ನೀಡುತ್ತಿದ್ದಾರೆ. ಎರಡೂ ದೇಶಗಳ ನಡುವೆ 1971ರ ಬಳಿಕ ಉಂಟಾಗಿದ್ದ ಉದ್ವಿಗ್ನತೆ ಶಮನ ಮತ್ತು ಆತ್ಮೀಯ ಸಂಬಂಧ ಬೆಸೆಯುವ ಪ್ರಯತ್ನದ ಭಾಗ ವಾಗಿ ಈ ಭೇಟಿ ನಡೆಯುತ್ತಿದೆ ಎಂದು ಹೇಳಲಾಗಿದೆ.

ಅಭಿಯಾನದಿಂದ ತಿರಂಗಾಗೆ ಬೇಡಿಕೆ

ಮುಂಬೈ: 'ಹರ್ ಘರ್ ತಿರಂಗಾ' ಅಭಿಯಾನವನ್ನು ಭಾರತ ಸರಕಾರ ಆರಂಭಿಸಿದ್ದರಿಂದ ಖಾದಿಯಿಂದ ತಯಾರಾದ ರಾಷ್ಟ್ರಧ್ವಜಗಳಿಗೆ ಮತ್ತೆ ಬೇಡಿಕೆ ಸೃಷ್ಟಿಯಾಗಿದೆ ಎಂದು ಮಹಾರಾಷ್ಟ್ರದ ಛತ್ರಪತಿ ಸಂಬಾಜಿ ನಗರದಲ್ಲಿನ ಖಾದಿ ರಾಷ್ಟ್ರ ಧ್ವಜ ತಯಾರಿಕಾ ಕೇಂದ್ರದ ಆಡಳಿಗಾರರು ಮತ್ತು ಸಿಬ್ಬಂದಿ ಗುರುವಾರ ಹರ್ಷ ವ್ಯಕ್ತಪಡಿಸಿದ್ದಾರೆ.

{ ರಾಜ್ ಠಾಕ್ರೆ } ಎಂಎನ್ನೆಸ್ ನಾಯಕ

ಸ್ವಾತಂತ್ರ್ಯೋತ್ಸವ ದಿನ ಮಾಂಸ ಮಾರಾಟಕ್ಕೆ ನಿಷೇಧ ವಿಧಿಸುವ ಹಕ್ಕು ನಾಗರಿಕ ಸಂಸ್ಥೆಗಳಿಗೆ ಇಲ್ಲ. ಒಬ್ಬರು ಏನು ತಿನ್ನಬೇಕು, ಏನು ತಿನ್ನಬಾರದು ಎಂದು ಸರಕಾರವಾಗಲೀ, ನಾಗರಿಕ ಸಂಸ್ಥೆಗಳಾಗಲೀ ನಿರ್ಧರಿಸಲಾಗದು. ದೇಶ ಇಂದು 79ನೇ ಸ್ವಾತಂತ್ರ್ಯ ದಿನ ಆಚರಿಸುತ್ತಿದೆ. ಆದರೆ ಜನರಿಗೆ ಆಹಾರ ಸೇವನೆ ಸ್ವಾತಂತ್ರ್ಯವೇ ಇಲ್ಲ ಎಂದರೆ ಹೇಗೆ?

ಕೆಂಪುಕೋಟೆಯಿಂದ ಪ್ರಧಾನಿ ಮೋದಿ 12ನೇ ಸ್ವಾತಂತ್ರ್ಯ ದಿನ ಭಾಷಣ | 103 ನಿಮಿಷ ಭಾಷಣ: ಸ್ವಾವಲಂಬಿ, ಶಕ್ತಿಶಾಲಿ, ನವ ಭಾರತ ಉಲ್ಲೇಖ

ದೇಶ ರಕ್ಷಣೆಗೆ ಸುದರ್ಶನ ಚಕ್ರ, ದೀಪಾವಳಿ ಕೊಡುಗೆ

ದೆಹಲಿ: ದೆಹಲಿ ಕೆಂಪುಕೋಟೆಯಲ್ಲಿ ಭಾರತದ 79ನೇ ಸ್ವಾತಂತ್ರ್ಯೋತ್ಸವಕ್ಕೆ ತ್ರಿವರ್ಣ ಧ್ವಜ ಆರೋಹಣ ನಡೆಸುವ ಮೂಲಕ ಶುಕ್ರವಾರ ಬೆಳಗ್ಗೆ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ, ದೇಶ-ವಿದೇಶಗಳಲ್ಲಿರುವ 140 ಕೋಟಿಗೂ ಅಧಿಕ ಭಾರತೀಯರಲ್ಲಿ ದೇಶಪ್ರೇಮ ಉಕ್ಕುವಂತೆ ಮಾತನಾಡಿದರು.

ಕೆಂಪು ಕೋಟೆಯ ಮೇಲಿನಿಂದ ತಮ್ಮ 12ನೇ ಸ್ವಾತಂತ್ರ್ಯೋತ್ಸವ ಸಮಾರಂಭದ ಭಾಷಣ ಮಾಡಿದ ಪ್ರಧಾನಿ ಮೋದಿ, 103 ನಿಮಿಷಗಳ ಕಾಲ ನಿರರ್ಗಳವಾಗಿ ವಾಗ್ಝರಿ ಹರಿಸಿ ಹೊಸ ದಾಖಲೆ ನಿರ್ಮಿಸಿದರು. ಆ ಮೂಲಕ ಒಂದೇ ಬಾರಿಗೆ ದೇಶದ ಮೊದಲ ಪ್ರಧಾನಿ ಜವಹರಲಾಲ್(ಸುದೀರ್ಘ ಭಾಷಣ) ಮತ್ತು ಅವರ ಪುತ್ರಿ ಇಂದಿರಾ ಗಾಂಧಿ ಅವರ (ಕೆಂಪುಕೋಟೆಯಿಂದ 11ನೇ ಸ್ವಾತಂತ್ರ್ಯೋತ್ಸವ ಭಾಷಣ) ದಾಖಲೆಗಳು ಮರೆಗೆ ಸರಿಯುವಂತಾಯಿತು. ಪ್ರಧಾನಿ ಮೋದಿ ಅವರ ಒಂದು ಗಂಟೆ 43 ನಿಮಿಷಗಳ ಭಾಷಣದಲ್ಲಿ ಆಪರೇಷನ್ ಸಿಂದೂರ, ಆತ್ಮನಿರ್ಭರ ಭಾರತ, ಆರ್‌ಎಸ್‌ಎಸ್, ಬಾಹ್ಯಾಕಾಶ ಕ್ಷೇತ್ರದ ಸಾಧನೆ, ಗಗನಯಾತ್ರೆ, ಸ್ವಂತದ ಬಾಹ್ಯಾಕಾಶ ನಿಲ್ದಾಣ ನಿರ್ಮಾಣ, ಅಮೆರಿಕದ ವ್ಯಾಪಾರ ಒಪ್ಪಂದ ಸುಳಿಯಿಂದ ದೇಶದ ರೈತರು, ಮೀನುಗಾರರು, ಹೈನುಗಾರರಿಗೆ ತೊಂದರೆ ಆಗದಂತೆ ಹಿತರಕ್ಷಿಸುವ ಬದ್ಧತೆ, ದೇಶದ ರಕ್ಷಣೆಗಾಗಿ ಮಿಷನ್ ಸುದರ್ಶನ ಚಕ್ರ, ಸರಕು ಮತ್ತು ಸೇವಾ ತೆರಿಗೆ ಕಡಿತ, ದೀಪಾವಳಿ ಉಡುಗೊರೆ, ದೇಶವನ್ನು ಪೂರ್ಣ ಸ್ವಾವಲಂಬಿಯಾಗಿಸುವ ಸಂಕಲ್ಪ, ಸೆಮಿ ಕಂಡಕ್ಟರ್ ತಯಾರಿಕೆ, ಸ್ವಂತವಾಗಿ ಯುದ್ಧ ವಿಮಾನಗಳ ಎಂಜಿನ್ ತಯಾರಿಕೆ ಮೊದಲಾದ ವಿಚಾರಗಳನ್ನು ಕುರಿತು ಮಾತನಾಡಿದರು.

ವಿದ್ಯಾರ್ಥಿ ಸಂವಾದ: ಬಳಿಕ ನಿರ್ಗಮನದ ವೇಳೆ ಬಿಳಿ-ಕೇಸರಿ ಸಮವಸ್ತ್ರದಲ್ಲಿ 'ನವ ಭಾರತ' ಘೋಷಣೆ ರಚಿಸಿದ್ದ ಎನ್‌ಸಿಸಿ ವಿದ್ಯಾರ್ಥಿಗಳ ಬಳಿಗೆ ತೆರಳಿ ಆತ್ಮೀಯವಾಗಿ ಮಾತನಾಡಿಸಿದರು. ಹಲವು ವಿದ್ಯಾರ್ಥಿಗಳಿಗೆ ಹಸ್ತಲಾಘವ ನೀಡಿದರು.

ಕೇಸರಿ ಪೇಟ: ಪ್ರಧಾನಿ ಮೋದಿ ಅವರು ಈ ಬಾರಿ ಧರಿಸಿದ್ದ ಕೇಸರಿ ಪೇಟ 79ನೇ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಹೆಚ್ಚು ಗಮನ ಸೆಳೆಯಿತು. ರಾಷ್ಟ್ರಧ್ವಜಾರೋಹಣ ವೇಳೆ ವಾಯುಪಡೆ ಹೆಲಿಕಾಪ್ಟರ್‌ನಿಂದ ಪುಷ್ಪವೃಷ್ಟಿಯಾಯಿತು.

ನಿದ್ರೆ ಕಳೆದುಕೊಂಡಿರುವ ಪಾಕ್!

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಇಡೀ ರಾಷ್ಟ್ರ ಆಕ್ರೋಶಗೊಂಡಿತ್ತು. ಆ ಬಳಿಕ ನಡೆಸಿದ ಆಪರೇಷನ್ ಸಿಂದೂರ್ ಆ ಆಕ್ರೋಶದ ಪ್ರತಿಕ್ರಿಯೆಯಾಗಿತ್ತು. ಅದಕ್ಕಾಗಿಯೇ ಸಶಸ್ತ್ರ ಪಡೆಗಳಿಗೆ ಸರಕಾರ ಮುಕ್ತ ಅಧಿಕಾರ ನೀಡಿತ್ತು. ಭಾರತದ ಸಶಸ್ತ್ರ ಪಡೆಗಳು ಪಾಕಿಸ್ತಾನ ಮೂಲದ ಉಗ್ರರಿಗೆ ಅವರ ಕಲ್ಪನೆಗೂ ಮೀರಿದ ಶಿಕ್ಷೆ ನೀಡಿವೆ. ಆಪರೇಷನ್ ಸಿಂದೂರ್ ಬಳಿಕ ಪಾಕಿಸ್ತಾನ ನಿದ್ರೆ ಕಳೆದುಕೊಂಡಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಇನ್ನು ಮುಂದೆ ಭಯೋತ್ಪಾದಕರು ಮತ್ತು ಅವರನ್ನು ಬೆಂಬಲಿಸುವವರನ್ನು ಒಟ್ಟಿಗೇ ಪರಿಗಣಿಸಲಾಗುವುದು. ಭವಿಷ್ಯದಲ್ಲಿ ಪಾಕ್ ಮತ್ತೆ ದುಷ್ಕೃತ್ಯಕ್ಕೆ ಮುಂದಾದರೆ ಅದಕ್ಕೆ ಕೊಡಬೇಕಾದ ಶಿಕ್ಷೆಯನ್ನು ನಮ್ಮ ಸಶಸ್ತ್ರ ಪಡೆಗಳೇ ನಿರ್ಧರಿಸುತ್ತವೆ. ನೆರೆ ದೇಶದ ಪರಮಾಣು ಬಾಂಬ್ ಬಳಕೆ ಬೆದರಿಕೆಗೆ ಭಾರತ ಹೆದರುವುದಿಲ್ಲ. ಅದಕ್ಕೆ ತಕ್ಕ ಉತ್ತರ ಕೊಡಲು ಭಾರತ ಸಿದ್ಧವಿದೆ ಎಂದರು. ರಕ್ತ-ನೀರು ಒಟ್ಟಿಗೇ ಹರಿಯಲು ಸಾಧ್ಯವಿಲ್ಲ ಎಂಬುದು ನಿರ್ಧಾರ ವಾಗಿದೆ. ಸಿಂಧೂ ನದಿ ನೀರು ಒಪ್ಪಂದದಿಂದ ಭಾರತಕ್ಕೆ ಅನ್ಯಾಯವಾಗಿದೆ. ಅದನ್ನು ಈಗ ಸರಿಪಡಿಸಲಾಗಿದೆ. ಭಾರತದಲ್ಲಿ ಹುಟ್ಟುವ ನದಿಯ ನೀರಿನ ಹಕ್ಕು ಭಾರತೀಯರಿಗಷ್ಟೇ ಇರುತ್ತದೆ. ಸಿಂಧು ನದಿ ಒಪ್ಪಂದಕ್ಕೆ ಮುಂದೆಂದೂ ಒಪ್ಪಿಗೆ ನೀಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು.

ಕೆಂಪುಕೋಟೆ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ, ಕೇಂದ್ರ ಸಚಿವರಾದ ಮನೋಹರ ಲಾಲ್ ಕಟ್ಟರ್, ರಾಜನಾಥ್ ಸಿಂಗ್, ಅಮಿತ್ ಶಾ, ನಿತಿನ್ ಗಡ್ಕರಿ ಮತ್ತಿತರರಿದ್ದರು.

ಭಾಷಣದ ಮುಖ್ಯಾಂಶ

- ಭಾರತದ ಜನರ ಶ್ರಮದಿಂದ ತಯಾರಾದ ವಸ್ತುಗಳನ್ನು ಮಾತ್ರವೇ ನಾವು ಖರೀದಿಸಬೇಕು. ಆಗ ದೇಶದ ಆರ್ಥಿಕತೆ ಪ್ರಗತಿ ವೇಗಗೊಳ್ಳುತ್ತದೆ.
- ದೇಶದ ಯುವಜನತೆ ತಮ್ಮ ವಿಭಿನ್ನ ಆಲೋಚನೆಗಳನ್ನು ವ್ಯರ್ಥಗೊಳಿಸದೇ ಸಾಕಾರಗೊಳಿಸಬೇಕು. ಸರಕಾರ ನಿಮ್ಮೊಂದಿಗೆ ನಿಲ್ಲುತ್ತದೆ.
- ಸೈಬರ್ ಭದ್ರತೆಯಿಂದ ಹಿಡಿದು ಕೃತಕ ಬುದ್ಧಿಮತ್ತೆಯವರೆಗೆ ಎಲ್ಲವೂ ಭಾರತದ್ದೇ ಆಗಿರುವುದು ಇಂದಿನ ಅಗತ್ಯ ಅಲ್ಲವೇ? ನಮ್ಮ ಜನರ ಶಕ್ತಿ ಈ ಕ್ಷೇತ್ರಗಳಲ್ಲಿ ತೊಡಗಬೇಕು.
- ಸಾಮಾಜಿಕ ಮಾಧ್ಯಮ ಮತ್ತಿತರ ವಿಶ್ವ ವೇದಿಕೆಗಳಲ್ಲಿ ಭಾರತೀಯರ ಕೊಡುಗೆ ದೊಡ್ಡದಿದೆ.
- ಸಮುದ್ರದ ಕೆಳಗೆ ತೈಲ ನಿಕ್ಷೇಪ ಶೋಧಕ್ಕಾಗಿ ಮಿಷನ್ ಮೋಡ್‌ನಲ್ಲಿ ಕೆಲಸ ಮಾಡಬೇಕಿದೆ. ಆ ಮೂಲಕ ಇಂಧನ ಕ್ಷೇತ್ರದಲ್ಲಿ ಭಾರತ ಸ್ವಾವಲಂಬಿಯಾಗಬೇಕಿದೆ.
- ಜಗತ್ತು ನಿರ್ಣಾಯಕ ಖನಿಜಗಳ ಬಗ್ಗೆ ಜಾಗರೂಕವಾಗಿದೆ. ಈ ಕ್ಷೇತ್ರದಲ್ಲಿ ಸ್ವಾವಲಂಬನೆ ಅತ್ಯಗತ್ಯ. ಕೈಗಾರಿಕೆ ಮತ್ತು ರಕ್ಷಣಾ ಕ್ಷೇತ್ರಗಳಿಗೆ ಬೇಕಾದ ಪ್ರಮುಖ ಖನಿಜಗಳಿಗಾಗಿ 'ನ್ಯಾಷನಲ್ ಕ್ರಿಟಿಕಲ್ ಮಿನರಲ್ಸ್ ಮಿಷನ್' ಆರಂಭಿಸಲಾಗಿದೆ.
- ಸೌರಶಕ್ತಿ ಬಳಕೆ ಸೇರಿದಂತೆ ನವೀಕೃತ ಇಂಧನ ಬಳಕೆ ಕ್ಷೇತ್ರಗಳಲ್ಲಿ ಭಾರತ ವೇಗವಾಗಿ ಸಾಗುತ್ತಿದೆ. ವಿಕಸಿತ ಭಾರತಕ್ಕೆ ಕೊಡುಗೆ ಗಣನೀಯವಾಗಿ ಬರುತ್ತಿದೆ.
- ಯುದ್ಧ ವಿಮಾನಗಳಿಗೆ ಅತ್ಯಗತ್ಯವಾದ ಜೆಟ್ ಎಂಜಿನ್ ಅಭಿವೃದ್ಧಿ ಸಾಮರ್ಥ್ಯ 4-5 ದೇಶಗಳಿಗಷ್ಟೇ ಇದೆ. ಭಾರತದಲ್ಲೇ ಜೆಟ್ ಎಂಜಿನ್ ಅಭಿವೃದ್ಧಿಪಡಿಸುವುದಕ್ಕೆ ಯುವ ಸಮುದಾಯ ಮತ್ತು ಸೃಜನಶೀಲ ತಂತ್ರಜ್ಞರ ಕೊಡುಗೆ ಅಗತ್ಯವಿದೆ.
- ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆ ಅತ್ಯಗತ್ಯ. ವಿದೇಶಗಳ ಅವಲಂಬನೆ ಸಲ್ಲ. ನಮ್ಮ ರಕ್ಷಣಾ ಪಡೆಗಳಿಗೆ ಅಗತ್ಯವಾದ ಶಸ್ತ್ರಾಸ್ತ್ರಗಳನ್ನು ನಾವೇ ತಯಾರಿಸಿಕೊಳ್ಳುವಂತಾಗಬೇಕಿದೆ.
- ಸೆಮಿಕಂಡಕ್ಟರ್ ಉದ್ಯಮ ಅಭಿವೃದ್ಧಿ ಹಂತದಲ್ಲಿದೆ. ವರ್ಷಾಂತ್ಯದೊಳಗೆ ಭಾರತದಲ್ಲಿಯೇ ತಯಾರಾದ ಸೆಮಿಕಂಡಕ್ಟರ್ ಚಿಪ್ ಬಿಡುಗಡೆ ಮಾಡಲಾಗುತ್ತಿದೆ.
- ಭಾರತದ್ದೇ ಸ್ವಂತ ಬಾಹ್ಯಾಕಾಶ ನಿಲ್ದಾಣ ಸ್ಥಾಪನೆಯಾಗಲಿದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ದೇಶದಲ್ಲಿ 300ಕ್ಕೂ ಹೆಚ್ಚು ಸ್ಟಾರ್ಟ್ ಅಪ್‌ಗಳು ನಾವೀನ್ಯ ಸಾಧಿಸುತ್ತಿವೆ.
- ಅಕ್ರಮ ವಲಸಿಗರ ಕೈಗೆ ದೇಶವನ್ನು ಬಿಟ್ಟುಕೊಡಲಾಗದು. ಒಳನುಸುಳುವಿಕೆ ವಿರುದ್ಧ ಕಠಿಣ ಕ್ರಮ ಅಗತ್ಯ. ಒಳನುಸುಳುವಿಕೆ ದೇಶದ ಜನರ ಜೀವನೋಪಾಯ ಕಸಿಯುತ್ತಿದೆ. ಇದನ್ನು ಸಹಿಸಲಾಗದು.
- ಅಕ್ರಮ ವಲಸೆ ದೇಶಕ್ಕೆ ಬೆದರಿಕೆ. ಅದರ ತಡೆಗಾಗಿ 'ಜನಸಂಖ್ಯಾ ಮಿಷನ್' ಆರಂಭಿಸಲಾಗುವುದು. ಅದರಡಿ ದೇಶದ ಏಕತೆ, ಸಮಗ್ರತೆ ಮತ್ತು ನಾಗರಿಕರ ಹಕ್ಕುಗಳ ರಕ್ಷಣೆ ಸಾಧ್ಯವಾಗಲಿದೆ.

ಆಪರೇಷನ್ ಸಿಂದೂರ್ ಯಶಸ್ಸಿನ ಸೇನಾಪಡೆಗಳಿಗೆ ಪ್ರಧಾನಿ ಮೋದಿ ಗೌರವ.

ಆರ್‌ಎಸ್‌ಎಸ್ 100 ವರ್ಷ ಸಾಧನೆ ಸ್ಮರಣೆ

ರಾಷ್ಟ್ರೀಯ ಸ್ವಯಂಸೇವಕ ಸಂಘ ವಿಶ್ವದಲ್ಲೇ ಅತಿದೊಡ್ಡ 'ಎನ್‌ಜಿಒ' (ಲಾಭಾಕಾಂಕ್ಷೆ ರಹಿತ ಸರಕಾರೇತರ ಸೇವಾ ಸಂಘ) ಆಗಿದೆ. ಅಂತಹ ಸಮಾಜ ಸೇವಾ ಸಂಘಟಕ್ಕೀಗ 100 ವರ್ಷಗಳ ಸಂಭ್ರಮದ ಆಚರಣೆ ನಡೆದಿದೆ. ಇದು ದೇಶವಾಸಿಗಳ ಮಟ್ಟಿಗೆ ಅತ್ಯಂತ ಹೆಮ್ಮೆಯ ಕ್ಷಣ ಎಂದು ಪ್ರಧಾನಿ ಮೋದಿ ಶ್ಲಾಘಿಸಿದರು. 79ನೇ ಸ್ವಾತಂತ್ರ್ಯೋತ್ಸವದಂದು ಕೆಂಪು ಕೋಟೆ ಮೇಲಿನಿಂದ ದೇಶವನ್ನುದ್ದೇಶಿಸಿ ಮಾತನಾಡಿದ ಮೋದಿ, ಆರ್‌ಎಸ್‌ಎಸ್, ಸರಕಾರದಿಂದಾಗಲೀ, ಅಧಿಕಾರದಲ್ಲಿ ಇರುವವರಿಂದಾಗಲೇ ನಿರ್ಮಿತವಾಗಿಲ್ಲ. ಸಂತರು, ಋಷಿಗಳು, ವಿಜ್ಞಾನಿಗಳು, ಶಿಕ್ಷಕರು, ರೈತರು, ಸೈನಿಕರು, ಕಾರ್ಮಿಕರು, ವ್ಯಕ್ತಿಗಳು ಮತ್ತು ಸಂಸ್ಥೆಗಳು ಸೇರಿದಂತೆ ಕೋಟ್ಯಂತರ ಜನರ ಪ್ರಯತ್ನದಿಂದ ಬೆಳೆದುಬಂದಿದೆ. 100 ವರ್ಷಗಳಿಂದ ಸ್ವಯಂಸೇವಕರು 'ಮಾತೃಭೂಮಿ'ಯ ಕಲ್ಯಾಣಕ್ಕಾಗಿ 'ವ್ಯಕ್ತಿ ನಿರ್ಮಾಣ' ಮತ್ತು 'ರಾಷ್ಟ್ರ ನಿರ್ಮಾಣ'ದ ಸಂಕಲ್ಪಕ್ಕಾಗಿ ಜೀವನ ಮುಡಿಪಾಗಿಡುತ್ತಾ ಬಂದಿದ್ದಾರೆ. ರಾಷ್ಟ್ರಕ್ಕೆ ಸಮರ್ಪಿತ ಸೇವೆಗಾಗಿ ಆರ್‌ಎಸ್‌ಎಸ್‌ನ ಸ್ವಯಂಸೇವಕರಿಗೆಲ್ಲರಿಗೂ ಕೆಂಪುಕೋಟೆಯಿಂದ ಗೌರವ ಸಲ್ಲಿಸುವೆ ಎಂದರು. ಸೇವೆ, ಸಮರ್ಪಣೆ, ಸಂಘಟನೆ ಮತ್ತು ಅಪ್ರತಿಮ ಶಿಸ್ತು ಆರ್‌ಎಸ್‌ಎಸ್‌ನ ಹೆಗ್ಗುರುತು. ಆರ್‌ಎಸ್‌ಎಸ್‌ನ ಶತಮಾನ ಕಾಲದ ಅದ್ಭುತ ಪ್ರಯಾಣದ ಬಗ್ಗೆ ದೇಶ ಹೆಮ್ಮೆಪಡುತ್ತದೆ. ಅದು ನಮಗೆಲ್ಲಾ ಸ್ಫೂರ್ತಿ ನೀಡುತ್ತದೆ ಎಂದು ಹೇಳಿದರು.

ಸ್ವಾವಲಂಬಿ ಭಾರತ

ಇನ್ನೊಂದು ದೇಶದ ಮೇಲೆ ಅವಲಂಬಿತವಾಗುವುದೇ ದುರಂತ. ಅದಕ್ಕಾಗಿಯೇ ಕೇಂದ್ರ ಸರಕಾರ ಆತ್ಮ ನಿರ್ಭರ ಭಾರತ ಪರಿಕಲ್ಪನೆಗೆ ಹೆಚ್ಚು ಆದ್ಯತೆ ನೀಡಿದೆ. ದೇಶದ ಸ್ವಾವಲಂಬಿಯಾಗಲು ಇಂಥ ಪ್ರಯತ್ನ ಅತ್ಯಗತ್ಯ ಎಂದರು. ದೇಶಕ್ಕೆ ಬೇಕಾಗುವಷ್ಟೂ ರಸಗೊಬ್ಬರಗಳನ್ನು ದೇಶದಲ್ಲೇ ತಯಾರಿಸಿಕೊಳ್ಳಬೇಕು, ಯುದ್ಧ ವಿಮಾನಗಳಿಗೆ ಬೇಕಾದ ಎಂಜಿನ್‌ಗಳಿಗೆ ಬೇರೆ ದೇಶವನ್ನು ಅವಲಂಬಿಸುವ ಬದಲು ದೇಶದಲ್ಲೇ ಅಭಿವೃದ್ಧಿಪಡಿಸಬೇಕಿದೆ ಎಂದರು. ಇಂಧನ ವಿಚಾರ ದಲ್ಲಿ ಮಾತ್ರ ಬೇರೆ ದೇಶಗಳನ್ನು ಅವಲಂಬಿಸಿದ್ದೇವೆ. ಪೂರ್ಣ ಸ್ವಾವಲಂಬಿ ಭಾರತಕ್ಕಾಗಿ ಇಂಧನ ಸ್ವಾತಂತ್ರ್ಯ ಸಾಧಿಸಬೇಕು ಎಂದು ನುಡಿದರು.

ಪರಮಾಣು ಶಕ್ತಿ

ಭಾರತ ಕಳೆದ 11 ವರ್ಷ ಗಳಲ್ಲಿ ಸೌರಶಕ್ತಿ ಸಾಮರ್ಥ್ಯ ವನ್ನು 30 ಪಟ್ಟು ಹೆಚ್ಚಿಸಿಕೊಂಡಿದೆ. 10 ಹೊಸ ಪರಮಾಣು ರಿಯಾಕ್ಟರ್‌ಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿವೆ. ಭಾರತ 100ನೇ ಸ್ವಾತಂತ್ರ್ಯ ದಿನಾಚರಣೆ (2047ರ) ವೇಳೆಗೆ ದೇಶದ ಪರಮಾಣು ಶಕ್ತಿ ಸಾಮರ್ಥ್ಯವನ್ನು 10 ಪಟ್ಟು ಹೆಚ್ಚಿಸುವ ಗುರಿ ಇಟ್ಟುಕೊಳ್ಳಲಾಗಿದೆ ಎಂದರು.

ದೀಪಾವಳಿಗೆ 2 ದೊಡ್ಡ ಉಡುಗೊರೆ!

ಮುಂಬರುವ ದೀಪಾವಳಿ ಹಬ್ಬಕ್ಕೆ ದೇಶದ ಜನತೆಗೆ ಭರ್ಜರಿ ಉಡುಗೊರೆ ನೀಡುವುದಾಗಿ ಪ್ರಧಾನಿ ಮೋದಿ ಘೋಷಿಸಿದರು. ಮೊದಲನೆಯದು ಜಿಎಸ್‌ಟಿ ಹೊರೆ ಇಳಿಕೆ, ಎರಡನೆಯದು ಉದ್ಯೋಗ ಸೃಷ್ಟಿಗೆ ಒತ್ತು ಎಂದರು. ಈ ಬಾರಿ ದೀಪಾವಳಿಗೆ ಡಬಲ್ ಧಮಾಕ ಎಂದ ಪ್ರಧಾನಿ, ಜಿಎಸ್‌ಟಿಯಲ್ಲಿ ಮಹತ್ವದ ಸುಧಾರಣೆ ತರಲಾಗುವುದು. ವರ್ತಕರು, ಜನತೆಗೆ ತೆರಿಗೆ ಹೊರೆ ಕಡಿಮೆ ಮಾಡಲಾಗುವುದು ಎಂದು ಪ್ರಕಟಿಸಿದರು. 8 ವರ್ಷಗಳಲ್ಲಿ ಜಿಎಸ್‌ಟಿಯಲ್ಲಿ ಬಹಳಷ್ಟು ಸುಧಾರಣೆಗಳನ್ನು ಮಾಡಲಾಗಿದೆ. ದೀಪಾವಳಿಗೆ ಮತ್ತಷ್ಟು ಸುಧಾರಣೆ ತರುತ್ತಿದ್ದೇವೆ. ಇದರಿಂದ ತೆರಿಗೆ ಹೊರೆ ಗಣನೀಯವಾಗಿ ತಗ್ಗಲಿದೆ ಎಂದರು. ಜಿಎಸ್‌ಟಿ ಮಂಡಳಿ ಸಭೆ ಸೆ.9ರಂದು ನಡೆಯಲಿದ್ದು, ತೆರಿಗೆ ಪ್ರಮಾಣ ತಗ್ಗಲಿವೆ. ಅಗತ್ಯ ವಸ್ತುಗಳು ಮತ್ತು ನಿತ್ಯ ಬಳಕೆ ವಸ್ತುಗಳ ಮೇಲಿನ ತೆರಿಗೆ ದರ ಕಡಿಮೆ ಮಾಡು ವುದಕ್ಕೆ ಗಮನ ನೀಡಲಾಗಿದೆ. ರಾಜ್ಯಗಳ ಜತೆಗೂ ಈ ಬಗ್ಗೆ ಮಾತನಾಡಿದ್ದೇವೆ. ಇದರಿಂದ ಕೈಗಾರಿಕೆಗಳಿಗೆ ದೊಡ್ಡ ಲಾಭವಾಗಲಿದೆ. ವಸ್ತುಗಳೂ ಅಗ್ಗವಾಗುತ್ತವೆ. ಇದರಿಂದ ಆರ್ಥಿಕತೆಗೆ ದೊಡ್ಡ ಉತ್ತೇಜನ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ವಿಕಸಿತ್ ಭಾರತ್ ರೋಜ್ಗಾರ್ ಯೋಜನೆ ಪ್ರಕಟಿಸಿದ ಮೋದಿ, ಖಾಸಗಿ ವಲಯದಲ್ಲಿ ಮೊದಲ ಬಾರಿ ಉದ್ಯೋಗ ಪಡೆದವರಿಗೆ ಸರಕಾರದಿಂದ 15,000 ರು. ಉತ್ತೇಜನ ಧನ ಸಿಗಲಿದೆ ಎಂದರು.

ರೈತರ ಹಿತಾಸಕ್ತಿ ರಕ್ಷಣೆ, ಇಂಧನ ಕ್ಷೇತ್ರದಲ್ಲಿ ಸ್ವಾತಂತ್ರ್ಯ



ರೈತರು, ಕುರಿಗಾಹಿಗಳು, ಮೀನುಗಾರರ ಹಿತಾಸಕ್ತಿ ವಿಚಾರದಲ್ಲಿ ನಾನು ಗೋಡೆಯಂತೆ ನಿಲ್ಲುವೆ. ಈ ವಿಚಾರದಲ್ಲಿ ಯಾವ ಕಾರಣಕ್ಕೂ ರಾಜಿಯಾಗುವುದಿಲ್ಲ ಎಂದು ಪ್ರಧಾನಿ ಮೋದಿ ಒತ್ತಿ ಹೇಳಿದರು. ಆ ಮೂಲಕ ಅಮೆರಿಕದ ವ್ಯಾಪಾರ ಒಪ್ಪಂದ ಷರತ್ತುಗಳಿಗೆ ಒಪ್ಪುವಂತೆ ಒತ್ತಾಯಿಸುತ್ತಿರುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಸ್ಪಷ್ಟ ಸಂದೇಶ ರವಾನಿಸಿದರು. ದೇಶ ಸ್ವಾತಂತ್ರ್ಯಗೊಂಡ ನಂತರ ಪ್ರಜೆಗಳಿಗೆ ಆಹಾರ ಒದಗಿಸುವುದೇ ದೊಡ್ಡ ಸವಾಲಿನ ಕೆಲಸವಾಗಿತ್ತು. ಆದರೆ, ನಮ್ಮ ರೈತರು ಬೆವರು ಸುರಿಸಿ ದೇಶವನ್ನು ಸ್ವಾವಲಂಬಿಯನ್ನಾಗಿಸಿದ್ದಾರೆ. ಹಾಗಾಗಿ ದೇಶದ ರೈತರ ಹಿತಾಸಕ್ತಿಗೆ ಯಾವ ತ್ಯಾಗಕ್ಕೂ ಸಿದ್ಧ ಎಂದರು.

ಹೊಸ ಸೇನಾ ರಾಕೆಟ್ ಪಡೆ: ಪಾಕ್ ಘೋಷಣೆ

ಇಸ್ಲಾಮಾಬಾದ್: ಭಾರತ ಸೇನಾಪಡೆಗಳು ನಡೆಸಿದ 'ಆಪರೇಷನ್ ಸಿಂದೂರ್'ನಲ್ಲಿ ಅಮೆರಿಕ ನಿರ್ಮಿತ ಎಫ್-16 ಸೇರಿದಂತೆ ಹಲವು ಯುದ್ಧಗಳನ್ನು ಮತ್ತು ಕ್ಷಿಪಣಿ ನಿರೋಧಕ ರಾಡಾರ್‌ಗಳನ್ನು ಕಳೆದುಕೊಂಡು ಸೋತು ಸುಣ್ಣವಾದ ಪಾಕಿಸ್ತಾನ ಈಗ, ಹೊಸ ಸೇನಾ ಪಡೆಯನ್ನು ರಚಿಸುವುದಾಗಿ ಘೋಷಿಸಿದೆ.



ಸುಧಾರಿತ ತಂತ್ರಜ್ಞಾನ ಬಳಸಿಕೊಂಡು ಯುದ್ಧ ಮಾಡಬಲ್ಲ ಸಾಮರ್ಥ್ಯವನ್ನು ಬಲಪಡಿಸಿಕೊಳ್ಳುವುದಾಗಿ ದೇಶದ 78ನೇ ಸ್ವಾತಂತ್ರ್ಯ ದಿನಾಚರಣೆಯಂದು ಘೋಷಿಸಿರುವ ಪಾಕಿಸ್ತಾನ, ಸುಸಜ್ಜಿತ ಹೊಸ ಸೇನಾ ರಾಕೆಟ್ ಪಡೆ ರಚಿಸುವುದಾಗಿ ಹೇಳಿಕೊಂಡಿದೆ. ಭಾರತದಿಂದ 4 ದಿನಗಳ ಕಾಲ ಸೇನಾ ಸಂಘರ್ಷ ಎದುರಿಸಿದ ಬಳಿಕ ನಡೆಯುತ್ತಿರುವ ಸ್ವಾತಂತ್ರ್ಯ ದಿನದ ಹಿನ್ನೆಲೆಯಲ್ಲಿ ಆಯೋಜಿಸಿದ್ದ ವಿಶೇಷ ಕಾರ್ಯಕ್ರಮದಲ್ಲಿ ಪ್ರಧಾನಿ ಶಹಭಾಜ್ ಷರೀಫ್ ಈ ಘೋಷಣೆ ಮಾಡಿದ್ದಾರೆ. ದೇಶದ ಸೇನಾ ಸಾಮರ್ಥ್ಯ ಹೆಚ್ಚಿಸಿಕೊಳ್ಳುವುದರ ಭಾಗವಾಗಿಯೇ 'ಸೇನಾ ರಾಕೆಟ್ ಪಡೆ ಕಮಾಂಡ್' ರಚಿಸಲಾಗುತ್ತಿದೆ. ಇದು ಪಾಕ್ ಸೇನಾಪಡೆಗಳ ಮಟ್ಟಿಗೆ ಪ್ರಮುಖ ಮೈಲು ಗಲ್ಲು ಆಗಿರಲಿದೆ ಎಂದಿದ್ದಾರೆ. ಹೊಸ ರಾಕೆಟ್ ಪಡೆಯ ವಿಸ್ತಾರ- ಜವಾಬ್ದಾರಿಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಷರೀಫ್ ಪ್ರಕಟಿಸಲಿಲ್ಲ. ಹೊಸ ರಾಕೆಟ್ ಪಡೆಯು ಚೀನಾದ ಪೀಪಲ್ ಲಿಬರೇಶನ್ ಆರ್ಮಿ(ಪಿಎಲ್‌ಎ)ಯಿಂದ ನೇರ ಸ್ಫೂರ್ತಿ ಪಡೆದಿದೆ. ಅದು ಭೂ-ಆಧಾರಿತ ಬ್ಯಾಲಿಸ್ಟಿಕ್(ಖಂಡಾಂತರ) ಮತ್ತು ಹೈಪರ್‌ಸಾನಿಕ್ ಹಾಗೂ ಕ್ರೂಸ್ ಕ್ಷಿಪಣಿಗಳ ದಾಳಿಗಳನ್ನು ನಿಯಂತ್ರಿಸುವಷ್ಟು ಸಮರ್ಥವಾಗಿರಲಿದೆ ಎಂದು ಹೇಳಲಾಗಿದೆ.

ಪಹಲ್ಗಾಮ್ ದಾಳಿ, ವಾಸ್ತವ ಚಿತ್ರಣ ಮರೆಯಲಾಗದು

ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ: ಕೇಂದ್ರಕ್ಕೆ ಸುಪ್ರೀಂ ನೋಟಿಸ್

ದೆಹಲಿ: ಜಮ್ಮು-ಕಾಶ್ಮೀರಕ್ಕೆ ಮರಳಿ ರಾಜ್ಯದ ಸ್ಥಾನಮಾನ ನೀಡುವ ಸಂಬಂಧ ಕೇಂದ್ರ ಸರಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ನಡೆಸುತ್ತಿರುವ ಸುಪ್ರೀಂ ಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಬಿ.ವಿ.ಗವಾಯಿ ಅವರ ನೇತೃತ್ವದ ದ್ವಿಸದಸ್ಯ ಪೀಠ, ಅರ್ಜಿ ಸಂಬಂಧ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರಕಾರಕ್ಕೆ ಗುರುವಾರ ನೋಟಿಸ್ ಜಾರಿ ಮಾಡಿದೆ.

'ಅರ್ಜಿಯನ್ನು ತುರ್ತು ವಿಚಾರಣೆಗೆ ಪರಿಗಣಿಸಬೇಕು' ಎಂದು ಅರ್ಜಿದಾರರ ಪರ ಹಿರಿಯ ವಕೀಲ ಗೋಪಾಲ್ ಶಂಕರನಾರಾಯಣನ್ ಅವರು ಮನವಿ ಮಾಡಿದರು. ಆದರೆ ದ್ವಿಸದಸ್ಯ ಪೀಠ, 'ಹಾಗೆಲ್ಲಾ ಆತುರ ತೋರಬೇಡಿ. ಇತ್ತೀಚೆಗೆ(ಏ.22) ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನಲ್ಲಿ ನಡೆದ 26 ಜನರ ಹತ್ಯೆಯ ಘಟನೆಯನ್ನು ಮರೆಯಲಾಗದು. ರಾಜ್ಯದಲ್ಲಿನ ವಾಸ್ತವ ಸಂಗತಿಗಳನ್ನೂ ನೀವು ಗಮನದಲ್ಲಿಡಬೇಕಿದೆ' ಎಂದು ಕಿವಿಮಾತು ಹೇಳಿತು.

ಈ ಮೊದಲು ದಶಕಗಳ ಕಾಲದ ಭಯೋತ್ಪಾದನೆಯಿಂದ ನಲುಗಿರುವ ಜಮ್ಮು-ಕಾಶ್ಮೀರದಲ್ಲಿ ಈಗಷ್ಟೇ ಶಾಂತಿ, ಕಾನೂನು-ಸುವ್ಯವಸ್ಥೆ ನೆಲೆಸಿದೆ. ವಿಧಾನಸಭೆಗೆ ಚುನಾವಣೆಯೂ ಶಾಂತಿಯುತವಾಗಿ ನಡೆದು ಜನರ ಆಯ್ಕೆಯ ಸರಕಾರವೂ ರಚನೆಯಾಗಿದೆ. ಅಭಿವೃದ್ಧಿ ಕಾರ್ಯಗಳೂ ನಡೆದಿವೆ. ಸದ್ಯಕ್ಕೆ ಈಗಿರುವಂತೆಯೇ ವ್ಯವಸ್ಥೆ ಮುಂದುವರಿಯುವುದು ಸೂಕ್ತ. ಹಾಗಾಗಿ, ರಾಜ್ಯ ಸ್ಥಾನಮಾನಕ್ಕೆ ಆಗ್ರಹಿಸುತ್ತಿರುವ ಅರ್ಜಿಗಳನ್ನು ಪೀಠ ವಜಾಗೊಳಿಸಬೇಕು ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಮನವಿ ಮಾಡಿದರು.

ಪಟನಾದಲ್ಲಿ ಆರಂಭ-ದೇಶಾದ್ಯಂತ ವಿಸ್ತರಣೆ

ನಾಳೆಯಿಂದ ಕಾಂಗ್ರೆಸ್‌ನಿಂದ ಮತದಾರ ಅಧಿಕಾರ ಯಾತ್ರೆ

ದೆಹಲಿ: ದೇಶದ ಮತದಾರರನ್ನು ಚುನಾವಣಾ ಅಕ್ರಮಗಳ ವಿರುದ್ಧ ಜಾಗೃತಿಗೊಳಿಸಲು ಕಾಂಗ್ರೆಸ್ ನೇತೃತ್ವದಲ್ಲಿ 'ಮತದಾರ ಅಧಿಕಾರ ಯಾತ್ರೆ' ಹಮ್ಮಿಕೊಳ್ಳಲಾಗಿದೆ. ಯಾತ್ರೆ ಬಿಹಾರದಲ್ಲಿ ಆಗಸ್ಟ್ 17ರಿಂದ ಆರಂಭಗೊಳ್ಳಲಿದೆ ಎಂದು ಕಾಂಗ್ರೆಸ್ ನಾಯಕ, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಗುರುವಾರ ಪ್ರಕಟಿಸಿದ್ದಾರೆ.

'ಮತ ಕಳವು' ಅಭಿಯಾನವನ್ನು ಮತದಾರ ಅಧಿಕಾರ ಯಾತ್ರೆಯ ಮೂಲಕ ದೇಶವ್ಯಾಪಿ ನಡೆಸಲು ನಿರ್ಧರಿಸಲಾಗಿದೆ. ಯಾತ್ರೆ ಸೆ.1ರಂದು ಪಟನಾದ ಗಾಂಧಿ ಮೈದಾನದಲ್ಲಿ ಬೃಹತ್ ಸಾರ್ವಜನಿಕ ಸಭೆಯೊಂದಿಗೆ ಮುಕ್ತಾಯಗೊಳ್ಳಲಿದೆ. ಈ ಬಾರಿ, ಮತ ಕಳ್ಳರಿಗೆ ಸೋಲು ಹಾಗೂ ಜನತೆ-ಸಂವಿಧಾನಕ್ಕೆ ಗೆಲುವು ಸಿಗುವುದು ಖಚಿತ ಎಂದು ರಾಹುಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಇದು ಕೇವಲ ಚುನಾವಣೆ ವಿಷಯವಲ್ಲ, ಪ್ರಜಾಪ್ರಭುತ್ವ, ಸಂವಿಧಾನ ಹಾಗೂ 'ಒಬ್ಬ ಪ್ರಜೆಗೆ 1 ಮತ' ನೀತಿಯ ರಕ್ಷಣೆಗಾಗಿ ನಡೆಯುತ್ತಿರುವ ನಿರ್ಣಾಯಕ ಹೋರಾಟ. ದೇಶಾದ್ಯಂತದ ಮತದಾರರ ಪಟ್ಟಿಯ ಶುದ್ಧೀಕರಣವೇ ಈ ಅಭಿಯಾನದ ಪ್ರಮುಖ ಗುರಿ. ಯುವಕರು, ಕಾರ್ಮಿಕರು, ರೈತರು ಸೇರಿದಂತೆ ದೇಶದ ಪ್ರತಿಯೊಬ್ಬ ನಾಗರಿಕ ಹೋರಾಟದಲ್ಲಿ ಭಾಗವಹಿಸಬೇಕು ಎಂದು ರಾಹುಲ್ 'ಎಕ್ಸ್' ಖಾತೆ ಮೂಲಕ ಕರೆ ನೀಡಿದ್ದಾರೆ.

ಸರಣಿ ಕಾರ್ಯಕ್ರಮ: ಇಂಡಿ ಒಕ್ಕೂಟದ ಪಕ್ಷಗಳ ನಾಯಕರೆಲ್ಲಾ 'ಮತದಾರ ಅಧಿಕಾರ ಯಾತ್ರೆ'ಯಲ್ಲಿ ಪಾಲ್ಗೊಳ್ಳಲಿದ್ದಾರೆ. ಆ.22ರಿಂದ ಸೆ.7ರವರೆಗೆ ರಾಜ್ಯಗಳಲ್ಲಿನ ಪಕ್ಷದ ಕೇಂದ್ರ ಕಚೇರಿಗಳಲ್ಲಿ 'ಓಟ್ ಚೋರ್, ಗದ್ದಿ ಚೋರ್'(ಮತ ಚೋರರು-ಅಧಿಕಾರ ಕಳ್ಳರು) ರ‍್ಯಾಲಿ ನಡೆಯಲಿವೆ. ಸೆ.15ರಿಂದ ಅ.15ರವರೆಗೆ 'ಮತದಾನ ಹಕ್ಕು ರಕ್ಷಣೆ' ಹೆಸರಲ್ಲಿ ದೇಶವ್ಯಾಪಿ ಸಹಿ ಅಭಿಯಾನ ನಡೆಯಲಿದೆ ಎಂದು ಕಾಂಗ್ರೆಸ್‌ನ ವಿದ್ಯಾರ್ಥಿ ಘಟಕ 'ಎನ್‌ಎಸ್‌ಯುಐ' ಉಸ್ತುವಾರಿ ಕನ್ಹಯ್ಯ ಕುಮಾರ್ ಹೇಳಿದ್ದಾರೆ.

ಭಾರತಕ್ಕೆ ಸುಂಕದ ಪೆಟ್ಟು: ಪುಟಿನ್ ಮಾತಿನ ಗುಟ್ಟು

ವಾಷಿಂಗ್ಟನ್: ರಾಷ್ಯದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಉಕ್ರೇನ್ ಜತೆಗಿನ ಯುದ್ಧ ನಿಲುಗಡೆ ಮಾತುಕತೆಗೆ ಸುಲಭಕ್ಕೆ ಒಪ್ಪುತ್ತಿರಲಿಲ್ಲ. ಅದರ ಆಪ್ತಮಿತ್ರ ಭಾರ

ತದ ಮೇಲೆ ಹೆಚ್ಚಿನ ಸುಂಕ ವಿಧಿಸಿದ್ದಕ್ಕೇ ಅವರು ಮಾತುಕತೆಗೆ ಒಪ್ಪಿದ್ದಾರೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಭಿಪ್ರಾಯಪಟ್ಟಿದ್ದಾರೆ. ಅಲಾಸ್ಕಾದಲ್ಲಿ ಪುಟಿನ್ ಜತೆಗಿನ ಮಾತುಕತೆಗೂ ಮುನ್ನ 'ಫಾಕ್ಸ್ ನ್ಯೂಸ್'ಗೆ ಸಂದರ್ಶನ ನೀಡಿದ ಟ್ರಂಪ್, ರಷ್ಯಾದಿಂದ ಭಾರೀ ಪ್ರಮಾಣದಲ್ಲಿ ಕಚ್ಚಾತೈಲ ಆಮದು ಮಾಡಿಕೊಳ್ಳುತ್ತಿರುವ ದೇಶಗಳಲ್ಲಿ ಭಾರತ 2ನೇ ಸ್ಥಾನದಲ್ಲಿದೆ. ಇಂಥ ದೊಡ್ಡ ಗ್ರಾಹಕ ದೇಶ ಅಮೆರಿಕದ ದಂಡ ಸುಂಕದ ಕಾರಣಕ್ಕೆ ಕಚ್ಚಾತೈಲ ಆಮದು ನಿಲ್ಲಿಸಿಬಿಡಬಹುದು ಎಂಬ ಕಾರಣಕ್ಕೇ ರಷ್ಯಾ ನಮ್ಮ ಜತೆ ಮಾತಿಗೆ ಒಪ್ಪಿದೆ. ಭಾರತದ ಮೇಲಿನ ಅಮೆರಿಕದ ಸುಂಕ ಈ ವಿಚಾರದಲ್ಲಿ ಪ್ರಭಾವ ಬೀರಿದೆ ಎಂದು ವಿಶ್ಲೇಷಿಸಿದ್ದಾರೆ.

ಕೊಚ್ಚಿಹೋದ ಮನೆಗಳು, ಭಾರೀ ಭೂಕುಸಿತ, 500 ಜನ ಕಣ್ಮರೆ ಶಂಕೆ

ಕಿಶ್ತ್ವಾರ್ ಮೇಘಸ್ಫೋಟ: ಮೃತರ ಸಂಖ್ಯೆ 60ಕ್ಕೆ

ಶ್ರೀನಗರ: ಜಮ್ಮು-ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯ ಛೊಸೊತಿ ಗ್ರಾಮದಲ್ಲಿ ಗುರುವಾರ ಮೇಘಸ್ಫೋಟವಾಗಿ ಧಾರಾಕಾರ ಮಳೆ ಸುರಿದು ದಿಢೀರ್ ಪ್ರವಾಹ ಸೃಷ್ಟಿಯಾಗಿದ್ದರಿಂದ ಯಾತ್ರಿಕರು, ಸೈನಿಕರು ಸೇರಿದಂತೆ ಒಟ್ಟು 60 ಜನರು ಸಾವನ್ನಪ್ಪಿದ್ದಾರೆ.

ದಿಢೀರ್ ಪ್ರವಾಹದಲ್ಲಿ ನದಿ ಉಕ್ಕಿ ಹರಿದಿದ್ದರಿಂದ ಪ್ರದೇಶದಲ್ಲಿನ ಹತ್ತಾರು ಮನೆಗಳು ನೆಲಕ್ಕುರುಳಿವೆ. ಪ್ರವಾಹದ ರಭಸಕ್ಕೆ ಭಾರೀ ಭೂಕುಸಿತವಾಗಿದೆ. ಕುಸಿದ ಮನೆಗಳ ಅವಶೇಷಗಳು ಮತ್ತು ಮಣ್ಣಿನಡಿ ಹಲವಾರು ಜನರು ಸಿಲುಕಿದ್ದಾರೆ. 100ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. 35 ಗಾಯಾಳುಗಳ ಸ್ಥಿತಿ ಗಂಭೀರವಾಗಿದೆ ಎಂದು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಹೇಳಿದ್ದಾರೆ. ಕುಟುಂಬ ಸದಸ್ಯರ ಮಾಹಿತಿ ಮೇರೆಗೆ 69 ಜನರು ಕಾಣೆಯಾಗಿರುವ ಲೆಕ್ಕ ಸಿಕ್ಕಿದೆ ಎಂದು ಅಧಿಕಾರಿ ಹೇಳಿದ್ದಾರೆ. 500ಕ್ಕೂ ಅಧಿಕ ಜನರು ಕಣ್ಮರೆಯಾಗಿರುವ

ಸಾಧ್ಯತೆ ಇದೆ ಎನ್ನಲಾಗಿದೆ. ದುರಂತದ ಚಿತ್ರಣ ಗಮನಿಸಿದರೆ ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆಯಿದೆ. ಭಾರತೀಯ ಸೇನೆ ಬೃಹತ್ ರಕ್ಷಣಾ ಕಾರ್ಯಾಚರಣೆ ನಡೆಸು ತ್ತಿದೆ. ರಾಜ್ಯ ಪೊಲೀಸರು, ನಾಗರಿಕ ಆಡಳಿತ ಸಿಬ್ಬಂದಿ, ಸ್ವಯಂ ಸೇವಕರು, ಸ್ಥಳೀಯ ನಿವಾಸಿ ಗಳು ಸಹ ರಕ್ಷಣಾ ಕಾರ್ಯಕ್ಕೆ ಕೈಜೋಡಿಸಿದ್ದಾರೆ. ಛೊಸೊತಿ ಗ್ರಾಮದಿಂದ 9,500 ಅಡಿ ಎತ್ತರದ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ಯಾತ್ರಿಕರು 8.5 ಕಿ.ಮೀ ದೂರ ನಡೆದು ಸಾಗಬೇಕಿದೆ. ಮೇಘಸ್ಫೋಟದಿಂದ ಪ್ರವಾಹ ಸೃಷ್ಟಿಯಾದಾಗ ಹೆಚ್ಚಿನ ಸಂಖ್ಯೆಯ ಯಾತ್ರಿಕರು ಅದೇ ಸ್ಥಳದಲ್ಲಿದ್ದರು. ಇದರಿಂದಾಗಿ ಯೇ ಸಾವಿನ ಸಂಖ್ಯೆ ಹೆಚ್ಚಿನದಾಗಿದೆ ಎಂದು ಸ್ವಯಂಸೇವಕರು ಹೇಳಿದ್ದಾರೆ.

ಅಧಿಕಾರಕ್ಕಾಗಿ ಬಿಜೆಪಿ ಕೆಳ ಮಟ್ಟಕ್ಕೆ: ಖರ್ಗೆ

ದೆಹಲಿ: ಬಿಜೆಪಿ ಅಧಿಕಾರದಲ್ಲಿ ಉಳಿಯಲು ಯಾವ ಮಟ್ಟಕ್ಕಾದರೂ ಇಳಿಯುತ್ತದೆ. ಅದಕ್ಕಾಗಿಯೇ ಚುನಾವಣೆಗಳಲ್ಲಿ 'ಅಕ್ರಮಗಳ' ಸರಣಿಯನ್ನೆ ನಡೆಸಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

ದೆಹಲಿಯಲ್ಲಿನ ಕಾಂಗ್ರೆಸ್ ಪ್ರಧಾನ ಕಚೇರಿ ಇಂದಿರಾ ಭವನದಲ್ಲಿ ಶುಕ್ರವಾರ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಬಿಹಾರದ ಮತದಾರರ ಪಟ್ಟಿಯಲ್ಲಿನ ಪ್ರತಿಪಕ್ಷಗಳ ಪರ ಮತದಾರರನ್ನು ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಹೆಸರಿನಲ್ಲಿ ಕಡಿತಗೊಳಿಸುತ್ತಿದೆ. ಜೀವಂತ ಇರುವವರನ್ನು ಸತ್ತಿದ್ದಾರೆ ಎಂದೇ ಘೋಷಿಸಲಾಗುತ್ತಿದೆ ಎಂದು ಆರೋಪಿಸಿದರು. ಬಿಹಾರದ ಮತದಾರರ ಪಟ್ಟಿಯಿಂದ 65 ಲಕ್ಷ ಮತದಾರರ ಹೆಸರನ್ನು ಚುನಾವಣಾ ಆಯೋಗ ತೆಗೆದುಹಾಕಿದೆ. ಇದಕ್ಕೆ ಬಿಜೆಪಿಯಿಂದ ಯಾವುದೇ ಆಕ್ಷೇಪವಿಲ್ಲ. 'ಎಸ್‌ಐಆರ್' ಪ್ರಕ್ರಿಯೆಯಿಂದ ಯಾರಿಗೆ ಲಾಭ ಎಂಬುದು ಇದರಿಂದಲೇ ಸ್ಪಷ್ಟವಾಗುತ್ತದೆ ಎಂದು ಖರ್ಗೆ ದೂಷಿಸಿದರು. ಕಾಂಗ್ರೆಸ್ ಈ ನಡೆಸಿರುವ ಹೋರಾಟ ಚುನಾವಣೆ ಗೆಲ್ಲುವುದಕ್ಕಲ್ಲ. ಬದಲಾಗಿ ಪ್ರಜಾಪ್ರಭುತ್ವ ಉಳಿಸಲು ಮತ್ತು ಸಂವಿಧಾನ ರಕ್ಷಿಸಲು ನಡೆಸುತ್ತಿರುವ ಹೋರಾಟ ಎಂದರು.

ಸಮಾಚಾರ ಸಣ್ಣದಲ್ಲ

ಪತ್ರಿಕಾಭವನದಲಿ ಸ್ವಾತಂತ್ರ್ಯ ದಿನಾಚರಣೆ

ಲಿಂಗಸುಗೂರು: ಪಟ್ಟಣದ ಪತ್ರಿಕಾಭವನದಲ್ಲಿ 79ನೇ ಸ್ವಾತಂತ್ರ ದಿನಾಚರಣೆಯ ಅಂಗವಾಗಿ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷರಾದ ಗುರುರಾಜ ಗೌಡುರು ಧ್ವಜಾರೋಹಣವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಅಮರಯ್ಯ ಘಂಟಿ, ಪತ್ರಕರ್ತರಾದ ಎನ್. ಬಸವರಾಜ, ಲಕ್ಷ್ಮಣ ಬಾರಿಕೇರ, ಖಾಜಾ ಹುಸೇನ್, ಅಮರೇಶ ಕಲ್ಲೂರು, ಶಿವರಾಜ ಕೆಂಭಾವಿ, ಶಶಿಧರ ಕಂಚಿಮಠ, ರಾಘವೇಂದ್ರ ಭಜಂತ್ರಿ, ಗಂಗಾಧರ ನಾಯಕ, ಪಂಪಾಪತಿ, ಗೌತಮ್ ಕುಮಾರ.ರಾಜೇಶ್ ಮಾಣಿಕ್,ಯಲ್ಲಪ್ಪ ವಂದಲಿ, ಸಾದತ್ ಅಲಿ, ಮುಸ್ತಾಫ್ ಪ್ರಮೋದ ಇದ್ದರು.

ಅಟಲ್‌ಜೀ ಜನಸ್ನೇಹಿ ಕೇಂದ್ರ ಯೋಜನೆ

ರಾಯಚೂರು: ರಾಯಚೂರ ಜಿಲ್ಲೆಯ ಜಿಲ್ಲಾಧಿಕಾರಿ ನಿತೀಶ್ ಕೆ ಅವರು ಅಟಲ್‌ಜೀ ಜನಸ್ನೇಹಿ ಕೇಂದ್ರ

ಯೋಜನೆಯಡಿ ರಾಯಚೂರು ಜಿಲ್ಲೆಯಲ್ಲಿ ಉತ್ತಮ ಕಾರ್ಯ ಸಾಧನೆ ಮಾಡಿದ್ದರಿಂದಾಗಿ ಕಂದಾಯ ಇಲಾಖೆಯ ಆಯುಕ್ತರು ಅಭಿನಂದನಾ ಪತ್ರ ಕಳುಹಿಸಿದ್ದಾರೆ. ಅಟಲ್‌ಜೀ ಜನಸ್ನೇಹಿ ಕೇಂದ್ರ ಯೋಜನೆಯಡಿ ರಾಜ್ಯದ ಸಾರ್ವಜನಿಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಯನ್ನು ನೀಡಲು ರಾಯಚೂರು ಜಿಲ್ಲೆಯ ನಾಡ ಕಚೇರಿಗಳಲ್ಲಿ ಜುಲೈ-2025ರ ಮಾಹೆಯಲ್ಲಿ ಸ್ವೀಕರಿಸಲಾಗಿರುವ 48,649 ಅರ್ಜಿಗಳನ್ನು ನಿಗದಿತ ಅವಧಿಗಿಂತ ಮೊದಲೇ ಶೇ.99.61ರಷ್ಟು ವಿಲೇವಾರಿ ಮಾಡಿ 5.32 ಸಿಗ್ಮಾ ಮೌಲ್ಯವನ್ನು ಪಡೆದಿರುತ್ತೀರಿ. 7.10 ವಿಲೇವಾರಿ ಸೂಚ್ಯಂಕದ ಪ್ರಕಾರ ತಮ್ಮ ಜಿಲ್ಲೆಯಲ್ಲಿ 8.10 ಪಟ್ಟು ನಿಗದಿತ ಅವಧಿಗಿಂತ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಿ ಜುಲೈ-2025ರ ಮಾಹೆಯಲ್ಲಿ ತಮ್ಮ ರಾಯಚೂರು ಜಿಲ್ಲೆಯು ರಾಜ್ಯ ಮಟ್ಟದಲ್ಲಿ ತೃತೀಯ ಸ್ಥಾನ ಪಡೆದಿರುವುದು ಶ್ಲಾಘನೀಯವಾಗಿದೆ. ಅದ್ದರಿಂದ ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದ ಪರವಾಗಿ ನಿಮ್ಮ ತಂಡಕ್ಕೆ ನನ್ನ ಅಭಿನಂದನೆಯನ್ನು ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ಜಿಲ್ಲೆಯಲ್ಲಿ ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆ ಶೇ.100 ರಷ್ಟು ಪ್ರಗತಿ ಸಾಧಿಸಿರುವುದಕ್ಕೆ ಡಿಸಿ ನಿತೀಶ್ ಕೆ ಅವರಿಗೆ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರು ಕಳೆದ ಜುಲೈ ಮಾಹೆಯಲ್ಲಿ ಅಭಿನಂದನಾ ಪತ್ರ ಕಳುಹಿಸಿದ್ದರು.

ಸಾರ್ವಜನಿಕರಿಗೆ ಕಸದ ಬಕೆಟ್ ವಿತರಣೆ

ಮುದಗಲ್: ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರ ಮನೆಗಳಿಗೆ ತಲಾ ಎರಡು ಕಸ ಸಂಗ್ರಹಣೆಯ ಬಕೆಟ್‌ಗಳನ್ನು ಪುರಸಭೆ ಅಧ್ಯಕ್ಷೆ ಮಹಾದೇವಮ್ಮ ಗುತ್ತಿಗೆದಾರ ಸಂಕೇತವಾಗಿ ಶುಕ್ರವಾರ ಚಾಲನೆ ನೀಡಿದರು. ನಂತರ ಮುಖ್ಯಾಧಿಕಾರಿ ಪ್ರವೀಣಕುಮಾರ ಬೋಗಾರ ಮಾತನಾಡಿ ಪಟ್ಟಣದಲ್ಲಿ ನೈರ್ಮಲ್ಯ ನಿರ್ವಹಣೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಕಸ ವಿಲೇವಾರಿಯನ್ನು ಸಮರ್ಪಕವಾಗಿ ಮಾಡಲಾಗುತ್ತಿದ್ದು, ಹಸಿ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಲು ಅನುಕೂಲವಾಗುವಂತೆ ಪ್ರತಿ ಮನೆಗೆ ಎರಡು ಬಕೆಟ್‌ಗಳನ್ನು ನೀಡುವುದರ ಮೂಲಕ ಸುಮಾರು 90 ಸಾವಿರ ಬಕೆಟ್‌ಗಳನ್ನು ನೀಡಲಾಗುತ್ತಿದೆ ಎಂದರು.ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ರಂಜಾನ್ ಬೀ, ಪುರಸಭೆ ಸದಸ್ಯರಾದ ಹನುಮಂತ ವಾಲ್ಮೀಕಿ, ಜಯಶ್ರೀ ಜೇಡಿ, ಮೈಬುಸಾಬ ಕಡ್ಡಿಪುಡಿ, ವ್ಯವಸ್ಥಾಪಕ ಸುರೇಶ್, ನೈಮಲ್ಯ ಅಧಿಕಾರಿಯಾದ ಆರೀಪ್ ಹುನ್ನಿಸಾ ಬೇಗಂ, ಬಸವರಾಜ ಮೇಟಿ ಸೇರಿದಂತೆ ಇತರರು ಇದ್ದರು.

ಸಡಗರದಿಂದ 79ನೇ ಸ್ವಾತಂತ್ರ್ಯೋತ್ಸವ

ಮುದಗಲ್: ಪಟ್ಟಣದ ಪುರಸಭೆ, ಪೊಲೀಸ್ ಠಾಣೆ, ರೈತ ಸಂಪರ್ಕ ಕೇಂದ್ರ, ನಾಡಕಚೇರಿ, ಸಮುದಾಯ ಆರೋಗ್ಯ ಕೆಂದ್ರ, ಶಾಲಾ ಕಾಲೇಜುಗಳಲ್ಲಿ ಶುಕ್ರವಾರ 79 ನೇ ಸ್ವಾತಂತ್ರ್ಯೋತ್ಸವ ಸಡಗರ ಸಂಭ್ರಮದಿಂದ ದಿನಾಚರಣೆ ಮಾಡಿದರು. ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಸಂವಿಧಾನ ಶಿಲ್ಪಿ ಡಾ. ಬಿ,ಆರ್,ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುರಸಭೆ ಅಧ್ಯಕ್ಷೆ ಮಹಾದೇವಮ್ಮ ಗುತ್ತೇದಾರ, ನಾಢಕಛೇರಿಯಲ್ಲಿ ಉಪ ತಹಸೀಲ್ದಾರ್ ತುಳುಜಾರಾಮ್ ಸಿಂಗ್, ಎಂ, ಗಂಗಣ್ಣ ಸ್ಮಾರಕ ಪದವಿ ಪೂರ್ವ ಕಾಲೇಜಿನಲ್ಲಿ ಅಧ್ಯಕ್ಷ ಶಿವಶಂಕರಗೌಡ ಉಪ್ಪಾರ ನಂದಿಹಾಳ, ರೈತ ಸಂಪರ್ಕ ಕೇಂದ್ರ ಶ್ರೀಶೈಲ್ ಬೋವಿ, ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಡಾ. ಸಿದ್ದರಾಮ ಪಾಟೀಲ್,ಸಮುದಾಯ ಆರೋಗ್ಯ ಕೇಂದ್ರ ಚಂದ್ರಕಾಂತ, ಗ್ರಂಥಾಲಯ ಗ್ಯಾನಪ್ಪ,ಪಶು ಚಿಕಿತ್ಸಾಲಯ ಶರಣಪ್ಪ ನಾಯಕ,.ಎಪಿಎಂಸಿ ಮೌನೇಶ, ರೇಣುಕಾ ನಾಯಕ 79 ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ ದ್ವಜಾರೋಹಣ ನೇರವೇರಿಸಿದರು.

5 ಗ್ಯಾರಂಟಿಗಳಿಂದ ಆರ್ಥಿಕ ಮಟ್ಟ ಸುಧಾರಣೆ

ಜಿಲ್ಲಾಡಳಿತದಿಂದ 79 ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ: ಸಚಿವ ಜಮೀರ್ ಅಹ್ಮದ್‌ಧ್ವಜಾರೋಹಣ

ಹೊಸಪೇಟೆ: ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ಎಲ್ಲಾ ವೀರಯೋಧರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ ಹಾಗೂ ಹೊಸಪೇಟೆ ನಗರಸಭೆ ಸಹಯೋಗದಲ್ಲಿ 79ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜಾರೋಹಣ ನೇರವೇರಿಸಿ, ರಾಷ್ಟ್ರಪಿತ ಮಹಾತ್ಮ ಗಾಂಧಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಶುಕ್ರವಾರ ಮಾತನಾಡಿದರು, ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನದಿಂದ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ಬ್ರಿಟಿಷರ ವಿರುದ್ಧ ಹೋರಾಟ ನಡೆಸಿ ರಾಷ್ಟ್ರಕ್ಕೆ ಸ್ವಾತಂತ್ರವನ್ನು ತಂದು ಕೊಟ್ಟ ಗಾಂಧೀಜಿ, ಸರ್ದಾರ್ ವಲ್ಲಭಭಾಯಿ ಪಟೇಲ್, ನೆಹರು, ಸುಭಾಷ್ ಚಂದ್ರಬೋಸ್, ಅಬ್ದುಲ್ ಕಲಾಂ ಆಜಾದ್, ಭಗತ್ ಸಿಂಗ್, ಚಂದ್ರಶೇಖರ ಅಜಾದ್, ರಾಜ್ ಗುರು, ಸುಖ್ ದೇವ್ ಸೇರಿದಂತೆ ಸಾವಿರಾರು ವೀರಯೋಧರನ್ನು ಇಂದು ನಾವು ನೆನಪಿಸಿಕೊಳ್ಳಬೇಕು ಎಂದರು.

ಜಿಲ್ಲಾ ಸರ್ವೋತ್ತಮ ಸೇವಾ ಪ್ರಶಸ್ತಿ ವಿತರಣೆ: ವೇದಿಕೆಯಲ್ಲಿ 2024ನೇ ಸಾಲಿನ ಜಿಲ್ಲಾ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿ ಪುರಸ್ಕೃತರಾದ ಹೊಸಪೇಟೆ ತಹಸೀಲ್ದಾರ ಎಂ.ಶೃತಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಂಜುನಾಥ, ಹಗರಿಬೊಮ್ಮನಹಳ್ಳಿ ಬಿಇಒ ಮೈಲೇಶ್ ಬೇವೂರು, ಜಿಲ್ಲಾ ನಗರಾಭಿವೃದ್ಧಿ ಕೋಶ ಜೆಇ ವೀರೇಶ್, ಸರಕಾರಿ

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ 79ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜಾರೋಹಣ ನೇರವೇರಿಸಿದರು.

ನೂರು ಹಾಸಿಗೆ ಆಸ್ಪತ್ರೆ ವೈದ್ಯ ಡಾ.ಸೋಮಶೇಖರ್, ಹಿಂದೂ ಧಾರ್ಮಿಕ ದತ್ತಿ ಇಲಾಖೆ ಕಾರ್ಯ ನಿರ್ವಾಹಕ ಅಧಿಕಾರಿ ಹನುಮಂತಪ್ಪ, ಹೊಸಪೇಟೆ ಗ್ರಾಮ ಆಡಳಿತ ಅಧಿಕಾರಿ ಚಂದನಾ ಪವಾರ್, ತಾಯಿ ಮತ್ತು ಮಕ್ಕಳ ಆಸ್ಪತ್ರೆ ಶೂಶ್ರೂಷಕಿ ವೀಣಾ, ಅಂಕಸಮುದ್ರ ಗ್ರಾಮ ಆಡಳಿತ ಅಧಿಕಾರಿ ಯಂಕಾರೆಡ್ಡಿ, ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಶಂಕರ ನಾಯ್ಕ ಹಾಗೂ 2025 ನೇ ಸಾಲಿನ ಜಿಲ್ಲಾ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿ ಪುರಸ್ಕೃತರಾದ ಹೊಸಪೇಟೆ ಸಹಾಯಕ ಆಯುಕ್ತರಾದ ಪಿ.ವಿವೇಕಾನಂದ, ಹರಪನಹಳ್ಳಿ ತಾಲೂಕು ಚಟ್ನಿಹಳ್ಳಿ ಪಿಡಿಒ ಹೆಚ್.ಸಂಗಪ್ಪ, ಮಗಿಮಾವಿನಹಳ್ಳಿ ಪಿಹೆಚ್‌ಸಿ ವೈದ್ಯೆ ಡಾ.ಅನುಷಾ, ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಪ್ರಭುಲಿಂಗ ತಳಕೇರಿ, ಉಚ್ಚಂಗಿದುರ್ಗದ ಉಚ್ಚಂಗಿದೇವಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಪ್ಪ, ಹರಪನಹಳ್ಳಿ ತಹಶೀಲ್ದಾರ ಗಿರೀಶ್ ಬಾಬು, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಮನೋಹರಗೌಡ, ಜಿಲ್ಲಾಧಿಕಾರಿ ಕಚೇರಿ ಗ್ರಾಮ ಆಡಳಿತ ಅಧಿಕಾರಿ ಸವಿತಾ, ಜಿಪಂ ಯೋಜನಾಧಿಕಾರಿ ಜೆ.ಎಂ.ಅನ್ನದಾನಸ್ವಾಮಿ, ಡಿಯುಡಿಸಿ ಯೋಜನಾ ನಿರ್ದೇಶಕ ಮನೋಹರ ಇವರುಗಳನ್ನು ಗೌರವಿಸಿ ಸನ್ಮಾನಿಸಲಾಯಿತು.

ಆಕರ್ಷಕ ಪಥಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮ: ಪರೇಡ್ ಕಮಾಂಡರ್ ಗೋವಿಂದ್ ನೇತೃತ್ವದಲ್ಲಿ ಪೊಲೀಸ್, ಗೃಹರಕ್ಷದಳ, ಎನ್.ಸಿ.ಸಿ, ಸ್ಕೌಟ್ಸ್ ಮತ್ತು ಗೈಡ್ಸ್, ಸೇವಾದಳ, ಪೌರಕಾರ್ಮಿಕರು ಸೇರಿದಂತೆ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಒಳಗೊಂಡಂತೆ ಆಕರ್ಷಕ ಪಥಸಂಚಲನ ನಡೆಯಿತು. ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಈ ವೇಳೆ ಕಾರ್ಯಕ್ರಮದಲ್ಲಿ ಹೊಸಪೇಟೆ ಶಾಸಕ ಎಚ್.ಆರ್.ಗವಿಯಪ್ಪ ಅಧ್ಯಕ್ಷತೆ ವಹಿಸಿದ್ದರು.

ಗ್ಯಾರಂಟಿ ಯೋಜನೆಯಿಂದ ಅನುಕೂಲ

ರಾಜ್ಯ ಸರಕಾರ ಆಡಳಿತಕ್ಕೆ ಬಂದು ಎರಡು ವರ್ಷ, ಎರಡು ತಿಂಗಳು ಪೂರೈಸಿದೆ. ಭರವಸೆ ನೀಡಿದ್ದ ಐದು ಗ್ಯಾರಂಟಿಗಳನ್ನು ಒಂದೇ ತಿಂಗಳಲ್ಲಿ ಅನುಷ್ಠಾನಗೊಳಿಸಿರುವುದು ಹೆಮ್ಮೆಯ ವಿಷಯ. ಗ್ಯಾರಂಟಿ ಯೋಜನೆಗಳ ಬಗ್ಗೆ ಅನೇಕ ಟೀಕೆಗಳು ಬಂದಿದ್ದವು. ಬಡವರಿಗೆ ಮನೆಗಳನ್ನು ಕಟ್ಟಿಕೊಡುವ ಆರನೇ ಗ್ಯಾರಂಟಿಯನ್ನು ನಾವು ಘೋಷಣೆ ಮಾಡಿರಲಿಲ್ಲ. ಆದರೆ ಅದು ಬಡಜನರ, ವಸತಿ ರಹಿತರ ಕಾಳಜಿಗೆ ವಿಶೇಷವಾಗಿ ಮನೆಗಳನ್ನು ನೀಡುವ ಚಿಂತನೆ ಮಾಡಲಾಗಿದೆ. ಸ್ಲಂ ಬೋರ್ಡ್ ನಿಂದ 1,80,253 ಮನೆಗಳು ಮತ್ತು ರಾಜೀವ ಗಾಂಧಿ ವಸತಿ ನಿಗಮದಿಂದ 47860 ಮನೆಗಳು ಸೇರಿ 2,30,000 ಮನೆಗಳನ್ನು ಈ ಹಿಂದಿನ ನಮ್ಮ ಸತಕಾರದಲ್ಲಿ ಮಂಜೂರು ಮಾಡಲಾಗಿತ್ತು. ಗ್ಯಾರಂಟಿ ಯೋಜನೆಗಳಿಂದ ಬಡವರಿಗೆ, ಮಧ್ಯಮ ವರ್ಗದವರಿಗೆ ಸಾಕಷ್ಟು ಅನುಕೂಲಗಳಾಗಿದ್ದು ಯಾವುದೇ ಕಾರಣಕ್ಕೂ ಯೋಜನೆಗಳು ಸ್ಥಗಿತವಾಗುವುದಿಲ್ಲ. ಈ ಯೋಜನೆಗಳಿಂದ ಜನರಿಗೆ ಸಾಕಷ್ಟು ಅನುಕೂಲವಾಗಿದ್ದು ಆರ್ಥಿಕ ಮಟ್ಟ ಸುಧಾರಣೆಯಾಗಿದೆ ಎಂದು ಹೇಳಿದರು.

ಹೊಸಪೇಟೆ ನಗರಸಭೆ ಅಧ್ಯಕ್ಷರಾದ ಎನ್.ರೂಪೇಶ್ ಕುಮಾರ್, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಎಚ್.ಎನ್.ಎಫ್.ಇಮಾಮ್ ನಿಯಾಜಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಕೆ.ಶಿವಮೂರ್ತಿ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಅಪರ ಜಿಲ್ಲಾಧಿಕಾರಿ ಈ.ಬಾಲಕೃಷ್ಣಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಸು ಗಿರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೊಹಮ್ಮದ್ ಅಲಿ ಅಕ್ರಮ್ ವೇದಿಕೆಯಲ್ಲಿದ್ದರು.

ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಸರಕಾರ ಕಂಕಣಬದ್ಧ

ರಾಯಚೂರು: ರಾಯಚೂರು ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ನಮ್ಮ ರಾಜ್ಯ ಸರಕಾರವು ಕಂಕಣಬದ್ಧವಾಗಿದೆ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು ಹೇಳಿದರು.

ನಗರದ ಮಹಾತ್ಮಗಾಂಧೀ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ರಾಷ್ಟ್ರಧ್ವಜಾರೋಹಣ ನೆರವೇರಿಸಿ, ಸಶಸ್ತ್ರ ಮೀಸಲು ಪಡೆ, ನಾಗರಿಕ ಪೊಲೀಸ್ ಸೇರಿದಂತೆ ವಿವಿಧ ಶಾಲಾ ಮಕ್ಕಳಿಂದ ಗೌರವ ರಕ್ಷೆ ಸ್ವೀಕರುಸಿದ ನಂತರ ಸಾರ್ವಜನಿಕರನ್ನುಉದ್ದೇಶಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯೋತ್ಸವ ದಿನ ಮತ್ತು ಗಣರಾಜ್ಯೋತ್ಸವ ದಿನಗಳು ನಾಡಿನ ಎರಡು ದೊಡ್ಡ ರಾಷ್ಟ್ರೀಯ ಹಬ್ಬಗಳಾಗಿವೆ. ಅಂತೆಯೇ ಈ ದಿನಾಚರಣೆಗಳು ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯದ ಸಂಕೇತವಾಗಿವೆ ಎಂದರು.

ನಮ್ಮ ದೇಶದ ಸ್ವಾತಂತ್ರ್ಯ ಹೋರಾಟಗಾಥೆಯು ಅತ್ಯಂತ ರೋಚಕವಾಗಿದೆ. ಸತ್ಯ ಮತ್ತು ಅಹಿಂಸೆಯ ಮಾರ್ಗದಿಂದ ನಾವು ಸ್ವಾತಂತ್ರ್ಯ ಪಡೆದುಕೊಂಡಿದ್ದೇವೆ. ಮಹಾತ್ಮಗಾಂಧೀಜಿ ಸೇರಿದಂತೆ ಅನೇಕ ಮಹನಿಯರ ತ್ಯಾಗ, ಬಲಿದಾನ, ದೂರದೃಷ್ಟಿ ಫಲವಾಗಿ ನಮಗೆ ಸ್ವಾತಂತ್ರ್ಯ ಸಿಕ್ಕಿದೆ ಎಂದರು.

ಈ ನಾಡಿನ ಜನರೆ ಈ ನಾಡಿನ ದೊರೆಗಳು ಆಗಬೇಕು, ಅವರ ಇಚ್ಛೆಯಂತೆ, ಅವರ ಅಭಿಲಾಷೆಯಂತೆ ಈ ದೇಶದ ಆಡಳಿತ ನಡೆಯಬೇಕು ಎನ್ನುವ ಆಶಯದಡಿ ಯೋಚಿಸಿ, ನಮ್ಮ ಎಲ್ಲ ಹೋರಾಟಗಾರರು, ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಸಂವಿಧಾನ ರಚನೆಯ ಜವಾಬ್ದಾರಿ ನೀಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು, ಈ ದೇಶದ ಎಲ್ಲ ಜನರ, ಎಲ್ಲ ಧರ್ಮಿಯರ, ಎಲ್ಲ ಸಂಸ್ಕೃತಿಗಳ ಬಗ್ಗೆ ಅರಿತು ಎಲ್ಲರಿಗೂ ಅನುಕೂಲವಾಗುವ ಹಾಗೆ ಸಂವಿಧಾನ ರಚಿಸಿದ್ದರಿಂದಾಗಿ ಇಂದು ಎಲ್ಲರೂ ಸೇರಿ ಒಗ್ಗೂಡಿ ಬಾಳುವಂತಾಗಿದೆ. ಎಲ್ಲರಿಗೂ ಸಮಾನ ಅವಕಾಶಗಳು ಸಿಗುವಂತಾಗಿದೆ ಎಂದರು.

371ಜೆ ಮೀಸಲು ಸೌಕರ್ಯ ಲಭಿಸಿತು. ಈ ಸೌಲಭ್ಯದಿಂದ 10 ವರ್ಷಗಳ ಕಾಲ ಅನೇಕ ಬದಲಾವಣೆಗಳು ಆಗಿವೆ. ಸಾವಿರಾರು ಬಡ ಮಕ್ಕಳು ಡಾಕ್ಟರ್, ಎಂಜಿನಿಯರ್

ನಗರದ ಮಹಾತ್ಮಗಾಂಧೀ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು.

ರಾಯಚೂರುಗೆ ವಿಮಾನ ನಿಲ್ದಾಣ ಆಗಬೇಕು

ರಾಯಚೂರ ಜಿಲ್ಲೆಯ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ 50 ಕೋಟಿ ರು. ವೆಚ್ಚದಲ್ಲಿ ಕನ್ವೆನ್ಷನಲ್ ಸೆಂಟರ್ (ಸಾಂಪ್ರದಾಯಿಕ ಸಭಾಂಗಣ) ಗೆ ಟೆಂಡರ್ ಕರೆಯಾಗಿದೆ. 50 ಕೋಟಿ ರು ವೆಚ್ಚದಲ್ಲಿ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣ ಮಾಡಲಾಗುತ್ತಿದೆ. ರಾಯಚೂರಗೆ ವಿಮಾನ ನಿಲ್ದಾಣ ಆಗಬೇಕು ಮತ್ತು ಇಲ್ಲಿ ಏಮ್ಸ್ ಸ್ಥಾಪನೆಯಾಗಬೇಕು ಎಂದು ಸಹ ಇಲ್ಲಿನ ಜನತೆಗೆ ಎರಡು ಕನಸುಗಳಿವೆ. ಜಿಲ್ಲೆಯಲ್ಲಿ ಈಗಾಗಲೇ ವಿಮಾನ ನಿಲ್ದಾಣ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಜೊತೆಗೆ ರಾಯಚೂರ ಜಿಲ್ಲೆಯ ಜನರ ಅಭಿಲಾಷೆಯಂತೆ, ಬಹುದಿನಗಳ ಬೇಡಿಕೆಯಂತೆ ರಾಯಚೂರು ಜಿಲ್ಗೆಗೆ ಏಮ್ಸ್ ನೀಡಬೇಕು ಎಂದು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಎಲ್ಲ ಸಚಿವರು ಕೇಂದ್ರಕ್ಕೆ ಪ್ರಸ್ತಾವನೆ ಕೊಟ್ಟಿದ್ದಾರೆ.

ಆಗಿದ್ದಾರೆ. ಅನೇಕರಿಗ ಸರಕಾರಿ ನೌಕರಿ ಲಭಿಸಿದೆ. ಈ ಭಾಗಕ್ಕೆ ಅಂದಾಜು 20 ಸಾವಿರ ಕೋಟಿ ರು ಅನುದಾನ ಬಂದಿದೆ. 371ಜೆ ಮೀಸಲು ಸೌಕರ್ಯವು ಪ್ರಗತಿಗೆ ಬುನಾದಿಯಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ ಅವರ ನೇತೃತ್ವದಲ್ಲಿ ರಾಜ್ಯ ಸರಕಾರವು ಸದೃಢವಾಗಿ ನಡೆಯುತ್ತಿದ್ದು, ನಮ್ಮ ಸರಕಾರವು ಜಾರಿ ಮಾಡಿದ ಪಂಚ ಗ್ಯಾರಂಟಿ ಯೋಜನೆಗಳಿಗೆ ಪ್ರತಿ ವರ್ಷ ಅಂದಾಜು 52 ಸಾವಿರ ಕೋಟಿ ರು ಬಳಕೆಯಾಗುತ್ತಿದ್ದು, ಈ ಬಹುಗಾತ್ರದ ಹಣವು ನೇರವಾಗಿ ಬಡವರಿಗೆ ತಲುಪಿಸಲಾಗುತ್ತದೆ. ಇಂತಹ ಯೋಜನೆ ರೂಪಿಸಿ ನಮ್ಮ ಸರಕಾರವು ಜಗತ್ತಿಗೆ ಹೆಸರಾಗಿದೆ ಎಂದರು.

ಕಾರ್ಯಕ್ರಮದಲ್ಲಿ ರಾಯಚೂರು ಲೋಕಸಭಾ ಸದಸ್ಯ ಜಿ.ಕುಮಾರ ನಾಯಕ, ಶಾಸ ಬಸನಗೌಡ ದದ್ದಲ್, ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ, ರಾಯಚೂರು ಮಹಾನಗರ ಪಾಲಿಕೆಯ ಅಧ್ಯಕ್ಷೆ ನರಸಮ್ಮ ನರಸಿಂಹಲು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜಶೇಖರ ರಾಮಸ್ವಾಮಿ, ಜಿಲ್ಲಾಧಿಕಾರಿ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಎಂ, ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೊಹಪಾತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ, ಸಹಾಯಕ ಆಯುಕ್ತ ಗಜಾನನ ಬಾಳೆ, ರಾಯಚೂರು ತಹಶೀಲ್ದಾರ್ ಸುರೇಶ್ ವರ್ಮ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬಲಿದಾನದಿಂದ ಬಂತು ಸ್ವಾತಂತ್ರ್ಯ

ಲಿಂಗಸುಗೂರು: ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ ನಡೆಯಿತು. ಸಹಾಯಕ ಆಯುಕ್ತರಾದ ಬಸವಣಪ್ಪ ಕಲಶಟ್ಟಿ ಅವರು ಧ್ವಜಾರೋಹಣವನ್ನು ನೆರವೇರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಲಿಂಗಸುಗೂರು ಶಾಸಕ ಮಾನಪ್ಪ ವಜ್ಜಲ ಮಾತನಾಡಿ ದೇಶದಲ್ಲಿ ಸ್ವಾತಂತ್ರ್ಯವನ್ನು ಅನೇಕ ಹೋರಾಟ, ತ್ಯಾಗ, ಬಲಿದಾನಗಳನ್ನು. ನೀಡಿ ಸ್ವಾತಂತ್ರವನ್ನು ಪಡೆದು ಕೊಂಡಿದ್ದೇವೆ. ದೇಶವು ಇಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೃಢನಾಯಕತ್ವದಲ್ಲಿ ಆರ್ಥಿಕ, ತಾಂತ್ರಿಕ ಮತ್ತು ಮೂಲಸೌಕರ್ಯ ಕ್ಷೇತ್ರಗಳಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಿ ಕೊಂಡಿದೆ. ರೈತ, ಕಾರ್ಮಿಕ, ಯುವಜನ, ಮಹಿಳೆಯರ ಅಭಿವೃದ್ಧಿಗೆ ಕೇಂದ್ರ ಸರಕಾರ ಬೃಹತ್ ಯೋಜನೆಗಳನ್ನು ಜಾರಿಗೆ ತಂದಿದೆ.

ಆತ್ಮನಿರ್ಭರ ಭಾರತ, ಡಿಜಿಟಲ್ ಇಂಡಿಯಾ, ಸ್ಟಾರ್ಟ್‌ಅಪ್ ಇಂಡಿಯಾ, ರೈತ ಸಬಲೀಕರಣ ಯೋಜನೆಗಳು ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಪೂರಕವಾಗಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಶರಣ ಗೌಡ ಬಯ್ಯಾಪುರ, ನಗರ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಭೂಪನ ಗೌಡ ಪಾಟೀಲ್ ಕರಡಕಲ, ಪುರ ಸಭೆ ಅಧ್ಯಕ್ಷ ಬಾಬು ರೆಡ್ಡಿ ಮುನ್ನೂರು, ಪಾಮಯ್ಯ ಮುರಾರಿ, ಅಮರೇಶ್ ಹಿರೇಹೆಸರೂರು, ಬಸನಗೌಡ ಮೇಟಿ, ವೆಂಕಟೇಶ್ ಗುತ್ತೇದಾರ, ಶಶಿದರ್ ಪಾಟೀಲ್, ವಿದ್ಯಾರ್ಥಿಗಳು ಮತ್ತು ನಾಗರಿಕರು ಹಾಜರಿದ್ದರು.

ಹೊಸಪೇಟೆ ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ 79ನೇ ಸ್ವಾತಂತ್ರೋತ್ಸವ ನಿಮಿತ್ತ ರಾಷ್ಟ್ರ ಧ್ವಜಾರೋಹಣವನ್ನು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಶುಕ್ರವಾರ ನೆರವೇರಿಸಿದರು. ಈ ವೇಳೆ ಜಿಪಂ ಸಿಇಒ ನೋಂಗ್ಜಾಯ್ ಮೊಹಮ್ಮದ್ ಅಕ್ರಮ್ ಅಲಿ ಷಾ, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಕಂದಾಯ ಇಲಾಖೆ ಸಿಬ್ಬಂದಿಗಳು ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಹೊಸಪೇಟೆಯ ಜೋಳದರಾಶಿಯ ಗುಡ್ಡದ ಮೇಲೆ ಇಲಾಖೆಯ ಅಧಿಕಾರಿಗಳೊಂದಿಗೆ ಧ್ವಜಾರೋಹಣ ನೆರವೇರಿಸಿದರು.

ಹೋರಾಟಗಾರರ ಸ್ಮರಿಸಬೇಕು

ಸರಕಾರಿ ಕೇಂದ್ರ ಶಾಲೆಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆದಲ್ಲಿ ತುರ್ವಿಹಾಳ ಮಾತನಾಡಿದರು.

ಮಸ್ಕಿ: ದೇಶಕ್ಕೆ ಸ್ವಾತಂತ್ರ್ಯ ತರಲು ಹೋರಾಟ ಮಾಡಿದ ಮಹನೀಯರ ತ್ಯಾಗ, ಬಲಿದಾನಗಳನ್ನು ಪ್ರತಿಯೊಬ್ಬರು ಸ್ಮರಿಸಬೇಕು ಎಂದು ಖಾದಿ ಗ್ರಾಮದ್ಯೋಗ ನಿಗಮ ಮಂಡಳಿ ಅಧ್ಯಕ್ಷ,ಶಾಸಕ ಬಸನಗೌಡ ತುರ್ವಿಹಾಳ ಹೇಳಿದರು.

79 ನೇ ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಇಲ್ಲಿಯ ಸರಕಾರಿ ಕೇಂದ್ರ ಶಾಲೆ ಮೈದಾನದಲ್ಲಿ ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಜಾತಿ, ಮತ ಭೇಧ ವಿಲ್ಲದೆ ಹಲವಾರು ದೇಶ ಭಕ್ತರು ಸ್ವಾತಂತ್ರ್ಯ ಹೋರಾಟದಲ್ಲಿ ಜೀವ ಸವೆಸಿದ್ದಾರೆ ಹೋರಾಟಗಾರರ ತ್ಯಾಗ , ಬಲಿದಾನಗಳಿಂದ ದೇಶಕ್ಕೆ ಸ್ವಾತಂತ್ರ ಸಿಕ್ಕಿದೆ ದೇಶ ರಕ್ಷಣೆಯಲ್ಲಿ ಪ್ರಾಣ ತ್ಯಾಗ ಮಾಡಿದ ದೇಶ ಭಕ್ತರನ್ನು ಎಲ್ಲರು ಸ್ಮರಿಸಬೇಕು ಎಂದರು. ತಹಸೀಲ್ದಾರ್ ಡಾ. ಮಲ್ಲಪ್ಪ ಯರಗೋಳ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ರಾಜ್ಯ ಸರಕಾರ ಜನರ ಕಲ್ಯಾಣಕ್ಕೆ ಹಲವು ಯೋಜನೆ ಜಾರಿ ಗೊಳಿಸಿದೆ ಎಂದರು. ತಾಪಂ. ಅಧಿಕಾರಿ ಅಮರೇಶ ಯಾದವ್, ಪುರಸಭೆ ಮುಖ್ಯಾಧಿಕಾರಿ ನರಸರೆಡ್ಡಿ, ನೀರಾವರಿ ನಿಗಮ ಎಂಜಿನಿಯರ್ ಗುರು ಮೂರ್ತಿ, ಪಶು ಇಲಾಖೆಯ ರಾಚಪ್ಪ, ಜೆಸ್ಕಾಂ ಎಂಜಿನಿಯರ್ ವೆಂಕಟೇಶ, ಸೇರಿ ದಂತೆ ನಾನಾ ಇಲಾಖೆ ಗಳ ಅಧಿಕಾರಿ ಗಳು ಇದ್ದರು.

ಪವಿತ್ರ ಮತಗಳ್ಳತನ ಪ್ರಕರಣ ದೇಶದ ದೌರ್ಭಾಗ್ಯ

ಹರಪನಹಳ್ಳಿ: ಪ್ರಜಾಪ್ರಭುತ್ವ ಸಂವಿಧಾನಕ್ಕೆ ಮರಣ ಹೋಮ ಆದರೆ ದೇಶದಲ್ಲಿ ಕ್ರಾಂತಿ ಆದಿತು ಆದ್ದರಿಂದ ಪ್ರಜಾಪ್ರಭುತ್ವ ಉಳಿವಿಗಾಗಿ ಅಂಬೇಡ್ಕರ್ ರಚಿಸಿದ ಸಂವಿಧಾನವನ್ನು ಉಳಿಸುವಂತಹ ಕೆಲಸ ಮಾಡಬೇಕೆ ಹೊರತು, ಸಂವಿಧಾನವನ್ನು ಅಳಿಸುವ ಕೆಲಸ ಮಾಡಬಾರದು ಎಂದು ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ವತಿಯಿಂದ ಆಯೋಜಿಸಲಾಗಿದ್ದ ಓಟ್ ಜೋರ್ ಅಭಿಯಾನವನ್ನು ಮೇಣದ ದ್ವೀಪವನ್ನು ಹಚ್ಚಿದ ಬಳಿಕ ಮಾತನಾಡಿದ ಅವರು, ಕೇಂದ್ರ ಸರಕಾರವು ದೇಶದ ಅಭಿವೃದ್ಧಿಗೆ ಮಹತ್ವ ನೀಡಬೇಕೆ ಹೊರತು ಮತ ಕಳ್ಳತಮಾಡಿ ಪ್ರಜಾಪ್ರಭುತ್ವಕ್ಕೆ ದಕ್ಕೆ ತರುವಂತಹ ಕೆಲಸ ಮಾಡುತ್ತಿರುವುದು ಸಂವಿಧಾನದ ವಿರೋಧಿ ಚಟುವಟಿಕೆಯಾಗಿದೆ ಎಂದು ಕೇಂದ್ರ ಸರಕಾರದ ವಿರುದ್ಧ ಗುಡುಗಿದರು.

ಈ ಸಂದರ್ಭದಲ್ಲಿ ಚಿಗಟೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುಬೇರ ಗೌಡ್ರು, ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಆರ್. ಶಶಿಕುಮಾರ್ ನಾಯ್ಕ, ಪುರಸಭೆ ಸದಸ್ಯರುಗಳಾದ ಅಬ್ದುಲ್ ರಹಮಾನ್, ಲಾಟಿ ದಾದಾಪೀರ್, ಜಾಕೀರ್ ಹುಸೇನ್ ,ಉದ್ದಾರ ಗಣೇಶ್, ಮುಖಂಡರಾದ ಮೈದೂರು ರಾಮಣ್ಣ, ಎಂ.ವಿ. ಕೃಷ್ಣಕಾಂತ, ಚಿಕ್ಕೇರಿ ಬಸಣ್ಣ, ಹಾಗೂ ತಾಲೂಕಿನ ಯುವ ಕಾಂಗ್ರೆಸ್ ಅಧ್ಯಕ್ಷರುಗಳು ಪದಾಧಿಕಾರಿಗಳು ಸೇರಿದಂತೆ ಇತರರು ಇದ್ದರು.

ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಓಟ್ ಜೋರ್ ಅಭಿಯಾನವನ್ನು ಮೇಣದ ದ್ವೀಪವನ್ನು ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಅಕ್ರಮವಾಗಿ ಅಧಿಕಾರ ಹಿಡಿದ ಬಿಜೆಪಿಯು ಅಧಿಕಾರ ದಿಂದ ಕೆಳಗಿಳಿಯಬೇಕು ವಾಮಮಾರ್ಗದ ಮೂಲಕ ಅಧಿಕಾರ ಸ್ವೀಕರಿಸಿ ರುವುದು ಖಂಡನೀಯ, ನಾಡಿನ ಉಪ ಮುಖ್ಯಮಂತ್ರಿ, ಡಿ.ಕೆ ಶಿವಕುಮಾರ್ ನೇತೃತ್ವದಲ್ಲಿ ರಾಜ್ಯಾದ್ಯಂತ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಲಾಗುತ್ತಿದೆ ಶ್ರೇಷ್ಠ ವಾದ ಮತದಾನ ಕದ್ದಿರುವುದು ದೇಶದ ದೌರ್ಭಾಗ್ಯ, ಸಂವಿಧಾನ ರಕ್ಷಣೆಗೆ ಕಾಂಗ್ರೆಸ್ ಕಂಕಣಬದ್ದವಾಗಿ ನಿಂತಿದೆ, 5 ಹಂತದಲ್ಲಿ ಉದ್ದೇಶ ಪೂರ್ವಕವಾಗಿ ಚುನಾವಣೆ ನಡೆಸಿದ ಬಿಜೆಪಿ 6 ವಿದ್ಯುತ್ ವ್ಯತ್ಯಯ ಮಾಡಿ ಮೋದಿ ಗೆಲುವು ಪಡೆದಿದ್ದಾರೆ.

-ಬಿ.ಗೋಣಿಬಸಪ್ಪ, ಹಿರಿಯ ವಕೀಲ

ಎಲ್ಲಾ ರಾಜಕೀಯ ಪಕ್ಷಗಳು ಮತದಾನ ಪಡೆದಿದ್ದಾರೆ, ಇಂದು ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಂವಿಧಾನದ ಮರಣ ಹೋಮವಾಗಿದೆ, ಇಂದು ಜನಗಳ ಮತಗಳನ್ನು ಕಳ್ಳತನ ಮಾಡಿ ನರೇಂದ್ರ ಮೋದಿ ಅಧಿಕಾರ ಸ್ವೀಕಾರ ಮಾಡಿದ್ದಾರೆ.

-ಮಂಜುನಾಥ್, ಕಮ್ಮತಹಳ್ಳಿ

ತುಂಗಭದ್ರಾ ಡ್ಯಾಂನ 8 ಕ್ರಸ್ಟ್ ಗೇಟ್ ನಿಷ್ಕ್ರಿಯ !

ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಮಾಹಿತಿ | ಇದೇ ವರ್ಷದಿಂದ ಡ್ಯಾಂ ಗೇಟ್ ಅಳವಡಿಕೆಗೆ ಚಿಂತನೆ

ಕೊಪ್ಪಳ: ಕಳೆದ ವರ್ಷ ಕಿತ್ತು ಹೋಗಿದ್ದ ತುಂಗಭದ್ರ ಜಲಾಶಯದ 19ನೇ ಗೇಟ್ ಸೇರಿ ಒಟ್ಟು 8 ಕ್ರಸ್ಟ್ ಗೇಟ್ ನಿಷ್ಕ್ರಿಯಗೊಂಡಿದ್ದು, ಮೇಲೆ ಎತ್ತಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆ ಜಲಾಶಯದ ಸುರಕ್ಷತೆಯ ದೃಷ್ಟಿಯಿಂದ ಸಂಗ್ರಹ ಸಾಮರ್ಥ್ಯವನ್ನು ಕೇವಲ 80 ಟಿಎಂಸಿಗೆ ಇಳಿಕೆ ಮಾಡಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದರು. ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಧ್ವಜಾರೋಹಣ ಕಾರ್ಯಕ್ರಮ ನಂತರ ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದರು.

ತುಂಗಭದ್ರಾ ಜಲಾಶಯದ 11, 18, 20, 24, 27 ಮತ್ತು 28 ಕ್ರಸ್ಟ್ ಗೇಟ್ ಸಂಪೂರ್ಣವಾಗಿ ಜಾಮ್ ಆಗಿದ್ದು, ಮೂಮೆಂಟ್ ಆಗುತ್ತಿಲ್ಲ. ಈ ಎಲ್ಲ ಗೇಟ್‌ಗಳು ಅಲ್ಲಿ ಬೆಂಡ್ ಆಗಿದ್ದರಿಂದ ಚೈನ್ ಮೂಲಕ ಗೇಟ್ ಮೇಲೆ ಎತ್ತಲು ಸಾಧ್ಯವಾಗುತ್ತಿಲ್ಲ. ಜೊತೆಗೆ 4ನೇ ಕ್ರಸ್ಟ್ ಗೇಟ್ ಕೇವಲ 2 ಫೀಟ್ ಮಾತ್ರ ಮೇಲೆ ಎತ್ತಲು ಸಾಧ್ಯವಾಗುತ್ತಿದೆ. ಇದರಿಂದ ಜಲಾಶಯದ ಒಟ್ಟು 8 ಕ್ರಸ್ಟ್ ಗೇಟ್‌ಗೆ ಚಲನೆ ಇಲ್ಲದಂತಾಗಿದೆ. ಈ ಕಾರಣಕ್ಕೆ ಜಲಾಶಯದ ಸುರಕ್ಷತೆಯ ದೃಷ್ಟಿಯಿಂದ ಸಂಗ್ರಹ ಸಾಮರ್ಥ್ಯವನ್ನು ಕೇವಲ 80 ಟಿಎಂಸಿಗೆ ಇಳಿಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಕಾಂಗ್ರೆಸ್ ಒಳ ಮೀಸಲಾತಿ ಪರ ಇದೆ. ನಮಗೆ ಬದ್ಧತೆ ಇದೆ. ಒಳ ಮೀಸಲಾತಿ ಜಾರಿ ಮಾಡಿಯೇ ಮಾಡುತ್ತೇವೆ. ಈ ಬಗ್ಗೆ ಚರ್ಚೆ ಮಾಡಿ, ನಿರ್ಧಾರ ಕೈಗೊಳ್ಳಲು ಕ್ಯಾಬಿನೆಟ್ ಮುಂದೂಡಿದ್ದೇವೆ. ಸರಕಾರ ಸಾಧಕ ಬಾದಕ ವಿಶ್ಲೇಷಣೆ ಮಾಡಿ, ಜಾರಿ ಮಾಡುಲಿದೆ. ಈ ವಿಚಾರದಲ್ಲಿ ಮಾಜಿ ಸಚಿವರಾದ ಗೋವಿಂದ ಕಾರಜೋಳ, ನಾರಾಯಣಸ್ವಾಮಿ ರಾಜಕೀಯ ಮಾಡುತ್ತಿದ್ದಾರೆ. ಈ ಹಿಂದೆ ಸಮಾಜ ಕಲ್ಯಾಣ ಸಚಿವರಾಗಿದ್ದ ಇವರು ಏನು ಮಾಡುತ್ತಿದ್ದರು ಸದಾಶಿವ ಆಯೋಗ ಏಕೆ ತಿರಸ್ಕಾರ ಮಾಡಿದರು.

- ಶಿವರಾಜ ತಂಗಡಗಿ, ಸಚಿವ

ತುಂಗಭದ್ರ ಜಲಾಶಯದ ಒಟ್ಟು 105 ಟಿಎಂಸಿ ಸಂಗ್ರಹ ಸಾಮರ್ಥ್ಯ ಹೊಂದಿದ್ದು, ಡ್ಯಾಂ ಭರ್ತಿ ಮಾಡಿದರೆ ಮುಂದೆ ಸಾಕಷ್ಟು ಸವಾಲು ಎದುರಾಗುವ ಸಾಧ್ಯತೆ ಇದೆ. ಒಂದೊಮ್ಮೆ ಏಕಾಏಕಿ 1.50 ಲಕ್ಷ ಕ್ಯೂಸೆಕ್ ಒಳಹರಿವು ಹರಿದು ಬಂದರೆ, ಅದೇ ಪ್ರಮಾಣದ ನೀರನ್ನು ಎಲ್ಲ ಗೇಟ್ ಎತ್ತರಿಸುವ ಮೂಲಕ ನದಿಗೆ ಬಿಡಬೇಕಾಗುತ್ತದೆ. ಆದರೆ, ಸುಮಾರು 8 ಕ್ರಸ್ಟ್ ಗೇಟ್ ಗಳು ಸದ್ಯಕ್ಕೆ ಎತ್ತಲು ಸಾಧ್ಯವಿಲ್ಲದ ಸ್ಥಿತಿ ತಲುಪಿವೆ. ಹೀಗಾದಾಗ ಡ್ಯಾಂ ಭರ್ತಿ ಮಾಡುವುದು ಸರಿಯಲ್ಲ ಎಂಬ ತಜ್ಞರ ಸಲಹೆಯಂತೆ ಸಂಗ್ರಹ ಸಾಮರ್ಥ್ಯ ಕೇವಲ 80 ಟಿಎಂಸಿಗೆ ಇಳಿಕೆ ಮಾಡಲಾಗಿದೆ ಎಂದು ತಿಳಿಸಿದರು.

ಮೊದಲಿಗೆ ಎಲ್ಲ 33 ಕ್ರಸ್ಟ್ ಗೇಟ್ ನಿರ್ಮಾಣಕ್ಕೆ ಒಂದೇ ಟೆಂಡರ್ ಕರೆಯಲಾಗಿತ್ತು. ಇದರಿಂದ ಯಾವುದೇ ಕಂಪನಿ ಭಾಗವಹಿಸಲಿಲ್ಲ. ಇದೀಗ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ಎಲ್ಲ ಗೇಟ್ ಅಳವಡಿಕೆಗೆ ಕನಿಷ್ಠ 8 ತಿಂಗಳು ಸಮಯವನ್ನು ಕಂಪನಿ ಕೇಳಿದೆ. ರೈತರೊಂದಿಗೆ ಚರ್ಚೆ ಮಾಡಿ, ಈ ಬಾರಿ ಒಂದು ಬೆಳೆಯ ನಂತರ ಎಲ್ಲ ನೀರು ಹೊರಗೆ ಬಿಟ್ಟು ಗೇಟ್ ಅಳವಡಿಕೆ ಕೆಲಸ ಶುರು ಮಾಡಬೇಕು ಎಂಬ ಚಿಂತೆನೆ ಇದೆ. ಈ ಬಗ್ಗೆ ರೈತರೊಂದಿಗೆ ಚರ್ಚೆ ಮಾಡಿ ಕ್ರಮ ವಹಿಸಲಾಗುವುದು ಎಂದರು.

ಜಿಲ್ಲೆಯಲ್ಲಿ ಯೂರಿಯಾ ಕೊರತೆ ಸಂಪೂರ್ಣವಾಗಿ ನೀಗಿಸಲಾಗಿದೆ. ಸದ್ಯ ಯೂರಿಯಾ ಎಲ್ಲರಿಗೂ ಸಿಗುವಂತೆ ಮಾಡಿದ್ದೇವೆ. ಜೊತೆಗೆ ಸುಮಾರು 2365 ಟನ್ ದಾಸ್ತಾನು ಉಳಿಸಿಕೊಂಡಿದ್ದೇವೆ. ಜಿಲ್ಲೆಯಲ್ಲಿ ಯಾವುದೇ ತೊಂದರೆ ಆಗದಂತೆ ಯೂರಿಯಾ ಪೂರೈಕೆ ಮಾಡುತ್ತಿದ್ದೇವೆ ಎಂದು ಸ್ಪಷ್ಟನೆ ನೀಡಿದರು.

ಕೊಪ್ಪಳದಲ್ಲಿ ಕೊಲೆಯಾದ ಗವಿಸಿದ್ಧಪ್ಪ ನಾಯಕ ಕೊಲೆ ಪ್ರಕರಣದಲ್ಲಿ ಬಿಜೆಪಿ ನಾಯಕರು ರಾಜಕೀಯ ಮಾಡುತ್ತಿದ್ದಾರೆ. ಪ್ರಕರಣದಲ್ಲಿ ಕೊಪ್ಪಳ ಪೊಲೀಸರು ಎಲ್ಲ ಆರೋಪಿಗಳನ್ನು ಬಂಧಿಸಿದ್ದಾರೆ. ಮೃತನ ತಾಯಿ ದೂರಿನ ಹಿನ್ನೆಲೆ ಘಟನೆಗೆ ಕಾರಣರಾದ ಬಾಲಕಿಯನ್ನು ವಿಚಾರಣೆ ಮಾಡಲಾಗಿದೆ. ಸತ್ತ ಮನೆಯಲ್ಲಿ ರಾಜಕಾರಣ ಮಾಡುವುದು ಬಿಜೆಪಿಗೆ ಹೊಸದಲ್ಲ. ಸತ್ತ ಮನೆಯಲ್ಲಿ ರಾಜಕೀಯ ಮಾಡುವುದಕ್ಕಿಂತ ಸಾತ್ವನ ಹೇಳಬೇಕು. ಇದನ್ನು ಬಿಜೆಪಿ ಮುಖಂಡರು ಕಲಿಯಲಿ ಎಂದು ತಿರುಗೇಟು ನೀಡಿದರು. ಸಂಸದ ರಾಜಶೇಖರ ಹಿಟ್ನಾಳ, ಶಾಸಕ ರಾಘವೇಂದ್ರ ಹಿಟ್ನಾಳ, ಡಿಸಿ ಸುರೇಶ ಇಟ್ನಾಳ, ಜಿಪಂ ಸಿಇಒ ವರ್ಣಿತ್ ನೇಗಿ, ಎಸ್ಪಿ ಡಾ.ರಾಮ್ ಎನ್.ಅರಸಿದ್ದಿ ಸೇರಿ ಇತರರು ಇದ್ದರು.

ಕೊಪ್ಪಳದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಿಂದ ಧ್ವಜಾರೋಹಣ

ಜಿಲ್ಲಾದ್ಯಂತ ಸ್ವಾತಂತ್ರ್ಯ ದಿನಾಚರಣೆ

ಕೊಪ್ಪಳ: ದೇಶದ ಸ್ವಾತಂತ್ರ್ಯ ಹೋರಾಟಗಾರರು ಪ್ರತಿಯೊಬ್ಬ ಭಾರತೀಯರ ಮನದಲ್ಲಿ ಅಮರರಾಗಿ ಉಳಿದಿದ್ದಾರೆ. ಪ್ರತಿ ವರ್ಷ ಸ್ವಾತಂತ್ರ್ಯೋತ್ಸವದ ನೆಪದಲ್ಲಿ ಎಲ್ಲ ಮಹನೀಯರನ್ನು ನೆನಪು ಮಾಡುವುದು ನಮ್ಮ ಆದ್ಯ ಕರ್ತವ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಿದ್ದ 79ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಶುಕ್ರವಾರ ಮಾತನಾಡಿದರು. ದೇಶದ ಸ್ವಾತಂತ್ರ್ಯಕ್ಕಾಗಿ ಮಹಾತ್ಮ ಗಾಂಧೀಜಿ, ಆದಿಯಾಗಿ ಅನೇಕ ಮಹನೀಯರು ಹೋರಾಡಿದ್ದಾರೆ. ನಾವೆಲ್ಲರೂ ಅವರು ಹಾಕಿ ಕೊಟ್ಟ ಮಾರ್ಗದಲ್ಲಿ ನಡೆಯಬೇಕಿದೆ. ಜಾತಿ, ಧರ್ಮದ ಭೇದ-ಭಾವ ಮಾಡದೇ ಎಲ್ಲರೂ ಸಮಾನರಾಗಿ ಶಾಂತಿಯಿಂದ ಬಾಳಬೇಕಿದೆ. ದೇಶಪ್ರೇಮ ಬೆಳೆಸಿಕೊಳ್ಳಲು ಪ್ರೇರಣೆಯಾದ ಈ ದಿನದಂದು ಸಮ ಸಮಾಜ ಕಟ್ಟಲು ಸಂಕಲ್ಪ ಮಾಡೋಣ ಎಂದು ಕರೆ ನೀಡಿದರು. ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಅಧ್ಯಕ್ಷತೆ ವಹಿಸಿದ್ದರು. ಸಂಸದ ಕೆ.ರಾಜಶೇಖರ ಹಿಟ್ನಾಳ, ಎಂಎಲ್ಸಿ ಹೇಮ ಲತಾ ನಾಯಕ, ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್, ನಗರಾಭಿ ವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಶ್ರೀನಿವಾಸ್ ಗುಪ್ತಾ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ರೆಡ್ಡಿ ಶ್ರೀನಿವಾಸ, ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ, ಜಿಪಂ ಸಿಇಒ ವರ್ಣಿತ್ ನೇಗಿ, ಎಸ್ಪಿ ಡಾ.ರಾಮ್ ಎಲ್ ಅರಸಿದ್ಧಿ, ಎಡಿಸಿ ಸಿದ್ರಾಮೇಶ್ವರ, ಎಸಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಎಎಸ್ಪಿ ಹೇಮಂತ್ ಕುಮಾರ್, ತಹಸೀಲ್ದಾರ ವಿಠ್ಠಲ ಚೌಗಲಾ, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ವಿಠ್ಠಲ್ ಜಾಬಗೌಡರ್ ಸೇರಿ ಇತರರು ಇದ್ದರು.

ಕೊಪ್ಪಳದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 79ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯಲ್ಲಿ ಸಚಿವ ಶಿವರಾಜ ತಂಗಡಗಿ ಗೌರವ ವಂದನೆ ಸ್ವೀಕರಿಸಿದರು.

ರಾಜ್ಯ ಸರಕಾರ 2025-26ನೇ ಸಾಲಿನ ಬಜೆಟ್‌ನಲ್ಲಿ ಕೊಪ್ಪಳ ಜಿಲ್ಲೆ ಕನಕಗಿರಿ ತಾಲೂಕು ಸಿರಿವಾರ ಗ್ರಾಮದ ಬಳಿ 200 ಎಕರೆ ಪ್ರದೇಶದಲ್ಲಿ ತೋಟಗಾರಿಕೆ ತಂತ್ರಜ್ಞಾನ ಪಾರ್ಕ್ ಅನುಷ್ಠಾನ ಮಾಡುತ್ತಿದೆ. ಈಗಾಗಲೇ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಈ ಯೋಜನೆ ಮುಂದಿನ ದಿನದಲ್ಲಿ ಕೊಪ್ಪಳ ಸೇರಿ ಕಲ್ಯಾಣ ಕರ್ನಾಟಕದ ರೈತರಿಗೆ ವರದಾನವಾಗಲಿದೆ.

- ಶಿವರಾಜ ತಂಗಡಗಿ, ಜಿಲ್ಲಾ ಉಸ್ತುವಾರಿ ಸಚಿವ

ಫಾಸ್ಟ್ಯಾಗ್ ವಾರ್ಷಿಕ ಪಾಸ್ ಬಳಕೆ ಹೇಗೆ? ಎಲ್ಲಿ?

ಅಡೆತಡೆಗಳಿಲ್ಲದ ಹೆದ್ದಾರಿ ಸಂಚಾರಕ್ಕಾಗಿ ಖಾಸಗಿ ವಾಹನಗಳಿಗೆ ವಾರ್ಷಿಕ ₹3 ಸಾವಿರಕ್ಕೆ ಫಾಸ್ಟ್ಯಾಗ್ ವಾರ್ಷಿಕ ಪಾಸ್ ವಿತರಿಸುವ ಯೋಜನೆ ಆ.15ರಿಂದ ಜಾರಿಗೆ ಬಂದಿದೆ. ಈ ಪಾಸ್ ಬಿಡುಗಡೆಯಾದ ಬೆನ್ನಲ್ಲೇ ಈ ಪಾಸ್ ಎಲ್ಲಿ ಬಳಸಬಹುದು? ಎಲ್ಲಿ ಖರೀದಿಸಬಹುದು? ಎಷ್ಟು ಟ್ರಿಪ್‌ಗಳನ್ನು ಮಾಡಬಹುದು? ಯಾವ್ಯಾವ ವಾಹಗಳಿಗೆ ಈ ಪಾಸ್ ಅನ್ವಯವಾಗುತ್ತದೆ? ಎಂಬುದೂ ಸೇರಿ ಹತ್ತು ಹಲವು ಪ್ರಶ್ನೆಗಳು ವಾಹನ ಸವಾರರಲ್ಲಿ ಮೂಡಿವೆ. ಅವೆಲ್ಲಾ ಪ್ರಶ್ನೆಗಳಿಗೆ ಇಲ್ಲಿ ಉತ್ತರ ನೀಡಲಾಗಿದೆ.

ಫಾಸ್ಟ್ಯಾಗ್ ವಾರ್ಷಿಕ ಪಾಸ್ ಎಂದರೇನು?: ಕಾರುಗಳು, ಜೀಪ್‌ಗಳು ಮತ್ತು ವ್ಯಾನ್‌ಗಳಂತಹ ವಾಣಿಜ್ಯೇತರ ಖಾಸಗಿ ವಾಹನಗಳಿಗೆ ಮಾತ್ರ ಈ ಪ್ರಿಪೇಯ್ಡ್ ಪಾಸ್ ಅನ್ವಯವಾಗುತ್ತದೆ. ಈಗ ಟೋಲ್ ಪಾವತಿಗಳಿಗಾಗಿ ಫಾಸ್ಟ್ಯಾಗ್ ಕಾರ್ಡ್‌ಗಳಲ್ಲಿರುವ ಹಣ ಖಾಲಿಯಾದರೆ ಪದೇ ಪದೇ ರೀಚಾರ್ಜ್ ಮಾಡಬೇಕಾಗುತ್ತದೆ. ಆದರೆ ಈ ಪಾಸ್ ತೆಗೆದುಕೊಂಡರೆ ಪದೇ ಪದೇ ರಿಚಾರ್ಜ್ ಮಾಡುವ ಅಗತ್ಯವಿಲ್ಲ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸುಗಮ ಪ್ರಯಾಣ ಮಾಡಬಹುದು.

ವಾರ್ಷಿಕ ಪಾಸ್ ಎಲ್ಲಿ ಬಳಸಬಹುದು?: ಇದು ರಾಷ್ಟ್ರೀಯ ಹೆದ್ದಾರಿ (ಫೆಎ) ಮತ್ತು ರಾಷ್ಟ್ರೀಯ ಎಕ್ಸ್‌ಪ್ರೆಸ್‌ವೇ (ಫೆಉ) ಟೋಲ್ ಪ್ಲಾಜಾಗಳಲ್ಲಿ ಮಾತ್ರ ಮಾನ್ಯವಾಗಿರುತ್ತದೆ.

ರಸ್ತೆಯಲ್ಲಿ (ಉದಾಹರಣೆ ಬೆಂಗಳೂರಿನ ನೈಸ್ ರಸ್ತೆ) ವಾರ್ಷಿಕ ಫಾಸ್ಟ್ಯಾಗ್ ಪಾಸ್‌ನೊಂದಿಗೆ ಉಚಿತ ಪ್ರವೇಶವನ್ನು ಪಡೆಯಲು ಸಾಧ್ಯವಿಲ್ಲ.

ಎಲ್ಲಿ ಖರೀದಿಸಬಹುದು?: ವಾರ್ಷಿಕ ಪಾಸ್ ಅನ್ನು ಸಕ್ರಿಯಗೊಳಿಸಲು ಮೀಸಲಾದ ಲಿಂಕ್ ರಾಜಮಾರ್ಗ್ ಯಾತ್ರಾ ಅಪ್ಲಿಕೇಶನ್ ಅಥವಾ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

(NHAI) ವೆಬ್‌ಸೈಟ್‌ಗಳಲ್ಲಿ ಖರೀದಿಸಬಹುದು.

ಪಾಸ್ ಹೇಗೆ ಸಕ್ರಿಯವಾಗುತ್ತದೆ?: ಪಾಸ್ ಅನ್ನು ಸಕ್ರಿಯಗೊಳಿಸಲು ವಾಹನ ಮತ್ತು ಫಾಸ್ಟ್ಯಾಗ್ ಅನ್ನು ಪರಿಶೀಲಿಸಲಾಗುತ್ತದೆ. ಎಲ್ಲ ದಾಖಲೆಗಳು ಸರಿಯಾಗಿದ್ದರೆ 3,000 ರು. ಪಾವತಿಸಬಹುದು. ಪಾವತಿಯ ನಂತರ ಎರಡು ಗಂಟೆಗಳಲ್ಲಿ ಪಾಸ್ ಸಕ್ರಿಯವಾಗುತ್ತದೆ. ಒಂದು ವೇಳೆ ಫಾಸ್ಟ್ಯಾಗ್ ಬ್ಲ್ಯಾಕ್ ಲಿಸ್ಟ್‌ಗೆ ಸೇರ್ಪಡೆಯಾಗಿದ್ದರೆ ವಾರ್ಷಿಕ ಪಾಸ್ ಸಿಗುವುದಿಲ್ಲ.

ಅಸ್ತಿತ್ವದಲ್ಲಿರುವ ಬಳಕೆದಾರರು ಹೊಸ ಫಾಸ್ಟ್ಯಾಗ್ ಖರೀದಿಸಬೇಕೇ?: ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಪ್ರಕಾರ, ಈಗಾಗಲೇ ತಮ್ಮ ವಾಹನಗಳಲ್ಲಿ ಫಾಸ್ಟ್ಯಾಗ್ ಹೊಂದಿರುವವರು ಹೊಸ ಫಾಸ್ಟ್ಯಾಗ್ ಖರೀದಿಸುವ ಅಗತ್ಯವಿಲ್ಲ. ಈ ಪಾಸ್ ಅನ್ನು ನಿಮ್ಮ ಅಸ್ತಿತ್ವದಲ್ಲಿರುವ ಒಂದರಲ್ಲಿ ಸಕ್ರಿಯಗೊಳಿಸಲಾಗುತ್ತದೆ.

ಟೋಲ್ ಸಂಗ್ರಹ ಶೇ.19.6ರಷ್ಟು ಹೆಚ್ಚಳ

2025-26ರ ಮೊದಲ ತ್ರೈಮಾಸಿಕದಲ್ಲಿ ಎಲೆಕ್ಟ್ರಾನಿಕ್ ಟೋಲ್ ಸಂಗ್ರಹದಡಿ (ಇಟಿಸಿ) ಫಾಸ್ಟ್ಯಾಗ್ ಮೂಲಕ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹವು ಶೇ.19.6ರಷ್ಟು ಹೆಚ್ಚಳವಾಗಿದ್ದು, ₹20.68 ಲಕ್ಷ ಕೋಟಿ ಸಂಗ್ರಹಿಸಲಾಗಿದೆ. ಎಲೆಕ್ಟ್ರಾನಿಕ್ ಟೋಲ್ ಸಂಗ್ರಹ (ಇಟಿಸಿ) ವ್ಯವಸ್ಥೆ ದತ್ತಾಂಶದ ಪ್ರಕಾರ, ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ ಟೋಲ್ ಬಳಕೆದಾರರ ಸಂಖ್ಯೆಯೂ ಶೇ.16.2ರಷ್ಟು ಹೆಚ್ಚಾಗಿ 1,173 ಮಿಲಿಯನ್‌ಗೆ ತಲುಪಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಇದು 1,009.87 ಮಿಲಿಯನ್ ಆಗಿತ್ತು.

ಹೀಗಿದ್ದರೂ ವಾರ್ಷಿಕ ಪಾಸ್ ಪಡೆಯಲು ಫಾಸ್ಟ್ಯಾಗ್‌ನ ಕೆವೈಸಿ ಅತ್ಯಗತ್ಯ.

ಎಷ್ಟು ಟ್ರಿಪ್‌ಗಳನ್ನು ಮಾಡಬಹುದು?: ಫಾಸ್ಟ್ಯಾಗ್ ವಾರ್ಷಿಕ ಪಾಸ್ ಒಂದು ವರ್ಷದವರೆಗೆ ಮಾನ್ಯವಾಗಿರುತ್ತದೆ ಅಥವಾ 200 ಟ್ರಿಪ್‌ಗಳನ್ನು ಅನುಮತಿಸುತ್ತದೆ. ಒಂದು ವರ್ಷ ಅಥವಾ 200 ಟ್ರಿಪ್‌ಗಳನ್ನು ಪೂರ್ಣಗೊಳಿಸಿದ ನಂತರ ಅದು ಹಿಂದಿನಂತೆ ಕಾರ್ಯನಿರ್ವಹಿಸಲು ಪ್ರಾರಂಭಿಸುತ್ತದೆ.

ಹೇಗೆ ಲೆಕ್ಕ ಹಾಕಲಾಗುತ್ತದೆ?: ಒಂದು ಟೋಲ್ ದಾಟಿದರೆ ಒಂದು ಟ್ರಿಪ್ ಎಂದು ಎಣಿಕೆ ಮಾಡಲಾಗುತ್ತದೆ. ಮತ್ತೊಮ್ಮೆ ಅದೇ ಟೋಲ್ ಬಳಸಿ ಮರಳಿದರೆ ಎರಡು ಟ್ರಿಪ್ ಎಂದು ಪರಿಗಣಿಸಲಾಗುತ್ತದೆ.

ಯಾವ ವಾಹನಗಳಿಗೆ ಸಿಗುತ್ತೆ?: VAHAN ಡೇಟಾಬೇಸ್ ಮೂಲಕ ಪರಿಶೀಲಿಸಿದ ಬಳಿಕ ಖಾಸಗಿ ವಾಣಿಜ್ಯೇತರ ಕಾರು, ಜೀಪ್, ವ್ಯಾನ್‌ಗಳಿಗೆ ಮಾತ್ರ ವಾರ್ಷಿಕ ಪಾಸ್ ಅನ್ವಯಿಸುತ್ತದೆ. ಯಾವುದೇ ವಾಣಿಜ್ಯ ವಾಹನದಲ್ಲಿ ಬಳಸಿದರೆ ಸೂಚನೆ ಇಲ್ಲದೆ ತಕ್ಷಣ ನಿಷ್ಕ್ರಿಯಗೊಳಿಸಲಾಗುತ್ತದೆ.

ಪಾಸ್‌ಗೆ ಯಾರು ಅರ್ಹರಲ್ಲ?: ಚಾಸಿಸ್ ಸಂಖ್ಯೆಯನ್ನು ಬಳಸಿಕೊಂಡು ಫಾಸ್ಟ್ಯಾಗ್ ನೋಂದಾಯಿಸಿದ್ದರೆ ನಿಮಗೆ ಪಾಸ್ ಸಿಗುವುದಿಲ್ಲ. ಇದಕ್ಕಾಗಿ ನೀವು ವಾಹನ ನೋಂದಣಿ ಸಂಖ್ಯೆಯನ್ನು (VRN) ನವೀಕರಿಸಬೇಕಾಗುತ್ತದೆ. ಅಲ್ಲದೇ ಮೊಬೈಲ್ ಸಂಖ್ಯೆಯನ್ನು ನವೀಕರಿಸಬೇಕು.

ಪ್ರಯೋಜನಗಳೇನು?: ಟೋಲ್ ತೆರಿಗೆಯಲ್ಲಿ ಒಬ್ಬರು 5,000 ರಿಂದ 7,000 ರು.ಗಳನ್ನು ಉಳಿಸಬಹುದು. ಇದಲ್ಲದೆ ಪ್ರಯಾಣದ ಮಧ್ಯದಲ್ಲಿ ರೀಚಾರ್ಜ್ ಖಾಲಿಯಾಗುವ ಚಿಂತೆ ಇರುವುದಿಲ್ಲ.

ಮತ್ತೊಂದು ವಾಹನಕ್ಕೆ ವರ್ಗಾಯಿಸಬಹುದೇ?: ಇಲ್ಲ. ಹಾಗೆ ಮಾಡಿದ್ದರೆ ನಿಮ್ಮ ಪಾಸ್ ಅನ್ನು ಕಪ್ಪುಪಟ್ಟಿಗೆ ಸೇರಿಸಲಾಗುತ್ತದೆ.

ವಾರ್ಷಿಕ ಪಾಸ್‌ಗೆ ಸಂಬಂಧಿಸಿದಂತೆ ಎಸ್‌ಎಂಎಸ್ ಬರುತ್ತಾ?: ಪಾಸ್ ಸಕ್ರಿಯಗೊಳಿಸಿದ ಕೂಡಲೇ ನೋಂದಾಯಿಸಿದ ಮೊಬೈಲ್ ಸಂಖ್ಯೆಗೆ ಸಂದೇಶ ಬರುತ್ತದೆ.

ವಾರ್ಷಿಕ ಪಾಸ್ ಕಡ್ಡಾಯವೇ?: ವಾರ್ಷಿಕ ಪಾಸ್ ಕಡ್ಡಾಯವಿಲ್ಲ. ಒಂದು ವೇಳೆ ವಾರ್ಷಿಕ ಪಾಸ್ ಪಡೆಯದವರು ಈಗ ಇರುವಂತೆ ಫಾಸ್ಟ್ಯಾಗ್ ಬಳಸಿ ಟೋಲ್ ದಾಟಬಹುದು. ಆದರೆ ಫಾಸ್ಟ್ಯಾಗ್ ಇಲ್ಲದೇ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸಿದರೆ ಅಂತಹ ವಾಹನಗಳನ್ನು ಲೂಸ್ ಫಾಸ್ಟ್ಯಾಗ್ ಎಂದು ಪರಿಗಣಿಸಿ ಕಪ್ಪುಪಟ್ಟಿಗೆ ಸೇರಿಸಲಾಗುತ್ತದೆ.

ಎಲ್ಲಿ ಅಂಟಿಸಬೇಕು?: ಫಾಸ್ಟ್ಯಾಗ್ ಅನ್ನು ವಾಹನದ ಮುಂಭಾಗದ ಗಾಜಿಗೆ ಅಂಟಿಸಬೇಕು. ಆದರೆ, ಕೆಲವರು ಉದ್ದೇಶ ಪೂರ್ವಕವಾಗಿ ಅವುಗಳನ್ನು ತಮ್ಮ ವಾಹನಗಳಿಗೆ ಅಂಟಿಸುತ್ತಿಲ್ಲ. ಬದಲಿಗೆ ಕೈಯಲ್ಲಿ ಹಿಡಿದು ಟೋಲ್‌ಗಳ ಮೂಲಕ ಸಾಗುತ್ತಿದ್ದಾರೆ. ಇದರಿಂದ ಟೋಲ್‌ಗಳಲ್ಲಿ ಸುಗಮ ಕಾರ್ಯನಿರ್ವಹಣೆಗೆ ಅಡ್ಡಿಯಾಗುತ್ತಿದೆ. ಹೀಗಾಗಿ ಅಂಥ ಫಾಸ್ಟ್ಯಾಗ್‌ಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗತ್ತದೆ.

ಸಂಪತ್ತು ಹಂಚಿಕೆಯಲ್ಲೂ ತಾರತಮ್ಯ

← ಮೊದಲಪುಟದಿಂದ

ಈ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿ ಹಾಗೂ ಹಿಂದುಳಿದ ವರ್ಗಗಳ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ವಿಚಾರಗಳನ್ನು ಸರಕಾರವು ಗಂಭೀರವಾಗಿ ಪರಿಗಣಿಸಿದೆ ಎಂದು ತಿಳಿಸಿದರು.

ಬೇಕಾದಷ್ಟು ಯೂರಿಯಾ ನೀಡಿಲ್ಲ: ಕೃಷಿ ವಲಯಕ್ಕೆ 2025-26ರ ಬಜೆಟ್‌ನಲ್ಲಿ 51,339 ಕೋಟಿ ರು. ಒದಗಿಸಿದ್ದೇವೆ. 2022-23ಕ್ಕೆ ಹೋಲಿಸಿದರೆ ಶೇ.52.34 ರಷ್ಟು ಹೆಚ್ಚಿನ ಅನುದಾನವನ್ನು ಒದಗಿಸಿ ಕೃಷಿ ವಲಯವನ್ನು ಬಲಪಡಿಸುತ್ತಿದ್ದೇವೆ. ಇಷ್ಟರ ನಡುವೆಯೂ ನಮಗೆ ಬೇಕಾಗಿರುವಷ್ಟು ಯೂರಿಯಾವನ್ನು ಒಕ್ಕೂಟ ಸರಕಾರ ಪೂರೈಸುತ್ತಿಲ್ಲ, ಇದರಿಂದ ಸ್ವಲ್ಪ ಸಮಸ್ಯೆಗಳಾಗಿವೆ. ಈ ಸಮಸ್ಯೆಯನ್ನು ಕೂಡಲೇ ಪರಿಹರಿಸ ಬೇಕೆಂದು ಆಗ್ರಹಿಸಿದರು.

> **ಕರ್ನಾಟಕವನ್ನು ಸರ್ವಜನಾಂಗದ ಶಾಂತಿಯ ತೋಟವನ್ನಾಗಿಯೇ ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಸಾಮರಸ್ಯದಿಂದ ಕೂಡಿದ ಸಮೃದ್ಧ ಕರ್ನಾಟಕವನ್ನು ನಿರ್ಮಾಣ ಮಾಡುವುದರ ಮೂಲಕ ಸಶಕ್ತ ಭಾರತವನ್ನು ಕಟ್ಟಬೇಕು. ಬಲಾಢ್ಯರು ಮಾತ್ರ ಬದುಕಬೇಕು. ಉಳಿದವರು ಗುಲಾಮರಾಗಿ ದುಡಿಯಬೇಕು ಎನ್ನುವ ಮನುವಾದಿ ಸಿದ್ಧಾಂತ ಮಾದರಿಯೇ ಸಾಮಾಜಿಕ ಡಾರ್ವಿನ್ ವಾದ, ಈ ಮೃಗೀಯ ಸಿದ್ಧಾಂತಕ್ಕೆ ಎದುರಾಗಿ ಅಸಹಾಯಕರಿಗೆ ಮೊದಲು ಆದ್ಯತೆ ಸಿಗಬೇಕು.**
> – ಸಿದ್ದರಾಮಯ್ಯ ಮುಖ್ಯಮಂತ್ರಿ

ಅನಾಮಿಕನ ವಿರುದ್ಧ ಕ್ರಮ?

← ಮೊದಲಪುಟದಿಂದ

ಇದೀಗ ಗೃಹ ಇಲಾಖೆಯೂ ಈ ನಿಟ್ಟಿನಲ್ಲಿ ಚಿಂತನೆ ನಡೆಸಿದ್ದು, ಮುಂದಿನ ಕೆಲ ದಿನಗಳ ಕಾಲ ನಡೆಯುವ ಪ್ರಕ್ರಿಯೆಯನ್ನು ಗಮನಿಸಿ ಕ್ರಮವಹಿಸಲು ತೀರ್ಮಾನಿಸಲಾಗಿದೆ ಎಂದು ಮೂಲ ಗಳು ತಿಳಿಸಿವೆ. ಈಗಾಗಲೇ ಅನಾಮಿಕ ವ್ಯಕ್ತಿ ಹೇಳಿರುವ ಕಡೆ ಯಲ್ಲ ಎಸ್‌ಐಟಿ ಅಧಿಕಾರಿಗಳು ಗುಂಡಿ ತೋಡಿದ್ದಾರೆ. ಆದರೆ ಯಾವ ಜಾಗದಲ್ಲಿಯೂ ಬರುಡೆ ಸಿಕ್ಕಿಲ್ಲ. ಒಂದು ಸ್ಥಳದಲ್ಲಿ ಮೂಳೆ ಸಿಕ್ಕರೂ ಅದಕ್ಕೂ ಅನಾಮಿಕ ವ್ಯಕ್ತಿ ಮಾಡುತ್ತಿರುವ ಆರೋಪಕ್ಕೂ ಹೋಲಿಕೆಯಾಗುತ್ತಿಲ್ಲ. ಆದ್ದರಿಂದ ಸುಳ್ಳು ಮಾಹಿತಿಯ ಮೂಲಕ ಇಡೀ ತನಿಖೆಯ ದಿಕ್ಕನ್ನು ತಪ್ಪಿಸಿದ ಹಾಗೂ ಸರಕಾರಕ್ಕೆ ಸುಳ್ಳು ಮಾಹಿತಿ ನೀಡಿದ ಆರೋಪದಲ್ಲಿ ದೂರು ದಾಖಲಿಸುವ ಸಾಧ್ಯತೆಯಿದೆ. ಆದರೆ ಇದಕ್ಕೂ ಮೊದಲು ಆತ ತೋರಿಸಿರುವ ಇನ್ನಷ್ಟು ಜಾಗದಲ್ಲಿ ಗುಂಡಿ ತೋಡಿ, ಸುಳ್ಳು ಎನ್ನುವುದು ಸಾಬೀತಾದ ಬಳಿಕ ಮುಂದುವರಿಯಲು ತೀರ್ಮಾನಿಸಿದ್ದಾರೆ ಎನ್ನಲಾಗಿದೆ.

ಇಂದು ಧರ್ಮಸ್ಥಳಕ್ಕೆ ರ‍್ಯಾಲಿ: ಈ ನಡುವೆ ಧರ್ಮಸ್ಥಳ ದೇವಾಲಯ ಹಾಗೂ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರಿಗೆ ಬೆಂಬಲ ಸೂಚಿಸುವ ನಿಟ್ಟಿನಲ್ಲಿ ಬಿಜೆಪಿ ಶಾಸಕ ಎಸ್. ಆರ್.ವಿಶ್ವನಾಥ್ ನೇತೃತ್ವದಲ್ಲಿ ಶನಿವಾರ ಬೆಳಗ್ಗೆ ಬೆಂಗಳೂರಿನಿಂದ ಧರ್ಮಸ್ಥಳಕ್ಕೆ ಕಾರಿನ ರ‍್ಯಾಲಿ ಆಯೋಜಿಸಲು ತೀರ್ಮಾನಿಸಲಾಗಿದೆ. ಸುಮಾರು 400 ಕಾರುಗಳಲ್ಲಿ ವಿಶ್ವನಾಥ್ ಬೆಂಬಲಿಗರು ಧರ್ಮಸ್ಥಳಕ್ಕೆ ತೆರಳುತ್ತಿದ್ದಾರೆ. ಈ ಸಂಖ್ಯೆ 500 ದಾಟಬಹುದು ಎನ್ನಲಾಗಿದೆ. ಬಳಿಕ ಭಾನುವಾರ ಬೆಳಗ್ಗೆ ಈ ತಂಡಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸೇರಿದಂತೆ ಹಲವು ನಾಯಕರು ಸೇರಿಕೊಂಡು ಬೃಹತ್ ರ‍್ಯಾಲಿ ನಡೆಸುವ ಮೂಲಕ ನೈತಿಕ ಬೆಂಬಲ ಸೂಚಿಸಲು ತೀರ್ಮಾನಿಸಿದ್ದಾರೆ.

> **ಧರ್ಮಸ್ಥಳದ ಪರ ಅಥವಾ ವಿರುದ್ಧದ ವಿಚಾರವಲ್ಲ. ಎಲ್ಲ ಪ್ರಕ್ರಿಯೆ ನ್ಯಾಯಬದ್ಧವಾಗಿ ನಡೆಯಬೇಕು. ಧರ್ಮಸ್ಥಳವನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ಅಲ್ಲಿನ ಭಕ್ತಿ, ಶ್ರದ್ಧೆ ಪ್ರಕ್ರಿಯೆಗಳ ಮೇಲೆ ನನಗೆ ನಂಬಿಕೆ, ಆತ್ಮವಿಶ್ವಾಸವಿದೆ. ಮುಂದಿನ ದಿನಗಳಲ್ಲಿ ತನಿಖೆಯಿಂದ ಅಲ್ಲಿ ನಡೆದಿರುವ ಷಡ್ಯಂತ್ರ ಹೊರಬರಲಿದೆ ಎಂಬ ವಿಶ್ವಾಸ ನನ್ನದು. ಸುಳ್ಳು ಆರೋಪ ಮಾಡಿದ್ದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ನಾವು ನಡೆಯುತ್ತೇವೆ. ಕಾನೂನು ಎಲ್ಲರಿಗೂ ಒಂದೇ. ನಾವು ಅದನ್ನು ಕಾಪಾಡಬೇಕು. ಇಲ್ಲಿ ನಾವು ಯಾರನ್ನೂ ರಕ್ಷಣೆ ಮಾಡುವುದಿಲ್ಲ.**
> – ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ದಿಲ್ಲಿಯಲ್ಲಿ ಸಂಚು

← ಮೊದಲಪುಟದಿಂದ

ನಾನು ಯಾವತ್ತೂ ಸುಳ್ಳು ಹೇಳುವುದಿಲ್ಲ. ಸ್ವಾರ್ಥಕ್ಕಾಗಿ ಸುಳ್ಳು ಹೇಳಿಲ್ಲ. ಬೇರೆಯವರ ಅನುಕೂಲಕ್ಕಾಗಿ ಸುಳ್ಳು ಹೇಳಿದ್ದೇನೆ. ಹೆಚ್ಚುವರಿಯಾಗಿ ಉಪಮುಖ್ಯಮಂತ್ರಿಗಳ ನೇಮಕ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಹೇಳಿಕೆ ನೀಡಿದ್ದೇನೆ. ನಾನು ಹೇಳಿದ್ದನ್ನು ದೆಹಲಿಗೆ ತಲುಪಿಸಿದ್ದಾರೆ. ನಾನೇನು ಮುಚ್ಚುಮರೆ ಮಾಡಿಲ್ಲ. ಪಕ್ಷದ ವಿಚಾರವನ್ನು ಸಾರ್ವತ್ರಿಕವಾಗಿ ಮಾತನಾಡಬಾರದು. ವಾತಾವರಣ, ಪರಿಸ್ಥಿತಿ ಸತ್ಯವನ್ನು ಕಹಿ ಮಾಡುತ್ತದೆ ಎಂದು ತಿಳಿಸಿದರು.

ಬಿಜೆಪಿಗೆ ಬರುವಂತೆ ರಾಜಣ್ಣಗೆ ಶ್ರೀರಾಮುಲು ಆಹ್ವಾನ ವಿಚಾರವಾಗಿ ಮಾತನಾಡಿದ ಅವರು, ಮಾಜಿ ಸಚಿವ ಶ್ರೀರಾಮುಲು ಪ್ರೀತಿ ಮತ್ತು ವಿಶ್ವಾಸದಿಂದ ಹಾಗೆ ಹೇಳಿಕೆ ನೀಡಿರಬಹುದು. ಶ್ರೀರಾಮುಲು ಹೇಳಿದರು ಅಂತ ಬಿಜೆಪಿಗೆ ಹೋಗಲು ಆಗುತ್ತಾ? ಕಾಂಗ್ರೆಸ್ ನನಗೇನು ಕಡಿಮೆ ಮಾಡಿದೆ? ಎಂದು ಪ್ರಶ್ನಿಸಿದರು.

ಸ್ವಾವಲಂಬಿ ಭಾರತಕ್ಕೆ ಸಂಕಲ್ಪ

← ಮೊದಲಪುಟದಿಂದ

ಭವಿಷ್ಯದಲ್ಲಿ ಎದುರಾಗಬಹುದಾದ ಎಂಥದ್ದೇ ಸವಾಲನ್ನು ಸಮರ್ಥವಾಗಿ ಎದುರಿಸಲು ಈ ಯುದ್ಧದ ಯಶಸ್ಸು ಬಲ ತುಂಬಿದೆ. ಇನ್ನಷ್ಟು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದುವ ಮೂಲಕ ಸೇನೆಯನ್ನು ಮತ್ತಷ್ಟು ಬಲಪಡಿಸಲಾಗುವುದು ಎಂದರು.

ದೇಶದ ನೀರಿನ ಭದ್ರತೆ ಮತ್ತು ಮೂಲಸೌಕರ್ಯಗಳ ಸುಸ್ಥಿರ ನಿರ್ವಹಣೆಗೆ ಭಾರತ ಸದಾ ಬದ್ಧ. ಭಾರತ ಮತ್ತು ಪಾಕಿಸ್ತಾನದ ನದಿ ನೀರಿನ ಸಂಬಂಧದಲ್ಲಿ ಸಿಂಧೂ ಜಲ ಒಪ್ಪಂದವು ಮೂಲಾಧಾರವಾಗಿ ಉಳಿದಿದೆ. ರಾಷ್ಟ್ರದ ಹಿತಾಸಕ್ತಿಗೆ ಪೂರಕವಾಗಿಯೇ ಭಾರತವು ಅಂತರರಾಷ್ಟ್ರೀಯ ಒಪ್ಪಂದಗಳನ್ನು ಮಾಡಿಕೊಳ್ಳಲಾಗುವುದು ಎಂದು ಪ್ರಧಾನಿ ಮೋದಿ ಹೇಳಿದರು.

ಪ್ರತಿಪಕ್ಷಗಳ ಕುರ್ಚಿ ಖಾಲಿ

ದೆಹಲಿಯ ಕೆಂಪು ಕೋಟೆಯಲ್ಲಿ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮದಲ್ಲಿ ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ರಾಜ್ಯಸಭೆಯ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಗೈರಾಗಿದ್ದರು. ಮಲ್ಲಿಕಾರ್ಜುನ ಖರ್ಗೆಯವರು, ದೆಹಲಿಯ ಎಐಸಿಸಿ ಪ್ರಧಾನ ಕಚೇರಿಯಲ್ಲಿನ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ರಾಹುಲ್ ಗಾಂಧಿ, ದೆಹಲಿಯ ಇಂದಿರಾ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

▸▸ ನಗರಸಭೆಯಿಂದಲೇ ವಿರೋಧಿ ನಿರ್ಣಯ ▸▸ ಎಂ.ಸಿ.ನಾಣಯ್ಯರಿಂದಲೂ ಸಿಎಂಗೆ ಪತ್ರ

ಸಿಡಿದು ಚೂರಾದ ಗ್ಲಾಸ್‌ಬ್ರಿಡ್ಜ್ ಯೋಜನೆ

ಜಿಲ್ಲಾ ನೋಟ

ಅನಿಲ್ ಎಚ್.ಟಿ., ಮಡಿಕೇರಿ

ಮಡಿಕೇರಿಯ ಹೆಸರಾಂತ ರಾಜಾಸೀಟ್ ಉದ್ಯಾನವನದಲ್ಲಿ ಉದ್ದೇಶಿತ ಗ್ಲಾಸ್ ಬ್ಲಿಡ್ಜ್ ಯೋಜನೆಯನ್ನು ಸರಕಾರ ಕೈ ಬಿಟ್ಟಿದ್ದು, ಪರಿಸರ ಪ್ರೇಮಿಗಳು ನಿಟ್ಟುಸಿರು ಬಿಟ್ಟಿದ್ದಾರೆ ಯೋಜನೆಯ ಕಡತ ಹಂತದಲ್ಲಿಯೇ ಗ್ಲಾಸ್ ಬ್ರಿಜ್ಡ್ ವಿರೋಧದಿಂದಾಗಿ ಚೂರಾಗಿದೆ.

ರಾಜ್ಯದಲ್ಲಿಯೇ ಹಲವಾರು ವಷಧಗಳಿಂದ ತನ್ನ ನಿಸರ್ಗ ಸೌಂದರ್ಯ ಮತ್ತು ಪುಷ್ಪೋದ್ಯಾನಕ್ಕಾಗಿ ಹೆಸರುವಾಸಿಯಾಗಿದ್ದ ಮಂಜಿನ ನಗರಿ ಮಡಿಕೇರಿಯ ರಾಜಾಸೀಟ್ ನಲ್ಲಿ ತೋಟಗಾರಿಕಾ ಇಲಾಖೆಯು ಗ್ಲಾಸ್ ಬ್ರಿಡ್ಜ್ ಮತ್ತು ಫುಡ್ ಕೋಟ್ ನಿರ್ಮಾಣಕ್ಕೆ ಮುಂದಾಗಿತ್ತು. ಟೆಂಡರ್ ಕರೆದು ಪ್ರಕ್ರಿಯೆ ಪ್ರಾರಂಭಿಸಿತ್ತು. ಆದರೆ ಹಿರಿಯ ರಾಜಕಾರಣಿ ಎಂ.ಸಿ. ನಾಣಯ್ಯ ಸೇರಿದಂತೆ ಅನೇಕರು ಯೋಜನೆ ವಿರುದ್ಧ ಧ್ವನಿ ಎತ್ತಿದರು. ರಾಜಾಸೀಟ್ ವಿಸ್ತಾರದ ಗ್ರೇಟರ್ ರಾಜಾಸೀಟ್ ನಲ್ಲಿ ಗ್ಲಾಸ್ ಬ್ರಿಡ್ಜ್ ನಿರ್ಮಾಣವಾದಲ್ಲಿ ಪ್ರಕೃತಿ ಅಕ್ರಮಣ ಆಗುವುದಲ್ಲದೇ ತಳಮಟ್ಟದಲ್ಲಿ ಭೂಕುಸಿತದ ಅಪಾಯ ಕೂಡ ಸಾಧ್ಯವಿದೆ ಎಂಬ ಆತಂಕ ಕೂಡ ವ್ಯಕ್ತವಾಗಿತ್ತು.

ನಗರಸಭೆ ವಿರೋಧಿ ನಿರ್ಣಯ

ಮಡಿಕೇರಿ ನಗರಸಭೆಯಲ್ಲಿಯೂ ಗ್ಲಾಸ್ ಬ್ರಿಡ್ಜ್ ವಿರೋಧಿ ನಿರ್ಣಯ ಕೈಗೊಳ್ಳಲಾಗಿತ್ತು. ಬಿಜೆಪಿ, ಎಸ್.ಡಿ.ಪಿ.ಐ ಸೇರಿದಂತೆ ಪ್ರಮುಖ ಪಕ್ಷಗಳು ಗ್ಲಾಸ್ ಬ್ರಿಡ್ಜ್ ವಿರೋಧಿಸಿದ್ದವು. ಗ್ಲಾಸ್ ಬ್ರಿಡ್ಜ್ ಪ್ರಾರಂಭಿಸಿದ್ದೇ ಆದಲ್ಲಿ ಸ್ಥಳದಲ್ಲಿಯೇ ಅಮರಣಾಂತ ಉಪವಾಸ ಸತ್ಯಾಗ್ರಹದ ಹೋರಾಟಕ್ಕೂ ಬಿಜೆಪಿ ಮುಖಂಡರು ಎಚ್ಚರಿಕೆ ನೀಡಿದ್ದರು. ತೋಟಗಾರಿಕಾ ಇಲಾಖೆಯಿಂದ ರಹಸ್ಯವಾಗಿ ಗ್ರೇಟರ್ ರಾಜಾಸೀಟ್ ನಲ್ಲಿ 15 ಕೋಟಿ ರು. ವೆಚ್ಚದ ಯೋಜನೆಗೆ ಬೆಂಗಳೂರು ಮಟ್ಟದಲ್ಲಿ ಟೆಂಡರ್ ಕರೆಯಲಾದ ಬಗ್ಗೆಯೂ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು.

ನಾಣಯ್ಯ ಸಿಎಂಗೆ ಪತ್ರ

ಹೀಗಿದ್ದರೂ ಗ್ಲಾಸ್ ಬ್ರಿಡ್ಜ್ ಸಂಬಂಧಿತ ಕಡತಗಳ ಪ್ರಕ್ರಿಯೆ ಮುಂದುವರೆಯುತ್ತಿದ್ದ ಬೆನ್ನಲ್ಲೇ ಎಂ.ಸಿ. ನಾಣಯ್ಯ ಯೋಜನೆಯನ್ನು ಜಾರಿಗೊಳಿಸದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು. ಈ ನಿಟ್ಟಿನಲ್ಲಿ ಮಡಿಕೇರಿ ಶಾಸಕ ಡಾ.ಮಂಥರ್ ಗೌಡ ಅವರೊಂದಿಗೆ ಚರ್ಚಿಸಿದ ಸಿದ್ದರಾಮಯ್ಯ, ಸ್ವತ ನಾಣಯ್ಯನವರೇ ವಿರೋಧ ವ್ಯಕ್ತಪಡಿಸುತ್ತಿರುವ ಗ್ಲಾಸ್ ಬ್ರಿಡ್ಜ್ ಯೋಜನೆಯ ಅಗತ್ಯವಾದರೂ ಏನು ಎಂದು ಪ್ರಶ್ನಿಸಿದರಂತೆ. ಹೀಗಾಗಿ ಶಾಸಕ ಡಾ.ಮಂಥರ್ ಗೌಡ ಗ್ಲಾಸ್ ಬ್ರಿಡ್ಜ್ ಯೋಜನೆ ಜಾರಿಯಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಪರಿಸರಕ್ಕೆ ಹಾನಿಯಾಗುವ ಯಾವುದೇ ಅವೈಜ್ಞಾನಿಕ ಯೋಜನೆ ಜಾರಿಯಿಲ್ಲ. ವಿಕೋಪ ಸಂಭವಿಸಬಹುದಾದ ಸಾಧ್ಯತೆ ಹಿನ್ನಲೆಯಲ್ಲಿ ಗ್ರೇಟರ್ ರಾಜಾಸೀಟ್ ನಲ್ಲಿ ಸ್ಕೈವಾಕ್ ಯೋಜನೆ ಜಾರಿಗೊಳಿಸದಂತೆ ತೋಟಗಾರಿಕಾ ಇಲಾಖಾಧಿಕಾರಿಗಳಿಗೆ ಸೂಚಿಸಿದ್ದಾಗಿ ಸ್ಪಷ್ಟಪಡಿಸಿದ್ದಾರೆ.

ಮಡಿಕೇರಿಯ ಗ್ರೇಟರ್ ರಾಜಾಸೀಟ್ ಮತ್ತು ಗ್ಲಾಸ್ ಬ್ರಿಡ್ಜ್.

ವಾರಾಂತ್ಯ ಜನ ಜಾತ್ರೆ

ರಾಜಾಸೀಟ್‌ನಂಥ ಪ್ರಮುಖ ಪ್ರವಾಸಿ ತಾಣಕ್ಕೆ ತೆರಳುವ ರಸ್ತೆ ಕಿರಿದಾಗಿದ್ದು ವಾಹನ ನಿಲುಗಡೆಗೂ ಸೂಕ್ತ ವ್ಯವಸ್ಥೆಯಿಲ್ಲ. ವಾರಾಂತ್ಯಗಳಂತೂ ನೂರಾರು ವಾಹನಗಳು ರಸ್ತೆ ಬದಿ ನಿಲುಗಡೆಗೊಂಡು ಸ್ಥಳೀಯರ ಸಂಚಾರಕ್ಕೆ ಸಮಸ್ಯೆಯಾಗುತ್ತಾ ಜನರ ಅಸಮಧಾನ ಸ್ಫೋಟಗೊಳ್ಳುವಂತೆ ಮಾಡಿದೆ. ಹೀಗಾಗಿ ರಾಜಾಸೀಟ್ ನಲ್ಲಿ ಮತ್ತಷ್ಟು ಹೊಸ ಯೋಜನೆ ಜಾರಿಗೊಂಡದ್ದೇ ಆದಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಳವಾಗಿ ವಾಹನ ನಿಲುಗಡೆಯೇ ಸಮಸ್ಯೆಯಾಗುವ ಸಾಧ್ಯತೆ ಹೆಚ್ಚಾಗಲಿದೆ.

ಸ್ಥಳೀಯರಿಂದ ವಿರೋಧ

ಸ್ಥಳೀಯರು ನಿತ್ಯ ಸಂಚರಿಸುವ ರಸ್ತೆಯಲ್ಲಿಯೇ ಓಡಾಡಲು ಕಷ್ಟ ಸಾಧ್ಯವಾದರೆ ಇಂಥ ಯೋಜನೆಗಳ ಅಗತ್ಯವಿಲ್ಲ ಎಂದು ಜನರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ರಾಜಾ ಸೀಟ್ ಮುಂಬದಿ ಇದೀಗ ನಿರ್ಮಾಣದ ಹಂತ ದಲ್ಲಿರುವ ಹೋಟೆಲ್ ಕಟ್ಟಡಕ್ಕೂ ಸಂಕಷ್ಟ ತಲೆ ದೋರುವ ಸಾಧ್ಯತೆಯಿದೆ.

ರಾಜಾಸೀಟ್ ಪ್ರಾಚ್ಯ ವಸ್ತು ಸಂಗ್ರಹಾಲಯ ವ್ಯಾಪ್ತಿಗೆ ಬರುವುದರಿಂದ ಕಟ್ಟಡ ನಿರ್ಮಾಣ ಮಾಡುವಂತಿಲ್ಲ. ಹೀಗಾಗಿ ರಾಜಾಸೀಟ್ ಒಳಗಡೆ ಮಾತ್ರವಲ್ಲದೇ ಹೊರಗಿನ ವ್ಯಾಪ್ತಿಯಲ್ಲಿ ನೂತನ ಬ್ರಿಡ್ಜ್ ನಿರ್ಮಾಣಕ್ಕೆ ಅವಕಾಶ ದೊರಕದ ಕಾರಣ ಹೊಸ ಕಟ್ಟಡಗಳಿಗೆ ಕುತ್ತು ಬರುವ ಸಾಧ್ಯತೆ ಹೆಚ್ಚಾಗಿದೆ.

ಪ್ರವಾಸಿ ತಾಣ – ವಾಹನ ದಟ್ಟಣೆ

ರಾಜಾಸೀಟ್ ರಸ್ತೆಯಲ್ಲಿ ವಾಹನ ನಿಲುಗಡೆ ಸಮಸ್ಯೆ ಮತ್ತು ವಾಹನ ಸಂಚಾರ ಸುಗಮಗೊಳಿಸುವ ಸಂಬಂಧಿತ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು, ಪ್ರವಾಸಿಗರ ವಾಹನಗಳಿಗೆ ಮಡಿಕೇರಿ ಹೊರಗಡೆ ಜಾಗ ಕಲ್ಪಿಸಿ ಅಲ್ಲಿಂದ ಪ್ರವಾಸಿ ತಾಣಗಳಿಗೆ ಇ -ವಾಹನಗಳ ಮೂಲಕ ಪ್ರವಾಸಿಗರನ್ನು ಕರೆತರುವ ಯೋಜನೆ ಜಾರಿ ಸೂಕ್ತ ಎಂದಿದ್ದಾರೆ. ಸರಕಾರ ಗಮನ ಹರಿಸಿದ್ದೇ ಆದಲ್ಲಿ ಮಡಿಕೇರಿಯ ಪ್ರವಾಸಿ ತಾಣಗಳಲ್ಲಿ ವಾಹನ ದಟ್ಟಣೆ ಸಮಸ್ಯೆ ಮತ್ತು ಸ್ಥಳೀಯರ ಸಂಕಷ್ಟ ಶೀಘ್ರ ನಿವಾರಣೆಯಾಗಬಹುದು.

▸▸ ಇಂಡಸ್ಟ್ರೀ ಹಬ್ ಆಗಿ ಕೋಲಾರಕ್ಕೆ ಮನ್ನಣೆ ▸▸ ಜಿಲ್ಲೆಯಲ್ಲಿ ಸಾವಿರಾರು ಉದ್ಯೋಗ ಸೃಷ್ಟಿ

ಚಿನ್ನದನಾಡಿಗೆ ಏರ್‌ಪೋರ್ಟ್ ಗತ್ತು

ಜಿಲ್ಲಾ ನೋಟ

ಕೆ.ಎಸ್.ಮಂಜುನಾಥ ರಾವ್, ಕೋಲಾರ

'ಚಿನ್ನದ ನಾಡು' ಖ್ಯಾತಿಯ ಕೋಲಾರ ಕಾಲಾಂತರದಲ್ಲಿ ಕೈಗಾರಿಕೆಗಳ ಬೀಡಾಗುತ್ತಿದೆ. ಜತೆಗೆ ಹೂವು ಮತ್ತು ತೋಟಗಾರಿಕೆ ಬೆಳೆಗಳ ತವರಾಗಿಯೂ ಗುರುತಿಸಿಕೊಂಡಿದೆ. ಒಂದು ರೀತಿ ವೆಜಿಟೇಬಲ್ ಕ್ರಾಪ್ ಮತ್ತು ಫ್ಲೋರಿ ಕಲ್ಚರ್ ಹಬ್ ಆಗಿ ಹೊರಹೊಮ್ಮಿದೆ. ಇದೀಗ ಮಿನಿ ಏರ್‌ಪೋರ್ಟ್ ಸ್ಥಾಪನೆಗೂ ಕೇಂದ್ರ ಸರಕಾರ ಗ್ರೀನ್ ಸಿಗ್ನಲ್ ನೀಡಿರುವುದು ಜಿಲ್ಲೆಗೆ ಹೊಸ ಗರಿ ಮೂಡಿದೆ.

ಮಿನಿ ಏರ್‌ಪೋರ್ಟ್ ಯೋಜನೆ

ಹೌದು. ಕೋಲಾರದಿಂದ 65 ಕಿಮೀ ದೂರದ ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಒಂದೂವರೆ ಗಂಟೆಯಲ್ಲಿ ತಲುಪಬಹುದಾಗಿದ್ದರೂ ಕೆಂಪೇಗೌಡ ಏರ್‌ಪೋರ್ಟ್ ಮೇಲೆ ಒತ್ತಡ ಹೆಚ್ಚಾಗಿದ್ದು ಕೋಲಾರ ಜಿಲ್ಲೆಯಲ್ಲಿ ಉಡಾನ್ ಯೋಜನೆಯಡಿ ಮಿನಿ ಏರ್‌ಪೋರ್ಟ್ ಸ್ಥಾಪನೆಗೆ ಕೇಂದ್ರ ಸಮ್ಮತಿ ಸೂಚಿಸಿದೆ. ಮಾಲೂರು, ನರಸಾಪುರ, ವೇಮಗಲ್ ಭಾಗದಲ್ಲಿ ಕೈಗಾರಿಕೆಗಳ ಸ್ಥಾಪನೆ ಜೋರಾಗಿ ನಡೆಯುತ್ತಿದ್ದು ವೇಗವಾಗಿ ಅಭಿವೃದ್ಧಿ ಹೊಂದುವ ಮೂಲಕ ಅಂತಾರಾಷ್ಟ್ರೀಯ ಕೈಗಾರಿಕಾ ಭೂಪಟದಲ್ಲಿ ಸ್ಥಾನ ಪಡೆದುಕೊಳ್ಳುತ್ತಿದೆ. ಹೀಗಾಗಿ ಇದನ್ನು ಗಮನಿಸಿದ ಕೇಂದ್ರ ಸರಕಾರ ವಿಮಾನ ನಿಲ್ದಾಣ ಸ್ಥಾಪಿಸುವ ಕುರಿತು ತೀರ್ಮಾನ ಕೈಗೊಂಡಿದ್ದು ಇದಕ್ಕೆ ಪೂರಕವಾಗಿ ಜಿಲ್ಲಾಡಳಿತದಿಂದ ನಾಗರಿಕ ವಿಮಾನಯಾನ ಸಚಿವರು ಸಂಪೂರ್ಣ ವರದಿ ಪಡೆದುಕೊಂಡಿದ್ದಾರೆ.

ಚಿನ್ನದ ನಾಡಿಗೆ ಒತ್ತು

ಏರ್‌ಪೋರ್ಟ್ ಸ್ಥಾಪನೆಯಿಂದಾಗಿ ಸಾವಿರಾರು ಉದ್ಯೋಗ ಸೃಷ್ಟಿ ಆಗಲಿದ್ದು ಮುಖ್ಯವಾಗಿ ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲಿನ ಒತ್ತಡ ಕಡಿಮೆ ಆಗುತ್ತದೆ. ಇದರಿಂದ ರಸ್ತೆಯಲ್ಲಿ ಪ್ರತಿದಿನ ಆಗುತ್ತಿದ್ದ ಟ್ರಾಫಿಕ್ ಜಾಮ್ ನಿಲ್ಲಲಿದೆ. ಸರಕು ಸಾಗಣೆಗೆ ಅನುಕೂಲ ಆಗಲಿದ್ದು ಮತ್ತಷ್ಟು ಕೈಗಾರಿಕೆಗಳ ಸ್ಥಾಪನೆಗೆ ಪೂರಕವಾಗಲಿದೆ. ಬೆಂಗಳೂರು ಗ್ರಾಮಾಂತರ, ಬೆಂ.ನಗರ, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಹಲವಾರು ಜಿಲ್ಲೆಗಳ ಆರ್ಥಿಕ ಬೆಳವಣಿಗೆಗೆ ಇದು ಪೂರಕವಾಗಲಿದೆ. ವ್ಯಾಪಾರ, ವಹಿವಾಟಿಗೆ ಉತ್ತೇಜನ ದೊರಕಲಿದೆ. ಹೊಸ ಏರ್‌ಪೋರ್ಟ್‌ನಿಂದಾಗಿ ದೇಶ ಮತ್ತು ರಾಜ್ಯಗಳ ನಡುವೆ ಸಂಪರ್ಕ ಹೆಚ್ಚಾಗಲಿದ್ದು ವಿದೇಶಿ ಬಂಡವಾಳ ಹೂಡಿಕೆಗೆ ಸಹಾಯ ಆಗಲಿದೆ.

ಎರಡನೇ ಏರ್‌ಪೋರ್ಟ್

ಕೋಲಾರಕ್ಕೆ ಸಮೀಪದ ವೀರಾಪುರದಲ್ಲಿ ಡಿಆರ್‌ಡಿ ಸಂಸ್ಥೆಗೆ ಸೇರಿದ ಮಿಲಿಟರಿ ವಿಮಾನ ನಿಲ್ದಾಣ 2ನೇ ಮಹಾಯುದ್ದದ ಸಂದರ್ಭದಲ್ಲಿ ಸ್ಥಾಪಿಸಲಾಗಿದ್ದು ಇದು ಸೇನಾ ಚಟುವಟಿಕೆಗಳಿಗೆ ಸೀಮಿತವಾಗಿದೆ. ಇದೀಗ ಎರಡನೇ ಏರ್‌ಪೋರ್ಟ್ ನಿರ್ಮಿಸಲು ಕೇಂದ್ರ ಮುಂದಾಗಿದೆ. ವೇಮಗಲ್‌ನಲ್ಲಿ ಹೆಲಿಕಾಪ್ಟರ್ ತಯಾರಿಕಾ ಘಟಕ ಸ್ಥಾಪನೆಗೆ ನಿರ್ಧಾರ ಕೈಗೊಳ್ಳಲಾಗಿದ್ದು ಶಂಕುಸ್ಥಾಪನೆಗಾಗಿ ಶೀಘ್ರದಲ್ಲೇ ಆಗಮಿಸುತ್ತಿರುವ ಕೇಂದ್ರ ರಕ್ಷಣಾ ಸಚಿವ ರಾಜನಾಥಸಿಂಗ್ ಅವರೊಂದಿಗೆ ವಿಮಾನ ನಿಲ್ದಾಣ ಸ್ಥಾಪನೆ ಸಂಬಂಧ ಚರ್ಚೆ ನಡೆಸಲು ಜಿಲ್ಲಾಡಳಿತ ಉತ್ಸುಕವಾಗಿದೆ.

ಸಣ್ಣ ವಿಮಾನ ಕಾರ್ಯಾಚರಣೆ

ಕೋಲಾರದೊಂದಿಗೆ ಬಳ್ಳಾರಿಯಲ್ಲೂ ಏರ್‌ಪೋರ್ಟ್ ಸ್ಥಾಪನೆ ಆಗುತ್ತಿದ್ದು ಇದಕ್ಕಾಗಿ ರಾಜ್ಯ ಸರಕಾರ ಉಚಿತವಾಗಿ ಭೂಮಿ ನೀಡಬೇಕಿದೆ. ಆರಂಭದಲ್ಲಿ 20 ಸೀಟುಗಳಿಗಿಂತ ಕಡಿಮೆ ಇರುವ ಸಣ್ಣ ವಿಮಾನಗಳ ಕಾರ್ಯಾಚರಣೆ ನಡೆಯಲಿದೆ ಎಂದು ನಾಗರೀಕ ವಿಮಾನಯಾನ ಸಚಿವಾಲಯ ಸ್ಪಷ್ಟಪಡಿಸಿದೆ. ವಿಮಾನ ನಿಲ್ದಾಣಕ್ಕೆ ಜಾಗ ಕಲ್ಪಿಸಲಾಗುವುದು, ಇದರಿಂದಾಗಿ ಕೋಲಾರ ಜಿಲ್ಲೆಯ ಸಮಗ್ರ ಅಭಿವೃದ್ಧಿ ಆಗಲಿದ್ದು ಕೈಗಾರಿಕೆಗಳ ಸರಕು ಸಾಗಣೆಗೆ ಸಹಕಾರಿ ಆಗುವ ಮೂಲಕ ಇಂಡಸ್ಟ್ರೀ ಹಬ್ ಆಗಿ ಚಿನ್ನದನಾಡು ಜಾಗತಿಕ ಮನ್ನಣೆ ಗಳಿಸಲಿದೆ ಎಂದು ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ ಪ್ರತಿಕ್ರಿಯಿಸಿದ್ದಾರೆ.

> **ಕೇಂದ್ರ ಸರಕಾರದ ಜತೆಗೆ ಚರ್ಚೆ ಮಾಡಿ ಕೋಲಾರದಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ ಮನವಿ ಮಾಡಲಾಗಿದ್ದರ ಫಲ ಇದೀಗ ದೊರೆತಿದೆ. ಕೂಡಲೇ ರಾಜ್ಯ ಸರಕಾರದೊಂದಿಗೆ ಮಾತನಾಡಿ ಭೂಮಿ ಕೊಡಿಸುವ ಜತೆಗೆ ಉದ್ದೇಶ ಸಾಕಾರಕ್ಕೆ ಕ್ರಮ ಕೈಗೊಳ್ಳಲಾಗುತ್ತದೆ.**
> **-ಎಂ.ಮಲ್ಲೇಶ್ ಬಾಬು,** ಸಂಸದ, ಕೋಲಾರ

> **ಕಳೆದ ಐದಾರು ವರ್ಷದ ಹಿಂದೆಯೂ ಉಡಾನ್ ಯೋಜನೆಯಡಿ ಕೋಲಾರದಲ್ಲಿ ಮಿನಿ ಏರ್‌ಪೋರ್ಟ್ ಸ್ಥಾಪನೆಗೆ ಚಿಂತನೆ ನಡೆದಿತ್ತಾದರೂ ಅಧಿಕಾರಿಗಳ-ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆ ಮತ್ತು ರಾಜಕೀಯ ಜಿದ್ದಾಜಿದ್ದಿನಿಂದಾಗಿ ಯೋಜನೆ ಸಾಕಾರ ಆಗಲಿಲ್ಲ. ಹೀಗಾಗಿ ಇದೀಗ ಮತ್ತೊಮ್ಮೆ ಅದೇ ಭರವಸೆ ಕೇಂದ್ರ ಮತ್ತು ರಾಜ್ಯ ಬಜೆಟ್‌ನಲ್ಲಿ ಸಿಕ್ಕಿದ್ದು ಯೋಜನೆ ಜಾರಿ ಆಗುವಂತೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸಹಕಾರ ನೀಡಬೇಕು.**
> **-ಕೆ.ನಾರಾಯಣಗೌಡ,** ರಾಜ್ಯ ಉಪಾಧ್ಯಕ್ಷರು, ರೈತ ಸಂಘ

ವಿಶ್ವವಾಣಿ
ಬೆಂಗಳೂರು
16-08-2025 ಶನಿವಾರ
@vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

▸▸ ಚಿತ್ರ ಬರೆದವರು:
ಲಕ್ಷ್ಮೀ ಎಸ್, ತೋಟದ ರಾಮಯ್ಯ ಗೌರಮ್ಮ ಬಾಲಿಕಾ ಪ್ರೌಢಶಾಲೆ, ಹೊಸದುರ್ಗ.

ಚಿತ್ತವಿಹಾರ

ಉತ್ಖನನದಿಂದ ಮಾತ್ರ ದೊರೆವ ಚಿನ್ನ

ಉತ್ತಮವಾಗಿರುವ ವಿಚಾರಗಳನ್ನು ನೋಡುತ್ತಾ, ಉತ್ತಮವಾಗಿರುವುದನ್ನೇ ಗ್ರಹಿಸುತ್ತಾ ಸಾಗುವುದು ಒಂದು ಬಗೆಯಾದರೆ, ನೋಡುವ ಎಲ್ಲದರಲ್ಲಿಯೂ ಒಳ್ಳೆಯದನ್ನು ಕಾಣುವ ದೃಷ್ಟಿಕೋನ ಬೆಳೆಸಿಕೊಂಡರೆ ಅದು ಸಕಾರಾತ್ಮಕತೆಯ ಅತ್ಯುನ್ನತ ಸ್ಥಿತಿ. ಕೆಲವರಿಗೆ ಏನನ್ನೇ, ಯಾರನ್ನೇ ಕಂಡರೂ ತಪ್ಪುಗಳ, ಕೆಡುಕುಗಳ ಕಡೆಗೆ ಗಮನ ಹೋಗುತ್ತಿರುತ್ತದೆ. ಅಪ್ರಯತ್ನಪೂರ್ವಕವಾಗಿ ಅವರ ಮನಸ್ಸು ಅದನ್ನೇ ಪಾಲಿಸುತ್ತಾ ಬರುತ್ತಿರುತ್ತದೆ.

ಆಂಡ್ರೋ ಕಾರ್ನೆಗಿ ಚಿಕ್ಕವನಿದ್ದಾಗಲೇ ಸ್ಕಾಟ್ಲ್ಯಾಂಡ್ ನಿಂದ ಅಮೆರಿಕಾಗೆ ಬಂದು ನೆಲೆಸಿದವ. ತನಗೆ ದೊರೆತ ಕೆಲಸಗಳನ್ನೆಲ್ಲ ಮಾಡುತ್ತಾ, ಅಗಾಧ ಅನುಭವ ಗಳಿಸಿದ. ಎದುರಿಸಿದ ನೋವು, ಅವಮಾನ ಎಲ್ಲದರಿಂದಲೂ ಪಾಠ ಕಲಿತು, ಘಟನೆಗಳ ಸುಂದರ ಮುಖವನ್ನು ಅನಾವರಣಗೊಳಿಸುವ ಪ್ರಯತ್ನದಲ್ಲೇ ಮುನ್ನಡೆದ. ಮುಂದೆ ಅಮೆರಿಕದಲ್ಲಿಯೇ ಅತಿ ದೊಡ್ಡ ಸ್ಟೀಲ್ ತಯಾರಿಕಾ ಕಂಪನಿಯ ಮಾಲೀಕನಾದ. ಕೆಲಕಾಲ ಅನೇಕ ಲಕ್ಷಾಧಿಪತಿಗಳು ಈತನಿಗಾಗಿ ಕೆಲಸ ಮಾಡಿದ್ದಿದೆ. ಹಲವಾರು ಜನರಿಗೆ ಉದ್ಯೋಗ ಒದಗಿಸಿದ ಈತನನ್ನು ಸಂದರ್ಶನ ಕಾರರು ''ನೀವು ಜನರೊಂದಿಗೆ ಹೇಗೆ ನಡೆದುಕೊಳ್ಳುತ್ತೀರಿ? ಜನರನ್ನು ಹೇಗೆ ನಿಭಾಯಿಸುತ್ತೀರಿ?'' ಎಂದು ಪ್ರಶ್ನಿಸಿದಾಗ, ಕಾರ್ನೆಗಿ ''ಜನರೊಂದಿಗೆ ವ್ಯವಹರಿಸುವುದೆಂದರೆ ಚಿನ್ನಕ್ಕಾಗಿ ಭೂಮಿಯನ್ನು ಅಗೆದಂತೆ. ಒಂದು ಹಿಡಿ ಚಿನ್ನಕ್ಕಾಗಿ ಟನ್ ಗಟ್ಟಲೆ ಮಣ್ಣು, ಹೊಲಸುಗಳನ್ನು ಅಗೆಯಬೇಕಾಗುತ್ತದೆ. ಆದರೆ ಅಗೆಯುವುದು ಮಣ್ಣನ್ನಲ್ಲ, ಹೊಲಸನಲ್ಲ, ಚಿನ್ನವನ್ನು'' ಎಂದ.

ಎಲ್ಲದರಲ್ಲೂ, ಎಲ್ಲರಲ್ಲೂ ತಪ್ಪುಗಳು ಬಹಳ ಸುಲಭವಾಗಿ ಗೋಚರವಾಗಿ ಬಿಡುತ್ತವೆ. ಆದರೆ ಒಳ್ಳೆಯದನ್ನು ಕಾಣಬೇಕಾದರೆ ಉತ್ಖನನ ನಡೆಸಲೇಬೇಕು. ಆಳಕ್ಕಿಳಿದಾಗ ಮಾತ್ರ ಉತ್ತಮ ಅಂಶಗಳು ಕಾಣಿಸುವುದು. ಚಿನ್ನದ ಶೋಧನೆಗೆ ಇಳಿದಾಗ, ಕೆಲವು ಗ್ರಾಂ ಚಿನ್ನಕ್ಕಾಗಿ ಟನ್ ಗಟ್ಟಲೆ ಮಣ್ಣನ್ನು ಅಗೆಯಬೇಕಾಗುವ ಹಾಗೆ, ಒಬ್ಬ ವ್ಯಕ್ತಿಯಲ್ಲಿ ಒಂದು ಉತ್ತಮ, ಸಕಾರಾತ್ಮಕ ವಿಚಾರವನ್ನು ಹೆಕ್ಕಿ ತೆಗೆಯಲು, ಆ ವ್ಯಕ್ತಿಯ ಹಲವಾರು ನಕಾರಾತ್ಮಕ ಅಂಶಗಳನ್ನು ಕಡೆಗಣಿಸಿ, ಮುಂದಡಿ ಇಡಬೇಕಾಗುತ್ತದೆ. ಚಿನ್ನದೆಡೆಗೇ ಗಮನ ಕೇಂದ್ರೀಕರಿಸಿದಾಗ, ಮಣ್ಣು ನಗಣ್ಯವೆನಿಸಿಬಿಡುತ್ತದೆ. ನಾವೇನನ್ನು ಪಡೆಯುವ ಹಂಬಲದಿಂದ ಕಾರ್ಯೋನ್ಮುಖರಾಗಿರುತ್ತೇವೆಯೋ ಅದನ್ನೇ ಪಡೆಯುತ್ತೇವೆ. ಹುಡುಕಲಾರಂಭಿಸಿದರೆ ತಪ್ಪಿಲ್ಲದ ವ್ಯಕ್ತಿ, ಸನ್ನಿವೇಶಗಳು ಕಂಡುಬರುವುದೇ ಇಲ್ಲ. ಕತ್ತಲನ್ನೇ ಆನಂದಿಸಲು ಸದಾ ದೀಪಗಳನ್ನು ಆರಿಸಿ ಕುಳಿತುಕೊಳ್ಳುವವರಂತೆ ಇಂತಹವರ ಸ್ಥಿತಿ. ಇಂತಹವರು ನೇತ್ಯಾತ್ಮಕ ಪರಿಸ್ಥಿತಿಗೆ ಕಾರಣರಾಗಿ, ಅಂತಹುದೇ ಫಲಿತಾಂಶ ಬರುವಂತೆ ವಾತಾವರಣವನ್ನು ಸೃಷ್ಟಿಸಿ ಬಿಡುತ್ತಾರೆ. ಇಂತಹ ಮನೋಭಾವವನ್ನು ಅಭ್ಯಾಸದಿಂದ ಬದಲಿಸಿಕೊಂಡು, ಸಕಾರಾತ್ಮಕ ನಿಲುವನ್ನು ತಳೆದರೆ, ಹೊರ ಜಗತ್ತಿನ ಬಗ್ಗೆ ನಂಬಿಕೆ ಮೂಡುವುದರೊಂದಿಗೆ, ತಮ್ಮ ಬಗ್ಗೆಯೂ ವಿಶ್ವಾಸವು ವೃದ್ಧಿಸುತ್ತದೆ.

● ಮಾಯಾ ಬಾಲಚಂದ್ರ



ಬದುಕು ಕೇವಲ ಓಟವಲ್ಲ, ಅದೊಂದು ಸುಂದರ ಪಯಣ. ಈ ಪಯಣದ ಪ್ರತಿ ಕ್ಷಣವನ್ನೂ ಆನಂದಿಸೋಣ. ಬದುಕು ಸುಂದರ. ಅದನ್ನು ಆನಂದಿಸಲು ವಿಶ್ರಾಂತಿ ಅನಿವಾರ್ಯ.

ದಿನಚರಿಯಲ್ಲಿ ಇರಲಿ ವಿಶ್ರಾಂತಿ!

● ಲಕ್ಷ್ಮೀಕಾಂತ್ ಎಲ್ ವಿ, ತುಮಕೂರು

ಬದುಕು ಒಂದು ನಿರಂತರ ಓಟ. ಜನನದಿಂದ ಮರಣದವರೆಗೆ ಯಾವುದೋ ಗುರಿ ತಲುಪುವ ತವಕ. ಆದರೆ ಇಂದು ನಮ್ಮ ಬದುಕು ಕೇವಲ ಓಟವಲ್ಲ, ಬದಲಿಗೆ ವೇಗದ ಯಂತ್ರದಂತಿದೆ. ಬೆಳಿಗ್ಗೆಯಿಂದ ರಾತ್ರಿಯವರೆಗೆ ಒಂದೇ ಸಮನೆ ಸಾಗುತ್ತಿರುವ ಈ ನಾಗಾಲೋಟ ತಂತ್ರಜ್ಞಾನ ಮತ್ತು ಡಿಜಿಟಲ್ ಜಗತ್ತಿನ ಕೊಡುಗೆ. ಇಲ್ಲಿ ನಾವು ಅಕ್ಷರಗಳ ನಡುವಿನ ಓಟಗಾರರಲ್ಲ, ಬದಲಾಗಿ ಅಂಕೆಯೊಳಗೆ ಬಂಧಿಯಾಗಿರುವ ಸಂಖ್ಯೆಗಳು. ನಮ್ಮ ಕನಸು, ಕೆಲಸ, ಸಂಬಂಧ ಎಲ್ಲವೂ ಮೊಬೈಲ್ ಪರದೆಯೊಳಗೆ ಸೀಮಿತ. ಒಂದು ಕ್ಷಣವೂ ವಿರಾಮವಿಲ್ಲದ ಈ ಓಟ ನಮ್ಮನ್ನು ಎಲ್ಲಿಗೆ ಕರೆದೊಯ್ಯುತ್ತದೆ ಎಂದು ಯಾರಿಗೂ ತಿಳಿಯದು. ಪ್ರತಿಕ್ಷಣವೂ ನೆಮ್ಮದಿಯ ಹುಟುಕಾಟದಲ್ಲಿ ಬದುಕು ಸಾಗಿಸುತ್ತಿದ್ದೇವೆ.

ನಾವಿಂದು ಬದುಕಿಗಾಗಿ ಓಡುತ್ತಿದ್ದೇವೆ, ಆದರೆ ಬದುಕನ್ನು ಜೀವಿಸುವುದನ್ನೇ ಮರೆತಿದ್ದೇವೆ. ಬೆಳಗಿನ ಆತುರದ ಚಹಾ, ದಿನಪೂರ್ತಿ ಕಂಪ್ಯೂಟರ್ ಮುಂದೆ ಕೆಲಸ, ರಾತ್ರಿ ಸಾಮಾಜಿಕ ಜಾಲತಾಣಗಳ ನಡುವೆ ಕಳೆದುಹೋಗುವುದು, ಇದೇ ನಮ್ಮ ದೈನಂದಿನ ಚಿತ್ರಣ. ಪ್ರತಿಯೊಬ್ಬರೂ ಒಂದಲ್ಲ ಒಂದು ಬಗೆಯ ಓಟದಲ್ಲಿ ಬ್ಯುಸಿಯಾಗಿದ್ದಾರೆ. ಯಾರಿಗೂ ಇನ್ನೊಬ್ಬರ ಮಾತನ್ನು ಕೇಳಲು, ಹಸಿರು ಮರಗಳ ನಡುವೆ ಒಂದಿಷ್ಟು ಹೊತ್ತು ಕುಳಿತುಕೊಳ್ಳಲು, ಅಂಗಳದಲ್ಲಿ ಅರಳಿದ ಹೂವಿನ ಸೌಂದರ್ಯವನ್ನು ಆಸ್ವಾದಿಸಲು ಸಮಯವಿಲ್ಲ. ಈ ವೇಗದ ಬದುಕಿನಲ್ಲಿ ನಾವು ಹಣ, ಅಧಿಕಾರ, ಹೆಸರುಗಳ ಬೆನ್ನಟ್ಟಿದ್ದೇವೆ. ಆದರೆ, ಈ ಓಟದಲ್ಲಿ ಕಳೆದುಕೊಳ್ಳುತ್ತಿರುವುದು ನಮ್ಮ ನೆಮ್ಮದಿ, ಆರೋಗ್ಯ ಮತ್ತು ಸಂತೋಷವನ್ನು.

ಹಿಂದಿನ ಕಾಲದಲ್ಲಿ ಬದುಕಿನಲ್ಲಿ ಒಂದು ಸಹಜ ಗತಿಯಿತ್ತು. ಬದುಕು ನಿಧಾನವಾಗಿ ಸಾಗುತ್ತಿತ್ತು, ಆದರೆ ಅದರಲ್ಲಿ ಒಂದು ಆಳವಾದ ಸಂತೋಷವಿತ್ತು. ಸಂಜೆಯಾಗುತ್ತಿದ್ದಂತೆ ಮನೆಯಲ್ಲಿ ಒಂದಿಷ್ಟು ಹೊತ್ತು ತಾತ-ಅಜ್ಜಿಯರ ಜೊತೆ ಕಥೆ ಕೇಳುವುದು, ಹಳ್ಳಿಯ ದೇಗುಲದ ಮುಂದೆ ಗೆಳೆಯರ ಜೊತೆ ಆಟವಾಡುವುದು, ಇವೆಲ್ಲವೂ ಬದುಕಿನ ವಿರಾಮದ ಭಾಗವಾಗಿತ್ತು. ಆದರೆ ಇಂದು ನಮ್ಮ ವಿರಾಮದ ವ್ಯಾಖ್ಯಾನವೇ ಬದಲಾಗಿದೆ. ವಿರಾಮ ಎಂದರೆ ಮೊಬೈಲ್‌ನಲ್ಲಿ ಆಟ ಆಡುವುದು ಅಥವಾ ಸೋಷಿಯಲ್ ಮೀಡಿಯಾದಲ್ಲಿ ರೀಲ್ಸ್ ನೋಡುವುದು. ಇದು ನಿಜವಾದ ವಿರಾಮವಲ್ಲ, ಇದು ಇನ್ನೊಂದು ಬಗೆಯ ಮಾನಸಿಕ ಒತ್ತಡದ ರೂಪ. ನಮ್ಮ ಮೆದುಳಿಗೆ ವಿಶ್ರಾಂತಿ ಕೊಡುವ ಬದಲು, ಇನ್ನಷ್ಟು ಒತ್ತಡ ಹೇರುವ ಕೆಲಸ.

ವಿಶ್ರಾಂತಿ ಏಕೆ ಬೇಕು?

ನಮ್ಮ ಹಿರಿಯರು ಹೇಳಿದಂತೆ, ದಣಿದಾಗ ವಿಶ್ರಾಂತಿ ಪಡೆ, ಅದು ಹೊಸ ಶಕ್ತಿಯನ್ನು ನೀಡುತ್ತದೆ. ಇದು ಕೇವಲ ದೇಹಕ್ಕೆ ಅನ್ವಯಿಸುವುದಿಲ್ಲ, ನಮ್ಮ ಮನಸ್ಸಿಗೂ ಅನ್ವಯಿಸುತ್ತದೆ. ಬದುಕಿಗೊಂದು ಬ್ರೇಕ್ ತೆಗೆದುಕೊಳ್ಳುವುದು ಎಂದರೆ, ನಮ್ಮ ಕೆಲಸದಿಂದ ಅಥವಾ ಜಂಜಾಟಗಳಿಂದ ದೂರ ಹೋಗುವುದು ಎಂದಲ್ಲ, ಬದಲಾಗಿ ನಮ್ಮನ್ನು ನಾವು ಪುನಃ ಕಂಡುಕೊಳ್ಳುವುದು, ನಮ್ಮನ್ನು ರೀಚಾರ್ಜ್ ಮಾಡಿಕೊಳ್ಳುವುದು ಎಂದರ್ಥ. ನಾವು ಮಾಡುವ ಕೆಲಸದ ಬಗ್ಗೆ, ನಮ್ಮ ಗುರಿಗಳ ಬಗ್ಗೆ, ನಮ್ಮ ಬದುಕಿನ ಬಗ್ಗೆ ಒಂದು ಮರು ಚಿಂತನೆ ನಡೆಸಲು ಸಿಗುವ ಸಮಯವೇ ಈ ವಿರಾಮ. ಒಂದು ವಾರಾಂತ್ಯದ ರಜೆಯಲ್ಲಿ ನಿಸರ್ಗದ ಮಧ್ಯೆ ಒಂದಿಷ್ಟು ಸಮಯ ಕಳೆಯಬಹುದು, ಅಥವಾ ದೂರದ ಪ್ರವಾಸಕ್ಕೆ ಹೋಗಬಹುದು. ಇದು ನಮ್ಮ ಮನಸ್ಸಿಗೆ ಒಂದು ಹೊಸ ಚೈತನ್ಯವನ್ನು ನೀಡುತ್ತದೆ. ಕಡಲ ತೀರದಲ್ಲಿ ನಿಂತು ಅಲೆಗಳ ಆರ್ಭಟವನ್ನು ಕೇಳಬಹುದು, ಬೆಟ್ಟಗಳ ಮೇಲೆ ನಡೆದು ಹೊಸ ಹಾದಿಯನ್ನು ಕಂಡು ಕೊಳ್ಳಬಹುದು. ಈ ಸಮಯದಲ್ಲಿ ನಾವಿರುವುದನ್ನು ಮರೆಯುತ್ತೇವೆ. ಮೊಬೈಲ್, ಇಂಟರ್ನೆಟ್, ಸಾಮಾಜಿಕ ಜಾಲತಾಣಗಳಿಂದ ದೂರವಿರಲು ಪ್ರಯತ್ನಿಸುವುದು ಮುಖ್ಯ.

ಧ್ಯಾನ ಮೌನ

ನಮ್ಮ ದೈನಂದಿನ ಜೀವನದಲ್ಲಿ ವಿರಾಮವನ್ನು ಸೇರಿಸಿಕೊಳ್ಳುವುದು ಹೇಗೆ? ಒಂದು ಸಣ್ಣ ಉದಾಹರಣೆ. ಪ್ರತಿ ದಿನ ಬೆಳಿಗ್ಗೆ ಎದ್ದ ಕೂಡಲೇ ಫೋನ್ ನೋಡುವ ಬದಲು, ಒಂದು ಹತ್ತು ನಿಮಿಷ ಧ್ಯಾನ ಮಾಡುವುದು, ಅಥವಾ ಬಿಸಿಲು ಬೀಳುವ ಕಿಟಕಿಯ ಬಳಿ ಕುಳಿತು ಕಪ್ ಕಾಫಿ ಕುಡಿಯುವುದು. ಇದು ದಿನದ ಆರಂಭಕ್ಕೆ ಒಂದು ಉತ್ತಮ ವಿರಾಮದ ಸೂಚನೆ. ಕೆಲಸದ ನಡುವೆ ಸಣ್ಣ ವಿರಾಮಗಳನ್ನು ತೆಗೆದುಕೊಳ್ಳಿ, ಸಹೋದ್ಯೋಗಿಗಳ ಜೊತೆ ಮಾತನಾಡಿ, ಒಂದಿಷ್ಟು ನಕ್ಕು ನಲಿದು ಮತ್ತೆ ಕೆಲಸಕ್ಕೆ ಮರಳಿ.



ಸಂಜೆಯ ಹೊತ್ತು ಮನೆಯಲ್ಲಿ ಕುಟುಂಬದ ಸದಸ್ಯರ ಜೊತೆ ಟಿ.ವಿ. ನೋಡುವ ಬದಲು ಮಾತನಾಡಿ, ಒಂದು ನಡಿಗೆಗೆ ಹೋಗಿ. ಇದು ಬದುಕಿಗೆ ಒಂದು ಬ್ರೇಕ್, ಒಂದು ಹೊಸ ಚೈತನ್ಯ. ವಿರಾಮ ಎಂದರೆ ಸೋಮಾರಿತನವಲ್ಲ, ಬದಲಾಗಿ ನಮ್ಮ ಮೆದುಳಿಗೆ ವಿಶ್ರಾಂತಿ ಕೊಟ್ಟು ಹೊಸ ಆಲೋಚನೆಗಳಿಗೆ ಜಾಗ ಮಾಡಿಕೊಡುವುದು. ನಾವು ನಿಲ್ಲಿಸಿದಾಗ ಮಾತ್ರ, ನಾವು ಎಲ್ಲಿಂದ ಬಂದಿದ್ದೇವೆ, ಮತ್ತು ಎಲ್ಲಿಗೆ ಹೋಗು ತ್ತಿದ್ದೇವೆ ಎಂಬುದನ್ನು ತಿಳಿಯಲು ಸಾಧ್ಯ. ವೇಗವಾಗಿ ಓಡುವಾಗ ನಾವು ಕೇವಲ ನೆಲದ ಮೇಲಿನ ಬಂಡೆಗಳನ್ನು ಮಾತ್ರ ನೋಡುತ್ತೇವೆ, ಆದರೆ ನಿಂತು ನೋಡಿದಾಗ ಇಡೀ ಭೂಮಿಯ ಸೌಂದರ್ಯವನ್ನು ಆಸ್ವಾದಿಸಲು ಸಾಧ್ಯ. ಹಾಗಾಗಿ, ಬದುಕಿನ ನೆಮ್ಮದಿಗಾಗಿ ಹುಡುಕಾಟ ನಡೆಸುವ ಹಾದಿಯಲ್ಲಿ ಸಣ್ಣದೊಂದು ಬ್ರೇಕ್ ಇರಲಿ. ಆ ಬ್ರೇಕ್‌ನಲ್ಲಿ ನಮ್ಮನ್ನು ನಾವು ಮತ್ತೊಮ್ಮೆ ಕಂಡುಕೊಳ್ಳೋಣ. ಬದುಕು ಕೇವಲ ಓಟವಲ್ಲ, ಅದೊಂದು ಸುಂದರ ಪಯಣ. ಈ ಪಯಣದ ಪ್ರತಿ ಕ್ಷಣವನ್ನೂ ಆನಂದಿಸೋಣ. ಬದುಕು ಸುಂದರ. ಅದನ್ನು ಆನಂದಿಸಲು ಬ್ರೇಕ್ ಅನಿವಾರ್ಯ.

ಅರೆರೆರೆ ಗಿಣಿರಾಮ!

● ಅರುಂಧತಿ ಮಧ್ಯಸ್ಥ, ಸಾಲಿಗ್ರಾಮ

ಇದು ನಮ್ಮ ಮನೆಯ ಪೇರಳೆ ಮರದಲ್ಲಿನ ಕಾಯಿ, ಹಣ್ಣುಗಳನ್ನು ತಿನ್ನಲು ಗಿಳಿಗಳು ಬಂದಾಗಲೆಲ್ಲಾ ನಾನು ಗುನುಗೋ ಹಾಡು 'ಅರರೆ ಗಿಣಿರಾಮ!'. 3–4 ಪ್ರಭೇದದ ಗಿಳಿಗಳು ಬರುತ್ತಾವಾದರೂ, ನನ್ನನ್ನು ಆಕರ್ಷಿಸಿದ್ದು ಚಿಟ್ಟು ಗಿಳಿ. ಇದನ್ನು ಚುಟ್ಟು ಗಿಳಿ, ನೇತಾಡುವ ಗಿಳಿ ಎಂದೂ, ಆಂಗ್ಲ ಭಾಷೆಯಲ್ಲಿ ಲೋರಿಕೀಟ್, ವರ್ನಲ್ ಹ್ಯಾಂಗಿಂಗ್ ಪ್ಯಾರಟ್ ಎಂದೂ ಕರೆಯುತ್ತಾರೆ. ಕೊಂಬೆಯಿಂದ ಕೊಂಬೆಗೆ ಹಾರಿ, ಆಹಾರ ಹುಡುಕುವ ಬಗೆ, ಆಹಾರ ಸಿಕ್ಕಿದೊಡನೆ ಅತ್ತಿತ್ತ ನೋಡಿಕೊಂಡು ತಿನ್ನುವ ಪರಿ, ಮನಸ್ಸಿಗೆ ಮುದ ನೀಡುತ್ತದೆ. ಇವುಗಳು ಒಂದೆಡೆಯಿಂದ ಇನ್ನೊಂದೆಡೆಗೆ ನಡೆದಾಡುವುದೇ ಬಲು ಚೆಂದ.

ಈ ಗಿಳಿಗಳಿಗೂ ನಮಗೂ ಈ ನಂಟು ಬೆಸೆಯಲು ಕಾರಣವಾಗಿದ್ದು ನಮ್ಮ ಮನೆಯ ಪೇರಳೆ ಮರ. ನನ್ನ ಅಮ್ಮನಿಗೆ ಪಕ್ಷಿಗಳು ಹಣ್ಣು, ಕಾಯಿ ತಿಂದರೆ

ಪ್ರತಿ ಮಳೆಗಾಲದಲ್ಲಿ ತಪ್ಪದೇ ಹಾಜರಾಗುವ ಈ ಗಿಳಿಗಳು, ತಮ್ಮ ಬಣ್ಣ, ಗಾತ್ರ, ವರ್ತನೆಯಿಂದಲೇ ಮನಸೋಲಿಸಬಲ್ಲವು. 5–6 ಇಂಚು ಉದ್ದ, ಚಿಕ್ಕ ಬಾಲ, ಸುಂದರ ಕಣ್ಣುಗಳು, ಹಸಿರು ಬಣ್ಣದ ದೇಹ, ಕಿತ್ತಳೆ ಬಣ್ಣದ ಕೊಕ್ಕು, ಕೆಂಬಣ್ಣದ ಹಿಂಭಾಗ ಇವು ಈ ಚಿಟ್ಟು ಗಿಳಿಯ ಸಾಮಾನ್ಯ ಲಕ್ಷಣಗಳು.

ಬಾವಲಿಯಂತೆ ತಲೆಕೆಳಗಾಗಿ ತಲೆಕೆಳಗಾಗಿ ಕುಳಿತುಕೊಳ್ಳುವ ಹಾಗೂ ಆಹಾರ ಸೇವಿಸುವ ಕಾರಣದಿಂದಲೇ ಇವು ಇತರ ಗಿಳಿಗಳಿಗಿಂತ ಭಿನ್ನ!

ಚಿಟ್ಟು ಗಿಳಿಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುವುದು ಕಷ್ಟದ ಕೆಲಸವೇ; ಕಾರಣ, ಇವುಗಳ ಚುರುಕಾದ ಹಾರಾಟ. ಎಲೆಹಸಿರ ಬಣ್ಣದವುಗಳೇ ಆಗಿರುವುದರಿಂದ, ಈ ಗಿಳಿಗಳನ್ನು ಎಲೆಗಳ ಮಧ್ಯೆ ಹುಡುಕುವುದೂ ಒಂತರಹದ ಸೋಜಿಗದಾಟ. ಸಣ್ಣಗೆ ಮಳೆ ಹನಿಯುತ್ತಿರುವಾಗ, ಇವುಗಳು ಪರವಾಗಿಲ್ಲ, ಆದರೆ ಅದಕ್ಕಿಂತಲೂ ಹೆಚ್ಚು ಇಷ್ಟ ಹಣ್ಣುಗಳನ್ನು ಕೊಯ್ದು, ಬೇರೆಯವರಿಗೆ ಕೊಡುವುದು. ಅವರು ಯಾರಾದರೂ ಸರಿ! ಕೊಡುವುದು ಅವಳ ಖುಷಿಗಾಗಿ ಅಥವಾ ಯಾರೋ ಆಸೆಪಟ್ಟರೆಂದು! ಅಕ್ಕ ಹಾಗೂ ನಾನು ಇದನ್ನು ಸಹಿಸೆವು.

ಈ ಪೇರಳೆ ಹಣ್ಣುಗಳು, ಕಳ್ಳತನವಾಗಿ, ಬೇರೆ ಮನುಷ್ಯರ ಪಾಲಾಗುವ ಬದಲು, ಈ ಗಿಳಿಗಳಂಥ ಮುಗ್ಧ ಜೀವಿಗಳ ಪಾಲಾಗಲಿ, ಹಣ್ಣು ಕಾಯಿಗಳ ಮೇಲೆ ನಮಗೆಷ್ಟು ಹಕ್ಕಿದೆಯೋ ಅವು ಗಳಿಗೂ ಅಷ್ಟೇ ಇದೆ; ಅವುಗಳ ಪಾಲನ್ನು ಅವುಗಳೇ ತಿನ್ನಲಿ ಎನ್ನುವುದು ನಮ್ಮ ಆಶಯ. ಯೋಚಿಸಿದರೆ ಎರಡೂ ಸರಿಯೇ! ಪ್ರತಿ ಮಳೆಗಾಲದಲ್ಲೂ ಗಿಳಿಗಳ ಸುತ್ತ ಈ ದ್ವಂದ್ವ ಆಗುತ್ತಲೇ ಇರುತ್ತವೆ. ಆದಾಗ್ಯೂ ಪ್ರತಿ ಬಾರಿ ಅವುಗಳು ಬಂದಾಗ ಮನಸ್ಸು ಅರಳುತ್ತದೆ; ಮತ್ತೆ ಅದೇ ಹಾಡು ನೆನಪಾಗಿ ಗುನುಗುತ್ತೇನೆ... ಅರೆರೆರೆ ಗಿಣಿರಾಮ.

ಖನಿಜಾಂಶಗಳ ಆಗರ

ನಮ್ಮ ರಾಜ್ಯದ ಕರಾವಳಿಯವರಿಗೆ ಹೆಚ್ಚು ಪರಿಚಿತವಿರುವ, ಬಸಳೆ ಸೊಪ್ಪಿನ ಮಹತ್ವ ಹೆಚ್ಚಿನವರಿಗೆ ತಿಳಿದಿಲ್ಲವೆಂದೇ ಹೇಳಬೇಕು. ಬಸಳೆಯಲ್ಲಿ ನಾರಿನ ಅಂಶದ ಜತೆಯಲ್ಲೇ, ಹಲವು ಪೌಷ್ಟಿಕಾಂಶಗಳು, ಖನಿಜಾಂಶಗಳಿವೆ.

- ವಿಟಮಿನ್ ಎ ಅಧಿಕ ಪ್ರಮಾಣದಲ್ಲಿದೆ. ಇದರಿಂದ ರೋಗ ನಿರೋಧನ ಶಕ್ತಿ ಹೆಚ್ಚುತ್ತದೆ.
- ವಿಟಮಿನ್ ಸಿ ಸಹ ಬಸಳೆ ಸೊಪ್ಪಿನಲ್ಲಿದೆ. ಇದು ಉತ್ತಮ ಆ್ಯಂಟಿ ಆಕ್ಸಿಡೆಂಟ್.
- ವಿಟಮಿನ್ ಬಿ ಕಾಂಪ್ಲೆಕ್ಸ್, ಕಬ್ಬಿಣ, ಕ್ಯಾಲ್ಸಿಯಂ, ಪೊಟಾಶಿಯಂ, ಗಂಧಕದ ಅಂಶಗಳೂ ಇದರಲ್ಲಿವೆ.

ನಮ್ಮ ಆಸೆಗಳಿಗೆ ಮಿತಿ ಇರಬೇಕು

ಹಾಸ್ಯಗಾರನೊ ಬೊಮ್ಮ; ವಿಕಟ ಪರಿಹಾಸವದು
ಆಸ್ಯ ಗಂಭೀರ; ಬೆರಲಿಂದ ಚಕಳಗುಳಿ
ವಿಶ್ವಾಸದುಪಚಾರ; ಹುಣಿಸೆಮೆಣಸಾಹಾರ
ವಿಶ್ವಪಾಲನೆಯಿಂತು – ಮಂಕುತಿಮ್ಮ ॥

ಕಾಣದೆಲ್ಲೋ ಕುಳಿತು, ನಮ್ಮೆಯ ಎಲ್ಲಾ ಆಟಗಳನ್ನು ನೋಡುತ್ತಾ ಸಂತೋಷ ಪಡುವವನು ನಮ್ಮನ್ನು ಸೃಷ್ಟಿಸಿದ ಆ ಸೃಷ್ಟಿಕರ್ತ. ಮೇಲ್ನೋಟಕ್ಕೆ ಅವನು ಗಂಭೀರವಾದಂತೆ ಕಂಡರೂ ಆತನು ತನ್ನ ಖುಷಿಗೆ, ತನ್ನ ವಿನೋದಕ್ಕೆ ನಮಗೆ ಬೆರಳಿಂದ ಕಚಗುಳಿ ಇಟ್ಟು ತನಗೆ ಬೇಕೆನಿಸಿದಂತೆ ಆಡಿಸುತ್ತಾ ಸಂತೋಷ ಪಡುವ ಅವನು ವಿಕಟಹಾಸ್ಯಗಾರನೂ ಹೌದು. ಅವನ ಲೀಲಾವಿನೋದ ಹೇಗೆಂದರೆ ವಿಶ್ವಾಸದುಪಚಾರಕ್ಕಾಗಿ ಕರೆದು ಊಟ ಮಾಡಿ ಬಡಿಸುವಾಗ ಹೆಚ್ಚು ಖಾರ, ಹುಳಿ ಸೇರಿಸಿದಂತೆ ಸುಖ ನೀಡಿದೆನೆಂದು ನಾವೆಂದೆಣಿಸಿದಾಗ ನಮಗೆ ಕಷ್ಟ ನಷ್ಟಗಳನ್ನು ನೀಡಿ ನಮ್ಮನ್ನು ಗಾಣದಲ್ಲಿ ಕಬ್ಬನ್ನು ಅರೆದಂತೆ ಅರೆಯುತ್ತಾನೆ. ಅವನ ವಿಶ್ವಪಾಲನೆಯ ಕಥೆಯೂ ಇಷ್ಟೇ ಆಗಿದೆ ಎಂದು ಈ ಪದ್ಯದಲ್ಲಿ ಹೇಳಿದ್ದಾರೆ.

ಆ ಸೃಷ್ಟಿಕರ್ತನದು ಬುದ್ಧಿವಂತ ನಡೆಯಾಗಿದೆ. ಆತನು ಕಣ್ಣಿಗೆ ಕಾಣಿಸದೆ, ನಮ್ಮಗಳ ಕೈಗೂ ಸಿಗದೆ ದೂರದಲ್ಲೆಲ್ಲೋ ಕುಳಿತುಕೊಂಡು, ಆತನೇ ಈ ಜಗದ ಸೂತ್ರಧಾರನಾಗಿ ನಮ್ಮನ್ನು ಪಾತ್ರಧಾರಿಗಳನ್ನಾಗಿ ಮಾಡಿ ಆಟ ಆಡಿಸುತ್ತಲಿದ್ದಾನೆ. ಆತನು ತನ್ನ ನಡೆಯನ್ನು ಮೇಲ್ನೋಟಕ್ಕೆ ಗಂಭೀರವಾ ದಂತೆ ಇರಿಸಿಕೊಂಡರೂ ಸಹ ಆತನು ಹಾಸ್ಯ ಗಾರನೇ ಆಗಿದ್ದಾನೆ. ತನಗೆ ಬೇಕಾದ ಹಾಸ್ಯಕ್ಕಾಗಿ ಆತನು ವಿಕಟಪರಿಹಾಸವನ್ನು ಸೃಷ್ಟಿಸುತ್ತಾ ನಮ್ಮನ್ನು ಕಷ್ಟದೊಡಲಿಗೆ ದೂಡಿ, ಆಗ ನಾವಾ ಡುವ ಆಟವನ್ನ ನೋಡುತ್ತಾ ಆತನು ಸಂಭ್ರಮಿ ಸುತ್ತಲಿರುತ್ತಾನೆ. ಆತನು ಗಂಭೀರನಾದರೂ ಸಹ ಈ ಸಮಯ, ಸಂದರ್ಭಗಳು ಹಾಗೂ ಮನುಷ್ಯನ ಮನದಲ್ಲಿ ಆಸೆಗಳ ಹೂರಣವನ್ನು ಇಟ್ಟು, ಮನುಷ್ಯನು ಆ ಆಸೆಗಳ ನೇವರಿಸುವ ಸಮಯ ಸಂಧರ್ಭಗಳಲ್ಲಿ ಪಡುವ ಕಷ್ಟಗಳು, ಉಣ್ಣುವ ಪಡಿಪಾಟಲುಗಳನ್ನು ನೋಡುತ್ತಾ ನಗುತ್ತಲಿರು ತ್ತಾನೆ – ಇನ್ನೇನು ಸಿಹಿ ತಿಂಡಿಯು ನಾಲಿಗೆಗೆ ಸಿಕ್ಕೇಬಿಟ್ಟಿತು ಎಂದುಕೊಂಡರೆ ಆ ಸಿಹಿ ತಿಂಡಿಯು ನಾಲಿಗೆಗೆ ಎಟಕದೆ ಇದ್ದು, ಇದರಿಂದ ನಾವು ಬೇಸರ ಮಾಡಿಕೊಳ್ಳುವ ರೀತಿ.

ಹೀಗೆ ಆ ಸೃಷ್ಟಿಕರ್ತನು ನಮಗೆ ಎಲ್ಲವೂ ಸಿಕ್ಕೇಬಿಟ್ಟಿತು ಎಂಬ ಆಸೆಯನ್ನು ಹುಟ್ಟಿಸಿ ಕೊನೆಗೆ ಸಿಗದಂತೆ ಮಾಡುವ ಆಟವು ನಮಗೊಂದು ರೀತಿಯಲ್ಲಿ ಬೆರಳಾಡಿಸಿ ಕಚಗುಳಿ ಇಟ್ಟಂತೆಯೇ ಆಗಿರುತ್ತದೆ. ಆತನು ಅದೆಷ್ಟು ಆಸೆಗಳನ್ನು ನಮ್ಮ ಮನದಲ್ಲಿಟ್ಟು ಆಟ ಆಡಿಸುತ್ತಾನೆಂದರೆ ನಮಗೆ ವಿಶ್ವಾಸವನ್ನಿರಿಸಿ, ಮೃಷ್ಟಾನ್ನ ಭೋಜನಕ್ಕೆ ಆಹ್ವಾನಿಸಿ, ಊಟವನ್ನು ಸಹ ಬಡಿಸುತ್ತಾನೆ. ಆದರೆ ಊಟ ಮಾಡುವಾಗಲೇ ನಮಗೆ ಆತನು ಬಡಿಸುವ ಊಟದಲ್ಲಿ ಹುಳಿಯೋ, ಖಾರವೋ, ಉಪ್ಪೋ ಜಾಸ್ತಿ ಇದ್ದು ಅದನ್ನು ಅನುಭವಿಸಲು ಸಾಧ್ಯವಾಗದಂತೆ ನೋಡಿಕೊಳ್ಳುತ್ತಾನೆ. ಅಂದರೆ ನಮಗೆ ಎಲ್ಲವನ್ನೂ ಕೊಡುತ್ತಾನೆ ಅದರಲ್ಲಿ ಏನಾದರೊಂದು ಸಮಸ್ಯೆಯನ್ನು ತಂದೊಡ್ಡಿರುತ್ತಾನೆ. ಇದನ್ನೇ ತಾನೇ ಆಟ ಎನ್ನುವುದು. ಎಲ್ಲವೂ ಸುಲಭವಾಗಿ, ಸುಲಲಿತವಾಗಿ ದೊರೆತರೆ ಆ ಆಟದಲ್ಲಿ ಸೊಬಗು ಎಂಬುದು ಏನಿರುತ್ತದೆ ಅಲ್ಲವೇ? ಹಾಗಿಯೇ ಈ ಪದ್ಯದಲ್ಲಿ ಆ ಸೃಷ್ಟಿಕರ್ತನನ್ನು ವಿಕಟ ಹಾಸ್ಯಗಾರನೋ ಪರಬೊಮ್ಮ ಎಂದು ಕರೆದಿರುವುದು. ಎಲ್ಲವೂ ದೊರೆಯುವಂತೆ ಮಾಡಿ, ಅವು ಗಳನ್ನ ಪಡೆ ಯುವಲ್ಲಿ ನಾವು ಬೀಳುವ ಕಷ್ಟ, ಪಡಿಪಾಟಲುಗಳನ್ನು ನೋಡಿ ಆ ಭಗವಂತ ಹಾಸ್ಯ ದಿಂದ ನಗುತ್ತಿರುತ್ತಾನೆ ಎಂಬುದನ್ನು ಈ ಪದ್ಯದಲ್ಲಿ ಪೂಜ್ಯ ಡಿವಿಜಿಯವರು ಹೇಳಿದ್ದಾರೆ.

ಈ ಮನುಷ್ಯನೋ ಮೊದಲಿಗೆ ಅಂಬಲಿ ದೊರೆತರೆ ಸಾಕೆಂದು ಕೊಂಡವನು ನಂತರ ಉಪ್ಪನ್ನು ಬಯಸುತ್ತಾನೆ, ನಂತರ ಪಚ್ಚೆ ಕೇಸರಿ ಬಯಸುತ್ತಾನೆ, ನಂತರ ಮಣ್ಣು, ಹೊನ್ನು, ಹೆಣ್ಣು ಬೇಕೆಂದು ಬಯಸುತ್ತಾನೆ. ಒಂದು ಆಸೆಗೆ ಮತ್ತೊಂದು ಆಸೆಯೇ ಏಣಿಯಾಗಿ ಈತನ ಮನ ದಲ್ಲಿ ಆಸೆಯು ಎಂದಿಗೂ ಬತ್ತದ ಹೆಡೆ ಬಿಚ್ಚಿದ ನಾಗರನಾಗಿ ಭೋರ್ಗರೆಯುತ್ತಲೇ ಇರುತ್ತದೆ. ಮನುಷ್ಯನ ಈ ಒಂದು ಗುಣವೇ ಆ ಭಗವಂತ ನಿಗೆ ಮನರಂಜನೆ ನೀಡುವ ಹಾಸ್ಯವೇ ಆಗಿರು ತ್ತದೆ. ಮನುಷ್ಯನಿಗೆ ಈ ಗುಣವನ್ನು ಆ ಪರ ಮೊಮ್ಮನು ಇಟ್ಟಿದ್ದಾರೂ ಏಕೆಂದರೆ ಅದು ಅವನ ಸಂತೋಷಕ್ಕಲ್ಲದೆ ಮನುಷ್ಯನ ಸಂತೋಷ ಕ್ಕಲ್ಲವೇ ಅಲ್ಲ. ಇಲ್ಲಿನ ಜಗದ್ವಾಪಾರ ಮುಗಿದ ಕೂಡಲೇ ಎಲ್ಲವನ್ನೂ ಇಲ್ಲಿಯೇ ತ್ಯಜಿಸಿ ಹೋಗಬೇಕು ಎಂಬ ಸತ್ಯ ಸಂಗತಿಯ ಅರಿವು ನಮಗಿದ್ದರೂ ಉಸಿರಿರುವ ತನಕ ನಮಗೆ ಎಲ್ಲವೂ ಬೇಕು. ಇದು ಆ ಪರಬೊಮ್ಮನ ಆಟ ವಲ್ಲದೆ ಮತ್ತೇನೂ ಅಲ್ಲವೇ ಅಲ್ಲ. ಆ ಭಗವಂತನ ಖುಷಿಗೆ ನಮ್ಮ ಜೀವನ ಸಾಗುತ್ತಿದೆಯೇ ಹೊರತು, ನಮ್ಮಗಳ ಖುಷಿ, ಸುಖ, ಸಂತೋಷ ಇವುಗಳೆಲ್ಲವೂ ಕ್ಷಣಿಕವಾದವುಗಳು ಎಂಬುದು ಈ ಪದ್ಯವು ಹೇಳುತ್ತದೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಅವನು ವ್ಯಕ್ತಪಡಿಸಿದ ಸಂದೇಹ (4)
5. ನಿರಂತರದಲ್ಲಿ ನಡುವೆ ಮದುವೆಯ ಗಂಡೂ ಇದ್ದಾನೆ (5)
6. ಸಮಯದಂತೆ ಕಾಣುವ ಗಡುವು (3)
8. ಇನ್ನೊಬ್ಬ ಸೂರ್ಯ (2)
9. ಮೂವತ್ತು ದಿನಗಳ ಸಮಯ, ತಿಂಗಳು (2)
10. ಸುಲಭವಲ್ಲದುದು ಅಥವಾ ದಟ್ಟವಾದುದು (3)
13. ಗೆದ್ದವರಿಗೆ ಸಿಗುವ ಬಿಲ್ಲೆ (3)
14. ನೀರಿನ ಬಿಂದು (2)
15. ತಂತಿ ವಾರ್ತೆ (2)
17. ಸಮುದ್ರ ಜೀವಿಯಿಂದ ಉತ್ಪನ್ನವಾಗುವ ಕಠಿಣ ಪದಾರ್ಥ (3)
19. ಸಣ್ಣ ಬಟ್ಟಲುಗಳಲ್ಲಿ ನೀರು ತುಂಬಿ ಬಾರಿಸುವ ವಾದ್ಯ (5)
21. ಸರದ ನಡುವೆ ಸಿಲುಕಿದೆ ನೆರವು (4)

ಮೇಲಿಂದ ಕೆಳಕ್ಕೆ

1. ಎರಡಕ್ಷರದ ಕಣ್ಣು (2)
2. ಮನುಷ್ಯನಿಗೆ ಮತ್ತೊಂದು ಹೆಸರು (3)
3. ನಯವಾಗಿಯೇ ಬಂದಿದೆ ನಮ್ರತೆ (3)
4. ನೂರು ವರ್ಷಗಳ ಅವಧಿ (4)
6. ತರ್ಜುಮೆ (4)
7. ಸೊಕ್ಕು (3)
11. ಸಂಪು (4)
12. ಹತ್ತಿರ, ಸಮೀಪ (3)
13. ಸುತ್ತಲಿನ ಮಂದಿ (4)
16. ನೆಲದಲ್ಲಿನ ಗುಪ್ತ ಮಾರ್ಗ (3)
18. ಚಿನ್ನದ ನಾಣ್ಯ (3)
20. ಮೆಣಸಿನ ರುಚಿ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಅನುಮಾನ 5. ಅನವರತ 6. ಅವಧಿ 8. ಭಾನು 9. ಮಾಸ 10. ಗಹನ 13. ಪದಕ 14. ಹನಿ 15. ತಾರು 17. ಹವಳ 19. ಜಲತರಂಗ 21. ಸಹಕಾರ

ಮೇಲಿಂದ ಕೆಳಕ್ಕೆ
1. ಅಕ್ಷಿ 2. ಮಾನವ 3. ವಿನಯ 4. ಶತಮಾನ 6. ಅನುವಾದ 7. ಧಿಮಾಕು 11. ಹರತಾಳ 12. ಸನಿಹ 13. ಪರಿಜನ 16. ಸುರಂಗ 18. ವರಹ 20. ಖಾರ

ಕೃಷ್ಣನ ಕೈಯಲ್ಲಿ ಕೊಳಲಾದ ಬಿದಿರು

ಅನೇಕ ದಂತ ಕಥೆಗಳಲ್ಲಿ ಕೃಷ್ಣನ ಕೈಗೆ ಬಂದ ಕೊಳಲಿನ ಮತ್ತೊಂದು ಕಥೆ ಇದು. ಒಮ್ಮೆ ಕೃಷ್ಣ ಬಿದಿರಿನ ಗಿಡದ ಬಳಿಗೆ ಹೋದನು. ಸೂಕ್ಷ್ಮವಾಗಿದ್ದ ಬಿದಿರಿನ ಗಿಡವು ಕೃಷ್ಣನ ಪ್ರೀತಿಯ ಆಗಮನವನ್ನು ಅರಿತು ಅವನನ್ನು ನೋಡಿ ಮುಗುಳ್ನಕ್ಕಿತು. ಕೃಷ್ಣನು ಬಿದಿರಿನಿಂದ ತನಗೊಂದು ಕೊಳಲನ್ನು ಮಾಡಿಕೊಳ್ಳುವ ಆಸೆಯನ್ನು ಹೇಳಿದನು. ಆದರೆ ಅದಕ್ಕಾಗಿ ನಾನು ನಿನ್ನನ್ನು ಕತ್ತರಿಸಿ ನಿನ್ನಲ್ಲಿ ರಂಧ್ರಗಳನ್ನು ಕೊರೆಯಬೇಕಾಗುತ್ತದೆ. ನಿನಗೆ ಅದರಿಂದ ನೋವಾಗಬಹುದು. ನಿನಗೆ ಸಮ್ಮತವೇ? ಎಂದು ಕೇಳಿದನು.

ಬಿದಿರಿನ ಗಿಡವು ಸದಾ ತನ್ನ ಬಗ್ಗೆ ತಾನು ಕೀಳರಮೆಯಿಂದ ಬೇಸರಪಟ್ಟುಕೊಳ್ಳುತ್ತಿತ್ತು. ನನ್ನಲ್ಲಿ ಹೂವಿಲ್ಲ ಹಣ್ಣಿಲ್ಲ, ನನ್ನ ನೆರಳಿಗೂ ಕೂಡ ಯಾರು ನಿಲ್ಲುವುದಿಲ್ಲ, ನಾನು ಯಾರಿಗೂ ಬೇಡವಾದವಳು ಎಂದು. ಆದರೆ ಕೃಷ್ಣನ ಈ ಆಸೆ ಕೇಳಿ ಬಿದರಿಗೆ ಮಹದಾನಂದವಾಯಿತು. ನಗುತಾ ತನ್ನನ್ನು ತಾನೇ ಕೃಷ್ಣನಿಗೆ ಅರ್ಪಿಸಿಕೊಂಡಿತು. 'ಓ ಕೃಷ್ಣ, ನನ್ನನ್ನು ನಿನಗೆ ಅರ್ಪಿಸಿಕೊಂಡು ನಿನ್ನ ಕೈಯಲ್ಲಿ ಕೊಳಲಾಗುವುದು ನನ್ನ ಸೌಭಾಗ್ಯ. ದಯವಿಟ್ಟು ಮತ್ತು ನನ್ನನ್ನು ಕತ್ತರಿಸು' ಎಂದು ಆನಂದದಿಂದ ನುಡಿಯಿತು.

ಕೃಷ್ಣನು ಬಿದಿರನ್ನು ಕತ್ತರಿಸಿ ಅದರಲ್ಲಿ ಎಚ್ಚರಿಕೆಯಿಂದ ರಂಧ್ರಗಳನ್ನು ಮಾಡಿದನು. ನಂತರ ಉಜ್ಜಲು ಪ್ರಾರಂಭಿಸಿದನು, ಅಂಚುಗಳನ್ನು ಸಪೂರಗೊಳಿಸಿದನು ಒಳಭಾಗವನ್ನು ಸುಗಮಗೊಳಿಸಿದನು. ಇವೆಲ್ಲ ಪ್ರಕ್ರಿಯೆ ಬಿದರಿಗೆ ಬಹಳ ನೋವು ಉಂಟು ಮಾಡಿತು. ಆದರೆ ಕೃಷ್ಣನ ಬೆರಳುಗಳು ಬಿದಿರಿನ ಮೇಲೆ ಕೌಶಲ್ಯದಿಂದ ಚಲಿಸಿ ಅದಕ್ಕೆ ಆಕಾರ ಮತ್ತು ಸೌಂದರ್ಯವನ್ನು ನೀಡುತ್ತಿದ್ದಂತೆ, ನೋವು ಆನಂದವಾಗಿ ರೂಪಾಂತರಗೊಂಡಂತೆ ತೋರಿತು.

ಕೃಷ್ಣನು ಬಿದಿರಿನಿಂದ ಸುಂದರವಾದ ಕೊಳಲನ್ನು ಮಾಡಿ ಅದರೊಳಗೆ ಉಸಿರನ್ನು ಊದಿದನು. ಕೃಷ್ಣನ ಉಸಿರು ತಾಕಿದೊಡನೆ ಬಿದಿರಿಗೆ ಹೊಸ ಜೀವ ಬಂದಂತೆ ನಲಿದಾಡಿತು. ಮೊದಲ ಸ್ವರವು ಕೊಳಲಿನಿಂದ ಹೊರ ಹೊಮ್ಮಿತು, ಕೃಷ್ಣನ ಪ್ರೀತಿಯ ಆಲಾಪಗಳು ಕೊಳಲ ಧ್ವನಿಯಾಗಿ ಅಲೆ ಅಲೆಯಾಗಿ ಹೊರ ಹೊಮ್ಮುತ್ತಾ ಕೇಳುಗರನ್ನೆಲ್ಲಾ ರೋಮಾಂಚನಗೊಳಿಸಿತು. ಯಾರಿಗೂ ಬೇಡದ ಬಿದಿರು ಈಗ ಕೃಷ್ಣನ ಪ್ರೀತಿಯ ಕೊಳಲಾಗಿ ಸದಾ ಕೃಷ್ಣನೊಂದಿಗೆ ಇರುತ್ತಿತ್ತು. ತನ್ನೊಳಗೆ ಸಂತೋಷ ಉಕ್ಕಿದಾಗೆಲ್ಲ, ಕೃಷ್ಣ ಕೊಳಲನ್ನು ಎತ್ತಿಕೊಂಡು ನುಡಿಸುತ್ತಿದ್ದ ಅವನ ಕೊಳಲಿನ ಸ್ವರಗಳು ಕೇಳುವ ಎಲ್ಲರ ಹೃದಯಗಳನ್ನು ಶುದ್ಧ ಪ್ರೀತಿ ಮತ್ತು ತೀವ್ರವಾದ ಆನಂದದಿಂದ ತುಂಬುತ್ತಿದ್ದವು. ಸದಾ ಕೃಷ್ಣನ ಕೈಯಲ್ಲಿ ನಲಿದಾಡುತ್ತಿದ್ದ ಅವನ ಉಸಿರಿನಲ್ಲಿ ಉಸಿರಾಗುತ್ತಿದ್ದ ಕೊಳಲಿನ ಬಗ್ಗೆ ಗೋಪಿಕೆಯರಿಗೆಲ್ಲ ಅಸೂಯೆ ಹುಟ್ಟಿತು. ನಾನೂ ಕೃಷ್ಣನ ಕೈಯ ಕೊಡಲಾಗಿದ್ದರೆ ಎಷ್ಟು ಚೆಂದ ಎಂದು ಪ್ರತಿ ಗೋಪಿಕೆಯೂ ವಿಷಾದದಿಂದ ಯೋಚಿಸುತ್ತಿದ್ದಳು. ಗೋಪಿಕೆಯರು ಕೊಳಲನ್ನು ಉದ್ದೇಶಿಸಿ 'ಕೃಷ್ಣ ನಮ್ಮ ಪ್ರಭು ಮತ್ತು ಗುರು, ನಮ್ಮ ಸ್ನೇಹಿತ ಮತ್ತು ಪ್ರಿಯ ಸಖ. ಆದರೂ ಅವನು ನಮ್ಮೊಂದಿಗೆ ಹೆಚ್ಚು ಸಮಯ ಕಳೆಯಲು ಸಾಧ್ಯವಿಲ್ಲ. ಆದರೆ ನೀನು ಸದಾ ಅವನೊಂದಿಗೆ ಇರುತ್ತೀಯ. ಇದು ಹೇಗೆ ಸಾಧ್ಯ?' ಎಂದಾಗ, ಕೊಳಲು ಸರಳವಾಗಿ ಮತ್ತು ಸ್ಪಷ್ಟವಾಗಿ ಉತ್ತರಿಸಿತು, 'ನಾನು ಒಳಗೆ ಖಾಲಿಯಾಗಿದ್ದೇನೆ. ನನ್ನ ಬಗ್ಗೆ ಯಾವುದೇ ಅಹಂಕಾರ ನನ್ನಲ್ಲಿ ಇಲ್ಲ. ನಾನು ಕೃಷ್ಣನ ಕೈಯಲ್ಲಿ ಇರುವ ಅವನ ಕೊಳಲಷ್ಟೇ, ಅವನು ನನ್ನೊಂದಿಗೆ ಅವನಿಗೆ ಇಷ್ಟವಾದಂತೆ ಮಾಡಲು, ನನ್ನನ್ನು ಉಳಿಸಿಕೊಳ್ಳಲು, ನನ್ನನ್ನು ದೂರ ಎಸೆಯಲು, ನನ್ನನ್ನು ಬದಲಾಯಿಸಲು, ನನ್ನನ್ನು ಮರುರೂಪಿಸಲು ಸರ್ವಸ್ವತಂತ್ರ. ನಾನು ಎಂದಿಗೂ ಪ್ರಶ್ನಿಸುವುದಿಲ್ಲ. ಸಂಪೂರ್ಣ ಸಮರ್ಪಣಾ ಭಾವದಿಂದ ನನ್ನನ್ನು ನಾನು ಕೃಷ್ಣನಿಗೆ ಅರ್ಪಿಸಿಕೊಂಡಿದ್ದೇನೆ. ಹೀಗಾಗಿ ನನಗೆ ಈ ಪುಣ್ಯ ಲಭಿಸಿದೆ' ಎಂದಿತು.

ಈ ರೀತಿಯ ಸಮರ್ಪಣಾ ಭಾವ, ನಂಬಿಕೆ ವಿಶ್ವಾಸ ನಮಗೆ ಯಾವುದೇ ಸಂಬಂಧದಲ್ಲಿ ಇದ್ದಾಗಲೂ ಸಹ ಅಲ್ಲಿ ಒಂದು ಸುಂದರವಾದ ಬಾಂಧವ್ಯ ಬೆಸೆದುಕೊಳ್ಳುತ್ತದೆ. ನಾವೆಲ್ಲರೂ ಭಗ ವಂತನನ್ನು ಭಕ್ತಿಯಿಂದ ಕಾಣುತ್ತೇವೆ. ಆದರೆ ಸಂಪೂರ್ಣವಾಗಿ ನಮ್ಮನ್ನು ಅವನಿಗೆ ಸಮರ್ಪಿಸಿ ಕೊಂಡಾಗ ಮಾತ್ರ, ಒಂದು ಸಮಾಧಾನದ ಸ್ಥಿತಿ ಯಲ್ಲಿ ಬರುವ ಕಷ್ಟಗಳನ್ನೆಲ್ಲ ಅವನಿಗೆ ಸಮ ರ್ಪಿಸಿ ಸ್ಥಿತ ಪ್ರಜ್ಞತೆಯಿಂದ ಬದುಕಲು ಸಾಧ್ಯ. ಕೃಷ್ಣಂ ವಂದೇ ಜಗದ್ಗುರುಂ. ಸರ್ವೇ ಜನಾ ಸುಖಿನೋ ಭವಂತು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ವೀನಸ್ ವಿಲಿಯಮ್ಸ್‌ಗೆ ವೈಲ್ಡ್ ಕಾರ್ಡ್ ಎಂಟ್ರಿ

ನ್ಯೂಯಾರ್ಕ್: ಅನುಭವಿ ಟೆನಿಸ್ ಆಟಗಾರ್ತಿ ವೀನಸ್ ವಿಲಿಯಮ್ಸ್ ಅವರಿಗೆ ಅಮೆರಿಕ ಓಪನ್ ಟೆನಿಸ್ ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ದೊರೆತಿದೆ. ವೀನಸ್ ಅವರಿಗೆ ಇದು 25ನೇ ಅಮೆರಿಕನ್ ಓಪನ್ ಟೂರ್ನಿಯಾಗಲಿದ್ದು, ಈ ಹಿಂದೆ ಅವರು ಈ ಟೂರ್ನಿಯಲ್ಲಿ ಎರಡು ಬಾರಿ ಚಾಂಪಿಯನ್ ಆಗಿದ್ದರು.

ಅನಾರೋಗ್ಯದಿಂದಾಗಿ 16 ತಿಂಗಳು ಟೆನಿಸ್ ಅಂಕಣದಿಂದ ದೂರವಿದ್ದ ಅವರು, ಕಳೆದ ತಿಂಗಳು ಡಬ್ಲ್ಯುಟಿಎನಲ್ಲಿ ಆಡಿ ಒಂದು ಪಂದ್ಯ ಜಯಿಸಿದ್ದರು. ವೀನಸ್ ಈ ಟೂರ್ನಿಯಲ್ಲಿ ಕಣಕ್ಕಿಳಿಯಲಿರುವ ಅತಿ ಹಿರಿಯ ವಯಸ್ಸಿನ ಆಟಗಾರ್ತಿಯಾಗಿದ್ದು, ಒಟ್ಟು ಏಳು ಗ್ರ್ಯಾಂಡ್‌ಸ್ಲಾಮ್ ಸಿಂಗಲ್ಸ್ ಪ್ರಶಸ್ತಿ ಗೆದ್ದಿದ್ದಾರೆ. ತನಗೆ ದೊರೆತಿರುವ ವೈಲ್ಡ್ ಕಾರ್ಡ್ ಪ್ರವೇಶದ ಬಗ್ಗೆ ಮಾತನಾಡಿರುವ ವೀನಸ್ ವಿಲಿಯಮ್ಸ್, 'ಈ ಟೂರ್ನಿಯಲ್ಲಿ ವಿಶೇಷ ಪ್ರವೇಶದ ಮೂಲಕ ಆಡಲು ನನಗೆ ಅವಕಾಶ ಸಿಕ್ಕಿದ್ದು ಬಹಳ ಸಂತೋಷವಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ನಾನು ಉತ್ತಮ ಸ್ಥಿತಿಯಲ್ಲಿದ್ದೇನೆ. ಶಸ್ತ್ರಚಿಕಿತ್ಸೆಯ ಬಳಿಕ ನನ್ನ ನಿರ್ವಹಣೆಯಲ್ಲಿ ಹಗಲು ಮತ್ತು ರಾತ್ರಿಯಷ್ಟು ವ್ಯತ್ಯಾಸ ಸ್ಪಷ್ಟವಾಗಿ ಗೋಚರಿಸುತ್ತಿದೆ. ಹಾಗಾಗಿ ಅಮೆರಿಕ ಓಪನ್ ಟೆನಿಸ್‌ನಲ್ಲಿ ಉತ್ತಮ ಪ್ರದರ್ಶನ ತೋರುವ ನಿರೀಕ್ಷೆಯಲ್ಲಿದ್ದೇನೆ' ಎಂದಿದ್ದಾರೆ.

ಕೀಮರ್‌ಗೆ ಪ್ರಶಸ್ತಿ

ಚೆನ್ನೈ: ಇನ್ನೂ ಒಂದು ಸುತ್ತು ಬಾಕಿಯಿರುವಂತೆ, ಜಪಾನ್‌ನ ಗ್ರ್ಯಾಂಡ್‌ಮಾಸ್ಟರ್ ವಿನ್ಸೆಂಟ್ ಕೀಮರ್ ಅವರು ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿಯನ್ನು ತಮ್ಮದನ್ನಾಗಿಸಿದರು. ಎಂಟನೇ ಸುತ್ತಿನ ಪಂದ್ಯದಲ್ಲಿ ಅವರು ನೆದರ್ಲೆಂಡ್ಸ್‌ನ ಆಟಗಾರ ಜೋರ್ಡನ್ ವಾನ್ ಫೋರಿಸ್ಟ್ ಜತೆ ಪಂದ್ಯವನ್ನು ಡ್ರಾ ಮಾಡಿಕೊಂಡರು. ಈ ಟೂರ್ನಿಯಲ್ಲಿ ತೋರಿದ ಉತ್ತಮ ಪ್ರದರ್ಶನದ

ಪರಿಣಾಮವಾಗಿ ಅವರು ಲೈವ್ ರೇಟಿಂಗ್‌ನಲ್ಲಿ ಮೊದಲ ಬಾರಿಗೆ ಅಗ್ರ 10ರೊಳಗೆ ಸ್ಥಾನ ಪಡೆದರು. ಕೀಮರ್ ಅವರು ಟ್ರೋಫಿ ಜತೆ 25 ಲಕ್ಷ ರು. ಬಹುಮಾನವನ್ನೂ ಪಡೆಯಲಿದ್ದಾರೆ. ಜಂಟಿ ಅಗ್ರಸ್ಥಾನದಲ್ಲಿರುವ ಅರ್ಜುನ್ ಇರಿಗೇಶಿ ಮತ್ತು ಕಾರ್ತಿಕೇಯನ್ ಮುರಳಿ ತಲಾ 4.5 ಅಂಕ ಗಳಿಸಿದ್ದು, ಎರಡನೇ ಮತ್ತು ಮೂರನೇ ಸ್ಥಾನಕ್ಕಾಗಿ ಪೈಪೋಟಿ ನಡೆಯುತ್ತಿದೆ. ಅರ್ಜುನ್ ಇರಿಗೇಶಿ, ಸ್ವದೇಶದ ವಿದಿತ್ ಎಸ್.ಗುಜರಾತಿ ಜತೆ ಅಂಕ ಹಂಚಿಕೊಂಡರೆ, ಕಾರ್ತಿಕೇಯನ್ ಮುರಳಿ, ಸ್ವದೇಶದ ನಿಹಾಲ್ ಸರಿನ್ ಜೊತೆ ಪಂದ್ಯ ಡ್ರಾ ಮಾಡಿಕೊಂಡರು.

ಆಸ್ಟ್ರೇಲಿಯಾ-ಎ ತಂಡಕ್ಕೆ ಸತತ ಸೋಲು | ಭಾರತಕ್ಕೆ ಒಲಿದ ಏಕದಿನ ಸರಣಿ

ಮಹಿಳಾ ತಂಡಕ್ಕೆ ಜಯ

ಬ್ರಿಸ್ಬೇನ್: ಭಾರತ-ಎ ಮಹಿಳಾ ಕ್ರಿಕೆಟ್ ತಂಡವು ಆಸ್ಟ್ರೇಲಿಯಾ-ಎ ವಿರುದ್ಧ ಇಲ್ಲಿ ನಡೆದ ಏಕದಿನ ಪಂದ್ಯದಲ್ಲಿ 2 ವಿಕೆಟ್‌ಗಳ ರೋಮಾಂಚನಕಾರಿ ಜಯ ಗಳಿಸುವುದರೊಂದಿಗೆ, 3 ಪಂದ್ಯಗಳ ಸರಣಿಯನ್ನು 2-0 ಅಂತರದಿಂದ ಗೆದ್ದುಕೊಂಡಿತು.

ಟಿ20 ಸರಣಿಯ ಸೋಲಿನೊಂದಿಗೆ ತನ್ನ ಪ್ರವಾಸವನ್ನು ಪ್ರಾರಂಭಿಸಿದ್ದ ಟೀಮ್ ಇಂಡಿಯಾ ಮಹಿಳೆಯರ ಎ-ತಂಡ, ಇದೀಗ ಏಕದಿನ ಸರಣಿಯಲ್ಲಿ ತನ್ನ ಸರ್ವಶ್ರೇಷ್ಠ ಪ್ರದರ್ಶನ ತೋರಿಸಿ, ಇನ್ನೊಂದು ಪಂದ್ಯ ಬಾಕಿ ಇರುವಂತೆಯೇ ಏಕದಿನ ಸರಣಿಯನ್ನು ತನ್ನ ತೆಕ್ಕೆಗೆ ಹಾಕಿಕೊಂಡಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ-ಎ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳ ನಷ್ಟಕ್ಕೆ 265 ರನ್ ಗಳಿಸಿತು. ತಂಡದ ಪರ ಅಲಿಸಾ ಹೀಲಿ 87 ಬಾಲ್‌ಗಳನ್ನು ಎದುರಿಸಿ 91 ರನ್‌ಗಳ ಅದ್ಭುತ ಇನ್ನಿಂಗ್ಸ್ ಆಡಿ, ರಾಧಾ ಯಾದವ್‌ಗೆ ವಿಕೆಟ್ ಒಪ್ಪಿಸಿದರು. ಕಿಮ್ ಗಾರ್ತ್ ತಂಡಕ್ಕೆ ಅಜೇಯ 41 ರನ್‌ಗಳ ಕಾಣಿಕೆ ನೀಡಿದರು.

ಅವರಿಬ್ಬರನ್ನು ಹೊರತುಪಡಿಸಿ, ಯಾವುದೇ ಆಸ್ಟ್ರೇಲಿಯಾ ಬ್ಯಾಟರ್‌ಗೆ 30 ರನ್‌ಗಳ ಗಡಿ ತಲುಪಲು ಸಾಧ್ಯವಾಗಲಿಲ್ಲ. ಇಲ್ಲಾ ಹೆವಾರ್ಡ್ 28 ರನ್ ಗಳಿಸಿ ಪ್ರೇಮಾ ರಾವತ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ರಾಚೆಲ್ ಟ್ರೆನಮಮ್ 24 ರನ್ ಗಳಿಸಿ ಮಿನ್ನು ಮಣಿಗೆ ವಿಕೆಟ್ ಒಪ್ಪಿಸಿದರು. ಆಸ್ಟ್ರೇಲಿಯಾ-ಎ ಪರ ಜಾರ್ಜಿಯಾ ಪ್ರೆಸ್ಟ್‌ವಿಡ್ಜ್ 18 ರನ್ ಮತ್ತು ತಹಲಿಯಾ ಮೆಕ್‌ಗ್ರಾತ್ 15 ರನ್ ಗಳಿಸಿ ಪೆವಿಲಿಯನ್ ಸೇರಿದರು.

ಭಾರತ-ಎ ತಂಡದ ಪರ ಮಿನ್ನು ಮಣಿ ಅದ್ಭುತ ಬೌಲಿಂಗ್ ಮಾಡಿ 3 ವಿಕೆಟ್ ಪಡೆದರು. ಸೈಮಾ ಠಾಕೂರ್ 2 ವಿಕೆಟ್ ಪಡೆದರೆ, ಟೈಟಾಸ್ ಸಾಧು, ರಾಧಾ ಯಾದವ್, ಪ್ರೇಮಾ ರಾವತ್ ಮತ್ತು ತನುಜಾ ಕನ್ವರ್ ತಲಾ 1 ವಿಕೆಟ್ ಪಡೆದರು.

ಭಾರತಕ್ಕೆ ರೋಚಕ ಜಯ: ಗುರಿಯನ್ನು ಬೆನ್ನಟ್ಟಿದ ಭಾರತ-ಎ ತಂಡಕ್ಕೆ ಉತ್ತಮ ಆರಂಭ ದೊರೆಯಲಿಲ್ಲ. ಒಂದು ಹಂತದಲ್ಲಿ ಸ್ಕೋರ್ 6 ವಿಕೆಟ್ ನಷ್ಟಕ್ಕೆ 157 ರನ್ ಆಗಿತ್ತು. ಆದಾಗ್ಯೂ ತಂಡದ ಪರ ಗೆಲುವಿನ ಇನ್ನಿಂಗ್ಸ್ ಆಡಿದ ಯಸ್ತಿಕಾ ಭಾಟಿಯಾ 66 ರನ್ ಗಳಿಸಿ ಆಕರ್ಷಕ ಪ್ರದರ್ಶನ ಮೆರೆದರು. ಆದರೆ ಅವರಿಗೆ ಅಗ್ರ ಕ್ರಮಾಂಕದಲ್ಲಿ ಯಾರಿಂದಲೂ ಬೆಂಬಲ ಸಿಗಲಿಲ್ಲ. ಆದರೆ ಕೆಳ ಕ್ರಮಾಂಕದ ಆಟಗಾರ್ತಿ ರಾಧಾ ಯಾದವ್ 60 ರನ್ ಬಾರಿಸಿ ತಂಡವನ್ನು ಸಂಕಷ್ಟದಿಂದ ಪಾರು ಮಾಡಿದರು. ಕೊನೆಯಲ್ಲಿ ತನುಜಾ ಕನ್ವರ್ 50 ರನ್ ಗಳಿಸಿದರೆ, ಪ್ರೇಮಾ ರಾವತ್ ಅಜೇಯ 32 ರನ್ ಗಳಿಸಿ ಕೊನೆಯ ಓವರ್‌ನಲ್ಲಿ ಭಾರತ-ಎ ತಂಡಕ್ಕೆ ರೋಚಕ ಗೆಲುವನ್ನು ತಂದುಕೊಟ್ಟರು.

ಸರಣಿಯಲ್ಲಿ 2-0 ಮುನ್ನಡೆ

ಎರಡನೇ ಪಂದ್ಯದ ಗೆಲುವಿನೊಂದಿಗೆ, ಭಾರತ-ಎ ಮಹಿಳಾ ಕ್ರಿಕೆಟ್ ತಂಡವು ಸರಣಿಯಲ್ಲಿ 2-0 ಅಂತರದ ಮುನ್ನಡೆ ಸಾಧಿಸಿದೆ. ಇದಕ್ಕೂ ಮೊದಲು, ತನ್ನ ಮೊದಲ ಪಂದ್ಯವನ್ನು ಟೀಮ್ ಇಂಡಿಯಾ 3 ವಿಕೆಟ್‌ಗಳಿಂದ ಗೆದ್ದಿತ್ತು. ಉಭಯ ತಂಡಗಳ ನಡುವಿನ ಸರಣಿಯ ಕೊನೆಯ ಪಂದ್ಯ ಭಾನುವಾರ ನಡೆಯಲಿದೆ, ಅದರ ನಂತರ ಅನಧಿಕೃತ ಟೆಸ್ಟ್ ಪಂದ್ಯವೂ ನಡೆಯಲಿದೆ.

ಕ್ರೀಡಾ ನೀತಿ ಶ್ಲಾಘಿಸಿದ ಪ್ರಧಾನಿ ಮೋದಿ

ದೆಹಲಿ: ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಶುಕ್ರವಾರ ಕೆಂಪುಕೋಟೆಯಲ್ಲಿ ಧ್ವಜಾರೋಹಣ ಮಾಡಿ ಬಳಿಕ ಮಾತನಾಡಿದ ಪ್ರಧಾನಿ ಮೋದಿ, ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆಯ ಬಗ್ಗೆ ಪ್ರತಿಕ್ರಿಯಿಸಿದ್ದು, ಎಲ್ಲಾ ಹಂತಗಳಲ್ಲೂ ಕ್ರೀಡಾ ಶ್ರೇಷ್ಠತೆಯನ್ನು ಬೆಳೆಸಲು ಈ ಕ್ರೀಡಾನೀತಿ ಮೂಲಾಧಾರವಾಗಿದೆ ಎಂದಿದ್ದಾರೆ.

ಹೊಸ ಕ್ರೀಡಾ ನೀತಿ ಅತ್ಯಂತ ದೂರದ ಶಾಲೆಯಿಂದ ಒಲಿಂಪಿಕ್ಸ್ ವರೆಗಿನ ಕ್ರೀಡೆಗಳಲ್ಲಿನ ಬೆಳವಣಿಗೆಯನ್ನು ಖಚಿತಪಡಿಸುತ್ತದೆ. ಇದು ತಳಮಟ್ಟದಿಂದ ಮೇರು ಹಂತದವರೆಗೆ ನೈಜ ಪ್ರತಿಭೆಯನ್ನು ಪೋಷಿಸುವಲ್ಲಿ ಮಹತ್ತರ ಪಾತ್ರ ವಹಿಸಲಿದೆ ಎಂದು ಮೋದಿ ಹೇಳಿದರು. ಕ್ರೀಡೆ ಪ್ರತಿಯೊಂದು ದೇಶದ ಅಭಿವೃದ್ಧಿಗೆ ಅತ್ಯಗತ್ಯ ಅಂಶವಾಗಿದ್ದು, ಹೆಚ್ಚಿನ ಪೋಷಕರು ತಮ್ಮ ಮಕ್ಕಳು ಕ್ರೀಡೆಯಲ್ಲಿ ಸಮಯ ಕಳೆಯುವುದನ್ನು ಅಪಹಾಸ್ಯ ಮಾಡುತ್ತಿದ್ದ ಕಾಲದಿಂದ ನಾವು ಈಗ ಅದು ಬದಲಾಗಿರುವ ಹಂತವನ್ನು ತಲುಪಿದ್ದೇವೆ ಎನ್ನುವುದು ಸಂತೋಷದ ವಿಷಯ ಎಂದರಲ್ಲದೆ, ಮಕ್ಕಳು ಕ್ರೀಡೆಯಲ್ಲಿ ಆಸಕ್ತಿ ವಹಿಸಿದರೆ ಪೋಷಕರು ಸಂತೋಷಪಡುತ್ತಾರೆ ಎಂದೂ ಹೇಳಿದರು. ಇದೇ ವೇಳೆ ಡಬಲ್ ಒಲಿಂಪಿಕ್ ಪದಕ ವಿಜೇತ ಶೂಟರ್ ಮನು ಭಾಕರ್ ಸೇರಿದಂತೆ ಹಲವು ಕ್ರೀಡಾಪಟುಗಳನ್ನು ಮೋದಿ ಶ್ಲಾಘಿಸಿದರು.

ಖೇಲೋ ಇಂಡಿಯಾ ಜಲ ಕ್ರೀಡಾ ಉತ್ಸವ: ಮ್ಯಾಸ್ಕಟ್ ಬಿಡುಗಡೆ

ಶ್ರೀನಗರ: ಮೊದಲ ಬಾರಿಗೆ ನಡೆಯಲಿರುವ ಖೇಲೋ ಇಂಡಿಯಾ ಜಲ ಕ್ರೀಡಾ ಉತ್ಸವದ ಮ್ಯಾಸ್ಕಟ್ ಅನ್ನು ಬಿಡುಗಡೆ ಮಾಡಲಾಯಿತು. ಇಲ್ಲಿನ ಪ್ರಸಿದ್ಧ ದಲ್ ಸರೋವರದಲ್ಲಿ ಇದೇ 21ರಿಂದ 23ರ ವರೆಗೆ ನಡೆಯಲಿರುವ ಈ ಕ್ರೀಡೋತ್ಸವದಲ್ಲಿ 400 ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ ಇದೆ. 'ಹಿಮಾಲಯನ್ ಕಿಂಗ್‌ಫಿಷರ್' ಈ ಕೂಟದ ಮ್ಯಾಸ್ಕಟ್ ಆಗಿದ್ದು, ಅದರ ಕಿತ್ತಳೆ ಮತ್ತು ನೀಲಿ ಬಣ್ಣವು ಸಾಮರ್ಥ್ಯ ಮತ್ತು ಪ್ರಶಾಂತ ಚಿತ್ತವನ್ನು ಪ್ರತಿನಿಧಿಸುತ್ತದೆ ಎಂದು ಭಾರತ ಕ್ರೀಡಾ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ. ಜಮ್ಮು ಮತ್ತು ಕಾಶ್ಮೀರ ಕ್ರೀಡಾ ಕೌನ್ಸಿಲ್ ಈ ಉತ್ಸವವನ್ನು ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಭಾರತ ಕ್ರೀಡಾ ಪ್ರಾಧಿಕಾರದ ಸಹಯೋಗದಲ್ಲಿ ನಡೆಸುತ್ತಿದೆ. ಈ ಕೂಟದಲ್ಲಿ ಹುಟ್ಟುದೋಣಿ, ಹಾಯಿದೋಣಿ, ಕಯಾಕಿಂಗ್ ಸ್ಪರ್ಧೆಗಳಲ್ಲಿ ಪದಕಗಳನ್ನು ನೀಡಲಾಗುತ್ತದೆ.

ಏಷ್ಯಾ ಕಪ್ ಟೂರ್ನಿ: ಮುಂದಿನ ವಾರ ತಂಡದ ಆಯ್ಕೆ

ಶ್ರೇಯಸ್, ಜೈಸ್ವಾಲ್‌ಗೆ ಅವಕಾಶ ಸಿಗುವುದು ಡೌಟ್

ದೆಹಲಿ: ಬಹುನಿರೀಕ್ಷಿತ 2025ರ ಏಷ್ಯಾ ಕಪ್ ಟೂರ್ನಿ ಸೆಪ್ಟೆಂಬರ್ 9ರಂದು ಆರಂಭವಾಗಲಿದೆ. 2026ರಲ್ಲಿ ಐಸಿಸಿ ಟಿ20 ವಿಶ್ವಕಪ್ ಟೂರ್ನಿ ಇರುವ ಕಾರಣ ಈ ಬಾರಿ ಏಷ್ಯಾ ಕಪ್ ಟೂರ್ನಿಯು ಕೂಡ ಟಿ20 ಸ್ವರೂಪದಲ್ಲಿ ನಡೆಯಲಿದೆ. ಸೆಪ್ಟೆಂಬರ್ 10ರಂದು ಯುಎಇ ವಿರುದ್ಧ ಆಡುವ ಮೂಲಕ ಭಾರತ ತಂಡವು ಈ ಸಲದ ಏಷ್ಯಾ ಕಪ್‌ನಲ್ಲಿ ತನ್ನ ಅಭಿಯಾನವನ್ನು ಆರಂಭಿಸಲಿದೆ. ಸೆಪ್ಟೆಂಬರ್ 14ರಂದು ದುಬೈನಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಭಾರತವು ಎದುರಿಸಲಿದೆ.



ಇದೀಗ ಭಾರತ ತಂಡದ ಇಬ್ಬರು ಸ್ಟಾರ್ ಬ್ಯಾಟ್ಸ್‌ಮನ್‌ಗಳಾದ ಯಶಸ್ವಿ ಜೈಸ್ವಾಲ್ ಹಾಗೂ ಶ್ರೇಯಸ್ ಅಯ್ಯರ್‌ಗೂ ಏಷ್ಯಾಕಪ್ ತಂಡದಲ್ಲಿ ಸ್ಥಾನ ಸಿಗುವುದು ಅನುಮಾನ ಎಂದು ಹೇಳಲಾಗುತ್ತಿದೆ.

ಐಪಿಎಲ್ ಟೂರ್ನಿಯಲ್ಲಿ ಉತ್ತಮ ಹೆಸರು ಮಾಡಿದ ನಂತರ ಜೈಸ್ವಾಲ್ ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ, ಶತಕವನ್ನೂ ಸಿಡಿಸಿದ್ದಾರೆ. ಆದಾಗ್ಯೂ ಅದರ ಹೊರತಾಗಿಯೂ ಅವರಿಗೆ 2025ರ ಏಷ್ಯಾ ಕಪ್‌ನಲ್ಲಿ ಅವಕಾಶ ಸಿಗುವುದು ಅನುಮಾನ ಎನ್ನಲಾಗುತ್ತಿದೆ.

ಸಂಜು ಸ್ಯಾಮ್ಸನ್ ಹಾಗೂ ಅಭಿಷೇಕ್ ಶರ್ಮಾ ಅವರು ಭಾರತ ತಂಡದ ಇನ್ನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತವಾಗಿದೆ, ಹಾಗಾಗಿ ಆರಂಭಿಕ ಆಟಗಾರರಾಗಿರುವ ಯಶಸ್ವಿ ಜೈಸ್ವಾಲ್‌ಗೆ ತಂಡದಲ್ಲಿ ಸ್ಥಾನ ಸಿಗುವ ಸಾಧ್ಯತೆ ಕಡಿಮೆ. ವರದಿಯ ಪ್ರಕಾರ, ಆಯ್ಕೆದಾರರು ಜೈಸ್ವಾಲ್ ಅವರನ್ನು ಟೆಸ್ಟ್ ಸ್ವರೂಪದತ್ತ ಹೆಚ್ಚಾಗಿ ಗಮನಹರಿಸುವಂತೆ ಕೇಳಿಕೊಂಡಿದ್ದಾರೆ, ಹಾಗಾಗಿ ಅವರನ್ನು ಏಷ್ಯಾ ಕಪ್‌ಗೆ ಆಯ್ಕೆ ಮಾಡುವುದು ಅನುಮಾನ.

ಟಿ20ಯಲ್ಲಿ ತವರಿನಲ್ಲಿ ಮತ್ತು ವಿದೇಶಗಳಲ್ಲಿ ಉತ್ತಮ ಪ್ರದರ್ಶನ ನೀಡಿರುವ ಶ್ರೇಯಸ್ ಅಯ್ಯರ್‌ಗೆ ಏಕದಿನ ಸ್ವರೂಪದತ್ತ ಹೆಚ್ಚು ಗಮನಹರಿಸಲು ಬಿಸಿಸಿಐ ಆಯ್ಕೆ ಸಮಿತಿಯು ಸೂಚನೆ ನೀಡಿದೆ, ಆ ಕಾರಣಕ್ಕಾಗಿ ಏಷ್ಯಾ ಕಪ್ ಟೂರ್ನಿಯಲ್ಲಿ ಶ್ರೇಯಸ್ ಅಯ್ಯರ್ ಆಡುವುದು ಕೂಡ ಅನುಮಾನ ಎನಿಸಿದೆ.

ಸಿದ್ಧತಾ ಶಿಬಿರ ಮುಗಿಸಿದ ಮಹಿಳಾ ತಂಡ

ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಮುಗಿದ ಏಕದಿನ ವಿಶ್ವಕಪ್ ಶಿಬಿರ

ಬೆಂಗಳೂರು: ಈ ಹಿಂದೆ ಎರಡು ಬಾರಿ ಅಂತಿಮ ಹಂತದಲ್ಲಿ ಕೈತಪ್ಪಿದ ಐಸಿಸಿ ಮಹಿಳಾ ವಿಶ್ವಕಪ್ ಕ್ರಿಕೆಟ್ ಪ್ರಶಸ್ತಿಯನ್ನು ಈ ಬಾರಿ ಗೆದ್ದೇ ಗೆಲ್ಲುವ ದೃಢನಿರ್ಧಾರವನ್ನು ಭಾರತ ತಂಡ ಹೊಂದಿದೆ ಎಂದು ನಾಯಕಿ ಹರ್ಮನ್‌ಪ್ರೀತ್ ಕೌರ್ ಇತ್ತೀಚೆಗೆ ವಿಶ್ವಕಪ್ ಟ್ರೋಫಿ ಅನಾವರಣ ಕಾರ್ಯಕ್ರಮದಲ್ಲಿ ಹೇಳಿದ್ದರು. ಇದೀಗ ಚೊಚ್ಚಲ ವಿಶ್ವಕಪ್ ಮೇಲೆ ಕಣ್ಣಿಟ್ಟಿರುವ ಭಾರತ ಮಹಿಳಾ ತಂಡವು ಟೂರ್ನಿಗೆ ಪೂರ್ವಭಾವಿಯಾಗಿ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಹತ್ತು ದಿನಗಳ ಸಿದ್ಧತಾ ಶಿಬಿರವನ್ನು ಪೂರ್ಣಗೊಳಿಸಿ ಸಜ್ಜಾಗಿದೆ.

ಶಿಬಿರದಲ್ಲಿ ಫಿಟ್ನೆಸ್‌ಗೆ ಒತ್ತು ನೀಡಲಾಯಿತು ಮತ್ತು ಪಂದ್ಯವನ್ನು ವಿಶೇಷ ಗಮನದಲ್ಲಿಟ್ಟುಕೊಂಡು ಅಭ್ಯಾಸ ನಡೆಸಲಾಯಿತು. ಭಾರತ ವನಿತೆಯರು ಎರಡು ಬಾರಿ ವಿಶ್ವಕಪ್ ಫೈನಲ್‌ನಲ್ಲಿ ಸೋಲನುಭವಿಸಿದ್ದಾರೆ. ಕೊನೆಯ ಬಾರಿ 2017ರಲ್ಲಿ ಇಂಗ್ಲೆಂಡ್ ಎದುರು 9 ರನ್‌ಗಳಿಂದ ಸೋಲನುಭವಿಸಿತ್ತು. ಲಾರ್ಡ್ಸ್‌ನಲ್ಲಿ ನಡೆದ ಆ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಅವರ ವೀರೋಚಿತ 51 ರನ್‌ಗಳ ಆಟ ಫಲ ನೀಡಿರಲಿಲ್ಲ.

ಭಾರತ ಈ ಸಲದ ವಿಶ್ವಕಪ್‌ಗೆ ಮೊದಲು ಆಸ್ಟ್ರೇಲಿಯಾದಲ್ಲಿ ಮೂರು ಪಂದ್ಯಗಳ ಏಕದಿನ ಸರಣಿ ಆಡಲಿದ್ದು, ಆ ಸರಣಿ ಸೆಪ್ಟೆಂಬರ್ 14ರಂದು ಶುರುವಾಗಲಿದೆ. ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿ ಸೆಪ್ಟೆಂಬರ್ 30ರಂದು ಆರಂಭವಾಗಲಿದೆ.

ಜಂಟಿ ಆತಿಥ್ಯ ಹೊಂದಿರುವ ಭಾರತ ತಂಡವು ಉದ್ಘಾಟನಾ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಎದುರಿಸಲಿದೆ.

ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತದ ವನಿತೆಯರ ತಂಡವು ಇತ್ತೀಚಿನ ಇಂಗ್ಲೆಂಡ್ ಪ್ರವಾಸದ ವೇಳೆ 3-2ರಿಂದ ಟಿ20 ಸರಣಿಯನ್ನು ಮತ್ತು 2-1ರಿಂದ ಏಕದಿನ ಪಂದ್ಯಗಳ ಸರಣಿ ಗೆದ್ದು ಉತ್ಸಾಹದಲ್ಲಿದೆ.

ವಿಟಾಕೀಸ್

45 ಭಾಷೆಗಳಲ್ಲಿ ಬರಲಿದೆ ರಾಮಾಯಣ

ನಿತೀಶ್ ತಿವಾರಿ ನಿರ್ದೇಶನದ ರಾಮಾಯಣ ಸಿನಿಮಾ ಭಾರತೀಯ ಚಿತ್ರರಂಗದಲ್ಲಿ ಸಖತ್ ಸದ್ದು ಮಾಡುತ್ತಿದೆ. ಬರೋಬ್ಬರಿ ಎರಡು ಸಾವಿರ ಕೋಟಿ ರು.ಗಳಲ್ಲಿ ನಿರ್ಮಾಣವಾಗುತ್ತಿರುವ ರಾಮಾಯಣ, ಒಟ್ಟು ನಲವತ್ತೈದು ಭಾಷೆಗಳಲ್ಲಿ ಬಿಡುಗಡೆಯಾಗಲಿದೆ. ಮೊದಲ ಬಾರಿಗೆ ಇಷ್ಟು ಭಾಷೆಗಳಲ್ಲಿ ಬಿಡುಗಡೆಯಾಗುತ್ತಿರುವ ಮೊದಲ ಭಾರತೀಯ ಸಿನಿಮಾ ಇದು ಎಂಬ ಹೆಗ್ಗಳಿಕೆಗೆ ರಾಮಾಯಣ ಭಾಜನವಾಗಿದೆ. ರಾಮನ ಪಾತ್ರದಲ್ಲಿ ರಣಬೀರ್ ಕಪೂರ್, ಸೀತೆಯಾಗಿ ಸಾಯಿ ಪಲ್ಲವಿ ನಟಿಸುತ್ತಿದ್ದಾರೆ. ಯಶ್ ರಾವಣನಾಗಿ ಅಬ್ಬರಿಸಲಿದ್ದಾರೆ.

ರಾಮಾಯಣದಲ್ಲಿ ರಾಮನನ್ನು ಕಾಡಿಗೆ ಕಳುಹಿಸುವಲ್ಲಿ ಕೈಕೇಯಿ ಪ್ರಮುಖ ಪಾತ್ರ ವಹಿಸುತ್ತಾಳೆ. ಕೈಕೇಯಿ ಪಾತ್ರದಲ್ಲಿ ಮಲೆಯಾಳಂ ನಟಿ ಶೋಭನಾ ಬಣ್ಣಹಚ್ಚುತ್ತಿದ್ದಾರೆ, ಇನ್ನು ರಾಮನ ತಾತ ಸುಮಾಲಿ ಪಾತ್ರದಲ್ಲಿ ಚೇತನ್ ಹನ್ಸರಾಜ್ ಕಾಣಿಸಿಕೊಳ್ಳಲಿದ್ದಾರೆ. ಹೀಗೆ ಭಾರತೀಯ ಚಿತ್ರರಂಗದ ದಿಗ್ಗಜ ನಟರು ರಾಮಾಯಣ ಚಿತ್ರದಲ್ಲಿ ನಟಿಸುತ್ತಿದ್ದಾರೆ.

ಮೊದಲ ಭಾಗದಲ್ಲಿ ರಾಮನ ಬಾಲ್ಯದಿಂದ ಆರಂಭವಾಗಿ ಸೀತೆಯ ಅಪಹರಣದವರೆಗೂ ಸಾಗಲಿದೆ. ಈಗಾಗಲೇ ಮೊದಲ ಭಾಗದ ಚಿತ್ರೀಕರಣ ಮುಕ್ತಾಯವಾಗಿದ್ದು, ಮುಂದಿನ ವರ್ಷದ ದೀಪಾವಳಿಯಂದು ತೆರೆಗೆ ಬಲಿದೆ. ದ್ವಿತೀಯ ಭಾಗದಲ್ಲಿ ರಾಮ ರಾವಣರ ಯುದ್ಧ ರೋಚಕವಾಗಿ ಮೂಡಿಬರಲಿದ್ದು, ಎರಡನೇ ಭಾಗ 2027ಕ್ಕೆ ರಿಲೀಸ್ ಆಗಲಿದೆ. ರಾಮಾಯಣ ಅದ್ದೂರಿಯಾಗಿ ಮೂಡಿಬರುತ್ತಿದ್ದು, ಯಶ್ ಕೂಡ ನಿರ್ಮಾಣದಲ್ಲಿ ಕೈ ಜೋಡಿಸಿದ್ದಾರೆ. ರಾಮಾಯಣ ನಾಲ್ಕು ಸಾವಿರ ಕೋಟಿ ಗೂ ಹೆಚ್ಚು ಗಳಿಸುವ ನಿರೀಕ್ಷೆ ಇದೆ.

ಪೀಟರ್ ಫಸ್ಟ್ ಲುಕ್

ರೆಟ್ರೋ ಸ್ಟೈಲ್‌ನಲ್ಲಿ ದೂರದರ್ಶನ ಸಿನಿಮಾ ಕಥೆ ಹೇಳಿದ್ದ ನಿರ್ದೇಶಕ ಸುಕೇಶ್ ಶೆಟ್ಟಿ, ಈಗ ಪೀಟರ್ ಸಿನಿಮಾ ಮೂಲಕ ಸಸ್ಪೆನ್ಸ್ ಡ್ರಾಮಾ ಕಥಾಹಂದರವನ್ನು ತೆರೆಗೆ ತರಲು ಸಿದ್ಧತೆ ನಡೆಸಿದ್ದಾರೆ. ಪೀಟರ್ ಚಿತ್ರದ ಫಸ್ಟ್ ಲುಕ್ ರಿಲೀಸ್ ಆಗಿದ್ದು, ಚಿತ್ರದ ಎಲ್ಲಾ ಪಾತ್ರಗಳನ್ನು ಪೋಸ್ಟರ್‌ನಲ್ಲಿ ಕಟ್ಟಿಕೊಡಲಾಗಿದೆ. ರಾಜೇಶ್ ಧ್ರುವ ನಾಯಕನಾಗಿ ನಟಿಸಿದ್ದು, ರಗಡ್ ಆಗಿ ಕಾಣಿಸಿಕೊಂಡಿದ್ದಾರೆ. ಚಂಡೆ ಮೇಳ ಫಸ್ಟ್ ಲುಕ್ ಪೋಸ್ಟರ್‌ನಲ್ಲಿ ಹೈಲೆಟ್ ಆಗಿದೆ. ಕನ್ನಡದ ಜತೆಗೆ ತೆಲುಗು, ತಮಿಳು ಹಾಗೂ ಮಲೆಯಾಳಂ ಭಾಷೆಯಲ್ಲಿಯೂ ಪೋಸ್ಟರ್ ಬಿಡುಗಡೆಯಾಗಿದೆ.

ರಾಜೇಶ್ ಧ್ರುವಗೆ ಜತೆಯಾಗಿ ರವೀಕ್ಷಾ ಶೆಟ್ಟಿ, ಜಾಹ್ನವಿ ರಾಯಲ ಅಭಿನಯಿಸಿದ್ದಾರೆ. ಉಳಿದಂತೆ ಪ್ರತಿಮಾ ನಾಯಕ್, ರಘು ಪಾಂಡೇಶ್ವರ್, ರಾಮ ನಾಡಗೌಡ ತಾರಾಬಳಗದಲ್ಲಿದ್ದಾರೆ. ವೃದ್ಧಿ ಸ್ಟುಡಿಯೊ ಬ್ಯಾನರ್‌ನಲ್ಲಿ ರವಿ ಹಿರೇಮಠ್ ಮತ್ತು ರಾಕೇಶ್ ಹೆಗ್ಗಡೆ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಚಿತ್ರತಂಡ ಪ್ರತಿ ಹಂತದಲ್ಲೂ ಹೊಸ ಸಾಹಸ ಮಾಡುತ್ತಾ ಗಮನಸೆಳೆದಿತ್ತು. ಥಿಂಕ್ ಮ್ಯೂಸಿಕ್ ಸಂಸ್ಥೆ ಪೀಟರ್ ಸಿನಿಮಾದ ಆಡಿಯೊ ಹಕ್ಕುಗಳನ್ನು ಪಡೆದಿದ್ದು, ಇದರಿಂದ ಚಿತ್ರದ ಹಾಡುಗಳ ಬಗ್ಗೆಯೂ ನಿರೀಕ್ಷೆ ಹೆಚ್ಚಿದೆ.

ಪೀಟರ್ ಸಿನಿಮಾದ ಚಿತ್ರೀಕರಣ ಮುಕ್ತಾಯವಾಗಿದೆ. ಸೆನ್ಸಿಟಿವ್ ಸಸ್ಪೆನ್ಸ್ ಡ್ರಾಮಾ ಕಥಾಹಂದರ ಹೊಂದಿರುವ ಚಿತ್ರದಲ್ಲಿ ಚೆಂಡೆ ಮೇಳದ ಕಂಟೆಂಟ್ ಪ್ರಮುಖವಾಗಿರಲಿದೆ. ಕೇರಳದಲ್ಲಿ ಮುನ್ನೂರು ವರ್ಷಗಳಿಗೂ ಅಧಿಕ ಕಾಲದ ಇತಿಹಾಸ ಹೊಂದಿರುವ ಚೆಂಡೆ ಮೇಳವನ್ನು ಪೀಟರ್ ಸಿನಿಮಾದಲ್ಲಿ ಕಟ್ಟಿಕೊಡಲಾಗಿದೆ. ಗುರುಪ್ರಸಾದ್ ನರ್ನಾಡ್ ಛಾಯಾಗ್ರಹಣ, ನವೀನ್ ಶೆಟ್ಟಿ ಸಂಕಲನ, ದೇವರಾಜ್ ಕಲಾ ನಿರ್ದೇಶನ ಚಿತ್ರಕ್ಕಿದೆ. ಕನ್ನಡ, ಮಲೆಯಾಳಂ, ತೆಲುಗು ತಮಿಳಿನಲ್ಲಿ ಸಿನಿಮಾ ಮೂಡಿಬರಲಿದೆ.

ಬಿಗ್‌ಬಾಸ್ ಈಸ್ ಬ್ಯಾಕ್

ಕನ್ನಡ ಬಿಗ್‌ಬಾಸ್ ಸೀಸನ್ ಹನ್ನೊಂದು ಮುಗಿದಿದ್ದು ಸೀಸನ್ ಹನ್ನೆರಡಕ್ಕೆ ದಿನಗಣನೆ ಆರಂಭವಾಗಿದೆ. ಈ ಬಾರಿಯೂ ಕಿಚ್ಚನ ಸಾರಥ್ಯದಲ್ಲಿಯೇ ಬಿಗ್‌ಬಾಸ್ ಮೂಡಿಬರಲಿದೆ. ಹಾಗಾಗಿ ಈ ಬಿಗ್‌ಬಾಸ್ ಇನ್ನೂ ವಿಶೇಷವಾಗಿ ಮೂಡಿಬರಲಿದೆ. ಶೀಘ್ರದಲ್ಲಿಯೇ ಬಿಗ್‌ಬಾಸ್ ಆರಂಭವಾಗಲಿದ್ದು, ಸೀಸನ್ ಹನ್ನೆರಡರ ಪ್ರೋಮೊ ರಿಲೀಸ್ ಆಗಿದೆ. ಇದರಲ್ಲಿ ಕಾದಿದ್ದು ಸಾಕು, ಬಿಗ್‌ಬಾಸ್ ಈಸ್ ಬ್ಯಾಕ್ ಎಂಬ ಸಾಲುಗಳಿದ್ದು, ಹೊಸ ಬಿಗ್‌ಬಾಸ್‌ನ ಟೈಟಲ್ ಜತೆಗೆ ಲೋಗೊ ಕೂಡ ರಿವೀಲ್ ಆಗಿದೆ. ಆದರೆ ಸುದೀಪ್ ಅವರು ಕಾಣುತ್ತಿಲ್ಲ. ಮುಂದಿನ ದಿನಗಳಲ್ಲಿ ಮತ್ತೊಂದು ಪ್ರೋಮೊ ರಿಲೀಸ್ ಆಗಲಿದ್ದು ಅದರಲ್ಲಿ ಕಿಚ್ಚನ ಹೊಸ ಗೆಟಪ್ ಕಣ್ತುಂಬಿಕೊಳ್ಳಬಹುದಾಗಿದೆ. ಈ ಬಾರಿ ಯಾರೆಲ್ಲಾ ಬಿಗ್‌ಬಾಸ್‌ಗೆ ಹೋಗುತ್ತಾರೆ ಎಂಬುದು ಇನ್ನೂ ಅಂತಿಮವಾಗಿಲ್ಲ. ಈ ಬಾರಿಯ ಬಿಗ್‌ಬಾಸ್ ವಿನೂತನವಾಗಿರಲಿದ್ದು, ನೂರು ದಿನ ಯಾರು ದೊಡ್ಮನೆಯಲ್ಲಿರುತ್ತಾರೆ ಅವರು ವಿಜಯಿಯಾಗುತ್ತಾರೆ. ವಾರಾಂತ್ಯದಲ್ಲಿ ಕಿಚ್ಚ ಸುದೀಪ್ ಸ್ಪರ್ಧಿಗಳ ಜತೆಗೆ ಸಂಭಾಷಣೆ ನಡೆಸಲಿದ್ದಾರೆ. ಪಂಚಾಯ್ತಿ ಕಟ್ಟೆಯಲ್ಲಿ ಯಾರೆಲ್ಲಾ ಇರಲಿದ್ದಾರೆ ಎಂಬುದು ಬಿಗ್‌ಬಾಸ್ ಆರಂಭವಾದ ಮೇಲೆ ತಿಳಿಯುತ್ತದೆ. ಇನ್ನು ವಾರಾಂತ್ಯದಲ್ಲಿ ಅತಿಥಿಗಳು ಬಿಗ್ ಬಾಸ್ ವೇದಿಕೆಗೆ ಬರಲಿದೆ. ಇದೆಲ್ಲದರಿಂದ ಈ ಬಾರಿಯ ಬಿಗ್ ಬಾಸ್ ವಿಭಿನ್ನ ಹಾಗೂ ವಿನೂತನವಾಗಿ ಮೂಡಿಬರಲಿದೆ.

ಇನ್ ಹಿಸ್ ನೇಮ್ ಹೃದಯ ಸ್ಪರ್ಶಿ ಗೀತೆ

ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ಅಟ್ಟಹಾಸದಿಂದ ಹಲವು ಭಾರತೀಯರು ಪ್ರಾಣ ಕಳೆದುಕೊಂಡರು. ಈ ದಾಳಿಯಲ್ಲಿ ನೌಕಾಪಡೆಯ ಲೆಫ್ಟಿನೆಂಟ್ ವಿನಯ್ ನರ್ವಾಲ್ ಮೃತಪಟ್ಟರು. ಈ ಕೃತ್ಯಕ್ಕೆ ತಕ್ಕಂತೆ ಭಾರತ, ಪಾಪಿ ಪಾಕಿಸ್ತಾನಕ್ಕೆ ತಕ್ಕ ಉತ್ತರ ನೀಡಿತು. ಪಹಲ್ಗಾಮ್ ಕಹಿ ಘಟನೆಯಾಗಿ ಉಳಿದಿದೆ. ಈಗ ವಿನಯ್ ನರ್ವಾಲ್ ಅವರನ್ನು ಸ್ಮರಿಸುವ ಗೀತೆ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿಯೇ ಬಿಡುಗಡೆಯಾಗಿದೆ. ಈ ಹಿಂದೆ ಭಾವತೀರ ಯಾನದ ಕಥೆ ಹೇಳಿದ್ದ ಮಯೂರ್, ಇನ್ ಹಿಸ್ ನೇಮ್ ಶೀರ್ಷಿಕೆಯಲ್ಲಿ ಈ ಗೀತೆಯನ್ನು ನಿರ್ದೇಶಿಸಿದ್ದಾರೆ.

ನೈಜ ಘಟನೆಯನ್ನು ಆಧರಿಸಿ ರೂಪುಗೊಂಡಿರುವ, ಪ್ರೀತಿ ಮತ್ತು ದೇಶಭಕ್ತಿಯ ಮೌಲ್ಯಗಳನ್ನು ಸಾರುವ ಈ ಗೀತೆ ಸಂಗೀತ ಪ್ರಿಯರನ್ನು ಸೆಳೆಯುತ್ತಿದೆ. ಮದುವೆಯ ಉತ್ಸವದಿಂದ ಪ್ರಾರಂಭಗೊಳ್ಳುವ ಈ ದೃಶ್ಯ ರೂಪಕ ನವವಿವಾಹಿತ ಜೋಡಿಯ ಜೀವನದಲ್ಲಿ ಪ್ರೀತಿ, ಕನಸುಗಳು ಮಧುರ ನೆನಪುಗಳಲ್ಲಿ ಅರಳುತ್ತಾ ಕಣ್ಣಂಚಲ್ಲಿ ನೀರು ತರಿಸುತ್ತದೆ.

ಬಿಡದೆ ಕಾಡುವ ಘಟನೆ: ಪಹಲ್ಗಾಮ್ ಘಟನೆ ಇಡೀ ಭಾರತೀಯರನ್ನು ಬಿಡದೆ ಕಾಡುತ್ತದೆ. ಅಂತೆಯೇ ನನ್ನ ಮನಸನ್ನು ಕಾಡುತ್ತಲೇ ಇತ್ತು, ಆ ಕಹಿ ಘಟನೆಯ ಕುರಿತು ಕಥೆ, ಚಿತ್ರಕಥೆ ಬರೆದು ಹಾಡಿನ ಮೂಲಕ ಕಟ್ಟಿಕೊಡಬೇಕು ಎಂದು ಅಂದುಕೊಂಡಿದ್ದೆ. ಇದಕ್ಕೆ ತೇಜಸ್ ಕಿರಣ್ ಕೂಡ ಸಾಥ್ ಕೊಟ್ಟರು. ಭಾರತ, ಪಾಕಿಸ್ತಾನ ನಡುವಿನ ದೀರ್ಘಕಾಲದ ಸಂಘರ್ಷ ಮತ್ತು ಉಗ್ರವಾದದ ನೆರಳಿನಲ್ಲಿ ಸಂಭವಿಸುವ ಘಟನೆ, ಅದೆಷ್ಟೋ ಮಂದಿಯ ಸುಂದರ ಬದುಕನ್ನೇ ಕಸಿಯಿತು. ಈ ಹಾಡಿನಲ್ಲಿ ಅದೆಲ್ಲ ಘಟನೆಯನ್ನು ಕಣ್ಣಿಗೆ ಕಟ್ಟುವಂತೆ ಕಟ್ಟಿಕೊಡಲಾಗಿದೆ. ತ್ಯಾಗದ ತೀವ್ರತೆ ಮತ್ತು ಜೀವನದ ನಾಜೂಕಿನ ಹೃದಯಸ್ಪರ್ಶಿ ಚಿತ್ರಣ ಮನಕಾಡುತ್ತದೆ. ಇದು ಕೇವಲ ಪ್ರೇಮಕಥೆಯಲ್ಲ, ಮಾನವೀಯತೆ, ಸಹಾನುಭೂತಿ ಮತ್ತು ಅಜ್ಞಾತ ಹೋರಾಟಗಳ ಮೌನ ಸಾಕ್ಷಿಯಾಗಿದೆ ಎನ್ನುತ್ತಾರೆ ನಿರ್ದೇಶಕ ಮಯೂರ್.

ಮನ ಮಿಡಿಯುವ ಸಾಹಿತ್ಯ: ಮಯೂರ್ ಅಂಬೆಕಲ್ ಹಾಗೂ ತೇಜಸ್ ಕಿರಣ್ ನಿರ್ದೇಶನದಲ್ಲಿ ಹಾಡು ಸಿದ್ಧವಾಗಿದ್ದು, ಭಾನು ಪ್ರಕಾಶ್ ಜೋಯಿಸ್ ಸಾಹಿತ್ಯದ ಈ ಗೀತೆ ಹೃದಯ ಸ್ಪರ್ಶಿಯಾಗಿ ಮೂಡಿಬಂದಿದೆ. ಇಡೀ ಘಟನೆಯನ್ನು ಒಂದು ಹಾಡಿನಲ್ಲಿ ಕಟ್ಟಿಕೊಡಲಾಗಿದೆ. ಚಂದನಾ ಅನಂತಕೃಷ್ಣ ದನಿಯಲ್ಲಿ ಮೂಡಿಬಂದಿರುವ ಹಾಡು ಕೇಳಲು ಮಧುರವಾಗಿದೆ. ಚಂದನಾ, ನಿದರ್ಶನ್, ಸಂದೀಪ್ ರಾಜ್‌ಗೋಪಾಲ್ ಮುಂತಾದವರು ಈ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಸದ್ಯ ಕನ್ನಡದಲ್ಲಿ ಬಿಡುಗಡೆಯಾದ ಈ ಹಾಡಿಗೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದ್ದು, ಮುಂದೆ ಇತರ ಭಾಷೆಗಳಿಗೂ ಡಬ್ ಆಗಲಿದೆ. ಮಾತ್ರವಲ್ಲ ಈ ಹಾಡು ನೋಡಿ ಕೆಲವು ನಿರ್ಮಾಪರು ಮಯೂರ್ ಅವರ ಕಾರ್ಯವನ್ನು ಶ್ಲಾಘಿಸಿದ್ದಾರೆ. ಹಾಗಾಗಿ ಈ ಗೀತೆ ಮುಂದೆ ಸಿನಿಮಾ ರೂಪಕ್ಕೂ ಬರುವ ನಿರೀಕ್ಷೆ ಇದೆ. ಬೆಂಗಳೂರಿನ ಹೊರವಲಯ ಹಾಗೂ ಊಟಿಯಲ್ಲಿ ಹಾಡಿನ ಚಿತ್ರೀಕರಣ ನಡೆಸಲಾಗಿದೆ.